
ವಿದ್ವಾನ್. ಎನ್. ರಂಗನಾಥ ಶರ್ಮ

# ಸಂದರ್ಭಸೂಕ್ತಿ



# ಸಂದರ್ಭ ಸೂಕ್ತಿ

ವಿದ್ವಾನ್ ಎನ್. ರಂಗನಾಥ ಶರ್ಮ

ಐಬಿಎಚ್ ಪ್ರಕಾಶನ
ಗಾಂಧಿನಗರ, ಬೆಂಗಳೂರು 560 009

SANDARBHA SUKTHI — a compendium of Sanskrit maxims compiled and explained in Kannada by N. Ranganatha Sharma and Published by G. K. Ananthram for IBH Prakashana Gandhinagar Bangalore 560 009.
Pp. xvi + 112 First Printing 1987
© Author 1987

ಬೆಲೆ : ರೂ. 15-00 © ಲೇಖಕರು 1987
ಮುಖಚಿತ್ರ : ಯು. ಟಿ. ಸುರೇಶ್

ಮೊದಲನೆಯ ಮುದ್ರಣ : 1987. ಪ್ರಕಾಶಕರು : ಐಬಿಎಚ್ ಪ್ರಕಾಶನ ಇವರ ಪರವಾಗಿ ಜಿ. ಕೆ. ಅನಂತರಾಮ್ ಐದನೆಯ ಮುಖ್ಯರಸ್ತೆ ಗಾಂಧಿನಗರ ಬೆಂಗಳೂರು 560 009. ಮುದ್ರಕರು : ಎಚ್. ಎಸ್. ಎನ್. ರಾವ್ ಐಬಿಎಚ್ ಪ್ರಕಾಶನ ಪ್ರಿಂಟರ್ಸ್ ರಾಮಯ್ಯ ಇಂಡಸ್ಟ್ರಿಯಲ್ ಎಸ್ಟೇಟ್ ಬೆಂಗಳೂರು 560 054.

# ಪ್ರಸ್ತಾವನೆ

ಸಮುದ್ರವನ್ನು ಕಣ್ಣಲ್ಲಿ ಕಂಡಾಗ ಮಾತ್ರ ಅದರ ವಿಶಾಲತೆಯೂ ಗಭೀರತೆಯೂ ಪೂರ್ಣವಾಗಿ ಅರಿವಿಗೆ ಬರುತ್ತವೆ. ಸಂಸ್ಕೃತ ಸಾಹಿತ್ಯ ಕ್ಷೇತ್ರವನ್ನು ಪ್ರವೇಶಿಸಿ ನೋಡಿದಾಗ ಮಾತ್ರ ಅದರ ವಿಶಾಲತೆ–ಗಭೀರತೆಗಳಲ್ಲದೆ ಅದರ ವೈವಿಧ್ಯಗಳೂ ಅದ್ಭುತಗಳೂ ಗೋಚರಿಸುತ್ತವೆ. ಸಂಸ್ಕೃತ ಸಾಹಿತ್ಯ ವೈವಿಧ್ಯದ ಒಂದಂಶ ಸುಭಾಷಿತ ಗ್ರಂಥರಾಶಿ. ಇದರೊಳಗಿನ ವೈವಿಧ್ಯವೂ ಅನೇಕ ರೀತಿಯದು. ನೇರವಾದ ಬುದ್ಧಿವಾದ, ವ್ಯಂಗ್ಯ ಪ್ರಕಾರವಾದ ಅನ್ಯೋಕ್ತಿ, ದೃಷ್ಟಾಂತ ಸಹಿತವಾದ ಸೂಕ್ತಿ, ಲೋಕಾನುಭವ ಸಹಿತವಾದ ಹಿತೋಕ್ತಿ—ಹೀಗೆ ಅನೇಕ ರೀತಿ. ಈ ಸೂಕ್ತಿ ಸೂತ್ರರೂಪದಲ್ಲುಂಟು, ಶ್ಲೋಕರೂಪದಲ್ಲುಂಟು, ವಚನರೂಪದಲ್ಲೂ ಉಂಟು. ಇವುಗಳಲ್ಲಿ ಶೃಂಗಾರ, ವೈರಾಗ್ಯ, ಹಾಸ್ಯ, ಬೀಭತ್ಸ—ಮುಂತಾದ ಎಲ್ಲ ಭಾವಗಳ ಸುಂದರ ವರ್ಣನೆ ಇದ್ದು ಒಂದೊಂದೂ ಮುಕ್ತಕ ಕಾವ್ಯದಂತೆ ಮನೋರಮವಾಗಿರುತ್ತವೆ. ಈ ಸೂಕ್ತಿಗಳಲ್ಲಿ ಕಂಡುಬರುವ ಪ್ರತಿಭೆ, ಜಾಣ್ಮೆ, ವಿಡಂಬನ, ಚಾತುರ್ಯಗಳಿಗೆ ತಲೆದೂಗದ ಮನುಷ್ಯಜಾತಿ ಇರಲಾರದು.

ಈ ಸುಭಾಷಿತ ಸಾಹಿತ್ಯದ ಇನ್ನೊಂದು ಪ್ರಕಾರವೇ ನ್ಯಾಯಗಳೆನ್ನಬಹುದು. ಇವು ಸಂಸ್ಕೃತ ಸಾಹಿತ್ಯದ ಕಾವ್ಯಶಾಸ್ತ್ರಗಳಲ್ಲಿ ಹರಡಿಹೋಗಿವೆ. ಈ ನ್ಯಾಯಗಳನ್ನು ಶಾಸ್ತ್ರೀಯ ನ್ಯಾಯಗಳೆಂದೂ ಲೌಕಿಕ ನ್ಯಾಯಗಳೆಂದೂ ವಿಭಾಗ ಮಾಡಲು ಸಾಧ್ಯ. "ನಿಯಂತಿ ವಾಕ್ಯಾರ್ಥಂ ಅನೇನ ಇತಿ ನ್ಯಾಯಃ." ವಾಕ್ಯಾರ್ಥವನ್ನು ತಿಳಿದು ತಾತ್ಪರ್ಯವನ್ನು ಗೊತ್ತುಮಾಡುವುದಕ್ಕೆ ಉಪಯುಕ್ತವಾದದ್ದು ನ್ಯಾಯ. ಮೀಮಾಂಸಾದಿ ಶಾಸ್ತ್ರಗಳಲ್ಲಿ ಮಾತ್ರ ಯಾವುವು ಉಪಯುಕ್ತವಾಗುತ್ತವೆಯೋ, ಶಾಸ್ತ್ರಜ್ಞರಿಗೆ ಮಾತ್ರ ಆವಶ್ಯಕವಾದವೋ ಅವು ಶಾಸ್ತ್ರೀಯ ನ್ಯಾಯಗಳು. ಲೋಕದಲ್ಲಿ ವಿದಿತವಾದವು ಲೌಕಿಕ ನ್ಯಾಯಗಳು. ಇವು ಸಾಮಾನ್ಯ ಜನರಿಗೆಲ್ಲ ಅರ್ಥವಾಗತಕ್ಕವು. ಮತ್ತು ಆ ಜನರ ವ್ಯವಹಾರಕ್ಕೆ ಒಂದು ಬಗೆಯಲ್ಲಿ ಉಪಯುಕ್ತವಾದವು. ಲೋಕವನ್ನು ಬಿಟ್ಟು ಶಾಸ್ತ್ರವಿಲ್ಲವಾದ್ದರಿಂದ ಇವುಗಳಿಗೆ ಶಾಸ್ತ್ರದಲ್ಲಿಯೂ ಬಳಕೆಯುಂಟು.

ಶಾಸ್ತ್ರೀಯ ನ್ಯಾಯಗಳಿಗೆ ಆಕರವಾದದ್ದು ಪೂರ್ವಮೀಮಾಂಸಾಶಾಸ್ತ್ರ. ವೇದಾರ್ಥ ನಿರ್ಣಯಕ್ಕೆ ಇವು ಅತ್ಯಂತ ಉಪಕಾರಿಯಾದವು. ಈ ನ್ಯಾಯಗಳ ಮೌಲ್ಯ ಎಷ್ಟೆಂದರೆ, ಇವುಗಳಿಗೆ ವಿರುದ್ಧವಾದ ಅಭಿಪ್ರಾಯವನ್ನು ಯಾವ ಶಾಸ್ತ್ರಕಾರರೂ ಒಪ್ಪುವುದಿಲ್ಲ. ಹಾಗೆಯೇ ವ್ಯಾಕರಣ ಶಾಸ್ತ್ರದಲ್ಲಿ ಕೆಲವು ನ್ಯಾಯಗಳು ವ್ಯುತ್ಪಾದಿತವಾಗಿವೆ. ಇವು ಸಾಮಾನ್ಯವಾಗಿ ಆ ಶಾಸ್ತ್ರಕ್ಕೆ ಮಾತ್ರ ಉಪಯೋಗಿಯಾದವು. ಹಾಗಲ್ಲದೆ ಲೋಕಸಿದ್ಧವಾದ ಹಲವಾರು ನ್ಯಾಯಗಳ ಬಳಕೆಯೂ ಅದರಲ್ಲಿ ಕಂಡುಬರುತ್ತದೆ. ನ್ಯಾಯ ವೇದಾಂತಾದಿ ಶಾಸ್ತ್ರಗಳಲ್ಲಿಯೂ ಅರ್ಥ ನಿರ್ಣಯಕ್ಕಾಗಿ ಇವುಗಳ ಬಳಕೆ ಪ್ರಚುರವಾಗಿ ಕಂಡುಬರುತ್ತದೆ. ಕವಿಗಳು ಯಥೇಚ್ಛವಾಗಿ ಈ ನ್ಯಾಯಗಳನ್ನು ಬಳಸಿಕೊಂಡಿದ್ದಾರೆ. ರಾಮಾಯಣ, ಮಹಾಭಾರತಗಳಲ್ಲಿಯೂ ಇವುಗಳ ನಿದರ್ಶನ ಉಂಟು.

ನ್ಯಾಯವೆಂಬುದಕ್ಕೆ ಕನ್ನಡದಲ್ಲಿ ಹೊಂದಾಣಿಕೆಯಾದ ಶಬ್ದವಿಲ್ಲ. Maxim ಎಂಬ ಆಂಗ್ಲ ಪದವೂ ಇದಕ್ಕೆ ಪರ್ಯಾಯಪದವಾಗಲಾರದು. ಗಾದೆ ಎಂಬ ಶಬ್ದವನ್ನು ಕೆಲವೆಡೆ ಬಳಸಬಹುದಾದರೂ ಅದು ಯಥಾರ್ಥವನ್ನು ಕೊಡುವ ಶಬ್ದವಲ್ಲ. ಈ ಬಗೆಯ ಸಾಹಿತ್ಯ ಅನ್ಯಭಾಷೆಗಳಲ್ಲಿಲ್ಲದಿರುವುದೇ ಇದಕ್ಕೆ ಕಾರಣವಾಗಿರಬೇಕು. ನ್ಯಾಯವು ಕೆಲವೆಡೆ ಒಂದಾನೊಂದು ಮೂಲತತ್ತ್ವವನ್ನವಲಂಬಿಸಿ ಪ್ರವೃತ್ತವಾಗಿರುತ್ತದೆ: ಅರುಂಧತೀಪ್ರದರ್ಶನನ್ಯಾಯ, ರಥಕಾರಾಧಿಕರಣನ್ಯಾಯ—ಮುಂತಾದವು ಈ ಬಗೆಯವು. ಕೆಲವು ದೃಷ್ಟಾಂತರೂಪವಾದವು : ದಗ್ಧಪಟನ್ಯಾಯ, ದೇವದತ್ತಹಂತೃಹತನ್ಯಾಯ— ಮುಂತಾದವು. ಕೆಲವು ಲೋಕಾನುಭವದಿಂದ ಬಂದವು: ವಧೂಹಸ್ತಮಾಷಮಾಪನನ್ಯಾಯ, ದರಿದ್ರದಂಪತೀಕಂಬಲನ್ಯಾಯ—ಮುಂತಾದವು. ಕೆಲವು ಬುದ್ಧಿಕಲ್ಪಿತವಾದವು : ಬಕಬಂಧನನ್ಯಾಯ, ಪೃಷ್ಠತಾಡನೇ ದಂತಭಂಗಃ—ಮೊದಲಾದವು. ಇನ್ನೂ ನಾನಾಪ್ರಕಾರಗಳನ್ನು ಇವುಗಳಲ್ಲಿ ಕಾಣಬಹುದು. ಗಾಢವಾದ ಲೋಕಾನುಭವ, ಜನಸ್ವಭಾವದ ಆಳವಾದ ಅಧ್ಯಯನ, ವಸ್ತುಸ್ವರೂಪಗಳ ಸೂಕ್ಷ್ಮನಿರೀಕ್ಷಣೆಗಳಿಂದ ಹುಟ್ಟಿದವು ಈ ಲೌಕಿಕ ನ್ಯಾಯಗಳು. ಪ್ರತಿಯೊಂದು ನ್ಯಾಯವೂ ವ್ಯವಹಾರದಲ್ಲಿ ಅವಲಂಬಿಸಬೇಕಾದ ಒಂದಾನೊಂದು ಕಾರ್ಯನೀತಿಯನ್ನು ನಿರೂಪಿಸುತ್ತದೆ. ಲೇಖಕರಿಗೆ, ಉಪನ್ಯಾಸಕರಿಗೆ, ವಕೀಲರಿಗೆ, ಶಾಸಕರಿಗೆ, ಬೋಧಕರಿಗೆ, ವರ್ತಕರಿಗೆ—ವ್ಯವಹಾರದಲ್ಲಿ ತೊಡಗಿರುವ ಸರ್ವರಿಗೂ ಸಂದರ್ಭಾನುಸಾರ ಬಳಸಲು ಯೋಗ್ಯವಾದ ಸೂಕ್ತಿಗಳಿವು. ಸಂದರ್ಭಸೂಕ್ತಿ ಎನ್ನುವುದು ಅನ್ವರ್ಥವಾದ ಹೆಸರು.

ಕರ್ನಲ್ ಜಿ. ಎ. ಜಾಕಬ್ ಎಂಬ ವಿದ್ವಾಂಸರು 'ಲೌಕಿಕ ನ್ಯಾಯಾಂಜಲಿ' ಎಂಬ ಗ್ರಂಥವನ್ನು ಮೂರು ಭಾಗಗಳಲ್ಲಿ ಪ್ರಕಟಿಸಿದ್ದರು. ಅದರಲ್ಲಿ ಶಾಸ್ತ್ರೀಯ ನ್ಯಾಯಗಳೂ ಸೇರಿಕೊಂಡಿದ್ದವು. ಆ ಗ್ರಂಥದ ಮಾದರಿಯಲ್ಲಿ ಕೆಲವೇ ಉಪಯುಕ್ತ ಲೌಕಿಕನ್ಯಾಯಗಳನ್ನು ಸಂಗ್ರಹಿಸಿ 'ಲೌಕಿಕನ್ಯಾಯಗಳು' ಎಂಬ ಕಿರುಹೊತ್ತಗೆಯನ್ನು ರಚಿಸಿದ್ದೆನು. ಅದನ್ನು ಮೈಸೂರು ಕಾವ್ಯಾಲಯ ಪ್ರಕಾಶಕರು ಬಹಳ ಹಿಂದೆ ಪ್ರಕಟಿಸಿದ್ದರು. ಅನಂತರ ನ್ಯಾಯಶತಕ, ನ್ಯಾಯಸಾಹಸ್ರಿ—ಎಂಬ ಎರಡು ಗ್ರಂಥಗಳನ್ನೂ ಮತ್ತಿತರ ಸಂಸ್ಕೃತಸಾಹಿತ್ಯವನ್ನೂ ಪರಿಶೀಲಿಸಿ ಸುಮಾರು ಎಪ್ಪತ್ತು ನ್ಯಾಯಗಳನ್ನು ಹೊಸದಾಗಿ ಸಂಗ್ರಹಿಸಿ ಗುರುತುಮಾಡಿಕೊಂಡಿದ್ದೆನು. ಅವೆಲ್ಲವನ್ನೂ ಸೇರಿಸಿ ಹೊಸದಾಗಿ ಪುನಃಪರಿಷ್ಕರಿಸಿ ಈ ಗ್ರಂಥವನ್ನು ರಚಿಸಲಾಗಿದೆ. ಕನ್ನಡ ಸಾಹಿತ್ಯಕ್ಕೆ ಚಿಕ್ಕದಾದರೂ ಇದೊಂದು ಬೆಲೆ ಬಾಳುವ ಸಂಸ್ಕೃತದ ಕೊಡುಗೆಯೆಂದು ನನ್ನ ನಂಬಿಕೆ.

ಐಬಿಎಚ್ ಪ್ರಕಾಶನದ ವ್ಯವಸ್ಥಾಪಕರಾದ ಶ್ರೀ ಜಿ.ಕೆ. ಅನಂತರಾಮ್ ಅವರು ಈ ಪುಸ್ತಕವನ್ನೋದಿ ಹರ್ಷದಿಂದ ಪ್ರೋತ್ಸಾಹವನ್ನಿತ್ತು ಇದನ್ನು ಮುದ್ರಿಸಿ ಪ್ರಕಟಿಸುವ ಕೃಪೆ ತೋರಿಸಿದ್ದಾರೆ. ಅವರಿಗೆ ನನ್ನ ಅನಂತ ವಂದನೆಗಳು ಸಲ್ಲುತ್ತವೆ.

ಬೆಂಗಳೂರು
16-4-1987

**ಎನ್. ರಂಗನಾಥ ಶರ್ಮಾ**

# ಅನುಕ್ರಮಣಿಕೆ


| ನ್ಯಾಯಸಂಖ್ಯೆ | | | ಪುಟ |
|---|---|---|---|
| 1. | ಅಗ್ನಿಶಿಖಾನ್ಯಾಯ | — | 1 |
| 2. | ಅಜಾತಪುತ್ರನಾಮೋತ್ಕೀರ್ತನನ್ಯಾಯ | — | 1 |
| 3. | ಅರ್ಕೇ ಚೇತ್ ಮಧು ವಿಂದೇತ... | — | 1 |
| 4. | ಅದಿತ್ಸೋರ್ವಣಿಜಃ ಶ್ವಸ್ತನಭಣನನ್ಯಾಯ | — | 2 |
| 5. | ಅನಿಷಿದ್ಧಮನುಮತಂ ಭವತಿ | — | 2 |
| 6. | ಅಭ್ಯರ್ಹಿತಂ ಪೂರ್ವಮ್ | — | 2 |
| 7. | ಅರಣ್ಯರೋದನನ್ಯಾಯ | — | 3 |
| 8. | ಅರುಂಧತೀಪ್ರದರ್ಶನನ್ಯಾಯ | — | 4 |
| 9. | ಅರ್ಧಜರತೀಯನ್ಯಾಯ | — | 5 |
| 10. | ಅರ್ಧವೈಶಸನ್ಯಾಯ | — | 5 |
| 11. | ಅಲಂಕೃತ್ಯ ಶಿರಶ್ಛೇದಃ | — | 6 |
| 12. | ಅವತಪ್ತೇ ನಕುಲಸ್ಥಿತಮ್ | — | 6 |
| 13. | ಅಶಕ್ತೋಽಹಂ ಗೃಹಾರಂಭೇ... | — | 6 |
| 14. | ಅಶೋಕವನಿಕಾನ್ಯಾಯ | — | 7 |
| 15. | ಅಶ್ಮಲೋಷ್ಟನ್ಯಾಯ | — | 7 |
| 16. | ಅಶ್ವತರೀಗರ್ಭನ್ಯಾಯ | — | 8 |
| 17. | ಅಸಂಜಾತವಿರೋಧನ್ಯಾಯ | — | 8 |
| 18. | ಅಸಿಧಾರಾಮಧುಲೇಹನನ್ಯಾಯ | — | 9 |
| 19. | ಅಹಿಭುಕ್ಕೈವರ್ತಕನ್ಯಾಯ | — | 9 |
| 20. | ಅಹೃದಯವಚಸಾಮಹೃದಯಮುತ್ತರಮ್ | — | 10 |
| 21. | ಅಂಗಾರನ್ಯಾಯ | — | 10 |
| 22. | ಅಂಗುಲ್ಯಗ್ರನ್ಯಾಯ | — | 10 |
| 23. | ಅಂಗುಲ್ಯಗ್ರೇ ಹಸ್ತಿಯೂಥಶತನ್ಯಾಯ | — | 11 |
| 24. | ಅಂತರಂಗಬಹಿರಂಗಯೋರಂತರಂಗಂ... | — | 11 |
| 25. | ಅಂತರ್ದೀಪಿಕಾನ್ಯಾಯ | — | 12 |
| 26. | ಅಂತೇ ರಂಡಾವಿವಾಹಶ್ಚೇತ್... | — | 12 |
| 27. | ಅಂಧಕವರ್ತಕೀಯನ್ಯಾಯ | — | 13 |

| ನ್ಯಾಯಸಂಖ್ಯೆ | | | ಪುಟ |
|---|---|---|---|
| 28. | ಅಂಧಗಜನ್ಯಾಯ | — | 13 |
| 29. | ಅಂಧಗೋಲಾಂಗೂಲನ್ಯಾಯ | — | 14 |
| 30. | ಅಂಧದರ್ಪಣನ್ಯಾಯ | — | 15 |
| 31. | ಅಂಧಪರಂಪರಾನ್ಯಾಯ | — | 15 |
| 32. | ಆಕಾಶಮುಷ್ಟಿಹನನನ್ಯಾಯ | — | 16 |
| 33. | ಆಖ್ವಿನ್ನಪಿಟಕನ್ಯಾಯ | — | 16 |
| 34. | ಆಮ್ರಾನ್‌ಪೃಷ್ಟಃ ಕೋವಿದಾರಾನಾಚಷ್ಟೇ | — | 16 |
| 35. | ಆಮ್ರಾಶ್ಚ ಸಿಕ್ತಾಃ ಪಿತರಶ್ಚ ತೃಪ್ತಾಃ | — | 17 |
| 36. | ಆಶಾಮೋದಕತೃಪ್ತನ್ಯಾಯ | — | 17 |
| 37. | ಆಷಾಢವಾತೇ ಚಲತಿ ದ್ವಿಪೇಂದ್ರೇ... | — | 17 |
| 38. | ಇತೋ ವ್ಯಾಘ್ರ ಇತಸ್ತಟೀ | — | 18 |
| 39. | ಉತ್ಪತಿತೋಽಪಿ ಹಿ ಚಣಕಃ ಶಕ್ತಃ ಕಿಂ... | — | 18 |
| 40. | ಉಪಜೀವ್ಯವಿರೋಧಸ್ಯಾ... | — | 18 |
| 41. | ಉಭಯತಸ್ಪಾಶಾ ರಜ್ಜುಃ | — | 18 |
| 42. | ಉಷ್ಟ್ರಕಂಟಕಭಕ್ಷಣನ್ಯಾಯ | — | 19 |
| 43. | ಉಷ್ಟ್ರಲಗುಡನ್ಯಾಯ | — | 19 |
| 44. | ಏಕದೇಶವಿಕೃತಮನನ್ಯವತ್ | — | 20 |
| 45. | ಏಕವೃಂತಗತಫಲದ್ವಯನ್ಯಾಯ | — | 20 |
| 46. | ಕದಂಬಕೋರಕನ್ಯಾಯ | — | 20 |
| 47. | ಕನಕಕುಂಡಲನ್ಯಾಯ | — | 20 |
| 48. | ಕಫೋಣಿಗುಡನ್ಯಾಯ | — | 21 |
| 49. | ಕರಿಬೃಂಹಿತನ್ಯಾಯ | — | 21 |
| 50. | ಕರ್ಣಕೌಂತೇಯನ್ಯಾಯ | — | 21 |
| 51. | ಕಂಠಚಾಮೀಕರನ್ಯಾಯ | — | 22 |
| 52. | ಕಂಬಲನಿರ್ಣೇಜನನ್ಯಾಯ | — | 22 |
| 53. | ಕಾಕತಾಲೀಯನ್ಯಾಯ | — | 22 |
| 54. | ಕಾಕದಂತಪರೀಕ್ಷಾನ್ಯಾಯ | — | 23 |
| 55. | ಕಾಕದಧಿಘಾತಕನ್ಯಾಯ | — | 23 |
| 56. | ಕಾಕಾಕ್ಷಿಗೋಲಕನ್ಯಾಯ | — | 23 |
| 57. | ಕಾಶಕುಶಾವಲಂಬನನ್ಯಾಯ | — | 24 |
| 58. | ಕಿಮಾರ್ದ್ರಕವಣಿಜೋ ವಹಿತ್ರಚಿಂತಯಾ | — | 24 |
| 59. | ಕುಡ್ಯಂ ವಿನಾ ಚಿತ್ರಕರ್ಮನ್ಯಾಯ | — | 24 |
| 60. | ಕುಲ್ಯಾಪ್ರಣಯನನ್ಯಾಯ | — | 24 |

| ನ್ಯಾಯಸಂಖ್ಯೆ | | | ಪುಟ |
|---|---|---|---|
| 61. | ಕೂಪಖಾನಕನ್ಯಾಯ | — | 25 |
| 62. | ಕೂಪಮಂಡೂಕನ್ಯಾಯ | — | 25 |
| 63. | ಕೃತಕ್ಷೌರಸ್ಯ ನಕ್ಷತ್ರಪರೀಕ್ಷಾ | — | 25 |
| 64. | ಕೈಮುತಿಕನ್ಯಾಯ | — | 26 |
| 65. | ಕ್ಷೀರನೀರನ್ಯಾಯ | — | 26 |
| 66. | ಕ್ಷೀರಸೌವೀರನ್ಯಾಯ | — | 27 |
| 67. | ಖಲೇಕಪೋತನ್ಯಾಯ | — | 27 |
| 68. | ಖಲ್ವಾಟಬಿಲ್ವೀಯನ್ಯಾಯ | — | 27 |
| 69. | ಗಗನರೋಮಂಥನ್ಯಾಯ | — | 28 |
| 70. | ಗಡ್ಡರಿಕಾಪ್ರವಾಹನ್ಯಾಯ | — | 28 |
| 71. | ಗತಾನುಗತಿಕೋ ಲೋಕೋ ನ ಲೋಕಃ... | — | 28 |
| 72. | ಗಂಡಸ್ಯೋಪರಿ ಪಿಟಕಃ ಸಂವೃತ್ತಃ | — | 29 |
| 73. | ಗುಡಜಿಹ್ವಿಕಾನ್ಯಾಯ | — | 29 |
| 74. | ಗೋಪಗೃಹಿಣೀನ್ಯಾಯ | — | 29 |
| 75. | ಗೋಮಯಪಾಯಸೀಯನ್ಯಾಯ | — | 30 |
| 76. | ಗೋಬಲೀವರ್ದನ್ಯಾಯ | — | 30 |
| 77. | ಘಟಪ್ರದೀಪನ್ಯಾಯ | — | 31 |
| 78. | ಘಟಾಯೋನ್ಮೀಲಿತಂ ಚಕ್ಷುಃ... | — | 32 |
| 79. | ಘಟೀಯಂತ್ರನ್ಯಾಯ | — | 32 |
| 80. | ಘಟ್ಟಕುಟೀಪ್ರಭಾತನ್ಯಾಯ | — | 33 |
| 81. | ಘುಣಾಕ್ಷರನ್ಯಾಯ | — | 33 |
| 82. | ಚಕ್ರಭ್ರಮಣನ್ಯಾಯ | — | 33 |
| 83. | ಚಾಲನೀನ್ಯಾಯ | — | 34 |
| 84. | ಚಂದ್ರಚಂದ್ರಿಕಾನ್ಯಾಯ | — | 34 |
| 85. | ಚಿತ್ರತುರಗನ್ಯಾಯ | — | 35 |
| 86. | ಚಿತ್ರಾಂಗನಾನ್ಯಾಯ | — | 35 |
| 87. | ಚಿಂತಾಮಣಿಂ ಪರಿತ್ಯಜ್ಯ... | — | 35 |
| 88. | ಚೌರಾಪರಾಧಾನ್ಮಾಂಡವ್ಯನಿಗ್ರಹನ್ಯಾಯ | — | 36 |
| 89. | ಛಾಯಾಪಿಶಾಚಿಕಾನ್ಯಾಯ | — | 36 |
| 90. | ಜತುಕಾಷ್ಠನ್ಯಾಯ | — | 37 |
| 91. | ಜಲಕತಕರೇಣುನ್ಯಾಯ | — | 37 |
| 92. | ಜಾಮಾತೃಶುದ್ಧಿನ್ಯಾಯ | — | 37 |
| 93. | ಜಾಮಾತೃಸೂಪನ್ಯಾಯ | — | 38 |

| ನ್ಯಾಯಸಂಖ್ಯೆ | | | ಪುಟ |
|---|---|---|---|
| 94. | ಜ್ವರಹರತಕ್ಷಕರತ್ನನ್ಯಾಯ | — | 38 |
| 95. | ಟಿಟ್ಟಿಭನ್ಯಾಯ | — | 39 |
| 96. | ಡಮರುಕಮಣಿನ್ಯಾಯ | — | 39 |
| 97. | ತಕ್ರಕೌಂಡಿನ್ಯನ್ಯಾಯ | — | 40 |
| 98. | ತಟಾದರ್ಶಿಶಕುಂತಪೋತನ್ಯಾಯ | — | 40 |
| 99. | ತತ್‌ಸ್ಥಾನಾಪನ್ನಃ ತದ್ಧರ್ಮಂ ಲಭತೇ | — | 40 |
| 100. | ತಪ್ತಂ ತಪ್ತೇನ ಸಂಬಧ್ಯತೇ | — | 41 |
| 101. | ತಪ್ತಾಯಃ ಪೀತಾಂಬುನ್ಯಾಯ | — | 41 |
| 102. | ತಮೋದೀಪನ್ಯಾಯ | — | 42 |
| 103. | ತಸ್ಕರಕಂದುನ್ಯಾಯ | — | 42 |
| 104. | ತಿಲತಂಡುಲನ್ಯಾಯ | — | 43 |
| 105. | ತುಲೋನ್ನಮನನ್ಯಾಯ | — | 43 |
| 106. | ತುಷಕಂಡನನ್ಯಾಯ | — | 43 |
| 107. | ತುಷ್ಯತು ದುರ್ಜನನ್ಯಾಯ | — | 44 |
| 108. | ತೃಣಾರಣಿಮಣಿನ್ಯಾಯ | — | 44 |
| 109. | ತೈಲಪಾತ್ರಧರನ್ಯಾಯ | — | 45 |
| 110. | ದಗ್ಧಪಟನ್ಯಾಯ | — | 45 |
| 111. | ದಗ್ಧಬೀಜನ್ಯಾಯ | — | 45 |
| 112. | ದರಿದ್ರದಂಪತೀಕಂಬಲನ್ಯಾಯ | — | 46 |
| 113. | ದಂಡಸರ್ಪವಾರಣನ್ಯಾಯ | — | 46 |
| 114. | ದಂಡಾಪೂಪಿಕಾನ್ಯಾಯ | — | 47 |
| 115. | ದೀರ್ಘಶಷ್ಕುಲೀಭಕ್ಷಣನ್ಯಾಯ | — | 48 |
| 116. | ದೇವದತ್ತಹಂತೃಹತನ್ಯಾಯ | — | 49 |
| 117. | ದೇವದತ್ತಶೌರ್ಯನ್ಯಾಯ | — | 49 |
| 118. | ದೇಹಲೀದೀಪನ್ಯಾಯ | — | 50 |
| 119. | ಧಾನ್ಯಪಲಾಲನ್ಯಾಯ | — | 50 |
| 120. | ಧೇನುಪನ್ನಗನ್ಯಾಯ | — | 50 |
| 121. | ನ ಖಲು ಕುಟಜಬೀಜಾದ್.... | — | 51 |
| 122. | ನಟಭಾರ್ಯಾನ್ಯಾಯ | — | 51 |
| 123. | ನಟಸಾಮಾಜಿಕನ್ಯಾಯ | — | 52 |
| 124. | ನಷ್ಟಾಶ್ವದಗ್ಧರಥನ್ಯಾಯ | — | 52 |
| 125. | ನ ಹಿ ಕರಕಂಕಣದರ್ಶನಾ... | — | 52 |
| 126. | ನ ಹಿ ಕಾಕಿನ್ಯಾಂ.... | — | 53 |

| ನ್ಯಾಯಸಂಖ್ಯೆ | | | ಪುಟ |
|---|---|---|---|
| 127. | ನ ಹಿ ಗೋಧಾ ಸರ್ಪಂತೀ... | — | 53 |
| 128. | ನ ಹಿ ತ್ರಿಪುತ್ರೋ ದ್ವಿಪುತ್ರ ಇತಿ ಕಥ್ಯತೇ | — | 54 |
| 129. | ನ ಹಿ ನಿಂದಾನ್ಯಾಯ | — | 54 |
| 130. | ನ ಹಿ ಭಿಕ್ಷುಕೋ ಭಿಕ್ಷುಕಾಂತರಂ... | — | 56 |
| 131. | ನ ಹಿ ಭಿಕ್ಷುಕಾಃ ಸಂತೀತಿ.... | — | 56 |
| 132. | ನ ಹಿ ವರವಿಘಾತಾಯ ಕನ್ಯೋದ್ವಾಹಃ | — | 57 |
| 133. | ನ ಹಿ ವಿವಾಹಾನಂತರಂ ವರಪರೀಕ್ಷಾ | — | 57 |
| 134. | ನ ಹಿ ಸರ್ವಃ ಸರ್ವಂ ಜಾನಾತಿ | — | 57 |
| 135. | ನ ಹಿ ಸಹಸ್ರೇಣಾಪ್ಯಂಧೈಃ.... | — | 58 |
| 136. | ನ ಹಿ ಸುತೀಕ್ಷ್ಣಾಪ್ಯಸಿಧಾರಾ.... | — | 58 |
| 137. | ನ ಹಿ ಸುಶಿಕ್ಷಿತೋಽಪಿ ನಟವಟುಃ.... | — | 59 |
| 138. | ನ ಹಿ ಸ್ವತೋಽಸತೀ ಶಕ್ತಿಃ.... | — | 60 |
| 139. | ನಾಸಿಕಾಗ್ರೇಣ ಕರ್ಣಮೂಲಕರ್ಷಣನ್ಯಾಯ | — | 60 |
| 140. | ನಿಮಿತ್ತಾಪಾಯೇ ನೈಮಿತ್ತಿಕಸ್ಯಾಪ್ಯಪಾಯಃ | — | 60 |
| 141. | ನಿರಸ್ತಪಾದಪೇ ದೇಶೇ ಏರಂಡೋಽಪಿ ದ್ರುಮಾಯತೇ | — | 61 |
| 142. | ನಿರಾಮಯಸ್ಯ ಕಿಮಾಯುರ್ವೇದವಿದಾ ? | — | 61 |
| 143. | ನೃಪನಾಪಿತಪುತ್ರನ್ಯಾಯ | — | 62 |
| 144. | ಪತಂಗದೀಪಕನ್ಯಾಯ | — | 62 |
| 145. | ಪರ್ಜನ್ಯವಲ್ಲಕ್ಷಣಪ್ರವೃತ್ತಿಃ | — | 62 |
| 146. | ಪಶ್ಯಸ್ಯದ್ರೌ ಜ್ವಲದಗ್ನಿಂ... | — | 63 |
| 147. | ಪಂಕಪ್ರಕ್ಷಾಲನನ್ಯಾಯ | — | 64 |
| 148. | ಪಂಗ್ವಂಧನ್ಯಾಯ | — | 64 |
| 149. | ಪಂಜರಚಾಲನನ್ಯಾಯ | — | 64 |
| 150. | ಪಾಟಚ್ಚರಲುಂಠಿತೇ ವೇಶ್ಮನಿ.... | — | 65 |
| 151. | ಪಾಟನಮಂತರೇಣ ವಿಷವ್ರಣಾನಾಂ... | — | 65 |
| 152. | ಪಾನಕರಸನ್ಯಾಯ | — | 65 |
| 153. | ಪಿಣ್ಯಾಕಯಾಚನನ್ಯಾಯ | — | 66 |
| 154. | ಪಿತಾಪುತ್ರನ್ಯಾಯ | — | 66 |
| 155. | ಪಿತ್ರನುಸೃತಸ್ತನಂಧಯನ್ಯಾಯ | — | 66 |
| 156. | ಪಿಪೀಲಿಕಾಗತಿನ್ಯಾಯ | — | 67 |
| 157. | ಪಿಶಾಚಾನಾಂ ಪಿಶಾಚಭಾಷಯೈವ... | — | 67 |
| 158. | ಪಿಷ್ಟಪೇಷಣನ್ಯಾಯ | — | 67 |

| ನ್ಯಾಯಸಂಖ್ಯೆ | | | ಪುಟ |
|---|---|---|---|
| 159. | ಪಿಂಡಮುತ್ಸೃಜ್ಯ ಕರಂ ಲೇಢಿ | — | 68 |
| 160. | ಪೀಲುಪತ್ರಫಲನ್ಯಾಯ | — | 68 |
| 161. | ಪುತ್ರಲಿಪ್ಸಯಾ ದೇವಂ ಭಜಂತ್ಯಾಃ... | — | 68 |
| 162. | ಪುಷ್ಪಲಗುಡನ್ಯಾಯ | — | 68 |
| 163. | ಪೃಷ್ಠತಾಡನೇ ದಂತಭಂಗಃ | — | 69 |
| 164. | ಪ್ರಥಮಗ್ರಾಸೇ ಮಕ್ಷಿಕಾಪಾತಃ | — | 69 |
| 165. | ಪ್ರಧಾನಮಲ್ಲನಿಬರ್ಹಣನ್ಯಾಯ | — | 69 |
| 166. | ಪ್ರಯೋಜನಮನುದ್ದಿಶ್ಯ ನ ಮಂದೋಽಪಿ ಪ್ರವರ್ತತೇ | — | 70 |
| 167. | ಪ್ಲವಂಗಮಗತಿನ್ಯಾಯ | — | 70 |
| 168. | ಫಲವತ್ ಸಹಕಾರನ್ಯಾಯ | — | 71 |
| 169. | ಬಕಬಂಧನನ್ಯಾಯ | — | 71 |
| 170. | ಬಧಿರಕರ್ಣಜಪನ್ಯಾಯ | — | 71 |
| 171. | ಬಲವದಪಿ ಶಿಕ್ಷಿತಾನಾಂ.... | — | 72 |
| 172. | ಬಹುಚ್ಛಿದ್ರಘಟಪ್ರದೀಪನ್ಯಾಯ | — | 72 |
| 173. | ಬಹುರಾಜಕದೇಶನ್ಯಾಯ | — | 72 |
| 174. | ಬೀಜವೃಕ್ಷನ್ಯಾಯ | — | 73 |
| 175. | ಬ್ರಾಹ್ಮಣಪರಿವ್ರಾಜಕನ್ಯಾಯ | — | 73 |
| 176. | ಬ್ರಾಹ್ಮಣವಸಿಷ್ಠನ್ಯಾಯ | — | 74 |
| 177. | ಬ್ರಾಹ್ಮಣಶ್ರಮಣನ್ಯಾಯ | — | 74 |
| 178. | ಭಕ್ಷಿತೇಽಪಿ ಲಶುನೇ ನ ಶಾಂತೋ ವ್ಯಾಧಿಃ | — | 74 |
| 179. | ಭರ್ಮನ್ಯಾಯ (ಘಚ್ರ್ಪನ್ಯಾಯ) | — | 75 |
| 180. | ಭಸ್ಮನ್ಯಾಜ್ಯಾಹುತಿನ್ಯಾಯ | — | 76 |
| 181. | ಭಾಂಡಾಲೇಖ್ಯನ್ಯಾಯ | — | 76 |
| 182. | ಭಿಕ್ಷುಪಾದಪ್ರಸಾರಣನ್ಯಾಯ (ಉಷ್ಟ್ರಪಾದಪ್ರಸಾರಣನ್ಯಾಯ) | — | 77 |
| 183. | ಭೂಮಿರಥಿಕನ್ಯಾಯ | — | 77 |
| 184. | ಭೂಲಿಂಗನ್ಯಾಯ | — | 77 |
| 185. | ಭೃಂಗಕೀಟನ್ಯಾಯ (ಭ್ರಮರಕೀಟನ್ಯಾಯ) | — | 78 |
| 186. | ಭೌತವಿಚಾರನ್ಯಾಯ | — | 78 |
| 187. | ಭ್ರಷ್ಟಾವಸರನ್ಯಾಯ | — | 79 |
| 188. | ಮಕ್ಷಿಕಾನ್ಯಾಯ | — | 80 |
| 189. | ಮಣಿಮಂತ್ರಾದಿನ್ಯಾಯ | — | 80 |

ನ್ಯಾಯಸಂಖ್ಯೆ ಪುಟ


190. ಮಧು ಪಶ್ಯಸಿ ದುರ್ಬುದ್ಧೇ ಪ್ರಪಾತಂ ನಾನುಪಶ್ಯಸಿ — 80
191. ಮಧ್ಯಮಣಿನ್ಯಾಯ — 81
192. ಮರ್ಕಟಕಿಶೋರನ್ಯಾಯ — 81
193. ಮಲ್ಲಗ್ರಾಮನ್ಯಾಯ — 82
194. ಮಹತೋ ವಂಶಸ್ತಂಬಾತ್... — 82
195. ಮಹಾದರ್ಪಣಿಮುಖದರ್ಶನನ್ಯಾಯ — 82
196. ಮಹಾರ್ಣವಯುಗಚ್ಛಿದ್ರಕೂರ್ಮಗ್ರೀವಾರ್ಪಣ ನ್ಯಾಯ — 83
197. ಮಂಡೂಕತೋಲನನ್ಯಾಯ — 83
198. ಮಾತ್ಸ್ಯನ್ಯಾಯ — 83
199. ಮಾರಣಾಯ ಗೃಹೀತಃ... — 83
200. ಮಾರ್ಜಾಲಕಿಶೋರನ್ಯಾಯ — 84
201. ಮಾಲತೀಗಂಧಗುಣವಿತ್... — 84
202. ಮಾಷರಾಶಿಪ್ರವಿಷ್ಟಮಷೀನ್ಯಾಯ — 84
203. ಮುನಿರ್ಮನುತೇ ಮೂರ್ಖೋ ಮುಚ್ಯತೇ — 84
204. ಮುಂಡಿತಶಿರಸೋ ನಕ್ಷತ್ರಾನ್ವೇಷಣಮ್ — 85
205. ಮೃತಂ ಡುಂಡುಭಮಾಸಾದ್ಯ... — 85
206. ಯ ಏವ ಕರೋತಿ ಸ ಏವ ಭುಂಕ್ತೇ — 85
207. ಯತ್ ಕರಭಸ್ಯ ಪೃಷ್ಠೇ... — 85
208. ಯದಶ್ವೇನ ಹೃತಂ... — 86
209. ಯಸ್ಯ ನಾಸ್ತಿ ಪುತ್ರೋ ನ ತಸ್ಯ... — 86
210. ಯಾಚಿತಕಮಂಡನನ್ಯಾಯ — 86
211. ಯಾದೃಶೋ ಯಕ್ಷಸ್ತಾದೃಶೋ ಬಲಿಃ — 86
212. ಯಾವಚ್ಛಿರಸ್ತಾವತೀ ಶಿರೋವ್ಯಥಾ — 87
213. ಯಾವತ್ತೈಲಂ ತಾವದ್ವ್ಯಾಖ್ಯಾನಮ್ — 87
214. ರಜ್ಜುಸರ್ಪನ್ಯಾಯ — 87
215. ರಥಕಾರಾಧಿಕರಣನ್ಯಾಯ — 88
216. ರಾಜಪುತ್ರವ್ಯಾಧನ್ಯಾಯ — 89
217. ರಾಸಭರಟಿತನ್ಯಾಯ — 89
218. ರೇಖಾಗವಯನ್ಯಾಯ — 89
219. ವನಸಿಂಹನ್ಯಾಯ — 90
220. ವಧೂಹಸ್ತಮಾಷಮಾಪನನ್ಯಾಯ — 90

| ನ್ಯಾಯಸಂಖ್ಯೆ | | | ಪುಟ |
|---|---|---|---|
| 221. | ವರಮದ್ಯ ಕಪೋತಃ ಶ್ವೋಮಯೂರಾತ್ | — | 90 |
| 222. | ವರಂ ಸಾಂಶಯಿಕಾನ್ನಿಷ್ಕಾತ್ | — | 90 |
| 223. | ವರಾಟಿಕಾನ್ವೇಷಣಾಯ ಪ್ರವೃತ್ತಶ್ಚಿಂತಾಮಣಿಂ ಲಬ್ಧವಾನ್ | — | 91 |
| 224. | ವಿಕ್ರೀತೇ ಕರಿಣಿ ಕಿಮಂಕುಶೇ ವಿವಾದಃ | — | 91 |
| 225. | ವಿಪುಲಕದಲೀಫಲಲಿಪ್ಸಯಾ ಜಿಹ್ವಾಚ್ಛೇದನಮ್ | — | 91 |
| 226. | ವಿಷಕೃಮಿನ್ಯಾಯ | — | 92 |
| 227. | ವಿಹಂಗಮನ್ಯಾಯ | — | 92 |
| 228. | ವೀಚೀತರಂಗನ್ಯಾಯ | — | 93 |
| 229. | ವೃಕ್ಷಪ್ರಕಂಪನನ್ಯಾಯ | — | 93 |
| 230. | ವೃದ್ಧಕುಮಾರೀವಾಕ್ಯನ್ಯಾಯ | — | 93 |
| 231. | ವೃದ್ಧಿಮಿಷ್ಟವತೋ ಮೂಲಮಪಿ ನಷ್ಟಮ್ | — | 93 |
| 232. | ವೃಶ್ಚಿಕಭಿಯಾ ಪಲಾಯಮಾನಃ... | — | 94 |
| 233. | ವೃಶ್ಚಿಕೀಗರ್ಭನ್ಯಾಯ | — | 94 |
| 234. | ಶತಪತ್ರಪತ್ರಶತಭೇದನ್ಯಾಯ | — | 95 |
| 235. | ಶತೇ ಪಂಚಾಶನ್ನ್ಯಾಯ | — | 95 |
| 236. | ಶಲಭನ್ಯಾಯ | — | 96 |
| 237. | ಶಾಕಟಿಕನ್ಯಾಯ | — | 96 |
| 238. | ಶಾಖಾಚಂದ್ರನ್ಯಾಯ | — | 96 |
| 239. | ಶಾಂತೇ ಕರ್ಮಣಿ ವೇತಾಲೋದಯಃ | — | 97 |
| 240. | ಶಿರೋವೇಷ್ಟನೇನ ನಾಸಿಕಾಸ್ಪರ್ಶನ್ಯಾಯ | — | 97 |
| 241. | ಶೀರ್ಷೇ ಸರ್ಪೋ ದೇಶಾಂತರೇ ವೈದ್ಯ | — | 97 |
| 242. | ಶುಕನಲಿಕಾನ್ಯಾಯ | — | 98 |
| 243. | ಶೂರ್ಪನ್ಯಾಯ | — | 98 |
| 244. | ಶೃಂಗಗ್ರಾಹಿಕಾನ್ಯಾಯ | — | 98 |
| 245. | ಶ್ಯಾಲಶುನಕನ್ಯಾಯ | — | 99 |
| 246. | ಶ್ಯೇನಕಪೋತೀಯನ್ಯಾಯ | — | 99 |
| 247. | ಶ್ವಪುಚ್ಛೋನ್ನಾಮನನ್ಯಾಯ | — | 99 |
| 248. | ಶ್ವಶ್ರೂನಿರ್ಗಚ್ಛೋಕ್ತಿನ್ಯಾಯ | — | 100 |
| 249. | ಸಕೃತ್ಪ್ರವೃತ್ತಾಯಾಃ ಕಿಮವಗುಂಠನೇನ | — | 100 |
| 250. | ಸದೃಶಾತ್ಸದೃಶೋದ್ಭವ : | — | 100 |
| 251. | ಸರ್ವಂ ಬಲವತಃ ಪಥ್ಯಮ್ | — | 102 |
| 252. | ಸರ್ವನಾಶೇ ಸಮುತ್ಪನ್ನೇ... | — | 102 |

| ನ್ಯಾಯಸಂಖ್ಯೆ | | | ಪುಟ |
|---|---|---|---|
| 253. | ಸಾಕ್ಷಃ ಪುರುಷಃ ಪರೇಣ ಚೇತ್... | — | 102 |
| 254. | ಸಿಕತಾಕೂಪನ್ಯಾಯ | — | 102 |
| 255. | ಸಿಕತಾತೈಲನ್ಯಾಯ | — | 103 |
| 256. | ಸಿಂಹಮೇಷನ್ಯಾಯ | — | 103 |
| 257. | ಸಿಂಹಾವಲೋಕನನ್ಯಾಯ | — | 103 |
| 258. | ಸುವರ್ಣಕುಂಡಲನ್ಯಾಯ | — | 104 |
| 259. | ಸುಂದೋಪಸುಂದನ್ಯಾಯ | — | 104 |
| 260. | ಸೂಚೀಕಟಾಹನ್ಯಾಯ | — | 105 |
| 261. | ಸೂಚೀಮುಖನ್ಯಾಯ | — | 105 |
| 262. | ಸೂತ್ರಬದ್ಧಶಕುನಿನ್ಯಾಯ | — | 106 |
| 263. | ಸೂತ್ರಶಾಟಿಕಾನ್ಯಾಯ | — | 106 |
| 264. | ಸೂರ್ಯೋದಯಾಸ್ತನ್ಯಾಯ | — | 106 |
| 265. | ಸೋಪಾನಾರೋಹಣನ್ಯಾಯ | — | 107 |
| 266. | ಸ್ಥಾಲೀಪುಲಾಕನ್ಯಾಯ | — | 107 |
| 267. | ಸ್ಥಾವರಜಂಗಮವಿಷನ್ಯಾಯ | — | 107 |
| 268. | ಸ್ಥೂಣಾನಿಖನನನ್ಯಾಯ | — | 108 |
| 269. | ಸ್ಫಟಿಕಲೌಹಿತ್ಯನ್ಯಾಯ | — | 108 |
| 270. | ಸ್ವವಿಷಮೂರ್ಛಿತೋ ಭುಜಂಗಃ... | — | 108 |
| 271. | ಸ್ವಾಂಗುಲಿಜ್ವಾಲಯಾ ಪರದಾಹನ್ಯಾಯ | — | 109 |
| 272. | ಸ್ವೇದಜನಿಮಿತ್ತೇನ ಶಾಟಕತ್ಯಾಗನ್ಯಾಯ | — | 109 |
| 273. | ಹಿರಣ್ಯನಿಧಿನ್ಯಾಯ | — | 109 |
| 274. | ಹ್ರದನಕ್ರನ್ಯಾಯ | — | 110 |


## ಪರಿಶಿಷ್ಟ

ವೈಯರ್ಥ್ಯಬೋಧಕ ನ್ಯಾಯಗಳು


| | | | |
|---|---|---|---|
| 1. | ಅರಣ್ಯರೋದನನ್ಯಾಯ | — | 110 |
| 2. | ಅಂಧದರ್ಪಣನ್ಯಾಯ | — | 110 |
| 3. | ಆಕಾಶರೋಮಂಥನ್ಯಾಯ | — | 110 |
| 4. | ಆಕಾಶಮುಷ್ಟಿಹನನನ್ಯಾಯ | — | 110 |
| 5. | ಊಷರವೃಷ್ಟಿನ್ಯಾಯ | — | 111 |

| ನ್ಯಾಯಸಂಖ್ಯೆ | | | ಪುಟ |
|---|---|---|---|
| 6. | ಕಾಕದಂತಪರೀಕ್ಷಾನ್ಯಾಯ | — | 111 |
| 7. | ಗರ್ದಭರೋಮಗಣನನ್ಯಾಯ | — | 111 |
| 8. | ಜಲತಾಡನನ್ಯಾಯ | — | 111 |
| 9. | ಜಲಮಂಥನನ್ಯಾಯ | — | 111 |
| 10. | ಪಿಷ್ಟಪೇಷಣನ್ಯಾಯ | — | 111 |
| 11. | ಬಧಿರಕರ್ಣಜಪನ್ಯಾಯ | — | 111 |
| 12. | ಮೂರ್ಖಸೇವನನ್ಯಾಯ | — | 111 |
| 13. | ಮೃತಮಾರಣನ್ಯಾಯ | — | 111 |
| 14. | ಶವೋದ್ವರ್ತನನ್ಯಾಯ | — | 111 |
| 15. | ಶ್ವಪುಚ್ಛೋನ್ನಾಮನನ್ಯಾಯ | — | 112 |
| 16. | ಸಮುದ್ರವೃಷ್ಟಿನ್ಯಾಯ | — | 112 |

# ಸಂದರ್ಭ ಸೂಕ್ತಿ

## 1. ಅಗ್ನಿಶಿಖಾನ್ಯಾಯ

ಬೆಂಕಿಯ ಜ್ವಾಲೆ ಯಾವಾಗಲೂ ಮೇಲ್ಮುಖವಾಗಿಯೇ ಇರುತ್ತದೆ. ಗಾಳಿಯ ಹೊಡೆತದಿಂದ ಸ್ವಲ್ಪ ವಾಲಿದರೂ ಮತ್ತೆ ಮೇಲ್ಮುಖವೇ. ಒಳ್ಳೆಯವನಾಗಲಿ, ಕೆಟ್ಟವನಾಗಲಿ ಯಾವಾತನು ತನ್ನ ಸ್ವಭಾವವನ್ನು ಬದಲಾಯಿಸುವುದಿಲ್ಲವೋ ಆಗ ಈ ನ್ಯಾಯವನ್ನು ಬಳಸಬಹುದು. ಮತ್ತು ಯಾರು ಲೋಕದಲ್ಲಿ ತಮ್ಮ ಸ್ಥಾನವನ್ನೂ, ಪದವಿಯನ್ನೂ ಹೆಚ್ಚಿಸಿ ಕೊಳ್ಳುತ್ತಲೇ ಹೋಗುವರೋ, ಯಾರಿಗೆ ಉನ್ನತಿಯೇ ಹೊರತು ಅವನತಿ ಇಲ್ಲವೋ ಅವರ ವಿಷಯದಲ್ಲಿಯೂ ಇದನ್ನು ಉದಾಹರಿಸಬಹುದು.

## 2. ಅಜಾತಪುತ್ರನಾಮೋತ್ಕೀರ್ತನನ್ಯಾಯ

'ಮಗನೇ ಹುಟ್ಟಿಲ್ಲ, ಅವನಿಗೆ ಹೆಸರಿಟ್ಟನಂತೆ !' 'ಹೆಂಡತಿಯೇ ಇಲ್ಲ, ಮಗನ ಹೆಸರು ರಾಮಕೃಷ್ಣ !' 'ಹುಟ್ಟದ ಮಗುವಿಗೆ ಕುಲಾವಿ ಹೊಲಿಸಿದಂತೆ'.

ಈ ಗಾದೆಯು ಮನುಷ್ಯನ ಮನೋದೌರ್ಬಲ್ಯವನ್ನು ಸೂಚಿಸು ವುದು. ಮನಸ್ಸು ತಿರುಕನ ಕನಸಿನಂತೆ ಗಾಳಿಯ ಗೋಪುರವನ್ನು ಕಟ್ಟು ವುದು. ಸಿದ್ಧಿಸುವುದೋ ಇಲ್ಲವೋ ಎಂದು ವಿವೇಕಿಯು ಯೋಚಿಸ ಬೇಕಾದ ಕಾಲದಲ್ಲಿ ಕಾರ್ಯವು ಕೈಗೂಡಿತೆಂದು ಹಿಗ್ಗುವ ಅವಿವೇಕಿಗೆ ಈ ನ್ಯಾಯ ಅನ್ವಯಿಸುತ್ತದೆ.

## 3. ಅತ್ಕೇ ಚೇತ್ ಮಧು ವಿಂದೇತ ಕಿಮರ್ಥಂ ಪರ್ವತಂ ವ್ರಜೇತ್

ಅತ್ಕೇ ಎಂದರೆ ಅಂತಿಕ–ಸಮೀಪ. ಸಮೀಪದಲ್ಲೇ ಜೇನುತುಪ್ಪ ಸಿಗುವುದಾದರೆ ಪರ್ವತದವರೆಗೆ ಏಕೆ ಹೋಗಬೇಕು ? ಅನಾಯಾಸವಾಗಿ ಒಂದು ಕೆಲಸ ಸಾಧ್ಯವಾಗುವುದಾದರೆ ಯಾರೂ ಆಯಾಸದ ಕೆಲಸಕ್ಕೆ ಕೈಹಾಕುವುದಿಲ್ಲ.

'ಯೋಗಿನಾಂ ಹೃದಯೇ ಹರಿಃ' ಎಂಬಂತೆ ಭಗವಂತನು ನಮ್ಮ ಹೃದಯದಲ್ಲಿಯೂ ಎಲ್ಲೆಲ್ಲಿಯೂ ನೆಲೆಸಿರುವಾಗ ತೀರ್ಥಯಾತ್ರೆ ಮೊದಲಾದವು ಅನಾವಶ್ಯಕ—ಮುಂತಾದ ಅಭಿಪ್ರಾಯವನ್ನು ತಿಳಿಸುವಾಗ ಈ ನ್ಯಾಯವನ್ನು ಬಳಸುತ್ತಾರೆ.

ನ್ಯಾಯದಲ್ಲಿ 'ಅರ್ಕೇ ಚೇತ್' ಎಂದೂ 'ಅಕ್ಕೇ ಚೇತ್' ಎಂದೂ ಪಾಠಾಂತರ ಉಂಟು. ಅರ್ಕ–ಎಕ್ಕೆಗಿಡ. ಅಕ್ಕ–ಮನೆಯ ಕೋಣೆ. ಒಟ್ಟಿನಲ್ಲಿ ತಾತ್ಪರ್ಯ ಒಂದೇ.

## 4. ಅದಿತ್ಸೋರ್ವಣಿಜಃ ಶ್ವಸ್ತನಭಣನನ್ಯಾಯ

ಅದಿತ್ಸೋ :—ಕೊಡಲು ಇಚ್ಛೆ ಇಲ್ಲದ, ಶ್ವಸ್ತನ-ನಾಳೆಗೆ ಸೇರಿದ್ದು, ಭಣನ–ಹೇಳುವುದು. ಹಣವನ್ನು ಕೊಡಲು ಇಚ್ಛೆ ಇಲ್ಲದ ವ್ಯಾಪಾರಿ "ನಾಳೆ ಕೊಡುತ್ತೇನೆ" ಎಂದು ಪತ್ರದಲ್ಲಿ ಬರೆದುಕೊಟ್ಟಿದ್ದನು. ಪ್ರತಿದಿನ ಕೇಳಿದಾಗಲೆಲ್ಲ 'ನಾಳೆ ತಾನೇ ನಾನು ಕೊಡಬೇಕಾದದ್ದು' ಎಂದು ಉತ್ತರ ಹೇಳಿ ಕಳಿಸುತ್ತಿದ್ದನು ! ಇದು ವ್ಯಾಪಾರಿಗಳಿಗೆ ಮಾತ್ರ ಅನ್ವಯಿಸತಕ್ಕದ್ದಲ್ಲ. ಸಾಹುಕಾರರಿಗೂ, ಸಾಲಗಾರರಿಗೂ, ಎಲ್ಲರಿಗೂ ಅನ್ವಯಿಸುತ್ತದೆ. ಸಾಹುಕಾರನ ಬಳಿಗೆ ಸಾಲವನ್ನೋ, ಚಂದಾಹಣವನ್ನೋ ಕೇಳಲು ಹೋದರೆ 'ನಾಳೆ ನೋಡೋಣ ; ನಾಳೆ ಬನ್ನಿರಿ' ಎಂಬ ಉತ್ತರಗಳೇ ಬಹುಶಃ ಸಿದ್ಧವಾಗಿರುತ್ತವೆ. ಸಾಲಗಾರನಿಗಂತೂ ಈ ಉತ್ತರವೇ ವಜ್ರಕವಚ. 'ನಾಳೆ ಎಂದರೆ ನಕಾರವೇ'; 'ನಾಳೆ ಎಂಬುದು ನಾಸ್ತಿ ಪರ್ಯಾಯ'.

## 5. ಅನಿಷಿದ್ಧಮನುಮತಂ ಭವತಿ

ಯಾವುದಕ್ಕೆ ನಿಷೇಧವಿಲ್ಲವೋ ಅದಕ್ಕೆ ಒಪ್ಪಿಗೆ ಇದ್ದಂತೆಯೇ. 'Silence gives Consent'.

## 6. ಅಭ್ಯರ್ಹಿತಂ ಪೂರ್ವಮ್

ಯಾರು ಹೆಚ್ಚು ಪೂಜ್ಯರೋ ಅವರಿಗೆ ಪ್ರಥಮ ಸ್ಥಾನವನ್ನು ಕೊಡಬೇಕು. ಈ ಸಂಪ್ರದಾಯ ಲೋಕದಲ್ಲಿ ಇದ್ದೇ ಇದೆ. ಮನೆಯಲ್ಲಿ ತಾಯಿತಂದೆಗಳಿಗೆ ಅಗ್ರಸ್ಥಾನವನ್ನು ಕೊಡಬೇಕೆಂದು ಪ್ರಾರಂಭವಾಗಿ ವಿವಾಹಾದಿ ಸಾಮಾಜಿಕ ಕಾರ್ಯಗಳಲ್ಲಿಯೂ, ಸಭೆಗಳಲ್ಲಿಯೂ, ಸರ್ಕಾರದ ವ್ಯವಹಾರಗಳಲ್ಲಿಯೂ ಈ ನ್ಯಾಯಕ್ಕೆ ಮಾನ್ಯತೆ ಇದೆ. ಸರ್ಕಾರವೇನೋ ಅಧಿಕಾರಿಗಳ ವೇತನ ಮತ್ತು ಹೊಣೆಗಾರಿಕೆಗಳನ್ನು ಲಕ್ಷಿಸಿ ಪೂಜ್ಯತೆಯ ಅನುಕ್ರಮವನ್ನು ಗೊತ್ತುಪಡಿಸುತ್ತದೆ. ಆದರೆ ಸಮಾಜದಲ್ಲಿ ಇದರ ವ್ಯವಸ್ಥೆ ಹೇಗೆ ? ಒಂದು ಶುಭಕಾರ್ಯದಲ್ಲಿ ಅನೇಕ ಬಗೆಯ, ವಿವಿಧ

ಯೋಗ್ಯತೆಗಳ ಜನಗಳು ಮಿಳಿತರಾಗುತ್ತಾರೆ. ವಿದ್ವಾಂಸರು, ಧನಿಕರು, ವೃದ್ಧರು, ಹತ್ತಿರದ ಬಂಧುಗಳು—ಹೀಗೆ ನಾನಾ ವಿಧದ ವ್ಯಕ್ತಿಗಳು ಸೇರಿದಾಗ ಈ ಅನುಕ್ರಮವನ್ನು ನಿರ್ಣಯಿಸುವುದು ಕಠಿಣವೇ. ಸಾಮಾನ್ಯವಾಗಿ ಯಜಮಾನನ ಇಚ್ಛೆಯಂತೆ ಇದರ ವ್ಯವಸ್ಥೆಯಾಗುತ್ತದೆ. ಈ ಬಗೆಗೆ ಗೌತಮ ಮಹರ್ಷಿಗಳು ತಮ್ಮ ಧರ್ಮ ಸೂತ್ರದಲ್ಲಿ ಗೊತ್ತು ಮಾಡಿದ ವ್ಯವಸ್ಥೆ ಮನನೀಯವಾದದ್ದು—

> ವಿತ್ತ ಬಂಧು ಕರ್ಮ ಜಾತಿ ವಿದ್ಯಾ ವಯಾಂಸಿ ಮಾನ್ಯಾನಿ ॥
> ಪರಬಲೀಯಾಂಸಿ ॥
> ಶ್ರುತಂ ತು ಸರ್ವೇಭ್ಯೋ ಗರೀಯಃ ॥

"ಧನ, ಬಾಂಧವ್ಯ, ಜೀವನದ ವೃತ್ತಿ, ಜಾತಿ, ವಿದ್ಯೆ, ವಯಸ್ಸು ಇವುಗಳನ್ನು ಅನುಲಕ್ಷಿಸಿ ಪೂಜ್ಯತೆಯನ್ನು ನಿರ್ಣಯಿಸಬೇಕು. ಇವುಗಳಲ್ಲಿ ಒಂದನೆಯದಕ್ಕಿಂತ ಎರಡನೆಯದು ಪ್ರಬಲ; ಅದಕ್ಕಿಂತ ಮೂರನೆಯದು; ಹೀಗೆ ಉತ್ತರೋತ್ತರವಾಗಿ ಬಲಶಾಲಿ. ಧನಿಕನಿಗಿಂತ ಬಂಧು ಪೂಜ್ಯ. ಆತನಿಗಿಂತ ಉತ್ತಮ ವೃತ್ತಿಯಲ್ಲಿರುವವನು ಪೂಜ್ಯ. ಎಲ್ಲರಿಗಿಂತ ವೃದ್ಧನಿಗೆ ಪೂಜ್ಯತೆ ಸಲ್ಲಬೇಕು. ಆದರೆ ವೇದ ವೇದಾರ್ಥಕೋವಿದನು ಸರ್ವಶ್ರೇಷ್ಠನು."

ಗೌತಮರು ಧನಕ್ಕೆ ಕನಿಷ್ಠಸ್ಥಾನವನ್ನು ಕೊಟ್ಟಿದ್ದಾರೆಂಬುದು ಗಮನೀಯವಾದ ಅಂಶ. ನಾವು ಮಾತ್ರ ಧನಕ್ಕೆ ಶ್ರೇಷ್ಠಸ್ಥಾನವನ್ನು ಕೊಟ್ಟಿದ್ದೇವೆ.

'ಅಭ್ಯರ್ಹಿತಂ ಪೂರ್ವಂ' ಎಂಬುದು ಒಂದು ವ್ಯಾಕರಣ ಸೂತ್ರ. ದ್ವಂದ್ವ ಸಮಾಸದಲ್ಲಿ ಅನೇಕ ಶಬ್ದಗಳಿರುತ್ತವಷ್ಟೆ. ಅವುಗಳಲ್ಲಿ ಯಾವ ಶಬ್ದದ ಅರ್ಥ ಹೆಚ್ಚು ಪೂಜ್ಯವೋ ಆ ಶಬ್ದವನ್ನು ಮೊದಲು ಪ್ರಯೋಗಿಸಬೇಕು. ಉದಾ:—'ಮಾತಾಪಿತರೌ'. ಧರ್ಮಶಾಸ್ತ್ರದಲ್ಲಿ ತಂದೆಗಿಂತ ತಾಯಿ ಹೆಚ್ಚು ಪೂಜ್ಯಳೆಂದು ಹೇಳಿದೆ. ಈ ಸೂತ್ರ ಎಷ್ಟು ವ್ಯಾಪಕವಾಗಿ ನ್ಯಾಯರೂಪವನ್ನು ಹೊಂದಿದೆಯೆಂಬುದನ್ನು ಗಮನಿಸಬೇಕು.

## 7. ಅರಣ್ಯರೋದನನ್ಯಾಯ

'ಕಾಡಿನಲ್ಲಿ ಅತ್ತರೆ ಕೇಳುವವರು ಯಾರು?' ಗಂಟಲು ನೋವೇ ಫಲ. ವ್ಯರ್ಥವಾದ ಪ್ರಯತ್ನವನ್ನು ವರ್ಣಿಸುವಾಗ ಈ ನ್ಯಾಯ ಉಪಯೋಗಕ್ಕೆ ಬರುತ್ತದೆ. ಒಬ್ಬ ಕವಿಯು ತನ್ನ ಪರಿಶ್ರಮ ನಿಷ್ಫಲವಾಯಿತೆಂಬುದನ್ನು ಸುಂದರವಾಗಿ ವರ್ಣಿಸಿದ್ದಾನೆ: "ಗುಣಗ್ರಾಹಿಯಲ್ಲದ ಮೂರ್ಖನಾದ ಯಜಮಾನನ ಸೇವೆಯನ್ನು ಮಾಡಿದ್ದಾಯಿತು. ಈ ಸೇವೆ ಅರಣ್ಯರೋದನದಂತೆಯೂ, ಹೆಣಕ್ಕೆ ಚಂದನ ಲೇಪನ ಮಾಡಿ

ದಂತೆಯೂ ಆಯಿತು. ನೆಲದಲ್ಲಿ ಕಮಲದ ಗಿಡವನ್ನು ನೆಟ್ಟಂತೆಯೂ, ಮರಳುಗಾಡಿನಲ್ಲಿ ಮಳೆ ಸುರಿದಂತೆಯೂ ಆಯಿತು. ಈ ಸೇವೆ ನಾಯಿಯ ಬಾಲವನ್ನು ನೆಟ್ಟಗೆ ಮಾಡಿದಂತೆ. ಇದು ಕಿವುಡನ ಕಿವಿಯಲ್ಲಿ ಮಾಡಿದ ಉಪದೇಶ, ಕುರುಡನ ಮುಖಕ್ಕೆ ಹಿಡಿದ ಕನ್ನಡಿ."

ಅರಣ್ಯಚಂದ್ರಿಕಾನ್ಯಾಯವೂ ಈ ಅರ್ಥದಲ್ಲಿದೆ. ಅರಣ್ಯದಲ್ಲಿ ಬೀಳುವ ಬೆಳದಿಂಗಳು ವ್ಯರ್ಥ.

## 8. ಅರುಂಧತೀಪ್ರದರ್ಶನ ನ್ಯಾಯ

ವಿವಾಹಕಾಲದಲ್ಲಿ ವಧುವಿಗೆ ಅರುಂಧತೀನಕ್ಷತ್ರವನ್ನು ತೋರಿಸುವ ಸಂಪ್ರದಾಯ ಉಂಟು. ಸಪ್ತರ್ಷಿಮಂಡಲದಲ್ಲಿರುವ ವಸಿಷ್ಠ ನಕ್ಷತ್ರದ ಪಕ್ಕದಲ್ಲಿ ಒಂದು ಚಿಕ್ಕದಾದ ನಕ್ಷತ್ರವಿರುತ್ತದೆ. ಅದೇ ಅರುಂಧತಿ. ಅರುಂಧತಿಯನ್ನು ತೋರಿಸುತ್ತೇನೆಂದು ಅದರ ಬಳಿಯಲ್ಲಿರುವ ದೊಡ್ಡ ನಕ್ಷತ್ರವನ್ನು ತೋರಿಸುತ್ತಾರೆ. ಅನಂತರ ಬಳಿಯಲ್ಲಿರುವ ಚಿಕ್ಕ ನಕ್ಷತ್ರವನ್ನು ವಧುವಿಗೆ ತೋರಿಸಿ ಅದೇ ಅರುಂಧತಿಯೆಂದೂ ಮೊದಲು ನೋಡಿದ ದೊಡ್ಡ ನಕ್ಷತ್ರ ಅರುಂಧತಿಯಲ್ಲವೆಂದೂ ಹೇಳುತ್ತಾರೆ. ಆಗ ವಧುವು ಆ ನಕ್ಷತ್ರವನ್ನು ಸರಿಯಾಗಿ ಗುರುತಿಸುತ್ತಾಳೆ.

ಹೀಗೆ ಅತಿ ಸೂಕ್ಷ್ಮವಾದ ವಸ್ತುವನ್ನು ಪರಿಚಯ ಮಾಡಿಸುವಾಗ ಅದಕ್ಕೆ ನಿಕಟವಾಗಿ ಸ್ಥೂಲವೂ ಸುಲಭಗ್ರಾಹ್ಯವೂ ಆದ ವಸ್ತುವನ್ನು ಪರಿಚಯ ಮಾಡಿಸಿ ಅದು ತಿಳಿದ ಮೇಲೆ ಸೂಕ್ಷ್ಮವಾದ ವಸ್ತುವನ್ನು ಬೋಧಿಸುವುದು ಶಿಕ್ಷಣ ಪದ್ಧತಿ. ಆಗ ಕಠಿನವಾದ ವಿಷಯವನ್ನು ಶಿಷ್ಯನು ಕ್ರಮವಾಗಿ ಗ್ರಹಿಸುತ್ತಾನೆ. ಪ್ರತಿಮಾಪೂಜೆ ಸಾಮಾನ್ಯ ಜನರಿಗಾಗಿ ಉಪದಿಷ್ಟವಾದದ್ದು. ಮನುಷ್ಯನೂ ಅದನ್ನೇ ಶ್ರದ್ಧೆಯಿಂದ ನಂಬಿ ಪೂಜಿಸಿ ಸಿದ್ಧಿ ಪಡೆದ ಮೇಲೆ ಅಂತರ್ಯಾಮಿಯಾದ ಈಶ್ವರನ ಸಾಕ್ಷಾತ್ಕಾರ ಸುಲಭವಾಗುತ್ತದೆ. ಪಾಠಶಾಲೆಯಲ್ಲಿ ಭೂಪಟದ ಸಹಾಯದಿಂದ ದೂರದಲ್ಲಿರುವ ನದಿ, ಪರ್ವತ ಮುಂತಾದವುಗಳ ಪರಿಚಯ ಮಾಡಿಸುವುದಿಲ್ಲವೆ? ಹಾಗೆ ಉಪನಿಷತ್ತುಗಳಲ್ಲಿ ಇಂತಹ ಪ್ರಕರಣಗಳು ಬಹಳ ಉಂಟು. ಭೃಗುವಲ್ಲಿಯಲ್ಲಿ ಆತ್ಮತತ್ವವನ್ನು ಬೋಧಿಸುವುದಕ್ಕಾಗಿ ಮೊದಲು ಅನ್ನಮಯ ಕೋಶ, ಪ್ರಾಣಮಯಕೋಶ, ಮುಂತಾದ ಪಂಚಕೋಶಗಳೇ ಆತ್ಮವೆಂದು ವರುಣನು ಭೃಗುವಿಗೆ ಉಪದೇಶಿಸುತ್ತಾನೆ. ಭೃಗುವು ಒಂದೊಂದು ಕೋಶದ ಸ್ವರೂಪವನ್ನೂ ತಪಸ್ಸಿನಿಂದ ಅರಿತ ಮೇಲೆ ಕೊನೆಯಲ್ಲಿ ಆತ್ಮನು ಪಂಚಕೋಶಾತೀತನೆಂಬ ತತ್ತ್ವವನ್ನು ಅರಿಯುತ್ತಾನೆ. ಅನ್ನಮಯಾದಿ ಕೋಶಗಳು ಆತ್ಮನಲ್ಲ ಎಂಬ ತಿಳಿವೂ ಮನಸ್ಸಿನಲ್ಲಿ ದೃಢವಾಗಿ ನಿಲ್ಲುತ್ತದೆ.

ಸ್ಥೂಲಾರುಂಧತೀನ್ಯಾಯವೆಂದರೂ ಇದೇ.

## 9. ಅರ್ಧಜರತೀಯನ್ಯಾಯ

ಈ ನ್ಯಾಯವನ್ನು ಶಾಸ್ತ್ರಕಾರರು ವಿಶೇಷವಾಗಿ ಬಳಸಿದ್ದಾರೆ. ಆದರೆ ಈ ನ್ಯಾಯದ ಶಬ್ದಾರ್ಥದ ವಿಷಯದಲ್ಲಿ ಅನೇಕ ಅಭಿಪ್ರಾಯ ಗಳಿವೆ. ತಾತ್ಪರ್ಯದಲ್ಲಿ ಹೆಚ್ಚು ವ್ಯತ್ಯಾಸವಿಲ್ಲ. ಜರತೀ ಎಂದರೆ ವೃದ್ಧೆ-ಮುದುಕಿ. ಒಬ್ಬ ಹೆಂಗಸು ಅರ್ಧಭಾಗ ಮುದುಕಿಯಾಗಿದ್ದಾಳೆಂದರೆ ತಾತ್ಪರ್ಯವೇನು ? ಯುವತಿಯಲ್ಲಿಯೇ ಮುದುಕಿಯಂತೆ ಸುಕ್ಕುಚರ್ಮ ಮುಂತಾದ ಲಕ್ಷಣಗಳು ಕಂಡುಬಂದರೆ ಅವಳನ್ನು ಯುವತಿ ಎನ್ನಬೇಕೆ ? ಮುದುಕಿ ಎನ್ನಬೇಕೆ ? ಅವಳನ್ನು ಯಾರು ಪ್ರೇಮಿಸುವರು ? ಅವಳು ಜನರ ಉಪೇಕ್ಷೆಗೆ ಪಾತ್ರಳಾಗುವಳು. ಹಾಗೆಯೇ ಯಾವುದಾದರೊಂದು ಶಾಸ್ತ್ರದಲ್ಲಿ ಅಥವಾ ಪ್ರತಿಪಾದ್ಯವಾದ ಒಂದು ಅಂಶದಲ್ಲಿ ಅರ್ಧವನ್ನು ನಂಬಿ ಇನ್ನೊಂದು ಅರ್ಧವನ್ನು ತ್ಯಜಿಸಿದರೆ ಆ ನಂಬಿಕೆ ಅರ್ಧ ಜರತೀಯ ವಾದುದು. ಅದು ಗ್ರಾಹ್ಯವಲ್ಲ. ಉದಾಹರಣೆಗೆ, ವೇದದಲ್ಲಿ ಹೇಳಿದ ಸತ್ಯ, ಶೌಚ, ಅಹಿಂಸೆ ಮುಂತಾದ ಧರ್ಮಗಳನ್ನು ನಂಬುವುದು ; ಆದರೆ ವೇದದಲ್ಲಿಯೇ ಹೇಳಿದ ವರ್ಣಾಶ್ರಮ ಧರ್ಮಗಳನ್ನು ನಂಬದಿರುವುದು. ಇದು ಅರ್ಧ ಜರತೀಯ.

ಇನ್ನು ಕೆಲವರು ಹೇಳುವ ಅರ್ಥ ಹೀಗೆ—ಒಬ್ಬ ವೃದ್ಧೆಯ ಕೆಲವು ಅಂಗಗಳು ಕಾಮುಕನಿಗೆ ಸುಂದರವಾಗಿ ಕಾಣಿಸಬಹುದು. ಈ ಬಗೆಯ ವಿಕೃತ ಕಾಮವು ಯೋಗ್ಯವಲ್ಲ. ಅದು ಹೇಯವಾದದ್ದು. ಹಾಗೆಯೇ ಒಂದು ವಿಷಯದಲ್ಲಿ ಅರ್ಧವನ್ನು ಗ್ರಹಿಸಿ ಇನ್ನೊಂದು ಅರ್ಧವನ್ನು ತ್ಯಜಿಸುವುದು ಯೋಗ್ಯವಲ್ಲ.

ಈ ನ್ಯಾಯವನ್ನು ವಿವರಿಸುತ್ತಾ ಆನಂದಗಿರಿಯು ಇದಕ್ಕೆ ಒಂದು ದೃಷ್ಟಾಂತವನ್ನು ಹೇಳುತ್ತಾನೆ. "ಕೋಳಿಯ ಅರ್ಧ ದೇಹವನ್ನು ತಿನ್ನು ವುದಕ್ಕಾಗಿಯೂ ಉಳಿದ ಅರ್ಧವನ್ನು ತತ್ತಿ ಇಡುವುದಕ್ಕಾಗಿಯೂ ಉಪ ಯೋಗಿಸುವುದು ಸಾಧ್ಯವಿಲ್ಲವಷ್ಟೆ !"

## 10. ಅರ್ಧವೈಶಸನ್ಯಾಯ

ವೈಶಸವೆಂದರೆ ಕತ್ತರಿಸುವುದು, ಕೊಲ್ಲುವುದು. ಒಂದು ಪ್ರಾಣಿ ಯನ್ನು ಅರ್ಧ ಕೊಂದು ಉಳಿದ ಅರ್ಧವನ್ನು ಜೀವಂತವಾಗಿಡುವುದು ಸಾಧ್ಯವಿಲ್ಲ. ಅಂತಹ ಪ್ರಯತ್ನ ಮೂರ್ಖತನವಾಗುತ್ತದೆ. ಯಾವ ಕೆಲಸವನ್ನೂ ಅರ್ಧ ಮಾಡಿ ಬಿಡಬಾರದು ಎಂದು ತಾತ್ಪರ್ಯ. ಇದು ಕೆಲವು ಅಂಶದಲ್ಲಿ ಅರ್ಧ ಜರತೀಯ ನ್ಯಾಯವನ್ನು ಹೋಲುತ್ತದೆ. ಕಾಳಿದಾಸನ ಕುಮಾರಸಂಭವದಲ್ಲಿ ಮನ್ಮಥನು ಹರನ ನೇತ್ರಾಗ್ನಿಯಿಂದ ಭಸ್ಮವಾಗುತ್ತಾನೆ. ಆಗ ರತಿಯು ಅಳುತ್ತಾ "ವಿಧಿಯು ನನ್ನ ಪ್ರಿಯ

ನನ್ನು ಕೊಂದು ನನ್ನನ್ನು ಉಳಿಸಿ ಅರ್ಧವೈಶಸ ಮಾಡಿದನು" ಎಂದು ಗೋಳಾಡುತ್ತಾಳೆ. ರತಿಯು ಮನ್ಮಥನ ಅರ್ಧಾಂಗಿಯಲ್ಲವೇ ! ಗಂಡ ಹೆಂಡಿರಿಬ್ಬರೂ ಸೇರಿ ಒಂದು ಶರೀರ, ಒಂದು ವ್ಯಕ್ತಿ ಎಂಬ ದಾಂಪತ್ಯದ ಆದರ್ಶವನ್ನು ಕವಿಯು ಹೇಗೆ ಸೂಚಿಸಿದ್ದಾನೆ !

## 11. ಅಲಂಕೃತ್ಯ ಶಿರಶ್ಛೇದಃ

ಮೊದಲು ಅಲಂಕಾರ ಮಾಡಿ ಆಮೇಲೆ ತಲೆಯನ್ನು ಕತ್ತರಿಸಿ ಹಾಕುವುದು ! ಪರಕೀಯ ಸಿದ್ಧಾಂತವನ್ನು ನಾನಾ ಯುಕ್ತಿಗಳಿಂದ ಸಾಧಿಸಿ, ಕಡೆಯಲ್ಲಿ ಅದನ್ನು ಖಂಡಿಸಿದಾಗ ಈ ನ್ಯಾಯವನ್ನು ಬಳಸುತ್ತಾರೆ. ಮಾರಿಯಮ್ಮನಿಗೆ ಬಲಿಕೊಡುವಾಗ ಕುರಿಯನ್ನು ಹೂಮಾಲೆಯಿಂದ ಅಲಂಕರಿಸುವುದುಂಟು. ಇವರು ದೊಡ್ಡ ಮನುಷ್ಯರೆಂದು ಸ್ತುತಿಸಿ ಕೊನೆಯಲ್ಲಿ ಅವರಲ್ಲಿದ್ದ ಒಂದು ನೀಚ ಗುಣವನ್ನು ಬಯಲಿಗೆಳೆದಾಗ ಇದನ್ನು ಉಪಯೋಗಿಸಬಹುದು.

## 12. ಅವತಪ್ತೇ ನಕುಲಸ್ಥಿತಮ್

ಕಾದ ನೆಲದ ಮೇಲೆ ಮುಂಗಸಿ ಕುಳಿತುಕೊಂಡಂತೆ. ಮುಂಗಸಿ ಬಹಳ ಚುರುಕಾದ ಚಪಲ ಸ್ವಭಾವದ ಪ್ರಾಣಿ. ಕ್ಷಣಕಾಲವೂ ಸುಮ್ಮನಿರದೆ ಚಲಿಸುತ್ತಾ ಚೇಷ್ಟೆ ಮಾಡುತ್ತಿರುವುದು. ಇಂತಹ ಮುಂಗಸಿ ಸುಡುತ್ತಿರುವ ಜಾಗದಲ್ಲಿ ಸುಮ್ಮನೆ ಕುಳಿತಿರುವುದೆ ? ಅತ್ಯಂತ ಚಂಚಲ ಸ್ವಭಾವದವರ ವರ್ತನೆಯನ್ನು ಟೀಕಿಸುತ್ತದೆ ಈ ನ್ಯಾಯ. ವಿದ್ಯಾರ್ಥಿಗಳು ಚೇಷ್ಟೆ ಮಾಡದೆ ಪಾಠವನ್ನು ಕೇಳುತ್ತಾ ಕುಳಿತಿದ್ದಾರೆಂದರೆ ಅವತಪ್ತೇ ನಕುಲಸ್ಥಿತಂ ! ಮಹಾಭಾಷ್ಯದಲ್ಲಿ ಪತಂಜಲಿಗಳು ಅನೇಕ ಕಡೆ ಈ ನ್ಯಾಯವನ್ನು ಬಳಸಿದ್ದಾರೆ. ಒಂದು ಕಡೆ ಹೇಳುತ್ತಾರೆ :—"ತೀರ್ಥಕಾಕ ಎಂದರೇನು ? ತೀರ್ಥದಲ್ಲಿ ಕಾಗೆಗಳು ಬಹಳ ಹೊತ್ತು ಇರದೆ ಹಾರಿ ಹೋಗುತ್ತವೆ. ಹಾಗೆ ಯಾವ ವಿದ್ಯಾರ್ಥಿಯು ಒಬ್ಬ ಗುರುವಿನ ಬಳಿಯಲ್ಲಿಯೂ ಸ್ಥಿರವಾಗಿ ನಿಂತು ಅಭ್ಯಾಸ ಮಾಡದೆ ಗುರುವಿನಿಂದ ಗುರುವನ್ನು ಹುಡುಕಿಕೊಂಡು ಅಲೆಯುತ್ತಿರುವನೋ ಅವನಿಗೆ ತೀರ್ಥಕಾಕ ಎಂದು ಹೆಸರು." ಅವನಿಗೆ ಈ ನ್ಯಾಯ ಅನ್ವಯಿಸುತ್ತದೆ.

## 13. ಅಶಕ್ತೋಽಹಂ ಗೃಹಾರಂಭೇ ಶಕ್ತೋಽಹಂ ಗೃಹಭಂಜನೇ

"ನನಗೆ ಮನೆಯನ್ನು ಕಟ್ಟಲು ಶಕ್ತಿಯಿಲ್ಲ ; ಆದರೆ ಮನೆಯನ್ನು ಒಡೆದು ಹಾಕಲು ಶಕ್ತಿಯುಂಟು !" ಎಂಬ ನ್ಯಾಯ. ಇದರ ಅರ್ಥ

ಸ್ಪಷ್ಟವಾಗಿದೆ. ವ್ಯವಹಾರದಲ್ಲಿ ಈ ಬುದ್ಧಿವಾದ ಬಹಳ ಬೆಲೆಯುಳ್ಳದ್ದು. ಯಾವುದೊಂದು ಸಂಸ್ಥೆಯನ್ನು ಕಟ್ಟಿ ಬೆಳೆಸಿಕೊಂಡು ಬರುವುದು ಕಠಿಣವಾದ ಕೆಲಸ. ಆದರೆ ಹಿರಿಯರು ಮಹತ್ತರವಾದ ಧೈರ್ಯ ತ್ಯಾಗಗಳಿಂದ ಕಟ್ಟಿದ ಆ ಸಂಸ್ಥೆಯನ್ನು ಒಡೆಯುವುದು ಸುಲಭವಾದದ್ದು. ಒಬ್ಬರು ಮಾಡಿದ ಕೆಲಸಗಳಲ್ಲಿ ದೋಷವನ್ನು ಕಂಡುಹಿಡಿಯುವ ಪ್ರವೃತ್ತಿ ಮಾನವನಲ್ಲಿ ಅನಾದಿ ಕಾಲದಿಂದಲೂ ಬೇರೂರಿಬಂದಂತೆ ಕಾಣುತ್ತದೆ. "ಯಾವಾಗಲೂ ರಚನಾತ್ಮಕ ಟೀಕೆಗಳನ್ನು (Constructive Criticism) ಮಾಡಬೇಕು. ವಿನಾಶಾತ್ಮಕ ಟೀಕೆಗಳನ್ನು (Destructive Criticism) ಮಾಡಬಾರದು" ಎಂದು ಹೇಳುವುದುಂಟು. "ಹೇಳುವುದು ಸುಲಭ, ಮಾಡುವುದು ಕಷ್ಟ" ಮುಂತಾದ ಮಾತುಗಳೂ ಈ ನ್ಯಾಯದ ಅರ್ಥವನ್ನೇ ಹೋಲುತ್ತವೆ.

## 14. ಅಶೋಕವನಿಕಾನ್ಯಾಯ

ರಾವಣನು ಸೀತಾದೇವಿಯನ್ನು ಅಶೋಕವನದಲ್ಲಿ ಸೆರೆಯಿಟ್ಟನು. ರಾವಣನು ಅಧೀನದಲ್ಲಿ ಅನೇಕ ಸೆರೆಮನೆಗಳೂ, ಉದ್ಯಾನವನಗಳೂ ಇರುವಾಗ ಒಂದು ಗೊತ್ತಾದ ಉದ್ಯಾನವನದಲ್ಲಿ ಅಶೋಕವೃಕ್ಷಗಳ ಮಧ್ಯದಲ್ಲಿ ಆಕೆಯನ್ನು ಸೆರೆಯಿಡಲು ಕಾರಣವೇನು ? ಅದಕ್ಕೆ ನಿಯತವಾದ ಕಾರಣವೇನೂ ಇಲ್ಲ. 'ಎಲ್ಲೋ ಒಂದು ಕಡೆ ಆಕೆಯನ್ನು ನಿರ್ಬಂಧದಲ್ಲಿ ಇಡಬೇಕಾಗಿತ್ತು ; ಅಶೋಕವನದಲ್ಲಿ ಇಡೋಣವೆಂದು ತೋರಿತು ; ಇಟ್ಟನು' ಇದೇ ಉತ್ತರ. ಹಾಗೆಯೇ ಕೆಲವು ವೇಳೆ ನಾವು ಮಾಡುವ ಕೆಲಸಗಳಿಗಾಗಲಿ, ಆರಿಸುವ ವಸ್ತುವಿಗಾಗಲಿ, ಕ್ಲಿಪ್ತವಾದ ಕಾರಣ ಇರುವುದಿಲ್ಲ. ಆಗ ಹೀಗೆಯೇ ಏಕಾಗಬೇಕು ? ಎಂದು ಯಾರಾದರೂ ಕೇಳಿದರೂ ಅಶೋಕವನಿಕಾ ನ್ಯಾಯವೇ ಅದಕ್ಕೆ ಉತ್ತರ.

ಆದರೆ ನಮ್ಮ ಕೆಲಸಗಳು ಸಕಾರಣವಾಗಿರಬಾರದೆಂದು ಅರ್ಥವಲ್ಲ. ಯಾವುದಕ್ಕೆ ಫಲದಲ್ಲಿ ಭೇದವೇನೂ ಇಲ್ಲವೋ ಆ ಸಂದರ್ಭದಲ್ಲಿ ನಮ್ಮ ಇಚ್ಛೆಯೇ ಕಾರ್ಯಕ್ಕೆ ನಿಯಾಮಕವಾಗುತ್ತದೆ. ಸಾಯಂಕಾಲ ವಾಯುಸೇವನೆಗೆ ಲಾಲ್‌ಬಾಗಿಗೆ ಹೋಗಬಹುದು. ಅದು ಅಶೋಕವನಿಕಾನ್ಯಾಯವಾಯಿತು. ಲಾಲ್‌ಬಾಗಿನ ಬಳಿಯಲ್ಲಿರುವ ಸ್ನೇಹಿತನ ಭೇಟಿಯನ್ನೂ ಮಾಡಬೇಕೆಂದು ಉದ್ದೇಶವಿದ್ದಲ್ಲಿ ಆಗ ಲಾಲ್‌ಬಾಗ್ ಪ್ರಯಾಣ ಸಕಾರಣವಾಯಿತು. ಅದು ಅಶೋಕವನಿಕಾನ್ಯಾಯವಾಗಲಾರದು.

## 15. ಅಶ್ಮಲೋಷ್ಟನ್ಯಾಯ

ಅಶ್ಮ–ಕಲ್ಲು ; ಲೋಷ್ಟ–ಮಣ್ಣುಹೆಂಟೆ. ಮಣ್ಣುಹೆಂಟೆಯಿಂದ

ಕಲ್ಲನ್ನು ಚಚ್ಚಿದರೂ ಮಣ್ಣುಹೆಂಟೆ ಪುಡಿಯಾಗುತ್ತದೆ, ಕಲ್ಲಿನಿಂದ ಚಚ್ಚಿದರೂ ಮಣ್ಣುಹೆಂಟೆಯೇ ಪುಡಿಯಾಗುತ್ತದೆ. ಬಲಶಾಲಿಯೊಡನೆ ವೈರವನ್ನು ಬೆಳೆಸಿದರೆ ಯಾವ ಬಗೆಯಲ್ಲೂ ದುರ್ಬಲನಿಗೇ ಹಾನಿಯೆಂದರ್ಥ.

## 16. ಅಶ್ವತರೀಗರ್ಭನ್ಯಾಯ

ಕತ್ತೆಯಿಂದ ಕುದುರೆಯಲ್ಲಿ ಹುಟ್ಟಿದ ಪ್ರಾಣಿ ಅಶ್ವತರೀ. ಗರ್ಭವನ್ನು ಧರಿಸಿದರೆ ಅಶ್ವತರಿ ಸಾಯುತ್ತದೆಯೆಂದು ಪ್ರಸಿದ್ಧಿ. ತಾನು ಧರಿಸಿದ ಗರ್ಭವೇ ತನಗೆ ಮೃತ್ಯು. ಇಷ್ಟವೆಂದು ಒಂದು ವಸ್ತುವನ್ನು ಸಂಗ್ರಹಿಸಿದಾಗ ಅದೇ ತನ್ನ ನಾಶಕ್ಕೆ ಕಾರಣವಾಗಿ ಅನಿಷ್ಟವಾದಾಗ ಈ ನ್ಯಾಯ ಉದಾಹೃತವಾಗುತ್ತದೆ.

ಸಕೃದ್ ದುಷ್ಟಮಪೀಷ್ಟಂ ಯಃ ಪುನಃ ಸಂಧಾತುಮಿಚ್ಛತಿ ।
ಸ ಮೃತ್ಯುಮುಪಗೃಹ್ಣಾತಿ ಗರ್ಭಮಶ್ವತರೀ ಯಥಾ ॥
— ಪಂಚತಂತ್ರ

ವೃಶ್ಚಿಕೀಗರ್ಭನ್ಯಾಯವನ್ನು ನೋಡಿ.

## 17. ಅಸಂಜಾತವಿರೋಧನ್ಯಾಯ

ವಿರೋಧವು ಹುಟ್ಟದಂತೆ ಅರ್ಥ ಹೇಳಬೇಕೆಂಬ ನ್ಯಾಯ. ಪ್ರಾಮಾಣಿಕ ಗ್ರಂಥಗಳಲ್ಲಿ ಅನ್ಯೋನ್ಯ ವಿರೋಧವೆಂದು ತೋರುವ ಎರಡು ವಾಕ್ಯಗಳಿರಬಹುದು. ಆಗ ಅವುಗಳಲ್ಲೊಂದರ ಅರ್ಥವನ್ನು ಸ್ವಲ್ಪ ಮಾರ್ಪಡಿಸಿ ವಿರೋಧವನ್ನು ಪರಿಹರಿಸಬೇಕು. ಪ್ರಬಲ ವಾಕ್ಯಕ್ಕೆ ಅನುಗುಣವಾಗಿ ದುರ್ಬಲ ವಾಕ್ಯದ ಅರ್ಥವನ್ನು ಮಾರ್ಪಡಿಸಬೇಕು.

ಅಶ್ವದಾನವು ನಿಷಿದ್ಧವಾಗಿದೆ. ಇದನ್ನು ಬೋಧಿಸುವುದಕ್ಕಾಗಿ ವೇದದಲ್ಲೊಂದು ಕಡೆ ಅರ್ಥವಾದರೂಪವಾಗಿ "ಪ್ರಜಾಪತಿಯು ವರುಣನಿಗೆ ಅಶ್ವವನ್ನು ದಾನಮಾಡಿದನು. ಇದರಿಂದ ಪ್ರಜಾಪತಿಗೆ ಜಲೋದರ ರೋಗವು ಬಂದಿತು. ಅವನು ಪ್ರಾಯಶ್ಚಿತ್ತವಾಗಿ ಒಂದು ಇಷ್ಟಿಯನ್ನು ಮಾಡಿ ರೋಗಮುಕ್ತನಾದನು" ಎಂದು ಹೇಳಿದೆ. ಅದೇ ಪ್ರಕರಣದ ಉಪಸಂಹಾರದಲ್ಲಿ "ಯಾವತೋಽಶ್ವಾನ್ ಪ್ರತಿಗೃಹ್ಣೀಯಾತ್..." ಎಂಬ ವಾಕ್ಯದಿಂದ ಅಶ್ವವನ್ನು ಪ್ರತಿಗ್ರಹ (ಸ್ವೀಕಾರ) ಮಾಡಿದವನು ಪ್ರಾಯಶ್ಚಿತ್ತ ಮಾಡಿಕೊಳ್ಳಬೇಕೆಂದು ಹೇಳಿದೆ. ಉಪಕ್ರಮದಲ್ಲಿ ಅಶ್ವದಾನ ಮಾಡಿದವನಿಗೆ ಪ್ರಾಯಶ್ಚಿತ್ತವನ್ನು ಕಥೆಯ ರೂಪದಲ್ಲಿ ಹೇಳಿ, ಆದ್ದರಿಂದ ಅಶ್ವ ಪ್ರತಿಗ್ರಹ ಮಾಡಿದವನು ಪ್ರಾಯಶ್ಚಿತ್ತ ಮಾಡಿಕೊಳ್ಳಬೇಕೆಂದು ಉಪಸಂಹಾರ ಮಾಡಲಾಗಿದೆ.

ಇಲ್ಲಿ ವಿರೋಧ ಕಾಣುತ್ತದೆ. ಅಶ್ವವನ್ನು ದಾನ ಮಾಡಿದವನಿಗೆ

ದೋಷವೊ ಅಥವಾ ಅದನ್ನು ಪ್ರತಿಗ್ರಹ ಮಾಡಿದವನಿಗೊ ? ಇಲ್ಲಿ ಉಪಕ್ರಮವು ಪ್ರಬಲವೆಂದೂ ಉಪಸಂಹಾರವು ದುರ್ಬಲವೆಂದೂ ಪ್ರಮಾಣಾಂತರಗಳಿಂದ ನಿಶ್ಚಯಿಸಲಾಗಿದೆ. ಆದ್ದರಿಂದ ಉಪಸಂಹಾರದಲ್ಲಿರುವ 'ಪ್ರತಿಗೃಹ್ಣೀಯಾತ್' ಎಂಬ ಪದಕ್ಕೆ 'ಪ್ರತಿಗ್ರಾಹಯೇತ್' ಎಂದು ಪ್ರೇರಣಾರ್ಥವನ್ನು ಸೇರಿಸಿ ಅರ್ಥ ಮಾಡಬೇಕು. ಪ್ರತಿಗ್ರಹ ಮಾಡಿಸಿದರೆ ಪ್ರಾಯಶ್ಚಿತ್ತವೆಂದರ್ಥ. ಪ್ರತಿಗ್ರಹ ಮಾಡಿಸುವುದೆಂದರೆ ದಾನ ಕೊಡುವುದೇ. ಏವಂಚ ಅಶ್ವವನ್ನು ದಾನಮಾಡಿದವನಿಗೆ ದೋಷವೆಂದೂ ಅವನು ಪ್ರಾಯಶ್ಚಿತ್ತ ಮಾಡಿಕೊಳ್ಳಬೇಕೆಂದೂ ನಿರ್ಣಯ. ಇದರಿಂದ ವಿರೋಧವು ಅಸಂಜಾತವಾಯಿತು.

## 18. ಅಸಿಧಾರಾಮಧುಲೇಹನನ್ಯಾಯ

ಅಸಿಧಾರಾ ಎಂದರೆ ಕತ್ತಿಯ ಅಲಗು. ಅದಕ್ಕೆ ಸವರಿರುವ ಜೇನುತುಪ್ಪವನ್ನು ನೆಕ್ಕಬೇಕು! ಯಾವ ಕಾರ್ಯದಲ್ಲಿ ಪ್ರಯೋಜನವು ಅತ್ಯಲ್ಪವೋ, ಘೋರವಾದ ಅಪಾಯ ಮಾತ್ರ ಕಟ್ಟಿಟ್ಟದ್ದೋ ಅಂತಹ ಕಾರ್ಯವನ್ನು ವರ್ಣಿಸುವಾಗ ಈ ನ್ಯಾಯ ಉಪಯೋಗಕ್ಕೆ ಬರುತ್ತದೆ. ಇದಕ್ಕೆ ಸ್ವಲ್ಪ ಅರ್ಥಭೇದದಲ್ಲಿ ಅಸಿಧಾರಾವ್ರತವೆಂದೂ ಹೇಳುತ್ತಾರೆ. ಆಶಾಪಾಶಗಳಿಗೆ ವಶನಾಗದೆ ಸನ್ಮಾರ್ಗದಲ್ಲಿ ಸಂಸಾರವನ್ನು ನಡೆಸಿಕೊಂಡು ಹೋಗುವುದೂ ದಾಕ್ಷಿಣ್ಯ, ಲಂಚಗಳಿಗೆ ವಶನಾಗದೆ ತನ್ನ ಕರ್ತವ್ಯವನ್ನು ನ್ಯಾಯಮಾರ್ಗದಲ್ಲಿ ನಡೆಸುವುದೂ ಅಸಿಧಾರಾಮಧುಲೇಹನವಾಗುತ್ತದೆ.

## 19. ಅಹಿಭುಕ್‌ಕೈವರ್ತಕನ್ಯಾಯ

ಅಹಿಭುಕ್–ಅಫೀಮು ತಿಂದವನು. ಕೈವರ್ತಕ–ಅಂಬಿಗ. ಒಬ್ಬ ಅಫೀಮು ತಿಂದು ದೋಣಿಯನ್ನೇರಿದ. ದೋಣಿಯಲ್ಲಿ ಬಹಳ ಜನರಿದ್ದುದನ್ನು ಕಂಡು ತನ್ನ ಕಾಲಿಗೆ ಹಗ್ಗವನ್ನು ಕಟ್ಟಿಕೊಂಡನು. ಅಂಬಿಗನು ಅದೇಕೆಂದು ಕೇಳಿದಾಗ ಆತನು "ಇಲ್ಲಿ ಬಹಳ ಜನರಿದ್ದಾರೆ. ಕೈಚೀಲ, ಚಪ್ಪಲಿಗಳಂತೆ ನಾನು ಅದಲುಬದಲಾಗಿಬಿಟ್ಟೇನೆಂದು ಗುರುತಿಗಾಗಿ ಹಗ್ಗವನ್ನು ಕಟ್ಟಿಕೊಂಡಿದ್ದೇನೆ" ಎಂದು ಹೇಳಿದ. ಆಮೇಲೆ ಅಫೀಮಿನ ಮತ್ತಿನಿಂದ ಮಲಗಿದ. ಅಂಬಿಗನು ಚೇಷ್ಟೆಗಾಗಿ ಅವನ ಕಾಲಿನ ಹಗ್ಗವನ್ನು ಬಿಚ್ಚಿ ತನ್ನ ಕಾಲಿಗೆ ಕಟ್ಟಿಕೊಂಡನು. ಅಫೀಮು ತಿಂದವನಿಗೆ ಎಚ್ಚರವಾದಾಗ ಕಾಲಿನ ಹಗ್ಗ ಅಂಬಿಗನ ಕಾಲಲ್ಲಿರುವುದು ಕಂಡುಬಂದಿತು. ಒಡನೆಯೇ ಅವನು "ಎಲೈ, ನಾನು ನೀನಾಗಿ ಹೋಗಿದ್ದೇನೆ! ಕಾಲಿನ ಪಟ್ಟಿ ಇರತಕ್ಕವನೇ ನಾನು! ದೋಣಿಯ ಹುಟ್ಟನ್ನು ಕೊಡು. ನಾನೇ ಅಂಬಿಗ" ಎಂದು ಜಗಳವನ್ನು ತೆಗೆದನಂತೆ.

ಅವಿವೇಕದ ಭ್ರಮೆಯನ್ನು ವಿವರಿಸುವಾಗ ಈ ನ್ಯಾಯ ಉಪಯುಕ್ತವಾಗುತ್ತದೆ.

## 20. ಅಹೃದಯವಚಸಾಮಹೃದಯಮುತ್ತರಮ್

ಹೃದಯವಿಲ್ಲದ ಮಾತಿಗೆ ಹೃದಯವಿಲ್ಲದ ಉತ್ತರ ; Heartless words get heartless answer ; ಪಿಶಾಚಕ್ಕೆ ಪಿಶಾಚ ಭಾಷೆಯಲ್ಲಿಯೇ ಉತ್ತರ ಕೊಡಬೇಕು. ಅನುಕಂಪ, ಸಹಾನುಭೂತಿ ಮತ್ತು ವಿಮರ್ಶೆಗಳಿಲ್ಲದೆ ಮಾತನಾಡಿದರೆ ಅಂತಹ ಉತ್ತರವೇ ದೊರಕುವುದು ಯುಕ್ತ ಎಂದು ಅಭಿಪ್ರಾಯ.

## 21. ಅಂಗಾರನ್ಯಾಯ

ಅಂಗಾರವೆಂದರೆ ಇದ್ದಿಲು. ಅದು ಬಿಸಿಯಾಗಿದ್ದಾಗ ಕೈಯಲ್ಲಿ ಹಿಡಿದರೆ ಕೈಸುಡುತ್ತದೆ. ತಣ್ಣಗಿದ್ದಾಗ ಹಿಡಿದರೆ ಕೈ ಕೊಳೆಯಾಗುತ್ತದೆ.

ಹೀಗೆಯೇ ದುಷ್ಟನ ಸಹವಾಸ ಯಾವಾಗಲೂ ಒಳ್ಳೆಯದಲ್ಲ. ಅವನು ಕಾರ್ಯೋನ್ಮುಖನಾಗಿದ್ದರೂ ಅಪಾಯ. ಸುಮ್ಮನಿದ್ದರೂ ಅಪಾಯವೇ. ಅವನ ಸಹವಾಸ ಒಳ್ಳೆಯದಲ್ಲ.

## 22. ಅಂಗುಲ್ಯಗ್ರನ್ಯಾಯ

ಬೆರಳಿನ ತುದಿಯಿಂದ ಅದೇ ಬೆರಳಿನ ತುದಿಯನ್ನು ಮುಟ್ಟಲು ಸಾಧ್ಯವಿಲ್ಲ ! ಕತ್ತಿಯ ಅಲಗು ತನ್ನನ್ನೇ ಕತ್ತರಿಸಿಕೊಳ್ಳಲಾರದು ! ಮನುಷ್ಯ ತನ್ನ ಭುಜದ ಮೇಲೆ ತಾನೇ ಕುಳಿತುಕೊಳ್ಳಲಾರ ! ಕಣ್ಣು ಸಕಲ ವಸ್ತುಗಳನ್ನು ನೋಡಬಲ್ಲುದಾದರೂ ತನ್ನನ್ನು ನೋಡಿಕೊಳ್ಳಲಾರದು.

ನಾವು ಯಾವುದಾದರೊಂದು ಪದಾರ್ಥವನ್ನು–ಉದಾಹರಣೆಗೆ–ಒಂದು ಲೇಖನಿಯನ್ನು ನೋಡುತ್ತೇವೆ ಎಂದಿಟ್ಟುಕೊಳ್ಳಿ. ನಮಗೆ ಲೇಖನಿಯ ಜ್ಞಾನವಾಗುತ್ತದೆ. ನಮ್ಮನ್ನೇ ಪರಾಮರ್ಶಿಸಿಕೊಂಡರೆ ನಮಗೆ ಲೇಖನಿಯ ಜ್ಞಾನವಾಗಿದೆ ಎಂಬ ಅರಿವು (ಜ್ಞಾನ) ಆಗುತ್ತದೆ. ಈ ಎರಡನೆಯದು ಜ್ಞಾನದ ಜ್ಞಾನ. ಇಂತಹ ಸ್ಥಳದಲ್ಲಿ ಎರಡನೆಯ ಜ್ಞಾನವನ್ನು ಒಪ್ಪಬೇಕೆ ? ಅಥವಾ ಲೇಖನಿಯ ಜ್ಞಾನವೇ ತನ್ನನ್ನು ತಾನು ಅರಿಯಬಲ್ಲುದೆ ? ಎಂದರೆ ಒಂದೇ ಜ್ಞಾನ ಸಾಕೆ ? ಎಂಬುದು ಶಾಸ್ತ್ರದಲ್ಲಿ ಚರ್ಚೆಗೆ ಒಳಗಾಗುತ್ತದೆ. ಅಂಗುಲ್ಯಗ್ರನ್ಯಾಯದಿಂದ ಒಂದೇ

ಜ್ಞಾನ ಸಾಲದೆಂದೂ ಎರಡನೇ ಜ್ಞಾನವನ್ನು ಒಪ್ಪಬೇಕೆಂದೂ ಸಿದ್ಧಾಂತ ವಾಗುತ್ತದೆ.

ಈ ನ್ಯಾಯವನ್ನು ಸ್ವಲ್ಪ ಸಡಲಿಸಿದರೆ ಜನರ ಬಳಕೆಗೆ ಅನುಕೂಲ ವಾಗುವುದು. ಜನರು ಪರೋಪದೇಶ ಮಾಡುತ್ತಾರೆ. ಒಬ್ಬರ ದೋಷ ಕಾಣುತ್ತದೆ. ತಮ್ಮ ದೋಷ ಕಾಣದು. ಮುಳ್ಳು ಕಾಲನ್ನು ಚುಚ್ಚು ವುದು, ತನ್ನನ್ನೇ ಚುಚ್ಚಿಕೊಳ್ಳುವುದಿಲ್ಲ !

## 23. ಅಂಗುಲ್ಯಗ್ರೇ ಹಸ್ತಿಯೂಥಶತನ್ಯಾಯ

ಬೆರಳಿನ ತುದಿಯಲ್ಲಿ ನೂರು ಆನೆಯ ಹಿಂಡುಗಳಿವೆ ! ಅಸಂಗತವೂ ಅಸಂಭವವೂ ಆದ ವಿಷಯವನ್ನು ವರ್ಣಿಸಿ ತಿರಸ್ಕರಿಸುವಾಗ ಈ ನ್ಯಾಯ ಉಪಯೋಗಕ್ಕೆ ಬರುತ್ತದೆ. ನಂಬಲು ಅನರ್ಹವಾದ ಸಂದರ್ಭವನ್ನು ಸೂಚಿಸುತ್ತದೆ. ಆತ್ಮತತ್ವವಿವೇಕದಲ್ಲಿ ಉದಯನಾಚಾರ್ಯರು ಇದೇ ಅಭಿ ಪ್ರಾಯದಲ್ಲಿ ಒಂದು ಮಾತನ್ನು ಉದಾಹರಿಸುತ್ತಾರೆ—"ನನ್ನ ಕಿವಿ ಯೊಳಗೆ ಆನೆ ಸೇರಿಕೊಂಡು ಗರ್ಜಿಸುತ್ತಾ ಇದೆ. ಔಷಧ ಹೇಳೋಣ ವಾಗಲಿ !"

## 24. ಅಂತರಂಗಬಹಿರಂಗಯೋರಂತರಂಗವಿಧಿರ್ಬಲೀಯಾನ್

ಅಂತರಂಗವೆಂದರೆ ಸ್ವಲ್ಪ ಕಾರಣಗಳಿಂದ ನೆರವೇರತಕ್ಕದ್ದು, ಹತ್ತಿರ ವಾದದ್ದು, ಸುಲಭವಾದದ್ದು ಎಂದರ್ಥ. ಬಹಿರಂಗವೆಂದರೆ ಬಹಳ ಕಾರಣ ಗಳಿಂದ ನೆರವೇರತಕ್ಕದ್ದು, ದೂರವಾದದ್ದು, ಎಂದು ಅರ್ಥವಾಗುವುದು. ಬಹಿರಂಗಕ್ಕಿಂತ ಅಂತರಂಗದ ಕಾರ್ಯ ಬಲವತ್ತರ. ಇದು ವ್ಯಾಕರಣಶಾಸ್ತ್ರ ದಲ್ಲಿ ಪ್ರಸಿದ್ಧವಾದ ನ್ಯಾಯ.

ಲೋಕದಲ್ಲಿಯೂ ಇದು ಸ್ವತಃ ಸಿದ್ಧವಾಗಿದೆ. ಮನುಷ್ಯನು ಪ್ರಾತಃ ಕಾಲ ಹಾಸಿಗೆಯಿಂದ ಎದ್ದರೆ ತನ್ನ ಶರೀರಸಂಬಂಧಿಯಾದ ಕಾರ್ಯವನ್ನು ಮೊದಲು ಮಾಡಿಕೊಳ್ಳುತ್ತಾನೆ. ಅನಂತರ ಮನೆಗೆಲಸ, ಅನಂತರ ಬಂಧು ಗಳ ಕೆಲಸ, ಮಿತ್ರರ ಕೆಲಸ. ಹಾಗೆಯೇ ಸುಲಭವಾದ ಕಾರ್ಯ ಒಂದು, ಕಠಿನವಾದ ಕಾರ್ಯ ಒಂದು, ಒಟ್ಟು ಎರಡು ಕಾರ್ಯಗಳು ಅನಿವಾರ್ಯವಾಗಿ ಒದಗಿದರೆ ಮೊದಲು ಸುಲಭವಾದ ಕಾರ್ಯವನ್ನು ಮಾಡಿ ಆಮೇಲೆ ಕಠಿನ ವಾದ ಕಾರ್ಯಕ್ಕೆ ಕೈಹಾಕುತ್ತಾನೆ. ಶಾಸ್ತ್ರದಲ್ಲಿಯೂ ಈ ನ್ಯಾಯವನ್ನವ ಲಂಬಿಸಿ ಕರ್ತವ್ಯಗಳನ್ನು ನಿರ್ಣಯಿಸುತ್ತಾರೆ.

ಈ ನ್ಯಾಯವನ್ನು ಮನಸ್ಸಿನಲ್ಲಿಟ್ಟು ಒಬ್ಬ ಕವಿ ಚಮತ್ಕಾರವಾಗಿ ಹೇಳುತ್ತಾನೆ. ವಿರಹಪೀಡಿತೆಗೆ ಹೇಳುವ ಮಾತು :—

ಮನ್ಮಥಾಗ್ನಿಪರಿತಪ್ತಮನಸ್ಕೇ ಚಂದನಂ ಕಿಮನುಲಿಂಪಸಿ
ಬಾಲೇ ।
ಕಿಂ ನ ವೇತ್ಸಿ ಬಹಿರಂಗವಿಧಾನಾತ್ ಅಂತರಂಗವಿಧಿರೇವ
ಬಲೀಯಾನ್ ॥

"ಕಾಮಾಗ್ನಿಯಿಂದ ಪೀಡಿತವಾದ ಮನಸ್ಸುಳ್ಳ ಎಲೌ ಬಾಲೆ। ಚಂದನವನ್ನು ಏಕೆ ದೇಹಕ್ಕೆ ಲೇಪಿಸಿಕೊಳ್ಳುವೆ ? ಬಹಿರಂಗ ವಿಧಿಗಿಂತ ಅಂತರಂಗ ವಿಧಿಯೇ ಬಲಶಾಲಿಯೆಂದು ನಿನಗೆ ಗೊತ್ತಿಲ್ಲವೆ !"

(ದೇಹಕ್ಕೆ ಮೇಲಿನಿಂದ ಚಂದನ ಬಳಿಯುವುದು ಬಹಿರಂಗ. ಅಂತರಂಗವೆಂದರೆ ಮನಸ್ಸು. ಮನಸ್ಸಿಗೆ ಚಿಕಿತ್ಸೆ ಮಾಡುವುದು ಉತ್ತಮ. ಪ್ರಿಯನ ಸಂಗಮವೇ ಮನಸ್ಸಿಗೆ ಚಿಕಿತ್ಸೆ. ಚಂದನಲೇಪನದಿಂದ ವಿರಹ ದುಃಖ ಹೆಚ್ಚುವುದು.)

## 25. ಅಂತರ್ದೀಪಿಕಾನ್ಯಾಯ

ಮನೆಯೊಳಗಿರುವ ದೀಪದ ನ್ಯಾಯ. ಒಂದೇ ದೀಪದ ಬೆಳಕಿನಲ್ಲಿ ಒಬ್ಬರು ಓದುತ್ತಾರೆ. ಒಬ್ಬರು ಬರೆಯುತ್ತಾರೆ. ಉಳಿದವರು ಬೇರೆ ಕೆಲಸ ಮಾಡುತ್ತಾರೆ. ದೀಪ ಎಲ್ಲರ ಎಲ್ಲ ಕೆಲಸಗಳಿಗೂ ಉಪಯುಕ್ತವಾಗುವುದು. ಹಾಗೆ ಒಂದು ವಸ್ತು ವಿಭಿನ್ನ ಕಾರ್ಯಗಳಿಗೆ ಉಪಯುಕ್ತವಾದಾಗ ಇದನ್ನು ಬಳಸುತ್ತಾರೆ. ದೇಹಲೀದೀಪ, ಕಾಕಾಕ್ಷಿನ್ಯಾಯಗಳಲ್ಲಿ ಒಂದು ವಸ್ತು ಎರಡು ಕಡೆಗಳಲ್ಲಿ ಬಳಕೆಯಾಗುತ್ತದೆ. ಇದರಲ್ಲಿ ಹಲವಾರು ಕಡೆ ಎಂಬುದು ವಿಶೇಷ.

ಹೀಗೆ ಒಂದೇ ಶಬ್ದವನ್ನು ಬೇರೆ ಬೇರೆ ಕಡೆ ಅನ್ವಯಿಸಿದಾಗಲೂ ಇವನ್ನು ಬಳಸುತ್ತಾರೆ. ಉದಾ : ಮುಂಡಕೋಪನಿಷತ್ತಿನಲ್ಲಿ "ಸತ್ಯೇನ ಲಭ್ಯಸ್ತಪಸಾ ಹ್ಯೇಷ ಆತ್ಮಾ ಸಮ್ಯಗ್ ಜ್ಞಾನೇನ ಬ್ರಹ್ಮಚರ್ಯೇಣ ನಿತ್ಯಂ" (2–1–5) ಎಂಬ ವಾಕ್ಯವಿದೆ. ಇಲ್ಲಿ ನಿತ್ಯ ಶಬ್ದವನ್ನು "ನಿತ್ಯಂ ಸತ್ಯೇನ, ನಿತ್ಯಂ ತಪಸಾ, ನಿತ್ಯಂ ಸಮ್ಯಗ್ ಜ್ಞಾನೇನ" ಎಂದು ಶ್ರೀ ಶಾಂಕರಭಾಷ್ಯದಲ್ಲಿ ಅನ್ವಯಿಸಲಾಗಿದೆ.

## 26. ಅಂತೇ ರಂಡಾವಿವಾಹಶ್ಚೇತ್ ಆದಾವೇವ ಕುತೋ ನ ಹಿ

ಕಡೆಯಲ್ಲಿ ವಿಧವೆಯನ್ನು ಮದುವೆ ಮಾಡಿಕೊಳ್ಳಲು ಒಪ್ಪುವುದಾದರೆ ಮೊದಲೇ ಏಕೆ ಒಪ್ಪಿಕೊಂಡುಬಿಡಬಾರದು ! ವಿಧವಾ ವಿವಾಹವನ್ನು ಸಮಾಜವು ತಿರಸ್ಕಾರ ದೃಷ್ಟಿಯಿಂದ ನೋಡುತ್ತಿದ್ದಾಗ ಹುಟ್ಟಿದ ನ್ಯಾಯವಿದು. ತಪ್ಪು ಮಾಡಿದವನು ಬಹಳ ಹೊತ್ತು ವಾದ ಮಾಡಿ ಕಡೆಯಲ್ಲಿ

ಒಪ್ಪಿಕೊಳ್ಳುವುದಕ್ಕಿಂತ ಮೊದಲೇ ಒಪ್ಪಿಬಿಡುವುದು ಉತ್ತಮ. ಸೋಲು ನಿಶ್ಚಯವಾದಾಗ ವ್ಯರ್ಥವಾಗಿ ಶ್ರಮಿಸುವುದು ಸರಿಯಲ್ಲ ಎಂದು ಅಭಿಪ್ರಾಯ.

## 27. ಅಂಧಕವರ್ತಕೀಯನ್ಯಾಯ

"ಕುರುಡ ಮತ್ತು ಲಾವಕ್ಕಿಗಳ ನ್ಯಾಯ." ವರ್ತಕಾ ಎಂದರೆ ಒಂದು ಬಗೆಯ ಪಕ್ಷಿ. ಅದನ್ನು ಲಾವಕ್ಕಿ ಎನ್ನುತ್ತಾರೆ. ಗುಬ್ಬಚ್ಚಿಗಿಂತ ಸ್ವಲ್ಪ ದೊಡ್ಡದು. ಒಬ್ಬ ಕುರುಡನು ಒಂದು ಬಂಡೆಯ ಮೇಲೆ ಕುಳಿತು ಕೈಗಳಿಂದ ಚಪ್ಪಾಳೆ ತಟ್ಟುತ್ತಿದ್ದನು. ಒಬ್ಬ ದಾರಿಹೋಕನು ಕುತೂಹಲ ದಿಂದ "ಅಯ್ಯಾ, ಏಕೆ ಚಪ್ಪಾಳೆ ಹಾಕುತ್ತಲಿದ್ದೀಯೆ ?" ಎಂದು ಕೇಳಿ ದನು. ಅದಕ್ಕೆ ಕುರುಡನು "ಇಲ್ಲಿ ಹಾರಾಡುತ್ತಿರುವ ಪಕ್ಷಿಗಳಲ್ಲಿ ಯಾವು ದಾದರೊಂದು ನನ್ನ ಕೈಗಳ ಮಧ್ಯದಲ್ಲಿ ಸಿಕ್ಕಿಕೊಳ್ಳಬಹುದು ! ಆಗ ಅದನ್ನು ಹಿಡಿದು ನಾನು ಉಪಯೋಗಿಸುತ್ತೇನೆ" ಎಂದು ಹೇಳಿದನಂತೆ.

ಹೀಗೆ ಅತ್ಯಂತ ವಿರಳ ಸಂದರ್ಭದಲ್ಲಿ ಆಕಸ್ಮಿಕವಾಗಿ ನಡೆದ ಸಂಗತಿ ಯನ್ನು ವರ್ಣಿಸುವಾಗ ಈ ನ್ಯಾಯ ಉಪಯೋಗಕ್ಕೆ ಬರುತ್ತದೆ. ಸೋಮ ದೇವನು ಯಸಸ್ತಿಲಕಚಂಪುವಿನಲ್ಲಿ ಇದನ್ನು ಉದಾಹರಿಸುತ್ತಾನೆ: "ಸಂಸಾರ ಸಾಗರದಲ್ಲಿ ತೊಳಲುತ್ತಿರುವ ಜೀವನಿಗೆ ದೈವಾನುಗ್ರಹದಿಂದ ಮನುಷ್ಯ ಜನ್ಮ ದೊರಕಿದೆ. ಅದರಲ್ಲಿಯೂ ಶ್ರೇಷ್ಠ ಕುಲದಲ್ಲಿ ಹುಟ್ಟಿ ಸಜ್ಜನರ ಸಹವಾಸ ದೊರಕುವುದೆಂದರೆ ಅದು 'ಅಂಧಕವರ್ತಕೀಯ'ವೇ ಸರಿ".

## 28. ಅಂಧಗಜನ್ಯಾಯ

"ಕುರುಡರು ಮತ್ತು ಆನೆಯ ನ್ಯಾಯ." ಇದಕ್ಕೆ ಸಂಬಂಧಿಸಿದ ಕಥೆ ಪ್ರಸಿದ್ಧವಾದದ್ದೇ ಸರಿ.

ಒಂದೂರಲ್ಲಿ ಕೆಲವು ಕುರುಡರಿದ್ದರು. ಅವರಿಗೆ ಆನೆಯು ಹೇಗಿರು ತ್ತದೆಯೆಂದು ತಿಳಿದುಕೊಳ್ಳಲು ಅಪೇಕ್ಷೆಯಾಯಿತು. ಒಂದು ಸಾಕಿದ ಆನೆಯ ಬಳಿಗೆ ಬಂದು ಅದನ್ನು ಮುಟ್ಟಿನೋಡಿದರು. ಒಬ್ಬನು ಸೊಂಡಿಲನ್ನು ಮುಟ್ಟಿ ನೋಡಿ, ಆನೆ ಹಾವಿನಂತಿದೆಯೆಂದು ತಿಳಿದು ಕೊಂಡನು. ಇನ್ನೊಬ್ಬ ಕಿವಿಯನ್ನು ಮುಟ್ಟಿ ಆನೆಯು ಮೊರದಂತಿದೆ ಯೆಂದು ಭಾವಿಸಿಕೊಂಡನು. ಇನ್ನೊಬ್ಬ ಕಾಲನ್ನು ಮುಟ್ಟಿ ಇದು ಕಂಬದಂತಿದೆಯೆಂದು ಊಹಿಸಿದನು. ಇನ್ನೊಬ್ಬ ಹೊಟ್ಟೆಯನ್ನು ಮುಟ್ಟಿ ಗುಡಾಣದಂತಿದೆಯೆಂದು ನಿಶ್ಚಯಿಸಿದನು. ಬಾಲವನ್ನು ಹಿಡಿದವನು ಆನೆ ಹಗ್ಗದಂತಿದೆಯೆಂದು ಹೇಳಿದನು. ಆನೆ ಹೊರಟುಹೋದ ಮೇಲೆ ಆನೆ ಹೇಗಿದೆಯೆಂಬ ವಿಚಾರವಾಗಿ ಕುರುಡರಲ್ಲಿ ಜಗಳ ಪ್ರಾರಂಭವಾಯಿತು.

ಹೀಗೆ ಒಂದು ವಿಷಯವನ್ನು ಸರಿಯಾಗಿ ತಿಳಿದುಕೊಳ್ಳುವುದರಲ್ಲಿ ಪರಸ್ಪರ ಜಗಳ ಹುಟ್ಟುವುದು. ಅವರು ತಿಳಿದುಕೊಂಡಿರುವುದು ಕೆಲವು ಅಂಶದಲ್ಲಿ ಸರಿ, ಕೆಲವು ಅಂಶದಲ್ಲಿ ತಪ್ಪು. ಅವರ ಜಗಳ ಅವಿವೇಕ ದಿಂದುಂಟಾದದ್ದು. ಹಾಗೆಯೇ ಈಶ್ವರ, ಜೀವ, ಜಗತ್ತು ಇಂತಹ ವಿಷಯಗಳಲ್ಲಿ ಮತಾಂಧರು ಜಗಳವಾಡುತ್ತಾರೆ. ಅವರಾಡುವ ಮಾತು ಒಂದು ಅಂಶದಲ್ಲಿ ಸರಿ. ಇನ್ನೊಂದು ಅಂಶದಲ್ಲಿ ತಪ್ಪು. ವಿವೇಕಿಯು ಎಲ್ಲಾ ಮತಗಳನ್ನೂ ಸಮನ್ವಯ ಮಾಡಿಕೊಂಡು ಸಮಂಜಸವಾದ ಒಂದು ಸಿದ್ಧಾಂತವನ್ನು ನಂಬುತ್ತಾನೆ. ಮತಾಂಧರ ಜಗಳವನ್ನು ನೋಡಿ ತನ್ನೊಳಗೇ ನಗುವನು. ಆನೆಯ ಆಕಾರವನ್ನು ಕಣ್ಣಿಂದ ನೋಡಿದವನು ಕುರುಡರ ಜಗಳವನ್ನು ನೋಡಿ ನಗದಿರುವನೆ ?

ಸುರೇಶ್ವರಾಚಾರ್ಯರು ಬೃಹದಾರಣ್ಯಕ ವಾರ್ತಿಕದಲ್ಲಿ ಹೀಗೆ ಹೇಳು ತ್ತಾರೆ : 'ನಿರಂಜನವೂ ನಿರ್ವಿಕಾರವೂ ಆದ ಬ್ರಹ್ಮವಸ್ತುವನ್ನು ಅಜ್ಞಾನಿ ಗಳು ನಾನಾಬಗೆಯಾಗಿ ಕಲ್ಪಿಸಿಕೊಂಡಿದ್ದಾರೆ. ಇದು ಅಂಧಗಜ ನ್ಯಾಯ."

## 29. ಅಂಧಗೋಲಾಂಗೂಲನ್ಯಾಯ

"ಕುರುಡ ಮತ್ತು ಹಸುವಿನ ಬಾಲದ ನ್ಯಾಯ." ಒಬ್ಬ ಕುರುಡನು ದಾರಿ ತಪ್ಪಿದುದರಿಂದ ಅಸಹಾಯಕನಾಗಿ ಅಲೆದಾಡುತ್ತಿದ್ದನು. ಆಗ ಒಬ್ಬ ತುಂಟ ಮನುಷ್ಯನು ಅಲ್ಲಿಗೆ ಬರಲು, ತನಗೆ ದಾರಿ ತೋರಿಸ ಬೇಕೆಂದು ಕುರುಡನು ಅವನನ್ನು ಬೇಡಿಕೊಂಡನು. ಆ ತುಂಟನು ಅಲ್ಲಿಯೇ ಮೇಯುತ್ತಿದ್ದ ಒಂದು ಸೊಕ್ಕಿದ ಹಸುವಿನ ಬಳಿಗೆ ಕರೆದು ಕೊಂಡು ಹೋಗಿ ಅದರ ಬಾಲವನ್ನು ಕುರುಡನು ಹಿಡಿದುಕೊಳ್ಳುವಂತೆ ಮಾಡಿದನು. ಅದನ್ನು ಹಿಡಿದುಕೊಂಡೇ ಮುಂದೆ ಸಾಗುತ್ತಿದ್ದರೆ ನೀನು ಹೋಗಬೇಕಾದ ಹಳ್ಳಿಗೇ ಹೋಗುತ್ತೀಯೆಂದು ತಿಳಿಸಿದನು. ಮುಂದೆ ಕುರುಡನ ಪಾಡು ಏನಾಗಿರಬಹುದೆಂದು ಊಹಿಸಿಕೊಳ್ಳಬಹುದು !

ಹೀಗೆ ತಿಳಿಯದವನಿಗೆ ನಂಬಿಕೆ ಹುಟ್ಟಿಸಿ ವಂಚಿಸುವಾಗ ಈ ನ್ಯಾಯ ವನ್ನು ಉಪಯೋಗಿಸುತ್ತಾರೆ. ಶ್ರೀ ಶಂಕರಾಚಾರ್ಯರು ಸೂತ್ರಭಾಷ್ಯದಲ್ಲಿ ಒಂದು ಕಡೆ ಹೀಗೆ ಬರೆಯುತ್ತಾರೆ. "ಅಜ್ಞನಾದ ಮನುಷ್ಯನಿಗೆ ಪ್ರಮಾಣ ಭೂತವಾದ ಶಾಸ್ತ್ರವು ಸರಿಯಾದ ಮಾರ್ಗವನ್ನು ಉಪದೇಶಿಸಬೇಕು. ಆದಿಲ್ಲದೆ ಜಡ ವಸ್ತುವನ್ನು ಆತ್ಮವೆಂದು ಶಾಸ್ತ್ರವು ಹೇಳಿದರೆ ಈ ಮನುಷ್ಯನು ಅದನ್ನೇ ನಂಬುತ್ತಾನೆ. ನಿಜವಾದ ಆತ್ಮತತ್ವವನ್ನು ತಿಳಿ ಯದೇ ಹೋಗುತ್ತಾನೆ. ಇತ್ತ ಶ್ರೇಯಸ್ಸನ್ನೂ ಕಳೆದುಕೊಂಡು ಅತ್ತ ಅನರ್ಥಕ್ಕೂ ಒಳಗಾಗುತ್ತಾನೆ. ಇದು ಅಂಧಗೋಲಾಂಗೂಲನ್ಯಾಯ."

## 30. ಅಂಧದರ್ಪಣನ್ಯಾಯ

ಕುರುಡನಿಗೆ ಕನ್ನಡಿಯಿಂದೇನು ?" ಯಾವುದೊಂದು ಪದಾರ್ಥವೇ ಆಗಲಿ ಅದರ ಉಪಯೋಗ ಅರಿತವನಿಗೆ ಮಾತ್ರ ಫಲಕಾರಿಯಾಗುತ್ತದೆ. ಉಪಯೋಗವನ್ನರಿಯದವರು ಅದನ್ನು ನಿಂದಿಸಬಹುದು. ಅದರಿಂದ ಆ ವಸ್ತುವಿಗೆ ಹಾನಿಯೇನೂ ಇಲ್ಲ. ಯೋಗವಾಸಿಷ್ಠದಲ್ಲಿ ಒಂದು ಶ್ಲೋಕ ಇದೆ :—

ಯಸ್ಯ ನಾಸ್ತಿ ಸ್ವಯಂ ಪ್ರಜ್ಞಾ ಶಾಸ್ತ್ರಂ ತಸ್ಯ ಕರೋತಿ ಕಿಮ್ ।
ಲೋಚನಾಭ್ಯಾಂ ವಿಹೀನಸ್ಯ ದರ್ಪಣಃ ಕಿಂ ಕರಿಷ್ಯತಿ ॥

"ಯಾರಿಗೆ ಸ್ವತಃ ಬುದ್ಧಿಯಿಲ್ಲವೋ ಅವರಿಗೆ ಶಾಸ್ತ್ರವೇನು ಮಾಡೀತು ? ಎರಡು ಕಣ್ಣುಗಳೂ ಇಲ್ಲದವನಿಗೆ ಕನ್ನಡಿ ಏನು ಮಾಡೀತು ?"

ಆಧುನಿಕ ವಿಜ್ಞಾನ ಶಾಸ್ತ್ರವನ್ನು ಅಲ್ಲಗಳೆಯುವ ಮತಾಂಧನೂ, ವೇದ ಶಾಸ್ತ್ರಗಳನ್ನು ನಿಂದಿಸುವ ವಿಜ್ಞಾನಿಯೂ ಕುರುಡರೇ. ಇಂತಹವರಿಗೆ ಈ ನ್ಯಾಯ ಅನ್ವಯಿಸುವುದು.

## 31. ಅಂಧಪರಂಪರಾನ್ಯಾಯ

ಅನೇಕ ಮಂದಿ ಕುರುಡರು ಸಾಲುಗಟ್ಟಿಕೊಂಡು ಹೋಗುತ್ತಿದ್ದರು. ಮುಂದಿನವನ ಬಟ್ಟೆಯ ಸೆರಗನ್ನು ಹಿಂದಿನವನೂ, ಅವನ ಸೆರಗನ್ನು ಇನ್ನೊಬ್ಬ ಕುರುಡನೂ ಹಿಡಿದುಕೊಂಡಿದ್ದರು. ಎಲ್ಲರೂ ಕುರುಡರೇ ! ತಾವೆಲ್ಲರೂ ಸರಿಯಾದ ಮಾರ್ಗದಲ್ಲಿ ಹೋಗುತ್ತಿದ್ದೇವೆಂದೂ, ತಮ್ಮ ಮುಂದಿರುವವನು ತಮಗೆ ದಾರಿ ತೋರಿಸುತ್ತಿರುವನೆಂದೂ ತಿಳಿದುಕೊಂಡಿದ್ದರು. ತಾವು ಯಾರ ಬಟ್ಟೆಯ ಸೆರಗನ್ನು ಹಿಡಿದುಕೊಂಡಿದ್ದರೋ ಅವನೂ ಕುರುಡನೆಂಬುದು ಅವರಿಗೆ ತಿಳಿಯದು. ಅಥವಾ ತಿಳಿದಿದ್ದರೂ 'ಅವನ ಮುಂದಿನವನು ಅಥವಾ ಅವನ ಮುಂದಿರುವವನು ಕಣ್ಣಿದ್ದವನಾಗಿರಬಹುದಲ್ಲ !" ಎಂಬುದೇ ಅವರ ಭಾವನೆ. ಈ ಕುರುಡರ ಸಾಲನ್ನು ನೋಡಿ ಒಬ್ಬ ದಾರಿಗನಿಗೆ ಆಶ್ಚರ್ಯವಾಯಿತು. ಸಾಲಿನಲ್ಲಿದ್ದ ಒಬ್ಬ ಕುರುಡನನ್ನು ಕುರಿತು "ಅಯ್ಯಾ. ನೀನು ತಪ್ಪು ದಾರಿಯಲ್ಲಿ ಹೋಗುತ್ತಿರುವೆಯಲ್ಲ. ನಿನ್ನ ಗುರಿಯನ್ನು ನೀನು ತಲಪುವುದೂ ಇಲ್ಲ. ಹಳ್ಳಕೊಳ್ಳದಲ್ಲಿ ಬಿದ್ದುಬಿಡುವ ಅಪಾಯವೂ ನಿನಗೆ ಕಾದಿದೆ" ಎಂದನು. ಆ ಕುರುಡನಿಗೆ ಕೋಪ ಬಂದಿತು. 'ಏನಯ್ಯಾ, ನಾವು ಬಹುಮಂದಿ ಈ ರೀತಿಯಲ್ಲಿ ಹೋಗುತ್ತಿದ್ದೇವೆ. ನನಗೆ ಕಣ್ಣಿಲ್ಲವಾದರೆ ನನ್ನ ಮುಂದೆ ಹೋಗುವವರಲ್ಲಿ ಯಾರಿಗೂ ಕಣ್ಣಿಲ್ಲವೇ ?" ಎಂದು ಕೇಳಿದನು. ದಾರಿಗನು ನಗುತ್ತಾ "ಅಯ್ಯಾ, ಅವರೆಲ್ಲ ಕುರುಡರು. ಅವರ ದಾರಿ ಸರಿಯಲ್ಲ"

ಎಂದನು. ಕುರುಡನಿಗೆ ಬಹಳ ಕೋಪ ಬಂದಿತು. "ಅವರೆಲ್ಲಾ ಕುರುಡರಾದರೆ ನೀನು ಮಾತ್ರ ಕಣ್ಣಿರುವವನೋ ? ನೀನೇ ಕುರುಡನಾಗಿರಬೇಕು. ನಿನ್ನ ಮಾತನ್ನು ನಂಬಲಾರೆ. ಒಬ್ಬನಿಗಿಂತ ಹತ್ತು ಮಂದಿ ಲೇಸು. ಹೊಸಬನಾದ ನಿನಗಿಂತ ಹಳಬರಾದ ಇವರನ್ನು ನಂಬುವುದೇ ಯೋಗ್ಯ !" ಎಂದನು.

ಹೀಗೆ ಯುಕ್ತಿಯೂ ಅನುಭವವೂ ಇಲ್ಲದೆ ಬರೇ ಶ್ರದ್ಧಾಜಾಡ್ಯದಿಂದ ಒಂದು ವಿಷಯವನ್ನು ನಂಬಿಕೊಂಡಿದ್ದಾಗ ಈ ನ್ಯಾಯವನ್ನು ಉಪಯೋಗಿಸುತ್ತಾರೆ. ಹರದತ್ತನು ಪದಮಂಜರಿಯಲ್ಲಿ ಈ ನ್ಯಾಯವನ್ನು ಉಪಯೋಗಿಸುತ್ತಾನೆ. "ವ್ಯಾಕರಣ ಶಾಸ್ತ್ರದಲ್ಲಿ 'ಇವು ಸಾಧು ಶಬ್ದಗಳು' ಎಂದು ಸಾಧು ಶಬ್ದಗಳನ್ನು ಬೋಧಿಸಲಾಗಿದೆ. ಆಚಾರ್ಯ ಪಾಣಿನಿಗೆ ಇವು ಸಾಧು ಶಬ್ದಗಳು ಎಂದು ಹೇಗೆ ಗೊತ್ತಾಯಿತು ? ಪೂರ್ವದಲ್ಲಿದ್ದ ಆಪಿಶಲಿಯ ವ್ಯಾಕರಣದಿಂದ ; ಆಪಿಶಲಿಗೆ ಹೇಗೆ ಗೊತ್ತಾಯಿತು ? ಇನ್ನೂ ಹಿಂದಿನ ವ್ಯಾಕರಣದಿಂದ. ಹಾಗಾದರೆ ಇದು ಅಂಧಪರಂಪರಾ ನ್ಯಾಯವಾಯಿತು". ಇಲ್ಲಿ ಹರದತ್ತನು ಪೂರ್ವಪಕ್ಷವನ್ನು ಕಟ್ಟುತ್ತಿದ್ದಾನೆ. ಸಿದ್ಧಾಂತದಲ್ಲಿ ಅಂಧಪರಂಪರಾನ್ಯಾಯ ವಿವಕ್ಷಿತವಲ್ಲ.

## 32. ಆಕಾಶ್‌ಮುಷ್ಟಿಹನನನ್ಯಾಯ

ಆಕಾಶವನ್ನು ಮುಷ್ಟಿಯಿಂದ ಗುದ್ದುವುದು ! ಅಸಾಧ್ಯವಾದ ಕೆಲಸಕ್ಕಾಗಿ ವ್ಯರ್ಥ ಶ್ರಮ ಪಡುವುದೆಂದರ್ಥ. ಆಕಾಶವನ್ನು ಗುದ್ದಿದರೆ ಕೈ ನೋಯುವುದೇ ಹೊರತು ಆಕಾಶಕ್ಕೆ ಪೆಟ್ಟು ಆಗುವುದಿಲ್ಲ.

## 33. ಆಖುವನ್ನಪಿಟಕನ್ಯಾಯ

ಆಖು—ಇಲಿ ; ಅನ್ನಪಿಟಕ—ಅನ್ನವನ್ನಿಟ್ಟಿರುವ ಬುಟ್ಟಿ. ಇಲಿ ಅನ್ನದ ಆಸೆಗಾಗಿ ಅನ್ನದ ಬುಟ್ಟಿಯನ್ನು ಉರುಳಿಸುತ್ತದೆ. ಅನ್ನವನ್ನು ತಿಂದಮೇಲೆ ಬುಟ್ಟಿಯನ್ನು ಮೊದಲಿದ್ದ ಸ್ಥಳದಲ್ಲಿಡುವುದಿಲ್ಲ. ಇಡಲು ಸಾಮರ್ಥ್ಯವೂ ಇಲ್ಲ. ಹಾಗೆ ಒಬ್ಬ ಮನುಷ್ಯ ಸ್ವಾರ್ಥಕ್ಕಾಗಿ ಒಂದು ಸಂಸ್ಥೆಯನ್ನು ಹಾಳು ಮಾಡುವನು. ಪುನಃ ನಿರ್ಮಿಸಲಾರ— ಎಂಬ ಸಂದರ್ಭದಲ್ಲಿ ಇದನ್ನು ಬಳಸುತ್ತಾರೆ. ಮನೆಯನ್ನೊಡೆಯಬಹುದು, ಕಟ್ಟುವುದು ಕಷ್ಟ.

## 34. ಆಮ್ರಾನ್ ಪೃಷ್ಟ : ಕೋವಿದಾರಾನಾಚಷ್ಟೇ

"ಮಾವಿನ ಮರದ ವಿಷಯವನ್ನು ಕೇಳಿದರೆ ಕೋವಿದಾರ ಮರಗಳ ಸುದ್ದಿಯನ್ನು ಹೇಳುತ್ತಾನೆ". ಪ್ರಶ್ನೆಗೆ ತಕ್ಕ ಉತ್ತರ ಹೇಳದೆ ಅಸಂಬದ್ಧವಾದ

ಯಾವುದೇ ಸಂಗತಿಯನ್ನು ಹೇಳುತ್ತಾನೆಂದು ತಾತ್ಪರ್ಯ. ಮಹಾಭಾಷ್ಯದಲ್ಲಿಯೂ (ಪಾ. ಸೂ. 2-2-45) ಭಾಮತಿ (ಬ್ರ. ಸೂ. 1-1-22) ಕಲ್ಪತರು (ಬ್ರ. ಸೂ. 1-4-1) ಗಳಲ್ಲಿಯೂ ಇದರ ಉಪಯೋಗ ಕಂಡು ಬಂದಿದೆ.

## 35. ಆಮ್ರಾಶ್ಚ ಸಿಕ್ತಾಃ ಪಿತರಶ್ಚ ತೃಪ್ತಾಃ

ಮಾವಿನಗಿಡಕ್ಕೆ ನೀರೆರೆದಂತೆಯೂ ಆಯಿತು, ಪಿತೃಗಳಿಗೆ ತೃಪ್ತಿಯೂ ಆಯಿತು. ಒಂದೇ ಕೆಲಸದಿಂದ ಎರಡು ಪ್ರಯೋಜನ ದೊರೆಯಬಹುದು. ಪಿತೃಗಳಿಗೆ ತರ್ಪಣ ಕೊಡಬೇಕಾಗಿದೆ. ಎಲ್ಲಿಯೋ ತರ್ಪಣ ಕೊಡುವುದಕ್ಕೆ ಬದಲು, ಮಾವಿನ ಗಿಡದ ಪಾತಿಯಲ್ಲಿ ತರ್ಪಣ ಕೊಟ್ಟರೆ ಎರಡು ಕೆಲಸವೂ ಆಗುತ್ತದೆ. ಹೀಗೆ ಮಾಡುವುದು ಬುದ್ಧಿವಂತರ ಲಕ್ಷಣ ! 'ಸ್ವಕಾರ್ಯವೂ ಆಯಿತು, ಸ್ವಾಮಿಕಾರ್ಯವೂ ಆಯಿತು' ಎಂಬ ಮಾತೂ ಇದೇ ಅಭಿಪ್ರಾಯವನ್ನು ಕೊಡುತ್ತದೆ. ಮಹಾಭಾಷ್ಯಕಾರರಾದ ಪತಂಜಲಿಗಳು ವ್ಯಾಕರಣ ಶಾಸ್ತ್ರದ ಮೊದಲನೇ ಸೂತ್ರದಲ್ಲಿ ಈ ನ್ಯಾಯವನ್ನು ಬಳಸಿದ್ದಾರೆ.

## 36. ಆಶಾಮೋದಕತೃಪ್ತನ್ಯಾಯ

ಮನಸ್ಸಿನಲ್ಲಿಯೇ ಸಿಹಿ ತಿಂಡಿಗಳನ್ನು ಮಾಡಿ ತಿಂದು ತೃಪ್ತಿಪಡುವುದು ! ಉದ್ದಿಷ್ಟಕಾರ್ಯ ನೆರವೇರುವುದೋ ಇಲ್ಲವೊ, ನೆರವೇರುವ ಸಂಭವ ಶೀರ ಕಡಿಮೆ ; ಇಂತಹ ಸಂದರ್ಭದಲ್ಲಿ ಅದು ನೆರವೇರಿತೆಂದೂ, ಕೈಗೆ ಫಲ ಸಿಕ್ಕಿತೆಂದೂ ಭಾವಿಸುವುದು ನ್ಯಾಯದ ತಾತ್ಪರ್ಯ. ಹೀಗೆ ಹಗಲುಗನಸು ಕಾಣುವ ಜನರಿದ್ದಾರೆ. 'ಮನಸ್ಸಿನಲ್ಲಯೇ ಮಂಡಿಗೆ ತಿನ್ನುತ್ತಾನೆ' ಎಂಬ ಮಾತು ಈ ಅಭಿಪ್ರಾಯವನ್ನೇ ಕೊಡುತ್ತದೆ.

## 37. ಆಷಾಢವಾತೇ ಚಲತಿ ದ್ವಿಪೇಂದ್ರೇ ಚಕ್ರೀವತೋ ವಾರಿಧಿರೇವ ಕಾಷ್ಠಾ

'ಆಷಾಢಮಾಸದ ಗಾಳಿಯಲ್ಲಿ ಗಜರಾಜನೇ ತಲ್ಲಣಿಸುತ್ತಿರುವಾಗ ಕತ್ತೆಗೆ ಸಮುದ್ರವೇ ಅವಧಿ !' ಆಷಾಢಮಾಸದಲ್ಲಿ ಬಿರುಗಾಳಿ ಬೀಸುವುದಷ್ಟೆ. ಮಹಾಬಲಶಾಲಿಯಾದ ಸಲಗವೇ ಗಾಳಿಗೆ ತತ್ತರಿಸುತ್ತಿದೆ. ಇನ್ನು ಕತ್ತೆಯ ಗತಿ ? ಅದು ಹಾರಿಹೋಗಿ ಸಮುದ್ರಕ್ಕೇ ಬೀಳಬೇಕು ! ಬಲಿಷ್ಠವಾದ ಎದುರಾಳಿಯೇ ಸೋತುಹೋಗಿರುವಾಗ ಸಾಮಾನ್ಯನ ಪಾಡೇನು ? ಅತಿರಥಮಹಾರಥರನ್ನು ಗೆದ್ದವನಿಗೆ ಸಾಮಾನ್ಯ ಸೈನಿಕನು ಲಕ್ಷ್ಯವೇ ? ಹಡಗು ನುಂಗುವವನಿಗೆ ದೋಣಿ ಈಡೇ ?

38. ಇತೋವ್ಯಾಘ್ರ ಇತಸ್ತಟೀ

ಇತ್ತ ದರಿ, ಅತ್ತ ಪುಲಿ ! ಇತ್ತ ಹುಲಿ ಅಟ್ಟಿಸಿಕೊಂಡು ಬರುತ್ತಿದೆ. ಅತ್ತ ಹತ್ತಲಾರದಂತಹ ಕಡಿದಾದ ಏರಿ ಇದೆ. ಇಕ್ಕಳದಲ್ಲಿ ಸಿಕ್ಕಿಕೊಂಡಂತೆ ಈ ಮನುಷ್ಯನ ಗತಿಯಾಗಿದೆ. ಎರಡು ಅಪಾಯಗಳ ಮಧ್ಯದಲ್ಲಿ ಸೇರಿ ಕೊಂಡು ಪೇಚಾಡುವ ಮನುಷ್ಯನ ಪಾಡನ್ನು ಈ ನ್ಯಾಯ ವರ್ಣಿಸುತ್ತದೆ.

39. ಉತ್ಪತಿತೋಽಪಿ ಹಿ ಚಣಕಃ ಶಕ್ತಃ ಕಿಂ ಭ್ರಾಷ್ಟ್ರಕಂ ಭಂಕ್ತುಂ ಇತಿ ನ್ಯಾಯ

ಹುರಿಯುವಾಗ ಕಡಲೆ ಮೇಲೆ ಹಾರಿಬಿದ್ದರೂ ಬಾಣಲೆಯನ್ನು ಒಡೆಯಬಲ್ಲುದೆ ? ತನ್ನನ್ನು ಹುರಿದು ಹಿಂಸೆಪಡಿಸುತ್ತದೆಯೆಂದು ಕಡಲೆ ಹಾರಿ ಹಾರಿ ಬಿದ್ದರೂ ಬಾಣಲೆಯನ್ನೇನೂ ಮಾಡಲಾರದು. ತಾನು ತಪ್ಪಿಸಿಕೊಂಡು ಹೋಗಲೂ ಆರದು. ಬೆಕ್ಕಿನ ಕೈಗೆ ಸಿಕ್ಕಿದ ಇಲಿಮರಿಯಂತೆ, ಹುಲಿಗೆ ಸಿಕ್ಕಿದ ಜಿಂಕೆಯಂತೆ ಅದರ ಪರಿಸ್ಥಿತಿ.

'ಆತನು ನನ್ನ ಹತೋಟಿಯಲ್ಲಿದ್ದಾನೆ. ಜುಟ್ಟು ನನ್ನ ಕೈಯಲ್ಲಿದೆ. ಎಷ್ಟು ಯತ್ನಿಸಿದರೂ ನನ್ನ ಹಿಡಿತದಿಂದ ತಪ್ಪಿಸಿಕೊಳ್ಳಲಾರ' ಎಂದು ಅಭಿಪ್ರಾಯ.

40. ಉಪಜೀವ್ಯ ವಿರೋಧಸ್ಯಾಯುಕ್ತತ್ವನ್ಯಾಯ

ಉಪಜೀವ್ಯವೆಂದರೆ ಕಾರಣಭೂತವಾದದ್ದು, ಆಧಾರವಾದದ್ದು. ಅದಕ್ಕೆ ವಿರೋಧವಾಗಿ ನಡೆದುಕೊಳ್ಳುವುದು ಸರಿಯಲ್ಲ. 'ಉಪ್ಪು ತಿಂದ ಮನೆಗೆ ಎರಡು ಬಗೆಯಬಾರದು' ಎಂಬ ಗಾದೆಯು ಇದನ್ನು ಹೋಲುತ್ತದೆ. ಲೋಕದಲ್ಲಿ ಇದರ ಉಪಯೋಗ ಸ್ಪಷ್ಟವಾಗಿದೆ. ಶಾಸ್ತ್ರಗಳಲ್ಲಿಯೂ–ವಿಶೇಷವಾಗಿ ವ್ಯಾಕರಣ ಶಾಸ್ತ್ರದಲ್ಲಿ–ಇದರ ಉಪಯೋಗ ಉಂಟು. ಉದಾಹರಣೆಗಳು ಸಾಮಾನ್ಯ ವಾಚಕರಿಗೆ ಕಠಿಣವಾದೀತೆಂದು ಇಲ್ಲಿ ಅವನ್ನು ಬಿಡಲಾಗಿದೆ. ಉಪಕಾರ ಮಾಡಿದವನಿಗೆ ಅಪಕಾರ ಮಾಡಬಾರದು ಎಂದು ಅಭಿಪ್ರಾಯ.

41. ಉಭಯತಸ್ಪಾಶಾ ರಜ್ಜುಃ

ಎರಡು ತುದಿಗಳಲ್ಲಿಯೂ ಬಿಗಿಯುವ ಕುಣಿಕೆಯುಳ್ಳ ಹಗ್ಗದ ನ್ಯಾಯ. ಹಗ್ಗಕ್ಕೆ ನಾನಾ ಬಗೆಯ ಗಂಟು (Knot) ಹಾಕುತ್ತಾರಷ್ಟೆ. ಚಲಿಸಿದ ಕೂಡಲೇ ಬಿಗಿದುಹಾಕಬಲ್ಲ ಒಂದು ಬಗೆಯ ಕುಣಿಕೆ ಇದೆ. ಅದು ಹಗ್ಗದ ಎರಡು ತುದಿಗಳಲ್ಲೂ ಇದ್ದರೆ ಯಾವ ಕಡೆ ಕೈಹಾಕಿದರೂ ಕೈ ಕಟ್ಟಿಗೆ ಸಿಕ್ಕಿಕೊಳ್ಳುತ್ತದೆ. ಒಂದು ಕಡೆ ಕೈಹಾಕಲೇಬೇಕಾಗಿದೆ. ಇಂತಹ

ಪರಿಸ್ಥಿತಿಗೆ ಉಭಯತಸ್ಪಾಶಾರಜ್ಜುವೆಂದು ಹೇಳುತ್ತಾರೆ. ಶಾಸ್ತ್ರಗ್ರಂಥಗಳಲ್ಲಿ ವಾದವಿವಾದಗಳು ಬೆಳೆದಾಗ ಈ ನ್ಯಾಯದ ಉಪಯೋಗವನ್ನು ಕಾಣಬಹುದು. ಇದು 'ಇತೋ ವ್ಯಾಘ್ರಃ ಇತಸ್ತಟೀ' ಎಂಬ ನ್ಯಾಯವನ್ನು ಹೋಲುತ್ತದೆ. ಹೀಗೆ ಮಾಡಿದರೂ ಕಷ್ಟ, ಹಾಗೆ ಮಾಡಿದರೂ ಕಷ್ಟ ಎಂದು ಅಭಿಪ್ರಾಯ.

## 42. ಉಷ್ಟ್ರಕಂಟಕಭಕ್ಷಣನ್ಯಾಯ

ಒಂಟೆ ಮುಳ್ಳುಗಳನ್ನು ಭಕ್ಷಿಸುವ ನ್ಯಾಯ. ಒಂಟೆಯು ಮುಳ್ಳುಗಿಡಗಳನ್ನು ತಿನ್ನುತ್ತದೆ. ಮುಳ್ಳಿನಿಂದ ನೋವಾದರೂ ಅದು ಗಮನಿಸುವುದಿಲ್ಲ. ಸೊಪ್ಪುಗಳ ಭಕ್ಷಣದಿಂದಾದ ಸುಖಕ್ಕೆ ಮೋಹಗೊಳ್ಳುತ್ತದೆ. ಹಾಗೆ ಧನವನ್ನು ಸಂಪಾದಿಸುವಾಗ ಕಷ್ಟವಾದರೂ ಅದನ್ನು ಅನುಭವಿಸುವಾಗ ಸುಖವಿದೆಯೆಂದು ಮನುಷ್ಯನು ಧನಾರ್ಜನೆಗೆ ಕಷ್ಟಪಡುತ್ತಾನೆ.

ಈ ನ್ಯಾಯವನ್ನು ಇನ್ನೊಂದು ರೀತಿಯಲ್ಲಿಯೂ ಯೋಜಿಸಿದ್ದಾರೆ. ಮುಳ್ಳುಗಳನ್ನು ಒಂಟೆಯು ತಿಂದು ಸುಖಪಡುತ್ತದೆ. ಆದರೆ ಮನುಷ್ಯನು ಅವನ್ನು ತಿನ್ನಲಾರ ; ಅವನಿಗೆ ಮುಳ್ಳಿನಿಂದ ದುಃಖವೇ ಆಗುವುದು. ಹೀಗೆ ಒಂದೇ ವಸ್ತು ಕೆಲವರಿಗೆ ಸುಖಪ್ರದವೂ, ಮತ್ತೆ ಕೆಲವರಿಗೆ ದುಃಖಪ್ರದವೂ ಆಗುತ್ತದೆ—ಎಂಬುದನ್ನು ವರ್ಣಿಸುವುದಕ್ಕೆ ಈ ನ್ಯಾಯವನ್ನು ಉಪಯೋಗಿಸುತ್ತಾರೆ. ಯಾವ ಪದಾರ್ಥವೂ ಸ್ವತಃ ಸುಖಕಾರಿಯೂ ಅಲ್ಲ, ದುಃಖಕಾರಿಯೂ ಅಲ್ಲ. ದೇಶ, ಕಾಲ, ಅವಸ್ಥೆಗಳನ್ನು ಅವಲಂಬಿಸಿ ಮನುಷ್ಯನ ಬುದ್ಧಿಗೆ ಹಾಗೆ ತೋರುತ್ತದೆ. ಈ ನ್ಯಾಯವು ಇಂಗ್ಲೀಷಿನಲ್ಲಿರುವ What is one man's food is another man's poison ಎಂಬುದಕ್ಕೆ ಬಹುಮಟ್ಟಿಗೆ ಹೋಲುತ್ತದೆ.

## 43. ಉಷ್ಟ್ರಲಗುಡನ್ಯಾಯ

ಲಗುಡವೆಂದರೆ ದೊಣ್ಣೆ. ಒಂಟೆಯು ದೊಣ್ಣೆಯ ಹೊರೆಯನ್ನು ಹೊತ್ತುಕೊಂಡು ಹೋಗುತ್ತದೆ. ಸವಾರನಿಂದ ದೊಣ್ಣೆಯ ಪೆಟ್ಟನ್ನೂ ತಿನ್ನುತ್ತದೆ ! ಕಷ್ಟಪಟ್ಟು ಹೊರೆಯನ್ನು ಹೊತ್ತುಕೊಂಡು ಹೋದುದಲ್ಲದೆ ಅದರಿಂದ ಪೆಟ್ಟನ್ನು ತಿನ್ನುವ ಭಾಗ್ಯ ಅದಕ್ಕೆ ದೊರಕುತ್ತದೆ. ಒಂದು ಸಿದ್ಧಾಂತದ ವಿರುದ್ಧ ಪ್ರತಿವಾದಿಯು ಅನೇಕ ಯುಕ್ತಿಗಳನ್ನು ಒಡ್ಡುತ್ತಾನೆ. ವಾದಿಯು ಆ ಯುಕ್ತಿಗಳನ್ನೇ ಪ್ರತಿವಾದಿಗೆ ವಿರುದ್ಧವಾಗಿ ತಿರುಗಿಸಿದರೆ ಉಷ್ಟ್ರಲಗುಡನ್ಯಾಯವಾಗುತ್ತದೆ.

## 44. ಏಕದೇಶವಿಕೃತವಂನನ್ಯವತ್

ಒಂದು ವಸ್ತುವಿನ ಯಾವುದಾದರೊಂದು ಭಾಗವು ವ್ಯತ್ಯಾಸ ಹೊಂದಿದರೆ, ಊನವಾದರೆ, ಆ ವಸ್ತುವು ಬೇರೆ ವಸ್ತು ಎನಿಸಿಕೊಳ್ಳುವುದಿಲ್ಲ. ವ್ಯಾಕರಣ ಮಹಾಭಾಷ್ಯದಲ್ಲಿ ಇದಕ್ಕೆ ಒಂದು ಉದಾಹರಣೆಯನ್ನು ಕೊಟ್ಟಿದ್ದಾರೆ : 'ನಾಯಿಯ ಬಾಲವನ್ನು ಕತ್ತರಿಸಿ ಹಾಕಿದರೂ ಅದು ನಾಯಿಯೇ ಸರಿ ; ಅದು ಕುದುರೆಯೂ ಆಗುವುದಿಲ್ಲ, ಕತ್ತೆಯೂ ಆಗುವುದಿಲ್ಲ !'

ಭಾರತ ದೇಶದ ಒಂದು ಭಾಗ ಕತ್ತರಿಸಲ್ಪಟ್ಟು ಪಾಕಿಸ್ತಾನವಾದರೂ ಉಳಿದ ಭಾಗವನ್ನು ಭಾರತ ದೇಶ ಎನ್ನುವಂತೆ !

## 45. ಏಕವೃಂತಗತಫಲದ್ವಯನ್ಯಾಯ

ಒಂದು ತೊಟ್ಟಿನಲ್ಲಿ ಎರಡು ಹಣ್ಣು ಬಿಡುತ್ತವಷ್ಟೆ. ಒಂದೇ ಶಬ್ದ ಅಥವಾ ವಾಕ್ಯವು ಶ್ಲೇಷದಿಂದ ಎರಡು ಅರ್ಥಗಳನ್ನು ಕೊಡುವ ಸಂದರ್ಭಗಳು ಕಾವ್ಯದಲ್ಲಿ ಅಪರಿಮಿತವಾಗಿ ಬರುತ್ತವೆ. ಆಗ ಈ ನ್ಯಾಯವನ್ನು ದೃಷ್ಟಾಂತಕ್ಕಾಗಿ ಉಪಯೋಗಿಸುತ್ತಾರೆ. ಎರಡು ಪ್ರಯೋಜನಗಳು ಏಕಕಾಲದಲ್ಲಿ ದೊರೆಯಬೇಕೆಂಬ ಉದ್ದೇಶದಿಂದ ಒಂದೇ ವಸ್ತುವನ್ನು ಉಪಯೋಗಿಸುವುದೆಂದು ತಾತ್ಪರ್ಯ. 'Killing two birds with one stone !'

## 46. ಕದಂಬಕೋರಕನ್ಯಾಯ

ಕದಂಬವೃಕ್ಷದ ಮೊಗ್ಗುಗಳ ನ್ಯಾಯ. ಈ ಮೊಗ್ಗುಗಳು ಮರದಲ್ಲಿ ಒಮ್ಮೆಗೇ ಅರಳುತ್ತವೆಯಂತೆ. ಒಂದು ಮೊಗ್ಗು ಅರಳಿದರೆ ಸಾಕು, ಎಲ್ಲಾ ಮೊಗ್ಗುಗಳೂ ಅದೇ ಸಮಯದಲ್ಲಿ ಅರಳಿದವೆಂದು ಭಾವಿಸಬಹುದು. ಪಟ್ಟಣಗಳಲ್ಲಿ ವಿದ್ಯುಚ್ಛಕ್ತಿಯ ಸಾಲುದೀಪಗಳೂ, ನಾಟಕ ಮಂದಿರದ ದೀಪಗಳೂ ಹತ್ತಿಕೊಳ್ಳುವುದನ್ನು ಇಲ್ಲಿ ಸ್ಮರಿಸಿಕೊಳ್ಳಬಹುದು. ಏಕಕಾಲದಲ್ಲಿ ಅನೇಕ ಕ್ರಿಯೆಗಳು ನಡೆಯುವುದಕ್ಕೆ ದೃಷ್ಟಾಂತವಾಗಿ ಈ ನ್ಯಾಯವನ್ನು ಉಪಯೋಗಿಸುತ್ತಾರೆ. ಇದಕ್ಕೆ ಕದಂಬ ಮುಕುಲನ್ಯಾಯ, ಕದಂಬಗೋಲಕನ್ಯಾಯವೆಂದೂ ಹೆಸರುಂಟು.

## 47. ಕನಕಕುಂಡಲನ್ಯಾಯ

ಕನಕ–ಚಿನ್ನ, ಕುಂಡಲ–ಕರ್ಣಾಭರಣ. ಚಿನ್ನದಿಂದ ಕುಂಡಲ, ಬಳೆ, ಉಂಗುರ ಮೊದಲಾದ ಬೇರೆ ಬೇರೆ ಒಡವೆಗಳಾಗುತ್ತವೆ. ಅವುಗಳ ನಾಮರೂಪಗಳು ಭಿನ್ನವೇ ಹೊರತು ಎಲ್ಲವೂ ಚಿನ್ನವೇ. ಮಣ್ಣಿನಿಂದ

ಗಡಿಗೆ, ಹರವಿ, ಪಣತೆಗಳಾದರೂ ಪರಮಾರ್ಥದಲ್ಲಿ ಎಲ್ಲವೂ ಮಣ್ಣೇ. ಬ್ರಹ್ಮವೇ ಜಗತ್ತಾಗಿ ತೋರುವುದೆಂದು ಪ್ರತಿಪಾದಿಸುವಾಗ ಅದ್ವೈತಿಗಳು ಈ ನ್ಯಾಯವನ್ನು ಬಳಸುತ್ತಾರೆ. ಕಾರಣಕ್ಕಿಂತ ಕಾರ್ಯವು ಭಿನ್ನವಲ್ಲ ಎಂದು ತಾತ್ಪರ್ಯ.

## 48. ಕಫೋಣಿಗುಡನ್ಯಾಯ

ಕಫೋಣಿ ಎಂದರೆ ಮೊಳಕೈ (elbow). ಗುಡವೆಂದರೆ ಬೆಲ್ಲ. ಮೊಳಕೈಗೆ ಹತ್ತಿರುವ ಬೆಲ್ಲವನ್ನು ನೆಕ್ಕಬೇಕು! ಬೆಲ್ಲ ಅಷ್ಟು ಹತ್ತಿರದಲ್ಲಿದ್ದು ವಾಸನೆ ಮೂಗಿಗೆ ಬಡಿಯುತ್ತಿದ್ದರೂ ನಾಲಿಗೆಗೆ ಸಿಕ್ಕುವುದಿಲ್ಲ. ಹಾಗೆಯೇ ಒಂದು ಪದಾರ್ಥ ಸಿದ್ಧಿಸಿ ಕೈಗೆ ಬಂದಂತೆ ತೋರಿದರೂ ದಕ್ಕುವುದಿಲ್ಲ. ಆಗ ಈ ನ್ಯಾಯದ ಉಪಯೋಗವಾಗುತ್ತದೆ.

## 49. ಕರಿಬೃಂಹಿತನ್ಯಾಯ

ಬೃಂಹಿತವೆಂದರೆ ಆನೆಯ ಗರ್ಜನೆ. "ಬೃಂಹಿತಂ ಕರಿಗರ್ಜಿತಂ" ಎಂದು ಅಮರಕೋಶ ಹೇಳುತ್ತದೆ. ಬೃಂಹಿತವೆಂದರೆ ಸಾಕು ; ಕರಿಬೃಂಹಿತ ಎಂದು ಪ್ರಯೋಗ ಮಾಡುವುದು ಏಕೆ ? ಪುನರುಕ್ತಿಯಾಗುವುದಲ್ಲವೆ ? ಎಂದು ಪ್ರಶ್ನೆ ಹುಟ್ಟುತ್ತದೆ. ಇದಕ್ಕೆ ಸಮಾಧಾನವೇನೆಂದರೆ, ಇಂತಹ ಪ್ರಯೋಗಗಳು ಹಿಂದಿನಿಂದ ಪ್ರಸಿದ್ಧವಾಗಿ ಬಂದುಬಿಟ್ಟಿವೆ. ಈ ಸ್ಥಳದಲ್ಲಿ 'ಬೃಂಹಿತ' ಎಂದರೆ ಗರ್ಜನೆ ಎಂದು ಮಾತ್ರ ಅರ್ಥ. 'ಆನೆಯ ಗರ್ಜನೆ' ಎಂದರ್ಥವಲ್ಲ. ಆದ್ದರಿಂದ ಪುನರುಕ್ತಿದೋಷವಿಲ್ಲ. ವಿಶಿಷ್ಟಾರ್ಥವನ್ನು ಕೊಡಬಲ್ಲ ಪದವು ತಕ್ಕ ವಿಶೇಷಣದಿಂದ ಕೂಡಿದ್ದಾಗ ಸಾಮಾನ್ಯಾರ್ಥವನ್ನು ಮಾತ್ರ ಕೊಡುವುದೆಂದು ಶಾಸ್ತ್ರಕಾರರಿಗೆ ಸಂಮತವಾದ ಒಂದು ನಿಯಮ. ಇನ್ನೊಂದು ಉದಾಹರಣೆ ಪುಷ್ಪಮಾಲಾ. ಮಾಲೆಯೆಂದರೇ ಹೂವಿನ ಸರ. ಪುನಃ ಪುಷ್ಪಶಬ್ದ ಏಕೆ ? ಆದ್ದರಿಂದ ಇಲ್ಲಿ ಮಾಲೆ ಎಂದರೆ 'ಸರ' ಇಷ್ಟು ಮಾತ್ರ ಅರ್ಥ. ಇಂತಹ ಪ್ರಯೋಗಗಳು ಬೇಕಾದಷ್ಟಿವೆ. ಉದಾ : ಗಜಘಟಾ, ನೀಲೇಂದೀವರ, ಪರ್ವತಾಧಿತ್ಯಕಾ, ವಾಜಿಮಂದುರಾ, ಮುಕ್ತಾಹಾರ ಇತ್ಯಾದಿ.

## 50. ಕರ್ಣಕೌಂತೇಯನ್ಯಾಯ

ಕರ್ಣನು ಕೌಂತೇಯನೇ. ಶ್ರೀ ಕೃಷ್ಣನು "ಕರ್ಣ, ನೀನು ಸೂತಪುತ್ರನಲ್ಲ. ನೀನು ಕುಂತಿಯ ಮಗ. ಕ್ಷತ್ರಿಯ" ಎಂದು ತಿಳಿಸಿದಾಗ ಕರ್ಣನ ಭ್ರಮೆ ನಿವೃತ್ತವಾಯಿತು. ಇದು 'ರಾಜಪುತ್ರವ್ಯಾಧ' ನ್ಯಾಯವಿದ್ದಂತೆಯೇ. ವಿವರಕ್ಕೆ ಆ ನ್ಯಾಯವನ್ನು ನೋಡಬಹುದು.

## 51. ಕಂಠಚಾಮೀಕರನ್ಯಾಯ

ತನ್ನ ಕತ್ತಿನಲ್ಲಿರುವ ಸುವರ್ಣಾಭರಣವನ್ನೇ ಮರೆತುಬಿಡುವ ಪ್ರಸಂಗ ಬರಬಹುದು ! ಆಗ ಇನ್ನೊಬ್ಬನು "ಆಭರಣಕ್ಕಾಗಿ ಇಷ್ಟು ಹುಡುಕಬೇಕೆ ? ಅದು ನಿನ್ನ ಕತ್ತಿನಲ್ಲೇ ಇದೆಯಲ್ಲಾ" ಎಂದು ಹೇಳುತ್ತಾನೆ. ಆಗ ತನ್ನ ಪೆಚ್ಚುತನ ಗೊತ್ತಾಗಿ ಆಭರಣ ಸಿಕ್ಕಿತೆಂದು ಸಂತೋಷಪಡುತ್ತಾನೆ. ವೇದಾಂತಿಗಳು ಈ ನ್ಯಾಯವನ್ನು ಉದಾಹರಿಸುವುದುಂಟು : ಮನುಷ್ಯನು ಪರಮಾತ್ಮ ಸ್ವರೂಪನೇ ಆಗಿದ್ದಾನೆ. ಆದರೆ ಅಜ್ಞಾನದಿಂದ ತನ್ನ ಸ್ವರೂಪ ವನ್ನೇ ಮರೆತುಬಿಟ್ಟಿದ್ದಾನೆ. ಸದ್ಗುರು ಇವನ ಅಜ್ಞಾನವನ್ನು ಪರಿಹರಿಸಿ ದಾಗ ತನ್ನ ಸ್ವರೂಪವನ್ನು ಕಂಡುಕೊಂಡು ಆನಂದದಲ್ಲಿ ಮುಳುಗುತ್ತಾನೆ.

ಹೆಗಲಮೇಲೆ ಕುರಿಯನ್ನು ಹೊತ್ತುಕೊಂಡು ನನ್ನ ಕುರಿಯೆಲ್ಲಿ ಹೋಯಿತು ?—ಎಂದು ಹುಡುಕಾಡಿದನಂತೆ !

## 52. ಕಂಬಲನಿರ್ಣೇಜನನ್ಯಾಯ

ನಿರ್ಣೇಜನವೆಂದರೆ ಸ್ವಚ್ಛಪಡಿಸುವುದು. ರೈತನು ಹೊಲದಿಂದ ಮನೆಗೆ ಬಂದಾಗ ತನ್ನ ಮೈಮೇಲಿರುವ ಕಂಬಳಿಯನ್ನು ತನ್ನ ಕಾಲುಗಳ ಮೇಲೆ ಗಟ್ಟಿಯಾಗಿ ಒದರುವುದನ್ನು ಅನೇಕರು ನೋಡಿರಬಹುದು. ಆದ ರಿಂದ ಕಂಬಳಿಯು ಸ್ವಚ್ಛವಾಗುವುದು, ಕಾಲಿಗೆ ಅಂಟಿದ ಧೂಳಿಯೂ ಹೋಗುವುದು ! ಒಂದು ಕೆಲಸದಿಂದ ಎರಡು ಪ್ರಯೋಜನಗಳನ್ನು ಸಾಧಿಸುವಾಗ ಈ ನ್ಯಾಯವನ್ನು ಉಪಯೋಗಿಸುತ್ತಾರೆ, Killing two birds with one stone ಎಂಬ ಇಂಗ್ಲಿಷ್ ಗಾದೆಯ ಅರ್ಥದಲ್ಲಿ ಇದು ಉಪಯುಕ್ತವಾಗುತ್ತದೆ.

## 53. ಕಾಕತಾಲೀಯನ್ಯಾಯ

ಕಾಗೆ ಮತ್ತು ತಾಳೆಹಣ್ಣಿನ ನ್ಯಾಯ. ಕಾಗೆ ತನ್ನ ಪಾಡಿಗೆ ಎಲ್ಲಿಗೋ ಹಾರಿಹೋಗುತ್ತಿತ್ತು. ಒಂದು ತಾಳೆಯ ಹಣ್ಣು ಅದರ ತಲೆಯ ಮೇಲೆ ಅಕಸ್ಮಾತ್ ಬಿದ್ದು ಕಾಗೆ ಸತ್ತುಹೋಯಿತು. ಕಾಗೆ ಆ ಸ್ಥಳದಲ್ಲಿ ಹಾರುವುದಕ್ಕೂ ತಾಳೆಯ ಹಣ್ಣು ಬೀಳುವುದಕ್ಕೂ ಯಾವ ನಿರ್ದಿಷ್ಟವಾದ ಕಾರಣವೂ ಇಲ್ಲ. ಹೀಗೆ ಗೊತ್ತಾದ ಕಾರಣವಿಲ್ಲದೆ ಆಕಸ್ಮಿಕವಾಗಿ ನಡೆ ಯುವ ಘಟನೆ ಕಾಕತಾಳೀಯವೆನಿಸುವುದು. ಇದರ ಅರ್ಥವನ್ನು ಇನ್ನೊಂದು ರೀತಿಯಲ್ಲಿ ಹೇಳುತ್ತಾರೆ : ಕಾಗೆಯ ತಲೆಯ ಮೇಲೆ ತಾಳೆ ಹಣ್ಣು ಬೀಳಲಿಲ್ಲ. ಕಾಗೆ ಬರುವುದಕ್ಕೂ ಹಣ್ಣು ಬೀಳುವುದಕ್ಕೂ ಸರಿ ಹೋಯಿತು. ಕಾಗೆ ಹಣ್ಣನ್ನು ಕಚ್ಚಿಕೊಂಡು ಹೋಗಿ ತಿಂದುಬಿಟ್ಟಿತು. ಒಟ್ಟಿನಲ್ಲಿ ಅಭಿಪ್ರಾಯ ಒಂದೇ. ಆಕಸ್ಮಿಕ ಘಟನೆಯಲ್ಲಿ ಒಳ್ಳೆಯದಾದರೆ

ಎರಡನೆಯ ಅರ್ಥವನ್ನೂ, ಕೆಡುಕಾದರೆ ಮೊದಲನೆಯ ಅರ್ಥವನ್ನು ಹೇಳಬೇಕು.

## 54. ಕಾಕದಂತಪರೀಕ್ಷಾನ್ಯಾಯ

ಕಾಗೆಗೆ ಹಲ್ಲುಗಳಿವೆಯೆ ? ಇಲ್ಲವೆ ? ಇದ್ದರೆ ಎಷ್ಟು ? ಈ ವಿಚಾರದಿಂದ ಯಾರಿಗೂ ಪ್ರಯೋಜನವಿಲ್ಲ. ಹಾಗೆ ವ್ಯರ್ಥವಾದ ಪರಿಶೋಧನೆಯನ್ನೂ ವಿಮರ್ಶವನ್ನೂ ಮಾಡಿದಾಗ ಈ ನ್ಯಾಯ ಉಪಯೋಗಕ್ಕೆ ಬರುವುದು. ಸೋಮಾರಿಗಳ ದೂಷ್ಯರುಚಿಯನ್ನೂ (morbid taste) ಈ ನ್ಯಾಯಕ್ಕೆ ಒಳಪಡಿಸಬಹುದು.

## 55. ಕಾಕದಧಿಘಾತಕನ್ಯಾಯ

ಒಬ್ಬ ಮೊಸರು ಮಾರುವ ಹೆಂಗಸು ಮೊಸರು ಗಡಿಗೆಯನ್ನು ಕಾಯುತ್ತಿರುವಂತೆ ತನ್ನ ಹುಡುಗನಿಗೆ ಹೇಳಿ ಹೋಗುತ್ತಾಳೆ. 'ಕಾಗೆ ಬಂದೀತು, ಜೋಪಾನ' ಎಂದು ಅವಳು ಹುಡುಗನಿಗೆ ಹೇಳಿರುತ್ತಾಳೆ. ಕಾಗೆ ಬಂದರೆ ಅದನ್ನು ಓಡಿಸಬೇಕಾದದ್ದು ಹುಡುಗನ ಕರ್ತವ್ಯ. ನಾಯಿ ಬಂದರೆ ? ಅದನ್ನೂ ಓಡಿಸುತ್ತಾನೆ. 'ನಾಯಿಯನ್ನು ಓಡಿಸಬೇಕೆಂದು ನನಗೆ ಹೇಳಿಲ್ಲ'ವೆಂದು ಅವನು ಸುಮ್ಮನೆ ಕುಳಿತುಕೊಳ್ಳುವುದಿಲ್ಲ. ಆದ್ದರಿಂದ ಇಲ್ಲಿ ಕಾಗೆಯೆಂದರೆ 'ಮೊಸರನ್ನು ಅಪಹರಿಸುವ ಎಲ್ಲಾ ಪ್ರಾಣಿಗಳೆಂದು ಅರ್ಥಮಾಡಬೇಕು. ಬುದ್ಧಿವಾದ ಹೇಳುವಾಗ ಯಾವುದಾದರೊಂದು ವಿಷಯವನ್ನು ತಿಳಿಸಿದಾಗ ಪ್ರತಿಯೊಂದು ಅಂಶವನ್ನೂ ಬಿಡಿಸಿ ಹೇಳಲು ಸಾಧ್ಯವಾಗುವುದಿಲ್ಲ. ಹೇಳುವವನ ಒಟ್ಟು ತಾತ್ಪರ್ಯವೇನೆಂಬುದನ್ನು ಗ್ರಹಿಸಬೇಕು. ತಾತ್ಪರ್ಯಕ್ಕನುಸಾರವಾಗಿ ಮಾತಿನ ಅರ್ಥವನ್ನು ಮಾಡಿಕೊಳ್ಳಬೇಕು. ಇದಕ್ಕೆ ಲೋಕಜ್ಞಾನ ಬೇಕು.

## 56. ಕಾಕಾಕ್ಷಿಗೋಲಕನ್ಯಾಯ

ಕಾಗೆಗೆ ಒಂದೇ ಕಣ್ಣುಗುಡ್ಡೆ ಕಾಣಿಸುತ್ತದೆಯೆಂದು ಪ್ರತೀತಿ. ಅದು ಸಂದರ್ಭಕ್ಕೆ ತಕ್ಕಂತೆ ಎಡಗಣ್ಣಿಗೂ ಬಲಗಣ್ಣಿಗೂ ಸರಿದಾಡುವುದಂತೆ. ವಾಕ್ಯದಲ್ಲಿರುವ ಒಂದು ಶಬ್ದವು ವಾಕ್ಯದ ಎರಡು ಭಾಗಗಳಿಗೂ ಸಂಬಂಧಿಸುವಾಗ ಇದರ ಉಪಯೋಗ ಮಾಡುತ್ತಾರೆ. ಸ್ವಲ್ಪ ಅರ್ಥಭೇದದಿಂದ ಇದನ್ನು ಕಾಮಂದಕ ನೀತಿಶಾಸ್ತ್ರದಲ್ಲಿ ಪ್ರಯೋಗಿಸಿದ್ದಾರೆ. "ಪರಸ್ಪರ ಶತ್ರುಗಳಾದ ಇಬ್ಬರು ಬಲಿಷ್ಠ ರಾಜರಿದ್ದಾಗ ಅಶಕ್ತನಾದವನು ಯಾರ ಕಡೆಗೂ ಸೇರಬಾರದು. ಅವನು ಇಬ್ಬರಿಗೂ ಸ್ನೇಹಿತನಂತೆ ಮಾತನಾಡುತ್ತಾ ಕಾಕಾಕ್ಷಿಗೋಳಕನ್ಯಾಯದಂತೆ ವರ್ತಿಸಬೇಕು."

## 57. ಕಾಶಕುಶಾವಲಂಬನನ್ಯಾಯಃ

ಕಾಶವೆಂದರೆ ಒಂದು ಬಗೆಯ ಹುಲ್ಲು. ಕುಶವೆಂದರೆ ದರ್ಭೆ. ನದಿಯ ಪ್ರವಾಹದಲ್ಲಿ ಕೊಚ್ಚಿಕೊಂಡು ಹೋಗುತ್ತಿರುವ ಮನುಷ್ಯನು ಒಂದು ಹುಲ್ಲುಕಡ್ಡಿ ಸಿಕ್ಕಿದರೂ ಅದನ್ನು ಹಿಡಿದುಕೊಳ್ಳುವನು, ಆ ಹುಲ್ಲುಕಡ್ಡಿ ತನಗೆ ಅವಲಂಬನವಾದೀತೆಂದು. ಇದರಿಂದ ತನ್ನ ಪ್ರಾಣ ಉಳಿದೀತೆಂದೂ ಅವನ ಆಸೆ. ಆದರೆ ಹುಲ್ಲೂ ಬುಡಸಹಿತ ಕಿತ್ತು ಇವನ ಜೊತೆಗೇ ಪ್ರವಾಹದ ಪಾಲಾಗುವುದು. ವಾದಿಯು ವಾದದಲ್ಲಿ ಸೋತು ಹೋಗುತ್ತಿರುವಾಗ ಏನಾದರೂ ಆಶ್ರಯವಾದೀತೇನೋ ಎಂದು ಭಾವಿಸಿ ಒಂದು ಯುಕ್ತಿಯನ್ನು ಹೇಳುತ್ತಾನೆ. ಯುಕ್ತಿಯಲ್ಲಿ ಏನೂ ಹುರುಳಿಲ್ಲದ್ದ ರಿಂದ ಪ್ರತಿವಾದಿಯು ಅದನ್ನು ಖಂಡಿಸುತ್ತಾ ಈ ನ್ಯಾಯವನ್ನು ಉದಾ ಹರಿಸುತ್ತಾನೆ. ಇದನ್ನು ಕುಶಕಾಶಾವಲಂಬನನ್ಯಾಯವೆಂದೂ ಹೇಳುತ್ತಾರೆ.

## 58. ಕಿಮಾರ್ದ್ರಕವಣಿಜೋ ವಹಿತ್ರಚಿಂತಯಾ

ಆರ್ದ್ರಕವೆಂದರೆ ಹಸಿಶುಂಠಿ, ವಹಿತ್ರವೆಂದರೆ ಹಡಗು. ಶುಂಠಿ ಮಾರುವವನಿಗೆ ಹಡಗಿನ ಚಿಂತೆಯೇಕೆ ? ಶುಂಠಿಯು ಕೊತ್ತಂಬರಿಸೊಪ್ಪಿ ನಂತೆ ಚಿಲ್ಲರೆ ವ್ಯಾಪಾರದ ವಸ್ತು. ಅದನ್ನು ಮಾರುವವನಿಗೆ ಹಡಗು ಬಂದರೇನು ? ಹೋದರೇನು ? ಬಡವನಿಗೆ ಬಂಗಾರದ ಬೆಲೆ ಏರಿದರೇನು? ಇಳಿದರೇನು ?

## 59. ಕುಡ್ಯಂ ವಿನಾ ಚಿತ್ರಕರ್ಮನ್ಯಾಯ

ಗೋಡೆಯಿಲ್ಲದೆ ಚಿತ್ರವನ್ನು ಬರೆದ ಹಾಗೆ. ನಿರಾಧಾರವಾದ ಊಹೆಯನ್ನು ಇದು ಸೂಚಿಸುತ್ತದೆ. ತಳಪಾಯವಿಲ್ಲದೆ ಮನೆಯನ್ನು ಕಟ್ಟಿದ ಹಾಗೆ. ಮೊಲದ ಕೊಂಬು ಎಷ್ಟು ಉದ್ದವಿದೆ, ಬಂಜೆಯ ಮಗನು ಬುದ್ಧಿವಂತನೆ, ಆಕಾಶಪುಷ್ಪದಲ್ಲಿ ಸುವಾಸನೆಯುಂಟೆ—ಮುಂತಾದ ಮಾತು ಗಳೂ ಈ ಅಭಿಪ್ರಾಯವನ್ನು ವರ್ಣಿಸುತ್ತವೆ.

## 60. ಕುಲ್ಯಾಪ್ರಣಯನನ್ಯಾಯ

ಕುಲ್ಯಾ ಎಂದರೆ ಕಾಲುವೆ. ಕೆರೆಗೆ ಕಾಲುವೆಯನ್ನು ತೋಡಿ ಹೊಲಕ್ಕೆ ನೀರನ್ನು ಹಾಯಿಸುತ್ತಾರೆ. ಮುಖ್ಯೋದ್ದೇಶ ವ್ಯವಸಾಯ. ಆ ಕಾಲುವೆಯ ನೀರನ್ನು ಕುಡಿಯುವುದಕ್ಕೂ ಉಪಯೋಗಿಸಬಹುದು. ಅದರಲ್ಲಿ ಬಟ್ಟೆಯನ್ನೂ ಒಗೆಯಬಹುದು. ಸ್ನಾನವನ್ನೂ ಮಾಡಬಹುದು. ಒಂದು ಕೆಲಸದ ಮುಖ್ಯ ಪ್ರಯೋಜನ ಬೇರೆ ಇದ್ದರೂ ಆನುಷಂಗಿಕವಾಗಿ

ಅನೇಕ ಪ್ರಯೋಜನಗಳು ಒದಗಬಹುದು. ಅದಕ್ಕೆ ದೃಷ್ಟಾಂತವಾಗಿ ಈ ನ್ಯಾಯವನ್ನು ಉಪಯೋಗಿಸುತ್ತಾರೆ.

## 61. ಕೂಪಖಾನಕನ್ಯಾಯ

ಬಾವಿ ತೋಡುವ ಕೆಲಸಗಾರನ ಕೈಕಾಲುಗಳು ಕೆಸರಿನಿಂದ ಕೊಳೆಯಾಗುವುವು. ಅನಂತರ ಅದೇ ಬಾವಿಯಲ್ಲಿ ದೊರೆವ ನೀರಿನಿಂದ ಕೈಕಾಲುಗಳನ್ನು ತೊಳೆದುಕೊಳ್ಳಬಹುದು. ನೀರನ್ನು ಕುಡಿದು ಶ್ರಮವನ್ನೂ ಪರಿಹರಿಸಿಕೊಳ್ಳಬಹುದು. ಒಂದು ಕಾರ್ಯದಿಂದ ಉಂಟಾಗಬಹುದಾದ ದೋಷವನ್ನು ಅದೇ ಕಾರ್ಯದಿಂದ ಪರಿಹರಿಸಿಕೊಂಡು ಹೆಚ್ಚಿನ ಗುಣವನ್ನು ಪಡೆಯುವಾಗ ಈ ನ್ಯಾಯವನ್ನು ಉಪಯೋಗಿಸಬಹುದು. ಹೇಗೆಂದರೆ, ಒಂದು ಪ್ರತಿಮೆಯನ್ನು ದೇವರೆಂದು ಭಾವಿಸಿ ಪೂಜಿಸುತ್ತೇವೆ. ಸರ್ವವ್ಯಾಪಿಯಾದ ಭಗವಂತನನ್ನು ಪ್ರತಿಮೆಯೆಂದು ಅಥವಾ ಪ್ರತಿಮೆಯಲ್ಲಿ ಮಾತ್ರ ಇರುವನೆಂದೂ ಭಾವಿಸುವುದರಿಂದ ದೋಷ ಉಂಟಾಗಬಹುದು. ಹಾಗೆಯೇ ಒಬ್ಬ ಭಗವಂತನನ್ನು ಶಿವ, ವಿಷ್ಣು, ಗಣೇಶ, ಮುಂತಾಗಿ ನಾನಾ ವಿಧವಾಗಿ ಕಲ್ಪಿಸುವುದರಿಂದಲೂ ದೋಷ ಉಂಟಾಗಬಹುದು. ಆದರೆ ಪ್ರತಿಮೆಯನ್ನೇ ಭಕ್ತಿಯಿಂದ ಆರಾಧಿಸುವುದರಿಂದ ಉಂಟಾಗುವ ಪುಣ್ಯವು ಆ ದೋಷವನ್ನು ನಾಶಗೊಳಿಸಿ ಇನ್ನೂ ಹೆಚ್ಚಿನ ಶ್ರೇಯಸ್ಸಿಗೆ ಕಾರಣವಾಗುತ್ತದೆ.

## 62. ಕೂಪಮಂಡೂಕನ್ಯಾಯ

"ಬಾವಿಯಲ್ಲಿರುವ ಕಪ್ಪೆಯ ನ್ಯಾಯ." ವಿವಿಧ ಶಾಸ್ತ್ರಜ್ಞಾನವಾಗಲಿ ಅಥವಾ ಪ್ರಪಂಚದ ವಿಶಾಲ ಅನುಭವವಾಗಲಿ ಇಲ್ಲದ ಮೂಢನಿಗೆ ಈ ನ್ಯಾಯ ಅನ್ವಯಿಸುತ್ತದೆ. ಬಾವಿಯಲ್ಲಿರುವ ಕಪ್ಪೆ ಪ್ರಪಂಚವೆಂದರೆ ಬಾವಿಯೆಂದೇ ಭಾವಿಸಿರುತ್ತದೆ. ಅದಕ್ಕೆ ಹೊರಗಿನ ಜಗತ್ತಿನ ಪರಿಚಯವಿಲ್ಲ. ಈ ಅಭಿಪ್ರಾಯವನ್ನು ಸೂಚಿಸುವುದಕ್ಕೆ ಕೂಪಕಚ್ಛಪ (ಬಾವಿಯಲ್ಲಿರುವ ಆಮೆ), ಉದುಂಬರಕೃಮಿ (ಅತ್ತಿ ಹಣ್ಣಿನೊಳಗಿರುವ ಹುಳು) ಎಂಬ ಶಬ್ದಗಳನ್ನೂ ಉಪಯೋಗಿಸುತ್ತಾರೆ.

## 63. ಕೃತಕ್ಷೌರಸ್ಯ ನಕ್ಷತ್ರಪರೀಕ್ಷಾ

ಕ್ಷೌರ ಮಾಡಿಸಿಕೊಂಡ ಮೇಲೆ ಈ ದಿನ ನಕ್ಷತ್ರ ಯಾವುದೆಂದು ವಿಚಾರಿಸಿದನಂತೆ ! ಮದುವೆಯಾದ ಮೇಲೆ ಜಾತಕವನ್ನು ತಾಳೆ ನೋಡಿದನಂತೆ ! ಅಥವಾ ಮದುವೆಯಾದ ಮೇಲೆ ಹುಡುಗಿಗೆ ಮೆಳ್ಳಗಣ್ಣೆಂದು ಪರೀಕ್ಷೆ ಮಾಡಿದನಂತೆ ! ಮೊದಲು ಮಾಡಬೇಕಾದ ಕೆಲಸವನ್ನು ಮೊದಲು

ಮಾಡಬೇಕು ; ಕಳೆದುಹೋದುದಕ್ಕಾಗಿ ಚಿಂತಿಸಿ ಫಲವಿಲ್ಲ ಎಂಬುದನ್ನು ಈ ನ್ಯಾಯ ಬೋಧಿಸುತ್ತದೆ. "ನಹಿ ವಿವಾಹಾನಂತರಂ ವರಪರೀಕ್ಷಾ" ನ್ಯಾಯವನ್ನು ನೋಡಿ.

## 64. ಕೈಮುತಿಕನ್ಯಾಯ

ದೊಡ್ಡ ಕಾರ್ಯವನ್ನು ಸಾಧಿಸಿದವನು ಅದಕ್ಕಿಂತ ಚಿಕ್ಕದಾದ ಕಾರ್ಯವನ್ನು ಸಾಧಿಸಬಲ್ಲನೆಂಬುದು ಅರ್ಥಾತ್ ಸಿದ್ಧವಾಗುತ್ತದೆ. ಮಹತ್ತನ್ನೇ ಸಾಧಿಸಿದವನಿಗೆ ಅಲ್ಪವು ಕಿಮುತ—ಯಾವ ಲೆಕ್ಕ ? ಎಂಬ ಅಭಿಪ್ರಾಯ ಇಲ್ಲಿದೆ. ಅರ್ಥಾಪತ್ತಿ ಎಂಬ ಒಂದು ಅಲಂಕಾರವಿದೆ. ಅದರ ಲಕ್ಷಣ ಹೀಗೆ—

ಕೈಮುತ್ಯೇನಾರ್ಥಸಂಸಿದ್ಧಿಃ ಕಾವ್ಯಾರ್ಥಾಪತ್ತಿರಿಷ್ಯತೇ ॥

ಕೈಮುತಿಕನ್ಯಾಯದಿಂದ ವಸ್ತುಸಿದ್ಧಿ ಮಾಡುವುದು ಕಾವ್ಯದಲ್ಲಿ ಅರ್ಥಾಪತ್ತಿ ಎಂಬ ಅಲಂಕಾರವೆನಿಸುತ್ತದೆ.

ಉದಾಹರಣೆ :

ಸ ಜಿತಸ್ತ್ವನ್ಮುಖೇನೇಂದುಃ ಕಾ ವಾರ್ತಾ ನರಸೀರುಹಾಂ ॥

"ನಿನ್ನ ಮುಖದಿಂದ ಆ ಚಂದ್ರನೇ ಪರಾಜಿತನಾಗಿದ್ದಾನೆ. ಇನ್ನು ಕಮಲಗಳ ವಿಷಯ ಏನಿದೆ ?"

ಕಮಲಗಳನ್ನು ಸೋಲಿಸತಕ್ಕವನು ಚಂದ್ರ. ಚಂದ್ರನನ್ನೇ ಗೆದ್ದಿರುವ ಮುಖ ಕಮಲಗಳನ್ನು ಜಯಿಸಬಲ್ಲದೆಂದು ಹೇಳತಕ್ಕದ್ದೇ ಇಲ್ಲ.

ಸಮುದ್ರವನ್ನೇ ಲಂಘಿಸಿದ ಹನುಮಂತನಿಗೆ ಕೆರೆ ಯಾವ ಲೆಕ್ಕಕ್ಕೆ ?

## 65. ಕ್ಷೀರನೀರನ್ಯಾಯ

ಹಾಲು, ನೀರುಗಳಿಗೆ ಬಹಳ ಮೈತ್ರಿ ! ಒಂದರಲ್ಲೊಂದು ಚೆನ್ನಾಗಿ ಹೊಂದಿಕೊಳ್ಳುವುದು. ಈ ನ್ಯಾಯವನ್ನು ಅನ್ಯೋನ್ಯ ಹೊಂದಾಣಿಕೆಯನ್ನು ಸೂಚಿಸುವುದಕ್ಕೆ ಉಪಯೋಗಿಸುತ್ತಾರೆ. ಮಿಶ್ರಣದಲ್ಲಿ ಸಂಸೃಷ್ಟಿ, ಸಂಕರ ಎಂದು ಎರಡು ವಿಧ. ಎರಡು ವಸ್ತುಗಳು ಸೇರಿಕೊಂಡಾಗ ಅವು ಬೇರೆ ಬೇರೆ ಎಂದು ಭೇದವು ತೋರುತ್ತಲಿದ್ದರೆ ಸಂಸೃಷ್ಟಿ ಎನಿಸುವುದು. ಅಕ್ಕಿ, ಎಳ್ಳು ಸೇರಿದ ಹಾಗೆ. ಇದಕ್ಕೆ ತಿಲತಂಡುಲ ನ್ಯಾಯವೆಂದು ಹೆಸರು. ಭೇದವು ತೋರದಿದ್ದರೆ ಅದು ಕ್ಷೀರನೀರ ನ್ಯಾಯವಾಗಿ ಸಂಕರವೆನಿಸುತ್ತದೆ. ಈ ನ್ಯಾಯಗಳನ್ನವಲಂಬಿಸಿ ಅಲಂಕಾರಿಕರು ಮಿಶ್ರಾಲಂಕಾರಗಳಲ್ಲಿ ಅಲಂಕಾರ ಸಂಸೃಷ್ಟಿ, ಅಲಂಕಾರಸಂಕರಗಳೆಂದು ಎರಡು ಭೇದಗಳನ್ನು ಹೇಳುತ್ತಾರೆ.

## 66. ಕ್ಷೀರಸೌವೀರನ್ಯಾಯ

ಅಜೀರ್ಣವಾಗಿ ಬಾಯಿ ರುಚಿ ಇಲ್ಲದವನಿಗೆ ಹಾಲು ಹಿಡಿಸದು. ಅವನಿಗೆ ಉಪ್ಪು, ಹುಳಿ ಸೇರಿದ ಗಂಜಿ (ಸೌವೀರ)ಯೇ ರುಚಿಯೆನಿಸುವುದು ! ಶ್ರೇಷ್ಠವಾದ ಪದಾರ್ಥವೂ ಕೂಡ ಕೆಲವು ವೇಳೆ ಬೇಡವೆನಿಸಬಹುದು. ಅದಕ್ಕೆ ಪುರುಷ ದೋಷ ಕಾರಣವೇ ವಿನಾ ಪದಾರ್ಥ ದೋಷ ಕಾರಣವಲ್ಲ. ಆ ಪದಾರ್ಥವನ್ನು ಅತಿಯಾಗಿ ಉಪಯೋಗಿಸುವುದರಿಂದಲೂ ಅದರ ಬಗೆಗೆ ತಿರಸ್ಕಾರ ಬುದ್ಧಿಯುಂಟಾಗಬಹುದು. ಶಾಕುಂತಲನಾಟಕದಲ್ಲಿ ಇದಕ್ಕೆ ಒಂದು ಒಳ್ಳೆಯ ಉದಾಹರಣೆ ದೊರಕುತ್ತದೆ. ದುಷ್ಯಂತನು ಋಷಿಕನ್ಯೆ ಶಕುಂತಲೆಯಲ್ಲಿ ಅನುರಕ್ತನಾಗಿದ್ದಾನೆ. ಅಂತಃಪುರದಲ್ಲಿರುವ ನಾಗರಿಕ ಸುಂದರಿಯರು ಅವನಿಗೆ ಬೇಡವಾಗಿದ್ದಾರೆ. ಇದನ್ನರಿತ ವಿದೂಷಕನು ದುಷ್ಯಂತನೊಡನೆ ವಿನೋದವಾಗಿ ಹೇಳುತ್ತಾನೆ. 'ಮಿತ್ರ, ಖರ್ಜೂರದ ಹಣ್ಣನ್ನು ಸ್ವೇಚ್ಛೆಯಾಗಿ ಮೆದ್ದರೆ ಹುಣಿಸೆಹಣ್ಣನ್ನು ತಿನ್ನಬೇಕೆನಿಸುತ್ತದೆ !"

## 67. ಖಲೇ ಕಪೋತನ್ಯಾಯ

ಖಲವೆಂದರೆ ಧಾನ್ಯಗಳನ್ನು ಒಕ್ಕುವ ಸ್ಥಳ; ಕಣ ಎಂದು ಹೇಳುತ್ತಾರೆ. ಅಲ್ಲಿರುವ ಕಾಳುಗಳನ್ನು ತಿನ್ನಲು ಪಾರಿವಾಳಗಳು ನಾನು ಮುಂದು ತಾನು ಮುಂದು ಎಂದು ಎರಗುತ್ತವೆ. ಒಂದು ಕಾರ್ಯವನ್ನು ಸಾಧಿಸುವುದಕ್ಕೆ ಅನೇಕ ವಸ್ತುಗಳು ಮುನ್ನುಗ್ಗಿ ಸಹಕರಿಸುವಾಗ ಈ ನ್ಯಾಯವನ್ನು ಉಪಯೋಗಿಸುತ್ತಾರೆ.

ಉದಾಹರಣೆ : ಕುಲಂ ರೂಪಂ ವಯೋ ವಿದ್ಯಾ ಧನಂ ಚ ಮದಯಂತ್ಯಮುಮ್ ॥ ಉತ್ತಮ ವಂಶ, ರೂಪ, ಯೌವನ, ವಿದ್ಯೆ, ಐಶ್ವರ್ಯಗಳು ಇವನಿಗೆ ಖಲೇ ಕಪೋತನ್ಯಾಯದಂತೆ ಮದವನ್ನು ಉಂಟು ಮಾಡಿವೆ.

ಮನುಷ್ಯನಿಗೆ ಮದ ಉಂಟಾಗಲು ಇವುಗಳಲ್ಲಿ ಒಂದು ಸಾಕು. ಇವುಗಳೆಲ್ಲಾ ಒಂದರಮೇಲೊಂದು ಸೇರಿದರೆ ಅವನನ್ನು ಹಿಡಿದು ನಿಲ್ಲಿಸುವವರು ಯಾರು ?

## 68. ಖಲ್ವಾಟಬಿಲ್ವೀಯನ್ಯಾಯ

ಬೋಳುದಲೆ ಮನುಷ್ಯನಿಗೆ ಖಲ್ವಾಟನೆಂದು ಹೆಸರು. ಅವನು ತನ್ನ ಪಾಡಿಗೆ ಹೋಗುತ್ತಿದ್ದಾಗ ಒಂದು ಬಿಲ್ವಪತ್ರೆಯ ಕಾಯಿ ಅವನ ತಲೆಯ ಮೇಲೆ ದೊಪ್ಪೆಂದು ಬಿದ್ದಿತಂತೆ ! 'ಭಾಗ್ಯಹೀನನು ಎಲ್ಲಿಗೆ

ಹೋದರೂ ವಿಪತ್ತು ಕಾದಿರುತ್ತದೆ. ಪಾಪಿ ಸಮುದ್ರಕ್ಕೆ ಹೋದರೂ ಮೊಳಕಾಲು ನೀರು.

## 69. ಗಗನರೋಮಂಥನ್ಯಾಯ

ಆಕಾಶವನ್ನು ಮೆಲಕು ಹಾಕುವ ನ್ಯಾಯ. ಆಕಾಶವನ್ನು ಅಗಿಯುತ್ತಿದ್ದರೆ ಬರುವ ಲಾಭವೇನು ? ವೃಥಾ ಶ್ರಮ. ಗಾಳಿಯನ್ನು ಗುದ್ದಿದ ಹಾಗೆ. Beating the air ಎಂಬ ಆಂಗ್ಲ ನುಡಿಗೆ ಸಮಾನವಾದದ್ದು.

## 70. ಗಡ್ಡರಿಕಾಪ್ರವಾಹನ್ಯಾಯ

ಗಡ್ಡರಿಕಾ ಎಂದರೆ ಕುರಿಯ ಮಂದೆ. ಕುರಿಗಳು ಸಾಲುಗಟ್ಟಿ ಪ್ರವಾಹದಂತೆ ಸಾಗುತ್ತವೆ. ಮುಂದಿನ ಕುರಿ ಹಳ್ಳಕ್ಕೆ ಬಿದ್ದರೆ ಹಿಂದಿನದೂ ಬೀಳುತ್ತದೆ. ಸ್ವಬುದ್ಧಿಯಿಂದ ವಿಚಾರ ಮಾಡದೆ ಮೂರ್ಖತನದಿಂದ ಇನ್ನೊಬ್ಬರನ್ನು ಅನುಕರಿಸುವುದನ್ನು ವರ್ಣಿಸಲು ಈ ನ್ಯಾಯ ಉಪಯೋಗಿಸಲ್ಪಡುವುದು. ಅಂಧಪರಂಪರಾನ್ಯಾಯದಂತೆಯೇ ಇದರ ವಿನಿಯೋಗ.

## 71. ಗತಾನುಗತಿಕೋ ಲೋಕೋ ನ ಲೋಕಃ ಪಾರಮಾರ್ಥಿಕಃ

ಲೋಕದಲ್ಲಿ ಒಬ್ಬರನ್ನು ನೋಡಿ ಇನ್ನೊಬ್ಬರು ಅನುಕರಿಸುತ್ತಾರೆಯೇ ಹೊರತು ಪರಮಾರ್ಥವೇನೆಂದು ವಿಚಾರ ಮಾಡುವುದಿಲ್ಲ. ಎಲ್ಲ ವ್ಯವಹಾರದಲ್ಲಿಯೂ ಅನುಕರಣೆ ಹೆಚ್ಚು. ಇನ್ನೊಬ್ಬರು ಮಾಡುತ್ತಾರೆಂದು ನಾವು ಮಾಡುವುದೇಕೆ ? ಅದರಿಂದ ನಮಗೆ ಹಿತ ಉಂಟೆ ? ಎಂದು ವಿಚಾರಮಾಡುವುದಿಲ್ಲ.

ಒಬ್ಬ ಬ್ರಾಹ್ಮಣ ಗಂಗಾನದಿಯಲ್ಲಿ ಸ್ನಾನ ಮಾಡಿದ. ಅವನಿಗೆ ನಗರದೊಳಗೆ ಹೋಗಿಬರಬೇಕಾದ ಕೆಲಸವಿತ್ತು. ತನ್ನ ತಾಮ್ರದ ಚೊಂಬನ್ನು ಮರಳರಾಶಿಯಲ್ಲಿ ಹೂತು, ಗುರುತಿಗಾಗಿ ಅದರ ಮೇಲೆ ಪಿಂಡಾಕಾರದ ಎರಡು ಮರಳು ಗುಡ್ಡೆಗಳನ್ನು ನಿರ್ಮಿಸಿ ಹೊರಟುಹೋದ. ಸ್ನಾನಕ್ಕೆ ಬಂದಿದ್ದ ಒಬ್ಬ ಯಾತ್ರಿಕನು 'ಇದು ಇಲ್ಲಿಯ ಪದ್ಧತಿಯಿರಬೇಕು' ಎಂದುಕೊಂಡು ತಾನೂ ಮರಳುಗುಡ್ಡೆಗಳನ್ನು ಮಾಡಿದ. ಅವನನ್ನು ನೋಡಿ ಉಳಿದವರೂ ಹಾಗೆಯೇ ಮಾಡುತ್ತಾ ಹೋದರು. ಬ್ರಾಹ್ಮಣನು ಹಿಂದಿರುಗಿ ಬಂದು ನೋಡಲಾಗಿ, ಎಲ್ಲೆಲ್ಲಿಯೂ ಮರಳು ಗುಡ್ಡೆಗಳೇ ! ತನ್ನ ಚೊಂಬು ಎಲ್ಲಿದೆಯೆಂದು ಪತ್ತೆ ಮಾಡಲಾಗಲಿಲ್ಲ. ನಿರಾಸೆಯಿಂದ ಹೀಗೆ ಉದ್ಗರಿಸಿದನಂತೆ :

ಗತಾನುಗತಿಕೋ ಲೋಕೋ ನ ಲೋಕಃ ಪಾರಮಾರ್ಥಿಕಃ ।
ಪಿಂಡದ್ವಯಪ್ರದಾನೇನ ಗತಂ ಮೇ ತಾಮ್ರಭಾಜನಂ ॥

## 72. ಗಂಡಸ್ಯೋಪರಿ ಪಿಟಕಃ ಸಂವೃತ್ತಃ

ಹುಣ್ಣಿನ ಮೇಲೆ ಕುರು ಎದ್ದ ಹಾಗೆ. ಕಷ್ಟದ ಮೇಲೆ ಕಷ್ಟ ಒದಗಿದಾಗ ಈ ನ್ಯಾಯವನ್ನು ಉಪಯೋಗಿಸುತ್ತಾರೆ. 'ಹುಣ್ಣಿನ ಮೇಲೆ ಬರೆ ಹಾಕಿದ ಹಾಗೆ' ಎಂಬ ಗಾದೆ ಇದೇ ಅಭಿಪ್ರಾಯವನ್ನು ಕೊಡುತ್ತದೆ.

## 73. ಗುಡಜಿಹ್ವಿಕಾನ್ಯಾಯ

ಮಕ್ಕಳಿಗೆ ಔಷಧವನ್ನು ಕುಡಿಸುವಾಗ ಮೊದಲು ಬೆಲ್ಲವನ್ನು ನೆಕ್ಕಿಸುವುದುಂಟು. ನಾಲಿಗೆಯಿಂದ ಬೆಲ್ಲವನ್ನು ಚಪ್ಪರಿಸುತ್ತಾ ಮಕ್ಕಳು ಔಷಧವನ್ನು ಕುಡಿಯುತ್ತವೆ. ಔಷಧ ಸಿಹಿಯಾಗಿದೆಯೆಂಬ ಕಲ್ಪನೆಯೂ ನಾಲಿಗೆಗೆ ಅದರ ಕಹಿ ಕಡಿಮೆಯಾಗಿ ತೋರುವುದೂ ಅದಕ್ಕೆ ಕಾರಣ. ಪೂಜೆ, ಉಪಾಸನೆ ಮುಂತಾದ ಪುಣ್ಯಕಾರ್ಯಗಳಿಗೆ ಶಾಸ್ತ್ರದಲ್ಲಿ ನಾನಾಫಲಗಳನ್ನು ಹೇಳಿರುತ್ತಾರೆ. ಎಲ್ಲಾ ಫಲಗಳೂ ವಾಸ್ತವವಾಗಿ ದೊರೆಯುವುದಿಲ್ಲ. ಜನರಿಗೆ ಒಂದು ಪ್ರರೋಚನೆಯನ್ನುಂಟುಮಾಡಿ ಒಳ್ಳೆಯ ಕೆಲಸದಲ್ಲಿ ಅವರನ್ನು ತೊಡಗಿಸುವುದು ಶಾಸ್ತ್ರಕಾರರ ಉದ್ದೇಶ. ಫಲಶ್ರುತಿಗಳು ಗುಡಜಿಹ್ವಿಕಾನ್ಯಾಯದಿಂದ ಹೊರಟಿವೆಯೆಂದು ತಿಳಿಯಬೇಕು. ಕಾವ್ಯ ಪ್ರದೀಪದಲ್ಲಿ ಕಾವ್ಯಪ್ರಯೋಜನಗಳನ್ನು ಹೇಳುವಾಗ ಹೀಗೆ ಬರೆಯುತ್ತಾರೆ :

"ಸುಕುಮಾರಮತಿಗಳೂ, ಸುಖಿಗಳೂ ಆದ ರಾಜಕುಮಾರ ಮುಂತಾದವರಿಗೆ ನೀರಸವಾದ ನೀತಿಶಾಸ್ತ್ರವನ್ನು ಕಲಿಸಲು ಸಾಧ್ಯವಾಗುವುದಿಲ್ಲ. ಕಾವ್ಯವು ಅವರಿಗೂ ರುಚಿಯನ್ನು ಹುಟ್ಟಿಸಿ ಕಾಂತೆಯಂತೆ ಒಲಿಸಿಕೊಂಡು ಗುಡಜಿಹ್ವಿಕಾನ್ಯಾಯದಿಂದ ಮಕ್ಕಳಿಗೆ ಔಷಧವನ್ನು ಕುಡಿಸುವಂತೆ ಹಿತೋಪದೇಶವನ್ನು ಮಾಡುತ್ತದೆ."

## 74. ಗೋಪಗೃಹಿಣೀನ್ಯಾಯ

ಗೊಲ್ಲನ ಹೆಂಡತಿಯ ನ್ಯಾಯ. ಒಬ್ಬಳು ರಾಜನ ಮಡದಿಯಾಗಿ ಅಂತಃಪುರದಲ್ಲಿ ಸುಖವಾಗಿದ್ದಳು. ಅವಳು ವ್ಯಭಿಚಾರಿಣಿಯಾದ್ದರಿಂದ ಗಂಡನಿಗೆ ವಿಷವನ್ನಿಕ್ಕಿಕೊಂದು ಉಪಪತಿಯೊಡನೆ ಓಡಿಹೋದಳು. ಉಪಪತಿಯನ್ನು ಸರ್ಪವು ಕಡಿಯಲಾಗಿ ಸತ್ತುಹೋದನು. ಈ ಹೆಂಗಸು ಗತಿಇಲ್ಲದೆ ದೇಶಾಂತರಕ್ಕೆ ಹೋಗಿ ವೇಶ್ಯಾವೃತ್ತಿಯನ್ನು ಕೈಗೊಂಡಳು. ರಾಜನ ಮಡದಿಯಾಗಿದ್ದಾಗ ತಾನೇ ಹಡೆದಿದ್ದ ರಾಜಪುತ್ರನು ಆ

ದೇಶಕ್ಕೆ ಆಕಸ್ಮಾತ್ ಬಂದು ಈ ವೇಶ್ಯೆಯನ್ನು ಕೂಡಿದನು. ಅನಂತರ ತಾವು ತಾಯಿಮಕ್ಕಳೆಂಬುದು ಗೊತ್ತಾಯಿತು. ಆಗ ಪ್ರಾಯಃಶ್ಚಿತ್ತಕ್ಕಾಗಿ ಅವರಿಬ್ಬರೂ ಚಿತೆಯಲ್ಲಿ ಮಲಗಿ ಬೆಂಕಿ ಹಚ್ಚಿಕೊಂಡರು. ರಾಜಪುತ್ರನು ಸುಟ್ಟು ಮೃತನಾದನು. ಇವಳು ಚಿತೆಯಿಂದ ತಪ್ಪಿಸಿಕೊಂಡು ಓಡಿದಳು. ಸುಟ್ಟ ಗಾಯಗಳಿಂದ ನೊಂದ ಇವಳನ್ನು ಒಬ್ಬ ಗೊಲ್ಲ ಉಪಚರಿಸಿ ಗುಣ ಮಾಡಿದನು. ಆಮೇಲೆ ಇಬ್ಬರೂ ಮದುವೆಯಾದರು. ಗೊಲ್ಲನ ಹೆಂಡತಿಯಾಗಿ ಮಜ್ಜಿಗೆಯನ್ನು ಮಾರುತ್ತಾ ಈ ಹೆಂಗಸು ಜೀವಿಸಬೇಕಾಯಿತು. ಮಾರಲು ಒಯ್ಯುತ್ತಿದ್ದಾಗ ಒಂದು ದಿನ ಮಡಕೆ ಕೆಳಗೆ ಬಿದ್ದು ಒಡೆದು ಹೋಯಿತು. ಆಗ ಈ ಹೆಂಗಸು ಮಜ್ಜಿಗೆಗಾಗಿ ಅಳುತ್ತ ತನ್ನ ಹಿಂದಿನ ಎಲ್ಲ ವೃತ್ತಾಂತವನ್ನೂ ನೆನೆಸಿಕೊಂಡಳು. ತನ್ನ ಕೆಟ್ಟ ನಡತೆಯಿಂದ ಈಗ ಮಜ್ಜಿಗೆಗೆ ಅಳಬೇಕಾಯಿತೆಂದು ಅವಳಿಗೆ ಪಶ್ಚಾತ್ತಾಪವಾಯಿತಂತೆ. ಇದು ಆ ಸಂದರ್ಭವನ್ನು ಚಿತ್ರಿಸುವ ಶ್ಲೋಕ.

ಹತ್ವಾ ನೃಪಂ ಪತಿಮವಾಪ್ಯ ಭುಜಂಗದಷ್ಟಂ
ದೇಶಾಂತರೇ ವಿಧಿವಶಾತ್ ಗಣಿಕಾಸ್ಮಿ ಜಾತಾ ।
ಪುತ್ರಂ ಸ್ವಕಂ ಸಮಧಿಗಮ್ಯ ಚಿತಾಂ ಪ್ರವಿಷ್ಟಾ
ಶೋಚಾಮಿ ಗೋಪಗೃಹಿಣೀ ಕಥಮದ್ಯ ತಕ್ರಂ ॥

ಒಂದರ ಮೇಲೆ ಒಂದು ವಿಪತ್ತು ಬಂದಾಗ, ದುರ್ಗತಿಯಿಂದ ದುರ್ಗತಿಗೆ ಇಳಿಯುತ್ತ ಹೋದಾಗ, ಈ ನ್ಯಾಯ ಉಪಯುಕ್ತವಾಗುತ್ತದೆ.

## 75. ಗೋಮಯಪಾಯಸೀಯನ್ಯಾಯ

ಪಾಯಸ ಪಯಸ್ಸಿನಿಂದ (ಹಾಲಿನಿಂದ) ಆಗುತ್ತದೆ. ಪಯಸ್ಸು (ಹಾಲು) ಹಸುವಿನಿಂದ ದೊರೆಯುತ್ತದೆ—ಎಂದರೆ ಹಸುವಿನಿಂದ ದೊರೆಯತಕ್ಕದ್ದು ಪಾಯಸವೆಂದು ನಿಶ್ಚಯವಾಯಿತು. ಗೋಮಯ (ಸಗಣಿ) ಹಸುವಿನಿಂದ ದೊರೆಯುತ್ತದೆ. ಆದ್ದರಿಂದ ಗೋಮಯವೂ ಪಾಯಸವೇ ಸರಿ! ಹೇಗಿದೆ ತರ್ಕ ಸರಣಿ! ಈ ಬಗೆಯ ತರ್ಕಕ್ಕೆ ಹೇತ್ವಾಭಾಸ ಎನ್ನುತ್ತಾರೆ. ಹೇತ್ವಾಭಾಸದಿಂದ ಮಾಡುವ ನಿರ್ಣಯ ಪ್ರಾಮಾಣಿಕವಲ್ಲ. ಅದನ್ನು ಅಂಗೀಕರಿಸಕೂಡದು.

## 76. ಗೋಬಲೀವರ್ದನ್ಯಾಯ

ಇಲ್ಲಿ ಗೋವೆಂದರೆ ಎತ್ತು, ಹಸುವಲ್ಲ. ಬಲೀವರ್ದವೆಂದರೂ ಎತ್ತು. "ಗೋವುಗಳನ್ನೂ, ಬಲೀವರ್ದವನ್ನೂ ಹೊಡೆದುಕೊಂಡು ಹೋಗು" ಮುಂತಾದ ಪ್ರಯೋಗಗಳು ಬಳಕೆಯಲ್ಲಿವೆ. ಗೋವೆಂದರೇ ಸಾಕು; ಪುನಃ ಬಲೀವರ್ದವೆಂದು ಹೇಳಿದ್ದೇಕೆ ? ಆದ್ದರಿಂದ ಈ ವಾಕ್ಯ

ದಲ್ಲಿ ಬಲೀವರ್ದವೆಂದರೆ ವಿಶೇಷರೀತಿಯ ಗೋವೆಂದು ತಿಳಿಯಬೇಕು. ಬಹಳ ಬಲಶಾಲಿಯಾದ, ಹತ್ತಿರ ಹೋದವರನ್ನು ಹಾಯುವ ಸೊಕ್ಕಿದ ಹೋರಿಯೆಂದು ಅರ್ಥವಾಗಬಹುದು. ಯಾವುದೋ ಒಂದು ವೈಶಿಷ್ಟ್ಯ ವನ್ನು ತೋರಿಸುವುದಕ್ಕಾಗಿ ಇಂತಹ ಪ್ರಯೋಗಗಳನ್ನು ಮಾಡುವು ದುಂಟು. ಇದು ಪುನರುಕ್ತಿ ದೋಷವಲ್ಲ. "ಬ್ರಿಟಿಷರ ಯೋಜನೆಯನ್ನು ಕಾಂಗ್ರೆಸ್ ನಾಯಕರೂ, ಗಾಂಧೀಜಿಯವರೂ ಒಪ್ಪಿದರು; ಉತ್ಸವಕ್ಕೆ ಎಲ್ಲಾ ಮಂತ್ರಿಗಳೂ, ಮುಖ್ಯಮಂತ್ರಿಗಳೂ ಬಂದಿದ್ದರು." ಈ ವಾಕ್ಯಗಳಲ್ಲಿ ಗೋಬಲೀವರ್ದ ನ್ಯಾಯವನ್ನನುಸರಿಸಿ ಗಾಂಧೀಜಿಯವರನ್ನೂ ಮುಖ್ಯ ಮಂತ್ರಿಗಳನ್ನೂ ಸೇರಿಸಿದೆ. ಬ್ರಾಹ್ಮಣವಸಿಷ್ಠ ನ್ಯಾಯ, ಬ್ರಾಹ್ಮಣ ಪರಿವ್ರಾಜಕ ನ್ಯಾಯಗಳೂ ಇದೇ ಅರ್ಥದಲ್ಲಿ ಉಪಯೋಗಿಸಲ್ಪಡುತ್ತವೆ. ಅಲ್ಲದೆ ಗೋವೆಂದರೆ ಹಸು ಎಂಬ ಅರ್ಥ ಪ್ರಸಿದ್ಧ. ಗೋವುಗಳು ಎಂದಾಗ 'ಎತ್ತು' ಎಂಬ ಅರ್ಥ ತೋರದೆ ಹೋದೀತು. ಆದ್ದರಿಂದ ಬಲೀವರ್ದ ಎಂದು ಪುನಃ ಹೇಳಬೇಕಾಗುವುದು. ಆದ್ದರಿಂದ ಇದು ಪುನರುಕ್ತಿಯಲ್ಲ.

## 77. ಘಟಪ್ರದೀಪನ್ಯಾಯ

ಗಡಿಗೆಯ ಮಧ್ಯದಲ್ಲಿ ದೀಪವನ್ನು ಇಟ್ಟರೆ ಅದರ ಪ್ರಕಾಶ ಮಿತ ವಾಗಿರುತ್ತದೆ. ಗಡಿಗೆಯ ಒಳಭಾಗ ಮಾತ್ರ ಬೆಳಗುವುದು. ಹರಡುವ ಪ್ರಕಾಶವನ್ನು ಗಡಿಗೆ ತಡೆ ಹಿಡಿಯುವುದು. ಗಡಿಗೆಗೆ ಪ್ರತಿಬಿಂಬನ ಶಕ್ತಿ ಇಲ್ಲ. ಗಾಜಿನ ಚಿಮಣಿಯ ಮಧ್ಯದಲ್ಲಿದ್ದರೆ ಆ ದೀಪ ಒಳಗೂ ಹೊರಗೂ ಪ್ರಕಾಶವನ್ನು ನೀಡುವುದು. ಲೋಭಿಯ ಹಣ ಇದಕ್ಕೆ ದೃಷ್ಟಾಂತ. ಅವನ ಹಣ ತನ್ನ ಮಟ್ಟಿಗೆ ಉಪಯುಕ್ತವಾದೀತು. ಪರೋಪಕಾರ ವೆಂಬುದು ಇಲ್ಲವೇ ಇಲ್ಲ. ಆ ಹಣವೂ ಗಡಿಗೆಯ ದೀಪದಂತೆ ಮಂಕಾಗಿ ಒಳಗೇ ಅಡಗಿರುವುದು. ಉದಾರಿಯ ಹಣ ಗಾಜಿನ ಚಿಮಣಿಯ ದೀಪ ದಂತೆ ಉಜ್ವಲವಾಗಿ ಪ್ರಕಾಶಿಸಿ ನಾಲ್ಕು ಜನರಿಗೆ ಉಪಯುಕ್ತವಾಗುತ್ತದೆ.

ಈ ನ್ಯಾಯಕ್ಕೆ ಇನ್ನೊಂದು ಬಗೆಯಲ್ಲಿಯೂ ಅರ್ಥವನ್ನು ಹೇಳಿ ದ್ದಾರೆ. ಕತ್ತಲಲ್ಲಿ ಗಡಿಗೆಯಿದೆ. ದೀಪವನ್ನು ತಂದಾಗ ಗಡಿಗೆ ಕಾಣಿಸು ತ್ತದೆ. ಗಡಿಗೆ ಕಂಡ ಮೇಲೂ ದೀಪದ ಪ್ರಕಾಶ ಇದ್ದೇ ಇರುವುದು. ಎಂದರೆ ದೀಪಪ್ರಕಾಶ ಗಡಿಗೆಯ ಜ್ಞಾನವನ್ನುಂಟುಮಾಡಿದ ಮೇಲೂ ಇರುವುದು. ಕಾರಣದಿಂದ ಕಾರ್ಯ ಹುಟ್ಟಿದಮೇಲೆ ಕಾರಣ ನಾಶವಾಗ ಬೇಕಾಗಿಲ್ಲ. ಅಲಂಕಾರ ಶಾಸ್ತ್ರದಲ್ಲಿ ವಾಚ್ಯ, ಲಕ್ಷ್ಯ, ವ್ಯಂಗ್ಯವೆಂದು ಅರ್ಥ ವನ್ನು ಮೂರು ವಿಭಾಗಗಳನ್ನಾಗಿ ಮಾಡಿದ್ದಾರೆ. ವಾಚ್ಯಾರ್ಥದಿಂದ ವ್ಯಂಗ್ಯಾರ್ಥ ಧ್ವನಿಸುವುದು. ವ್ಯಂಗ್ಯಾರ್ಥ ತಿಳಿದಮೇಲೂ ಅದಕ್ಕೆ ಕಾರಣ

ವಾದ ವಾಚ್ಯಾರ್ಥದ ಜ್ಞಾನ ಉಳಿದಿರುತ್ತದೆ. ಉದಾಹರಣೆ : ಕೆಲಸಗಾರರನ್ನು ಕುರಿತು 'ಐದು ಗಂಟೆ ಹೊಡೆಯಿತು' ಎಂದು ಹೇಳಿದಾಗ ಅವರಿಗೆ 'ಐದು ಗಂಟೆಯಾಯಿತು' ಎಂದು ಒಂದು ಅರ್ಥ ಮೊದಲು ತಿಳಿಯುತ್ತದೆ. ಇದು ವಾಚ್ಯಾರ್ಥ. ಅನಂತರ 'ಕೆಲಸವನ್ನು ಬಿಟ್ಟು ಮನೆಗೆ ಹೊರಡಬಹುದು' ಎಂಬ ಇನ್ನೊಂದು ಅರ್ಥ ಧ್ವನಿತವಾಗುತ್ತದೆ. ಅದು ವ್ಯಂಗ್ಯಾರ್ಥ. ಈ ಅರ್ಥದ ಜೊತೆಯಲ್ಲಿ 'ಐದು ಗಂಟೆಯಾಯಿತು' ಎಂಬ ವಾಚ್ಯಾರ್ಥವೂ ಏಕಕಾಲದಲ್ಲಿ ತೋರುವುದು.

## 78. ಘಟಾಯೋನ್ಮೀಲಿತಂ ಚಕ್ಷುಃ ಪಟಂ ಕಿಂ ನಾವಲೋಕಯೇತ್

ಘಟವನ್ನು ನೋಡುವುದಕ್ಕಾಗಿ ತೆರೆದ ಕಣ್ಣು ಪಟವನ್ನು ನೋಡಲಾರದೆ ? ಕಣ್ಣನ್ನು ತೆರೆದಾಗ ಗಡಿಗೆ, ಬಟ್ಟೆ, ಇನ್ನಿತರ ವಸ್ತುಗಳೂ ಕಾಣಿಸಬಹುದು. ಒಂದೊಂದನ್ನೂ ನೋಡುವುದಕ್ಕಾಗಿ ಮತ್ತೆ ಮತ್ತೆ ಕಣ್ಣುಮುಚ್ಚಿ ತೆರೆಯಬೇಕಾಗಿಲ್ಲ. ಒಂದು ಕಾರ್ಯಕ್ಕಾಗಿ ಪರಸ್ಥಳಕ್ಕೆ ಹೋದಾಗ ಅಲ್ಲಿ ಬೇರೆ ಕಾರ್ಯಗಳಿದ್ದರೆ ಅವನ್ನೂ ಮುಗಿಸಿಕೊಂಡು ಬರುತ್ತಾರೆ. ಹೀಗೆ ಒಂದು ಪ್ರಯತ್ನಕ್ಕೆ ಆನುಷಂಗಿಕವಾಗಿ ಬೇರೆ ಪ್ರಯೋಜನವೂ ಲಭ್ಯವಾದಾಗ ಈ ನ್ಯಾಯ ಉಪಯುಕ್ತವಾಗುವುದು.

## 79. ಘಟೀಯಂತ್ರನ್ಯಾಯ

ಹಳ್ಳಿಗಾಡಿನಲ್ಲಿ ನೀರನ್ನು ತೋಟ ಗದ್ದೆಗಳಿಗೆ ಹಾಯಿಸುವುದಕ್ಕಾಗಿ ಬಾವಿಗಳಿಗೆ ಒಂದು ಬಗೆಯ ಘಟಚಕ್ರವನ್ನು ಜೋಡಿಸಿರುತ್ತಾರೆ. ಅದು ತಿರುಗುತ್ತಿರುವಾಗ ಕೆಲವು ಪಾತ್ರೆಗಳು ನೀರನ್ನು ಹೊತ್ತು ಮೇಲಕ್ಕೇರುತ್ತವೆ. ಅವು ನೀರನ್ನು ಭೂಮಿಯ ಮೇಲೆ ಚೆಲ್ಲಿ ಬರಿದಾಗಿ ಪುನಃ ಕೆಳಕ್ಕಿಳಿಯುತ್ತವೆ. ಹೀಗೆ ಸುತ್ತಾಟ ತಪ್ಪುವುದೇ ಇಲ್ಲ. ಇದೇ ರೀತಿಯಲ್ಲಿ ಜೀವಾತ್ಮರು ಸಂಸಾರಚಕ್ರದಲ್ಲಿ ಸುತ್ತುತ್ತಲಿದ್ದಾರೆ. ಹುಟ್ಟುವುದು, ಸಾಯುವುದು, ಇದ್ದೇ ಇದೆ. ಜನನದಿಂದ ಮರಣ ; ಮರಣದಿಂದ ಜನನ. ಘಟಚಕ್ರದ ಪಾತ್ರೆಯು ನೀರನ್ನು ಹೊತ್ತು ಭೂಮಿಗೆ ಬರುವಂತೆ ಪುಣ್ಯ ಪಾಪಗಳೆಂಬ ಪ್ರಾರಬ್ಧಕರ್ಮವನ್ನು ಹೊತ್ತು ನಾವು ಭೂಮಿಯಲ್ಲಿ ಜನಿಸುತ್ತೇವೆ. ಆ ಪಾತ್ರೆ ನೀರನ್ನು ಸುರಿದ ಮೇಲೆ ಪುನಃ ಕೆಳಕ್ಕಿಳಿಯುವಂತೆ ಪ್ರಾರಬ್ಧಕರ್ಮಭೋಗ ಮುಗಿದ ಕೂಡಲೇ ಮರಣ ಹೊಂದುತ್ತೇವೆ. ಪುನಃ ಸಂಚಿತವಾದ ಕರ್ಮದಿಂದ ಜನಿಸುತ್ತೇವೆ. ಇದೇ ಘಟೀಯಂತ್ರನ್ಯಾಯ. ಮನುಷ್ಯನ ಜೀವನದಲ್ಲಿ ಆಗುವ ಏರುಪೇರುಗಳಿಗೂ, ಸುಖ-ದುಃಖಗಳಿಗೂ ದೃಷ್ಟಾಂತವಾಗಿ ಈ ನ್ಯಾಯವನ್ನುಪಯೋಗಿಸ

ಬಹುದು. ಈ ಅಭಿಪ್ರಾಯವನ್ನು ಒಬ್ಬ ಕವಿಯು ಹೇಳುತ್ತಾನೆ : "ಎಲೈ ಧನಿಕನೆ, ನೀನು ಐಶ್ವರ್ಯದಿಂದ ಅಂಧನೂ, ಮೂಢನೂ ಆಗಿರುವೆ. ಕಷ್ಟ ದಲ್ಲಿ ಸಿಕ್ಕಿರುವ ಬಡವನನ್ನು ನೋಡಿ ನಗುವೆಯಾ ? ಐಶ್ವರ್ಯವು ಸ್ಥಿರವಲ್ಲ. ಘಟೀಯಂತ್ರದಲ್ಲಿರುವ ಪಾತ್ರೆಗಳನ್ನು ನೋಡು. ಬರಿದಾದ ಪಾತ್ರೆಗಳು ತುಂಬುವುವು. ತುಂಬಿದ ಪಾತ್ರೆಗಳು ಬರಿದಾಗುವುವು."

## 80. ಘಟ್ಟಕುಟೀಪ್ರಭಾತನ್ಯಾಯ

ಘಟ್ಟಕುಟಿಯೆಂದರೆ ಸುಂಕದ ಕಟ್ಟೆ. ಒಬ್ಬನು ಎತ್ತಿನ ಗಾಡಿಯನ್ನು ಹೊಡೆದುಕೊಂಡು ಪ್ರಯಾಣ ಮಾಡುತ್ತಿದ್ದನು. ಮಾರ್ಗದಲ್ಲಿ ಒಂದು ಸುಂಕದಕಟ್ಟೆ ಇತ್ತು ; ರಾತ್ರಿಯಾಗಿತ್ತು. ಸುಂಕ ಕೊಡುವುದನ್ನು ತಪ್ಪಿಸಿ ಕೊಳ್ಳಲು ಒಂದು ಉಪಾಯವನ್ನು ಹೂಡಿದನು. ಸುಂಕದಕಟ್ಟೆ ಸ್ವಲ್ಪ ದೂರದಲ್ಲಿರುವಾಗಲೇ ಗಾಡಿಯನ್ನು ರಸ್ತೆಯಿಂದ ಅಡ್ಡ ಹೊಡೆಯುವುದೇ ಉಪಾಯ. ಸುಂಕದ ಕಟ್ಟೆಯ ಹಿಂಭಾಗದಲ್ಲೇ ಮರೆಯಲ್ಲಿ ಹೋಗಿ ಸುಂಕದಕಟ್ಟೆ ದಾಟಿದ ಮೇಲೆ ಪುನಃ ರಸ್ತೆಗೆ ಸೇರಿಕೊಳ್ಳುವುದು ! ಸರಿ. ರಸ್ತೆಯನ್ನು ತಪ್ಪಿಸಿ ಗಾಡಿಯನ್ನು ಅಡ್ಡ ಹತ್ತಿಸಿದನು. ಕತ್ತಲೆಯಲ್ಲಿ ಸುಳಿವುದೋರದೆ ದಾರಿ ತಪ್ಪಿತು. ರಾತ್ರಿಯೆಲ್ಲಾ ಕಾಡಿನಲ್ಲಿ ಸುತ್ತಿದನು. ಬೆಳಗಾಗುವ ಹೊತ್ತಿಗೆ ಸರಿಯಾಗಿ ಸುಂಕದಕಟ್ಟೆಯ ಬಾಗಿಲಿಗೇ ಬಂದಿಳಿ ದನು ! ಪರಿಶ್ರಮಪಟ್ಟರೂ ಅದು ವ್ಯರ್ಥವಾಗಿ ಉದ್ದೇಶವು ಸಿದ್ಧಿಸದೆ ಹೋದಾಗ ಈ ನ್ಯಾಯವನ್ನು ವಿವರಣೆಗಾಗಿ ಉಪಯೋಗಿಸುತ್ತಾರೆ.

## 81. ಘುಣಾಕ್ಷರನ್ಯಾಯ

ಘುಣಾ ಎಂದರೆ ಮರವನ್ನು ಕೊರೆಯುವ ಒಂದು ಬಗೆಯ ಹುಳು. ಮನೆಯಲ್ಲಿರುವ ಕಂಭಗಳನ್ನೂ, ಹಲಗೆಗಳನ್ನೂ ಈ ಹುಳು ಕೊರೆದು ರೇಖೆಗಳನ್ನುಂಟುಮಾಡುತ್ತದೆ. ಈ ರೇಖೆ ಅನೇಕ ವೇಳೆ ಅಕ್ಷರದಂತೆ ಕಾಣುತ್ತದೆ ; ಅಕಾರವನ್ನೋ ಉಕಾರವನ್ನೋ ಅಥವಾ ಇನ್ನೊಂದು ಅಕ್ಷರವನ್ನೋ ಹೋಲಬಹುದು. ಹುಳುವಿಗೆ ಅಕ್ಷರವನ್ನು ಬರೆಯುವ ಉದ್ದೇಶ ಇಲ್ಲವಷ್ಟೆ ! ಹೀಗೆ ಯಾವುದೋ ಒಂದು ಕೆಲಸವನ್ನು ಮಾಡು ವಾಗ ಉದ್ದೇಶವಿಲ್ಲದಿದ್ದರೂ ಆಕಸ್ಮಿಕವಾಗಿ ಒಂದು ಕಾರ್ಯ ಘಟಿಸಿ ಅದು ಉದ್ದೇಶಪೂರಿತವೋ ಎಂಬಂತೆ ತೋರುವುದು. ಅಂತಹ ಕಾರ್ಯವನ್ನು ವರ್ಣಿಸುವುದಕ್ಕೆ ಈ ನ್ಯಾಯ ಉಪಯುಕ್ತವಾಗುವದು.

## 82. ಚಕ್ರಭ್ರಮಣನ್ಯಾಯ

ಕುಂಬಾರನು ಗಡಿಗೆಯನ್ನು ನಿರ್ಮಿಸುವಾಗ ಚಕ್ರವನ್ನು ತಿರುಗಿಸು

ತ್ತಾನೆ. ಒಮ್ಮೆ ತಿರುಗಿಸಿ ದಂಡವನ್ನು ತೆಗೆದುಹಾಕಿದ ಮೇಲೂ ಕೆಲವು ಕಾಲ ಚಕ್ರವು ಸುತ್ತುತ್ತಲೇ ಇರುತ್ತದೆ. ಚಕ್ರದಲ್ಲುಂಟಾದ ವೇಗವೆಂಬ ಸಂಸ್ಕಾರ ಅದಕ್ಕೆ ಕಾರಣ. ಅನೇಕ ಸಂದರ್ಭಗಳಲ್ಲಿ ಕಾರಣವು ಕಾರ್ಯವನ್ನು ಹುಟ್ಟಿಸಿ ನಷ್ಟವಾದ ಮೇಲೂ ಅದರ ಕಾರ್ಯ ನಡೆಯುತ್ತಲೇ ಇರುವುದು. ಆಗ ಈ ನ್ಯಾಯವನ್ನು ಉಪಯೋಗಿಸಬಹುದು. ಜ್ಞಾನದಿಂದ ಮೋಕ್ಷ ದೊರೆಯುವುದೆಂದು ಎಲ್ಲ ದಾರ್ಶನಿಕರೂ ಒಪ್ಪುತ್ತಾರೆ. ಒಬ್ಬ ಮನುಷ್ಯನು ಸದ್ಗುರುವಿನ ಅನುಗ್ರಹದಿಂದ ಜ್ಞಾನವನ್ನು ಪಡೆಯುತ್ತಾ-ನೆನ್ನೋಣ. ಆ ಕ್ಷಣದಲ್ಲಿ ಅವನಿಗೆ ಮೋಕ್ಷ ದೊರೆಯಬೇಕಷ್ಟೆ. ಜ್ಞಾನಿಯಾದ ಮೇಲೆ ಅವನು ಬದುಕಿರುವುದು ಹೇಗೆ ?—ಎಂದರೆ, ಶರೀರವನ್ನು ಧರಿಸಿರುವುದು ಹೇಗೆ ಸಾಧ್ಯ ? ಶರೀರ ಇರುವವರೆಗೂ ಸಂಸಾರಿಯಲ್ಲವೇ? ಎಂಬ ಪ್ರಶ್ನೆ ಹುಟ್ಟುತ್ತದೆ. ಈ ಪ್ರಶ್ನೆಗೆ ಅದ್ವೈತ ವೇದಾಂತಿಗಳು ಹೇಳುವ ಉತ್ತರವೇನೆಂದರೆ, ಜ್ಞಾನಿಯಾದ ಮೇಲೂ ಪ್ರಾರಬ್ಧಕರ್ಮ ಸವೆಯುವವರೆಗೂ ಚಕ್ರಭ್ರಮಣ ನ್ಯಾಯದಂತೆ ಶರೀರವಿರುತ್ತದೆ. ವೇಗ ಸಂಸ್ಕಾರ ಇರುವವರೆಗೂ ಚಕ್ರ ಸುತ್ತುವುದಷ್ಟೆ; ಅದರ ಹಾಗೆಯೇ ಜೀವನ್ಮುಕ್ತನೂ ಕೆಲವು ಕಾಲ ಬದುಕಿರುತ್ತಾನೆ.

## 83. ಚಾಲನೀನ್ಯಾಯ

ಚಾಲನಿಯೆಂದರೆ ಜರಡಿ. ಜರಡಿಯಿಂದ ಸಾಣಿಸಿದಾಗ ನಮಗೆ ಬೇಕಾದ ರವೆ, ಹಿಟ್ಟು ಮೊದಲಾದದ್ದು ಕೆಳಗೆ ಬಿದ್ದು ಬೇಡವಾದ ಹೊಟ್ಟು ಮೇಲೆ ಉಳಿಯುತ್ತದೆ ಅಥವಾ ಬೇಡವಾದ ನುಚ್ಚು ಕೆಳಗೆ ಬಿದ್ದು ಗಟ್ಟಿಯಾದ ಕಾಳು ಮೇಲೆ ಉಳಿಯಬಹುದು. ಹೇಗಿದ್ದರೂ ಬೇಕಾದ್ದನ್ನು ಸಂಗ್ರಹಿಸಿ ಬೇಡವಾದ್ದನ್ನು ದೂರ ಮಾಡಬಹುದಾದ ಉಪಾಯವಿದು. ಇಂತಹ ಸಂದರ್ಭದಲ್ಲಿ ಈ ನ್ಯಾಯವನ್ನು ಬಳಸುತ್ತಾರೆ.

ಇನ್ನೊಂದು ಬಗೆಯಲ್ಲಿಯೂ ಈ ನ್ಯಾಯದ ಪ್ರಯೋಗ ಉಂಟು. ಸಾಣಿಸುವಾಗ ಜರಡಿಯ ಒಂದು ರಂಧ್ರವನ್ನು ಮುಚ್ಚಿ ಹಿಡಿದರೂ ಇನ್ನೊಂದು ರಂಧ್ರದಿಂದ ಹಿಟ್ಟು ಉದುರುತ್ತದೆ. ಹಾಗೆ ಒಂದು ದೋಷವನ್ನು ಮುಚ್ಚಿದಾಗ, ಇನ್ನೊಂದು ದೋಷ ಇದ್ದೇ ಇರುತ್ತದೆಯೆಂದು ತೋರಿಸುವಾಗ ಇದರ ಬಳಕೆ ಆಗಬಹುದು.

## 84. ಚಂದ್ರಚಂದ್ರಿಕಾನ್ಯಾಯ

ಚಂದ್ರನ ಪ್ರಕಾಶ ಚಂದ್ರಿಕೆ ; ಅದೇ ಬೆಳದಿಂಗಳು. ಚಂದ್ರನನ್ನು ಬಿಟ್ಟು ಚಂದ್ರಿಕೆ ಇಲ್ಲ ; ಚಂದ್ರಿಕೆಯನ್ನು ಬಿಟ್ಟು ಚಂದ್ರನಿಲ್ಲ. ಅವೆರಡನ್ನು ಬೇರೆ ಮಾಡಲು ಸಾಧ್ಯವಿಲ್ಲ ; ಅದು ಅವಿಭಾಜ್ಯ. ಈ ಬಗೆಯ ವಸ್ತು

ಗಳನ್ನು ನಿರೂಪಿಸಲು ಈ ನ್ಯಾಯುವನ್ನು ಬಳಸುತ್ತಾರೆ. ಉದಾ : ಭವಾನಿ ಶಕ್ತಿ ಸ್ವರೂಪಿಣಿ ; ಅವಳು ಪರಮೇಶ್ವರನ ಅರ್ಧಾಂಗಿ. ಚಂದ್ರ ಚಂದ್ರಿಕಾನ್ಯಾಯದಂತೆ ಪರಮೇಶ್ವರನಲ್ಲಿರುವ ಶಕ್ತಿಯೇ ಭವಾನಿ.

## 85. ಚಿತ್ರತುರಗನ್ಯಾಯ

ಚಿತ್ರದಲ್ಲಿರುವ ಕುದುರೆ ಸತ್ಯವಾದ ಕುದುರೆಯಲ್ಲವಷ್ಟೆ. ಅದನ್ನು ಕುದುರೆಯೆಂದು ನಾವು ಮಕ್ಕಳಿಗೆ ಬೋಧಿಸುತ್ತೇವೆ. ಅವರು ಹಾಗೆಯೇ ನಂಬುತ್ತಾರೆ. ಅದು ಸತ್ಯವಾದ ಕುದುರೆಯ ಸ್ವರೂಪವನ್ನು ತಿಳಿಯಲು ಸಹಾಯ ಮಾಡುತ್ತದೆ. 'ಅಸತ್ಯೇ ವರ್ತ್ಮನಿ ಸ್ಥಿತ್ವಾ ತತಃ ಸತ್ಯಂ ಸಮೀಹತೇ' ಎಂದು ಭರ್ತೃಹರಿಯು ವಾಕ್ಯಪದೀಯದಲ್ಲಿ ಹೇಳಿದ್ದಾನೆ. ಮನುಷ್ಯನು ಅಸತ್ಯವಾದ ದಾರಿಯಲ್ಲಿ ನಿಂತು ಸತ್ಯವನ್ನು ಪಡೆಯಲು ಪ್ರಯತ್ನಿಸುತ್ತಾನೆ. ಅದ್ವೈತಿಗೆ ವಾಸ್ತವವಾಗಿ ದ್ವೈತವಿಲ್ಲ. ಆದರೂ ವ್ಯವಹಾರದಲ್ಲಿ ಅದನ್ನು ಒಪ್ಪಿಕೊಳ್ಳಲೇಬೇಕು. ಇಲ್ಲದಿದ್ದಲ್ಲಿ ಗುರು–ಶಿಷ್ಯ, ಶಾಸ್ತ್ರ–ಉಪದೇಶ ಮುಂತಾದ ಭೇದಗಳೂ ಇಲ್ಲದೆ ಆಚಾರ ವ್ಯವಹಾರಗಳೆಲ್ಲಾ ವ್ಯರ್ಥವಾಗಬೇಕಾದೀತು.

## 86. ಚಿತ್ರಾಂಗನಾನ್ಯಾಯ

ಚಿತ್ರದಲ್ಲಿರುವ ಸುಂದರಿಯನ್ನು ಕಣ್ಣರಳಿಸಿಕೊಂಡು ನೋಡಿ ಹಿಗ್ಗುವಪರಿದ್ದಾರೆ. ಬಂದ ಭಾಗ್ಯವೇನು ? ಸತ್ಯದಂತೆ ಮೇಲೆ ಕಂಡರೂ ವಾಸ್ತವವಾಗಿ ಯಾವುದು ಇಲ್ಲವೋ ಅದನ್ನು ವರ್ಣಿಸಲು ಈ ನ್ಯಾಯವನ್ನು ಉಪಯೋಗಿಸಬಹುದು. ಬಿಸಿಲ್‌ಗುದುರೆ ಆಸೆಯನ್ನು ಕೆರಳಿಸಬಲ್ಲದು ; ತೃಪ್ತಿಯನ್ನುಂಟುಮಾಡದು. ಚಿತ್ರದಲ್ಲಿರುವ ಅಗ್ನಿ ಸುಡುವುದಿಲ್ಲ. ಅದಕ್ಕೆ ಚಿತ್ರಾನಲನ್ಯಾಯವೆನ್ನುತ್ತಾರೆ. ಚಿತ್ರಾಮೃತನ್ಯಾಯವೂ ಈ ಅಭಿಪ್ರಾಯದಲ್ಲಿಯೇ ಉಪಯುಕ್ತವಾಗುತ್ತದೆ. ಚಿತ್ರದಲ್ಲಿ ಬರೆದ ಅಮೃತ ತುಂಬಿದ ಕೊಡ ಚಿತ್ರಾಮೃತ.

## 87. ಚಿಂತಾಮಣಿಂ ಪರಿತ್ಯಜ್ಯ ಕಾಚಮಣಿಗ್ರಹಣನ್ಯಾಯ

ಚಿಂತಿಸಿದುದನ್ನು ಕೊಡತಕ್ಕ ಮಣಿ ಚಿಂತಾಮಣಿ. ಅದು ಕೈಗೆ ಸಿಕ್ಕಿದಾಗ ಬೇಡವೆಂದು ಹೇಳಿ ಗಾಜಿನ ಮಣಿಯನ್ನು ತೆಗೆದುಕೊಂಡನಂತೆ ! ವಿಶ್ವಗುಣಾದರ್ಶ ಚಂಪುವಿನಲ್ಲಿ—

'ಗವ್ಯಂ ದುಗ್ಧಮಪಾಸ್ಯ ಪಾಸ್ಯತಿ ಜನಃ ಕೋ ವಾ
ಯವಾಗೂರಸಂ'

ಎಂಬುದಾಗಿ ಒಂದು ಕಡೆ ಬಂದಿದೆ. 'ಹಸುವಿನ ಹಾಲನ್ನು ಬಿಟ್ಟು ಗಂಜಿ

ಯನ್ನು ಯಾರು ಕುಡಿಯುತ್ತಾರೆ ?' ಎಂದು ಅದರ ಅರ್ಥ. ಮೇಲ್ಕಂಡ ನ್ಯಾಯಕ್ಕೆ ವಿಪರೀತವಾದ ತಾತ್ಪರ್ಯವನ್ನು ಕೊಡತಕ್ಕ ನ್ಯಾಯವಿದು. ಒಬ್ಬ ಕವಿಯು ಹೇಳುತ್ತಾನೆ :

ಜನ್ಮೇದಂ ವಂಧ್ಯತಾಂ ನೀತಂ ಭವಭೋಗೋಪಲಿಪ್ಸಯಾ ।
ಕಾಚಮೂಲ್ಯೇನ ವಿಕ್ರೀತೋ ಹಂತ ಚಿಂತಾಮಣಿರ್ಮಯಾ ॥

"ಸಂಸಾರ ಸುಖದ ಆಸೆಯಿಂದ ಈ ಜನ್ಮವನ್ನು ವ್ಯರ್ಥಮಾಡಿಕೊಂಡೆನು. ಅಯ್ಯೋ ! ಚಿಂತಾಮಣಿಯನ್ನು, ಗಾಜಿನ ಬೆಲೆಗೆ ಮಾರಿಬಿಟ್ಟೆನು."

ಮೋಕ್ಷ ಸುಖವನ್ನು ಚಿಂತಾಮಣಿಗೂ ಜಗತ್ತಿನ ವಿಷಯಸುಖವನ್ನು ಗಾಜಿಗೂ ಹೋಲಿಸುವುದು ಅನೇಕ ಗ್ರಂಥಗಳಲ್ಲಿ ಕಂಡುಬರುತ್ತದೆ.

## 88. ಚೌರಾಪರಾಧಾನ್ಮಾಂಡವ್ಯನಿಗ್ರಹನ್ಯಾಯ

ಕಳ್ಳರು ಮಾಡಿದ ಅಪರಾಧಕ್ಕಾಗಿ ಮಾಂಡವ್ಯನಿಗೆ ಶಿಕ್ಷೆಯಾಯಿತು. ಮಹಾಭಾರತದ ಆದಿಪರ್ವದಲ್ಲಿ ಮಾಂಡವ್ಯ ಋಷಿಯ ಕಥೆ ಬರುತ್ತದೆ. ಮಾಂಡವ್ಯನು ಋಷಿಯ ಆಶ್ರಮದಲ್ಲಿದ್ದುಕೊಂಡು ಮೌನವ್ರತಧಾರಿಯಾಗಿ ತಪಸ್ಸು ಮಾಡುತ್ತಿದ್ದನು. ರಾಜಭಟರು ಕೆಲವು ಕಳ್ಳರನ್ನು ಅಟ್ಟಿಸಿಕೊಂಡು ಬಂದರು. ಕದ್ದ ಸಾಮಾನುಗಳನ್ನು ಕಳ್ಳರು ಮಾಂಡವ್ಯನ ಆಶ್ರಮದಲ್ಲಿ ಬಚ್ಚಿಟ್ಟು ತಾವು ತಲೆಮರೆಸಿಕೊಂಡರು. ರಾಜಭಟರು ಆಶ್ರಮದಲ್ಲಿದ್ದ ಕಳವು ಮಾಲುಗಳನ್ನು ಪತ್ತೆ ಮಾಡಿ ಮಾಂಡವ್ಯ ಋಷಿಯನ್ನು ಕಳ್ಳನೆಂದು ಭಾವಿಸಿ ಹಿಡಿದುಕೊಂಡು ಹೋದರು. ರಾಜನು ಇವನನ್ನು ಶೂಲಕ್ಕೇರಿಸಬೇಕೆಂದು ಆಜ್ಞೆ ಮಾಡಿದನು ! ಶೂಲಕ್ಕೇರಿಸಿದ ಮೇಲೆ ಕಾರಣಾಂತರದಿಂದ ಇವನು ಋಷಿಯೆಂಬುದು ಗೊತ್ತಾಗಿ ಬಿಡುಗಡೆಯಾಗುತ್ತದೆ. ಆದರೆ ಇವನ ಶರೀರದಲ್ಲಿ ಮೊಳೆಯು (ಆಣಿ) ನೆಟ್ಟುಕೊಂಡಿದ್ದರಿಂದ ಇವನಿಗೆ ಆಣಿಮಾಂಡವ್ಯನೆಂದು ಹೆಸರಾಯಿತು. ಅಪರಾಧಿಯನ್ನು ಬಿಟ್ಟು ಅನಪರಾಧಿಯನ್ನು ದಂಡಿಸುವ ಸಂದರ್ಭದಲ್ಲಿ ಈ ನ್ಯಾಯವನ್ನು ವಿನಿಯೋಗಿಸುತ್ತಾರೆ.

## 89. ಛಾಯಾಪಿಶಾಚಿಕಾನ್ಯಾಯ

ತನ್ನ ನೆರಳನ್ನೇ ಪಿಶಾಚಿಯೆಂದು ಹೆದರಿಕೊಳ್ಳುವುದುಂಟು ! ಆಗ ಆಪ್ತನಾದವನು ಅದು ನೆರಳೆಂದು ಬೋಧಿಸಿದರೆ, ಭ್ರಮೆಯು ಹೋಗಿ ಭಯವು ನಿವೃತ್ತಿಗೊಳ್ಳುವುದು. ಅನಾವಶ್ಯಕವಾದ ಭಯವನ್ನು ಹೋಗಲಾಡಿಸುವಾಗ ಈ ನ್ಯಾಯ ಉಪಯುಕ್ತವಾಗುವುದು.

## 90. ಜತುಕಾಷ್ಠನ್ಯಾಯ

ಜತು–ಅರಗು. ಕಾಷ್ಠ–ಕಟ್ಟಿಗೆ, ಹಲಗೆ. ಎರಡು ಹಲಗೆಗಳನ್ನು ಅರಗುಹಚ್ಚಿ ಕೂಡಿಸಬಹುದು. ಆಗ ಒಂದುಹಲಗೆಯಂತೆಯೇ ಕಾಣುತ್ತದೆ. ಹೀಗೆ ಒಂದಾನೊಂದು ಉಪಾಧಿಯಿಂದ (ನಿಮಿತ್ತದಿಂದ) ಎರಡು ವಸ್ತುಗಳು ಸೇರಿ ಒಂದರಂತೆ ಕಾಣುವಾಗ ಈ ನ್ಯಾಯ ಉಪಯುಕ್ತವಾಗುತ್ತದೆ. ಇಲ್ಲಿ ಜತು ಎಂಬುದೇ ಉಪಾಧಿ.

ಸಭಂಗಶ್ಲೇಷ ಎಂಬ ಅಲಂಕಾರ ಉಂಟು. 'ಸರ್ವದೋಮಾಧವಃ ಪಾಯಾತ್' ಎಂಬುದು ಉದಾಹರಣೆ. ಇಲ್ಲಿ 'ಸರ್ವದಃ ಮಾಧವಃ' ಎಂದೂ 'ಸರ್ವದಾ ಉಮಾಧವಃ' ಎಂದೂ ಪದವಿಭಾಗ ಮಾಡಲು ಬರುತ್ತದೆ. ಸಂಧಿ ಕಾರ್ಯವೇ ಇಲ್ಲಿ ಉಪಾಧಿ. ಈ ಎರಡು ಶಬ್ದಗಳು ಸೇರಿ ಸರ್ವದೋಮಾಧವಃ ಎಂಬ ಒಂದು ವಾಕ್ಯಖಂಡವಾಗಿದೆ. ಇಂತಹ ಸ್ಥಳದಲ್ಲಿ ಜತುಕಾಷ್ಠನ್ಯಾಯವನ್ನು ಬಳಸುತ್ತಾರೆ.

## 91. ಜಲಕತಕರೇಣುನ್ಯಾಯ

ಕತಕವೆಂಬುದು ಒಂದು ಬಗೆಯ ಕಾಯಿ. ಅದರ ಪುಡಿಯನ್ನು ನೀರಿಗೆ ಹಾಕಿದರೆ ನೀರಿನಲ್ಲಿರುವ ಕೊಳೆಯೆಲ್ಲಾ ಕೆಳಕ್ಕೆ ನಿಂತು ಹೋಗುವುದಂತೆ. ಅನಂತರ ಕತಕದ ಪುಡಿಯೂ ಕೆಳಗೆ ನಿಂತು ನೀರು ಪರಿಶುದ್ಧವಾಗುವುದಂತೆ.

ಅಜ್ಞಾನದಿಂದ ಮಲಿನವಾದ ಜೀವನನ್ನು ಜ್ಞಾನವು ಪರಿಶುದ್ಧನನ್ನಾಗಿ ಮಾಡುವುದು. ಅದು ಅಜ್ಞಾನವನ್ನು ಹೋಗಲಾಡಿಸಿ ತಾನೂ ನಾಶ ಹೊಂದುವುದೆಂದು ವೇದಾಂತಿಗಳು ಹೇಳುತ್ತಾರೆ. ಇಲ್ಲಿ ಜ್ಞಾನವೆಂದರೆ ಅಂತಃಕರಣದ ವೃತ್ತಿಯೆಂದು ತಿಳಿಯಬೇಕು. ವೃತ್ತಿಯು ನಾಶವಾಗಿ ಸ್ವರೂಪಚೈತನ್ಯ ಒಂದೇ ಉಳಿಯುವುದು.

## 92. ಜಾಮಾತೃಶುದ್ಧಿನ್ಯಾಯ

ಅಳಿಯನು ಗ್ರಂಥವೊಂದನ್ನು ಶೋಧನೆ ಮಾಡಿದನೆಂಬ ಕಥೆಯೊಂದಿದೆ. ಮೇರುತುಂಗನ ಪ್ರಬಂಧಚಿಂತಾಮಣಿಯಲ್ಲಿ ಈ ಕಥೆ ಬರುತ್ತದೆ: ವಿಕ್ರಮಾರ್ಕರಾಜನಿಗೆ ಪ್ರಿಯಂಗುಮಂಜರಿಯೆಂಬ ಮಗಳಿದ್ದಳು. ಅವಳಿಗೆ ತಾರುಣ್ಯ ಬರಲು ಯೋಗ್ಯನಾದ ವರನನ್ನು ಗೊತ್ತುಮಾಡುವಂತೆ ರಾಜನು ತನ್ನ ಮಂತ್ರಿಯಾದ ವರರುಚಿಗೆ ಆದೇಶ ಮಾಡಿದನು. ರಾಜಪುತ್ರಿಯ ಮೇಲಿನ ದ್ವೇಷದಿಂದ ಮಂತ್ರಿಯು ಒಬ್ಬ ಮೂರ್ಖನಾದ ದನ ಕಾಯುವವನನ್ನು ವರನೆಂದು ಗೊತ್ತುಮಾಡಿ ಉಪಾಯದಿಂದ ಮದುವೆ ಮಾಡಿಸಿದನು. ಅಳಿಯನು ದೊಡ್ಡ ವಿದ್ವಾಂಸನೆಂದು ಅರಮನೆಯಲ್ಲಿ

ಪ್ರಚಾರಮಾಡಿದನು. ರಾಜಕುಮಾರಿಯು ತನ್ನ ಪತಿಯ ಪಾಂಡಿತ್ಯವನ್ನು ಅರಿಯುವುದಕ್ಕಾಗಿ ಅವನಿಗೆ ಒಂದು ಗ್ರಂಥವನ್ನು ಪರಿಶೋಧನೆಗಾಗಿ ಕೊಟ್ಟಳು. ಅಳಿಯ ಮಹಾಶಯನು ಒಂದು ಚಾಣವನ್ನು ತೆಗೆದು ಕೊಂಡು ಅಕ್ಷರಗಳ ತಲೆಕಟ್ಟನ್ನೂ, ತಲೆಕಟ್ಟಿನ ಮೇಲಿದ್ದ ಅನುಸ್ವಾರ ಗಳನ್ನೂ ಕತ್ತರಿಹಾಕಿ ಗ್ರಂಥವನ್ನು ಶೋಧಿಸಿದನು ! ಅಲ್ಲಿಂದ ಜಾಮಾತೃ ಶುದ್ಧಿ ಎಂಬ ಮಾತು ಲೋಕಪ್ರಸಿದ್ಧಿಗೆ ಬಂದಿತು.

ಈ ಅಳಿಯನೇ ಮುಂದೆ ಕಾಳಿಯ ಅನುಗ್ರಹದಿಂದ ಕಾಳಿದಾಸನಾದ ನೆಂದು ಕಥೆ ಹೇಳುತ್ತದೆ. ಈ ಕಥೆಯೇ ಕೆಲವು ಬದಲಾವಣೆಗಳನ್ನು ಹೊಂದಿ ಪ್ರಚುರವಾಗಿದೆ. ಅಪಾತ್ರನೂ ಅವಿವೇಕಿಯೂ ಮಾಡುವ ಕೆಲಸ ವನ್ನು ವರ್ಣಿಸಲು, ಈ ನ್ಯಾಯವನ್ನು ಉಪಯೋಗಿಸುತ್ತಾರೆ.

## 93. ಜಾಮಾತೃಸೂಪನ್ಯಾಯ

ಜಾಮಾತೃವೆಂದರೆ ಅಳಿಯ ; ಸೂಪವೆಂದರೆ ತೊವ್ವೆ. ಅಳಿಯನು ಬಂದಿದ್ದಾನೆಂದು ಮಾವನ ಮನೆಯಲ್ಲಿ ಸೊಗಸಾದ ತೊವ್ವೆಯನ್ನೂ ನಾನಾ ವಿಧ ಭಕ್ಷ್ಯಗಳನ್ನೂ ಮಾಡಿರುತ್ತಾರೆ. ಆ ದಿನ ಅಕಸ್ಮಾತ್ ಒಬ್ಬ ಅತಿಥಿ ಬಂದರೆ ಅವನಿಗೂ ತೊವ್ವೆ ಭಕ್ಷ್ಯಗಳು ಲಭಿಸುತ್ತವೆ. ಅಳಿಯನೊಂದಿಗೆ ಗೆಳೆಯ ಎಂದು ಹೇಳುವುದಿಲ್ಲವೇ ? ಹಾಗೆ. ತಾತ್ಪರ್ಯವೇನೆಂದರೆ, ಅನ್ಯಾರ್ಥವಾಗಿ ಮಾಡಿದ ಕಾರ್ಯವು ಸಂದರ್ಭಾನುಸಾರ ಇತರರಿಗೂ ಉಪ ಯುಕ್ತವಾಗಬಹುದು. ಅಂಗಡಿಯ ದೀಪ ರಸ್ತೆಯ ಮೇಲೆ ಹೋಗುವ ವರಿಗೂ ಬೆಳಕನ್ನು ನೀಡುತ್ತದೆ. ಅಂತಹ ಸನ್ನಿವೇಶದಲ್ಲಿ ಈ ನ್ಯಾಯ ವನ್ನು ಉಪಯೋಗಿಸುತ್ತಾರೆ.

## 94. ಜ್ವರಹರತಕ್ಷಕರರತ್ನನ್ಯಾಯ

ವೈದ್ಯನಿಗೆ ರೋಗಿಯ ಜ್ವರವನ್ನು ಗುಣಪಡಿಸಲು ಸಾಧ್ಯವಾಗಲಿಲ್ಲ. ವೈದ್ಯನು ಹೇಳಿದನು : "ಅಯ್ಯಾ, ಪಾತಾಳಲೋಕದಲ್ಲಿ ತಕ್ಷಕನೆಂಬ ಸರ್ಪರಾಜನಿದ್ದಾನೆ. ಅವನ ಶಿರಸ್ಸಿನಲ್ಲಿ ಒಂದು ರತ್ನವಿದೆ. ಅದನ್ನು ತರಿಸಿದರೆ ಈ ಜ್ವರವನ್ನು ಖಂಡಿತ ಗುಣಪಡಿಸುತ್ತೇನೆ !" ಅಸಾಧ್ಯವಾದ ಕೆಲಸವನ್ನು ಹೇಳಿ ತಾನು ತಪ್ಪಿಸಿಕೊಳ್ಳುವ ಜಾಣ್ಮೆಯನ್ನು ವರ್ಣಿಸಲು ಈ ನ್ಯಾಯವನ್ನು ಉಪಯೋಗಿಸುತ್ತಾರೆ. ಇಂತಹ ವೈದ್ಯರ ಸಂಖ್ಯೆ ಈಗಲೂ ಬೇಕಾದಷ್ಟಿದೆ. ನೀಲಕಂಠದೀಕ್ಷಿತರು ಕಲಿವಿಡಂಬನ ಸ್ತೋತ್ರದಲ್ಲಿ ಹೇಳುತ್ತಾರೆ :

"ಯಾವುದೋ ಒಂದು ಔಷಧವನ್ನು ರೋಗಿಗೆ ಹೇಳುವುದು. ಕಠಿಣ ವಾದ ಪಥ್ಯವನ್ನು ಆಚರಿಸುವಂತೆ ನಿಯಮಿಸುವುದು. ಗುಣವಾದರೆ

ಅದು ವೈದ್ಯನ ಮಹಾತ್ಮ್ಯದಿಂದ. ಇಲ್ಲದಿದ್ದರೆ 'ಪಥ್ಯವನ್ನು ಸರಿಯಾಗಿ ಮಾಡಲಿಲ್ಲ' ಎಂದು ಹೇಳುವುದು. ಇದು ಕಲಿಯುಗದ ವೈದ್ಯರ ಸ್ವಭಾವ!" ಕುಂಟನೊಬ್ಬನು ಆರ್ಭಟಿಸುತ್ತಿದ್ದನಂತೆ. 'ಎಲೇ, ಎದ್ದು ಬಂದರೆ ನೀನು ಕೆಟ್ಟೆ!"

## 95. ಟಿಟ್ಟಿಭನ್ಯಾಯ

ಟಿಟ್ಟಿಭ ಎಂಬುದು ಒಂದು ಬಗೆಯ ಪುಟ್ಟ ಹಕ್ಕಿ. ಕೆಲವರು ಲಾವಕ್ಕಿ ಎಂದು ಕರೆಯುತ್ತಾರೆ. ಸಮುದ್ರತೀರದಲ್ಲಿ ಒಂದು ಗಿಡದ ಮೇಲೆ ಗೂಡು ಕಟ್ಟಿಕೊಂಡು ಗಂಡುಹೆಣ್ಣು ಟಿಟ್ಟಿಭಗಳು ವಾಸವಾಗಿದ್ದವು. ಹೆಣ್ಣುಹಕ್ಕಿ ಮೊಟ್ಟೆ ಇಟ್ಟಾಗಲೆಲ್ಲಾ ಸಮುದ್ರವು ಉಕ್ಕಿಬಂದು ಅಲೆಗಳ ಹೊಡೆತದಿಂದ ಮೊಟ್ಟೆಗಳು ತೇಲಿಹೋಗುತ್ತಿದ್ದವು. ಗಂಡು ಹಕ್ಕಿ ಕೋಪ ಗೊಂಡು ಸಮುದ್ರವನ್ನು ಒಣಗಿಸಿಬಿಡುತ್ತೇನೆಂದು ತನ್ನ ಕೊಕ್ಕಿನಿಂದ ಸಮುದ್ರದ ನೀರಿನ ಹನಿಯನ್ನು ತಂದು ಮರಳುದಿಣ್ಣೆಯ ಮೇಲೆ ಹಾಕುತ್ತ ಲಿತ್ತು. ಆಕಸ್ಮಾತ್ ನಾರದ ಮಹರ್ಷಿಗಳು ಈ ಹಕ್ಕಿಯ ಗೋಳನ್ನು ಕಂಡು ಮರುಕಪಟ್ಟರು. ವೈಕುಂಠಕ್ಕೆ ಹೋಗಿ ಗರುಡನಿಗೆ ಈ ಸಂಗತಿ ಯನ್ನು ಅರುಹಿದರು. ಗರುಡ ಪಕ್ಷಿರಾಜ; ತನ್ನ ಬಳಗಕ್ಕೆ ಸೇರಿದ ಟಿಟ್ಟಿಭಕ್ಕೆ ಒದಗಿದ ಆಪತ್ತನ್ನು ಪರಿಹರಿಸಬೇಕೆಂದು ನಿಶ್ಚಯಿಸಿ ಶ್ರೀಮನ್ ನಾರಾಯಣನಿಗೆ ಈ ಸಂಗತಿಯನ್ನು ನಿವೇದಿಸಿ ಸಹಾಯ ಮಾಡಬೇಕೆಂದು ಪ್ರಾರ್ಥಿಸಿದನು. ಗರುಡನ ದಾಕ್ಷಿಣ್ಯಕ್ಕೆ ಒಳಗಾಗಿ ನಾರಾಯಣನು ಸಮುದ್ರ ರಾಜನಿಗೆ ಬಹುದೂರ ಹಿಂದಕ್ಕೆ ಹೊರಟುಹೋಗಬೇಕೆಂದೂ ಇನ್ನೊಮ್ಮೆ ಟಿಟ್ಟಿಭದ ಗೋಜಿಗೆ ಹೋಗಬಾರದೆಂದೂ ಆಜ್ಞೆಮಾಡಿದನು. ಟಿಟ್ಟಿಭ ಗೆದ್ದಿತು. ಸಮುದ್ರನಿಗೆ ಗರ್ವಭಂಗವಾಯಿತು.

ಈ ಕಥೆ ಹಿತೋಪದೇಶದಲ್ಲಿ ಬರುತ್ತದೆ. ಎದುರಾಳಿಯು ಅಲ್ಪ ನೆಂದು ಭಾವಿಸಿ ಹಿಂಸೆಕೊಡುವುದು ನ್ಯಾಯವಲ್ಲ. ಅವನಿಗೆ ಯಾವ ಬಗೆಯ ಸಹಾಯ ಸಂಪತ್ತು ಇದೆಯೋ ಯಾರು ಬಲ್ಲರು? ಯಾವ ಹುತ್ತದಲ್ಲಿ ಯಾವು ಹಾವು ಇದೆಯೋ! ಈ ಬಗೆಯ ಸಹಾಯ ಸಂಪತ್ತನ್ನು ಅರಿಯದೆ ದುಡುಕಿದರೆ, ವಿಪತ್ತಿಗೆ ಸಿಕ್ಕಿಕೊಳ್ಳಬೇಕಾಗುತ್ತದೆಯೆಂದು ಈ ನ್ಯಾಯ ಬೋಧಿಸುತ್ತದೆ.

## 96. ಡಮರುಕಮಣಿನ್ಯಾಯ

ಬುಡಬುಡಿಕೆಗೆ ದಾರವನ್ನು ಕಟ್ಟಿ ತುದಿಯಲ್ಲಿ ಒಂದು ಮಣಿಯನ್ನು ಕಟ್ಟಿರುತ್ತಾರೆ. ಒಂದೇ ಮಣಿಯು ಬುಡಬುಡಿಕೆಯ ಹಸ್ತಲಾಘವದಿಂದ ಎರಡು ಭಾಗಗಳಿಗೂ ತಾಕಿ ಶಬ್ದವಾಗುತ್ತದೆ. ಒಂದೇ ವಸ್ತು ಏಕಕಾಲದಲ್ಲಿ

ಎರಡು ಕಾರ್ಯಗಳಿಗೆ ಉಪಯುಕ್ತವಾದಾಗಲೂ, ಒಂದೇ ಶಬ್ದವು ವಾಕ್ಯದಲ್ಲಿ ಎರಡು ಕಡೆಗೆ ಅನ್ವಿತವಾದಾಗಲೂ ಈ ನ್ಯಾಯವನ್ನು ಉಪಯೋಗಿಸುತ್ತಾರೆ. 'ಮಧ್ಯಮಣಿನ್ಯಾಯ'ವೆಂಬುದು ಈ ಅರ್ಥದಲ್ಲಿಯೇ ಬಳಕೆಯಾಗಿದೆ.

## 97. ತಕ್ರಕೌಂಡಿನ್ಯನ್ಯಾಯ

ತಕ್ರವೆಂದರೆ ಮಜ್ಜಿಗೆ. ಯಜಮಾನನು ಅಡಿಗೆಯವನಿಗೆ ಹೇಳುತ್ತಾನೆ : "ಬ್ರಾಹ್ಮಣರಿಗೆ ಮೊಸರನ್ನು ಬಡಿಸು ; ಕೌಂಡಿನ್ಯನಿಗೆ ಮಜ್ಜಿಗೆಯನ್ನು ಬಡಿಸು !" ಕೌಂಡಿನ್ಯನೂ ಬ್ರಾಹ್ಮಣನೇ. ಮೊದಲನೇ ವಾಕ್ಯದಿಂದ ಅವನಿಗೂ ಮೊಸರೇ ಪ್ರಾಪ್ತವಾಯಿತು. ಆದರೆ ಎರಡನೇ ವಾಕ್ಯದಿಂದ ಅದು ಬಾಧಿತವಾಗಿ 'ಮಜ್ಜಿಗೆ' ಪ್ರಾಪ್ತವಾಯಿತು. ಮೊದಲನೆಯದು ಸಾಮಾನ್ಯ ವಿಧಿ. ಇದಕ್ಕೆ ಉತ್ಸರ್ಗ ಎನ್ನುವರು. ಎರಡನೆಯದು ವಿಶೇಷ ವಾಕ್ಯ. ಇದಕ್ಕೆ ಅಪವಾದ ಎನ್ನುವರು. ಅಪವಾದ ಉತ್ಸರ್ಗವನ್ನು ಬಾಧಿಸುವುದು. ಶಾಸ್ತ್ರದ ವಿಧಿಗಳಲ್ಲಾಗಲಿ ಕಾನೂನುಗಳಲ್ಲಾಗಲಿ ವಿನಾಯಿತಿಗಳು (Exceptions) ಇರುತ್ತವೆ. ವಿನಾಯಿತಿಯ ವಿಷಯದಲ್ಲಿ ಸಾಮಾನ್ಯನಿಯಮ ಅನ್ವಯಿಸುವುದಿಲ್ಲವೆಂಬುದಕ್ಕೆ ಇದನ್ನು ದೃಷ್ಟಾಂತವಾಗಿ ಉಪಯೋಗಿಸುತ್ತಾರೆ.

## 98. ತಟಾದರ್ಶಿಶಕುಂತಪೋತನ್ಯಾಯ

ತಟಾದರ್ಶಿ–ತೀರವನ್ನು ನೋಡುತ್ತಿರುವ, ಶಕುಂತಪೋತ–ಹಕ್ಕಿಯ ಮರಿ. ಅಪಾರವಾದ ಸಾಗರಮಧ್ಯದಲ್ಲಿ ಹಡಗು ಹೋಗುತ್ತಿದೆ. ಹಡಗಿನಲ್ಲಿ ಸೇರಿಕೊಂಡಿದ್ದ ಒಂದು ಹಕ್ಕಿಯಮರಿ ಹಡಗಿನ ಧ್ವಜಸ್ತಂಭದ ಮೇಲೆ ಕುಳಿತುಕೊಂಡು ತೀರವನ್ನು ಹುಡುಕುತ್ತಲಿದೆ. ಸ್ತಂಭದಿಂದ ಸ್ವಲ್ಪ ದೂರ ಹಾರಿ ತಪ್ಪಿಸಿಕೊಂಡು ಹೋಗಬೇಕೆಂದು ಪ್ರಯತ್ನಿಸುತ್ತದೆ. ರೆಕ್ಕೆ ಸೋತು ಗತ್ಯಂತರವಿಲ್ಲದೆ ಪುನಃ ಹಡಗಿನ ಕಂಬಕ್ಕೆ ಹಿಂದಿರುಗುತ್ತದೆ.

ಬೇರೆ ಮಾರ್ಗ ಸಾಧ್ಯವಿಲ್ಲದೆ ತನಗೆ ಇಚ್ಛೆಯಿಲ್ಲದಿದ್ದರೂ ಅದೇ ವಾದವನ್ನು ಆಶ್ರಯಿಸಬೇಕಾಗಿ ಬಂದಾಗ ಈ ನ್ಯಾಯವನ್ನು ಬಳಸುತ್ತಾರೆ.

## 99. ತತ್‌ಸ್ಥಾನಾಪನ್ನಃ ತದ್ಧರ್ಮಂ ಲಭತೇ

ಇನ್ನೊಬ್ಬನ ಸ್ಥಾನದಲ್ಲಿ ಬಂದು ಕುಳಿತವನು ಆ ಸ್ಥಾನದಲ್ಲಿ ಮೊದಲು ಇದ್ದವನ ಗುಣಧರ್ಮಗಳನ್ನು ಪಡೆಯುತ್ತಾನೆ. ಒಬ್ಬ ಅಧಿಕಾರಿಯು ಬೇರೆ ಸ್ಥಳಕ್ಕೆ ವರ್ಗವಾದ ಮೇಲೆ ಆ ಸ್ಥಾನಕ್ಕೆ ಬಂದ ಹೊಸಬನಿಗೆ ಮೊದಲಿದ್ದವನ ಅಧಿಕಾರಗಳು ಲಭಿಸುತ್ತವಷ್ಟೆ. ಆ ಅಧಿಕಾರಗಳನ್ನು

ಪುನಃ ಹೊಸದಾಗಿ ನೀಡಬೇಕಾಗಿಲ್ಲ. ಹೀಗೆ ನಾನಾ ಬಗೆಯ ಕರ್ತವ್ಯಗಳೂ ಜವಾಬ್ದಾರಿಗಳೂ ತಾವಾಗಿ ಬರುತ್ತವೆ. ಈ ನ್ಯಾಯ ವ್ಯಾಕರಣ ಶಾಸ್ತ್ರದಲ್ಲಿ ವಿಶೇಷವಾಗಿ ಉಪಯುಕ್ತವಾಗಿದ್ದರೂ ಲೋಕ ವ್ಯವಹಾರದಲ್ಲಿ ಇರತಕ್ಕದ್ದೇ ಸರಿ.

ಸಾಮಾನ್ಯಧರ್ಮ ಅಥವಾ ಅಧಿಕಾರಕ್ಕೆ ಸಂಬಂಧಿಸಿದ ಕರ್ತವ್ಯಗಳು ಹೊಸಬನಿಗೆ ಬಂದರೂ ವಿಶೇಷಧರ್ಮ ಅಥವಾ ಕೇವಲ ವೈಯಕ್ತಿಕವಾದ ಅಧಿಕಾರ, ಕರ್ತವ್ಯಗಳು ಹೊಸಬನಿಗೆ ಬರಲಾರವು. ಹೇಗೆಂದರೆ, ಮೊದಲನೆಯವನಲ್ಲಿರಬಹುದಾದ ಕಾಮಕ್ರೋಧಾದಿ ಗುಣಗಳಾಗಲಿ, ರೂಪವಾಗಲಿ ಹೊಸಬನಲ್ಲಿ ಬರಬೇಕಾಗಿಲ್ಲ. ಅಥವಾ ಮೊದಲನೆಯವನ ಸಂಸಾರದ ಸ್ವಾಮ್ಯ ಹೊಸ ಅಧಿಕಾರಿಗೆ ಬರಲಾರದು.

ಶಾಸ್ತ್ರೀಯವಾದ ಒಂದು ಉದಾಹರಣೆ ಇದು. 'ಅಸ್' ಧಾತುವಿಗೆ 'ಭೂ' ಎಂಬ ಆದೇಶ ಬರುತ್ತದೆ. 'ಅಸ್' ಎಂಬುದು ಧಾತುವಾದ್ದರಿಂದ 'ಭೂ' ಎಂಬುದನ್ನೂ ಧಾತುವೆಂದೇ ಹೇಳಬೇಕು. ಆದರೆ 'ಅಸ್' ಧಾತು ಸಕಾರಾಂತವಾದ್ದರಿಂದ 'ಭೂ' ಎಂಬುದು ಸಕಾರಾಂತ ಎಂದು ವ್ಯವಹರಿಸಕೂಡದು.

## 100. ತಪ್ತಂ ತಪ್ತೇನ ಸಂಬಧ್ಯತೇ

ಬಿಸಿಯಾದ ಲೋಹ ಬಿಸಿಯಾದ ಲೋಹದೊಡನೆ ಬೆಸುಗೆಯನ್ನು ಹೊಂದುತ್ತದೆ. ಪರಸ್ಪರ ಆವಶ್ಯಕತೆ ಇದ್ದರೆ ಮಿತ್ರರಾಗುತ್ತಾರೆ. ಇಬ್ಬರಲ್ಲೂ ಪ್ರೇಮವಿದ್ದರೆ ಸಂಬಂಧವೇರ್ಪಡುತ್ತದೆ.

ವಾಕ್ಯದಲ್ಲಿ ಶಬ್ದಗಳು ಪರಸ್ಪರ ಸಮೀಪದಲ್ಲಿದ್ದ ಮಾತ್ರದಿಂದ ಅವುಗಳಿಗೆ ಸಂಬಂಧವಾಗದು. ಆಕಾಂಕ್ಷೆ ಇರಬೇಕು. ಆಕಾಂಕ್ಷೆ ಇದ್ದರೆ ಶಬ್ದವು ವ್ಯವಧಾನದಲ್ಲಿದ್ದರೂ ಸಂಬಂಧ ಮಾಡಬೇಕಾಗುತ್ತದೆ. ಉದಾ :— "ನನ್ನ ಮಿತ್ರನು ರಾಮನ ಮಗನನ್ನು ಕಂಡನು."

ಇಲ್ಲಿ 'ಮಿತ್ರನು—ಕಂಡನು' ಈ ಶಬ್ದಗಳಿಗೆ ಆಕಾಂಕ್ಷೆಯಿರುವುದರಿಂದ ಪರಸ್ಪರ ಅನ್ವಯ ಉಂಟು. 'ನನ್ನ—ಮಗನನ್ನು' 'ರಾಮನ—ಮಿತ್ರನು' ಇವುಗಳಿಗೆ ಅನ್ವಯವಿಲ್ಲ. ಆದ್ದರಿಂದ 'ನನ್ನ ಮಗನನ್ನು ರಾಮನ ಮಿತ್ರನು ಕಂಡನು' ಎಂದು ಅರ್ಥ ಹೇಳತಕ್ಕದ್ದಲ್ಲ.

ವಿದ್ವಾಂಸನಿಗೂ ವಿದ್ವಾಂಸನಿಗೂ ಸ್ನೇಹ, ಕಳ್ಳನಿಗೂ ಕಳ್ಳನಿಗೂ ಸ್ನೇಹ—ಮುಂತಾದ ವಿಷಯಗಳು ಈ ನ್ಯಾಯಕ್ಕೆ ಉದಾಹರಣೆಗಳು.

## 101. ತಪ್ತಾಯಃ ಪೀತಾಂಬುನ್ಯಾಯ

ಕೆಂಪಗೆ ಕಾದ ಕಬ್ಬಿಣದ ಮೇಲೆ ನೀರನ್ನು ಚಿಮುಕಿಸಿದರೆ ನೀರಿನ ಹೆಸರೇ ಇಲ್ಲದಂತೆ ಆರಿ ಹೋಗುವುದು. ಬಲಶಾಲಿಯಾದ ಶತ್ರುವಿನ

ಮೇಲೆ ಬೀಳುವ ಅಲ್ಪನೂ ಧ್ವಂಸ ಹೊಂದುವನು. ಬ್ರಹ್ಮಜ್ಞಾನಿಯ ಜ್ಞಾನಾಗ್ನಿಯಲ್ಲಿ ಸಂಚಿತಕರ್ಮಗಳು ನಾಶಹೊಂದುವುವು.

ಈ ನ್ಯಾಯವನ್ನು ಇನ್ನೊಂದು ಬಗೆಯಲ್ಲಿಯೂ ಅನ್ವಯಿಸುತ್ತಾರೆ. ಆಶ್ರಯದ ಯೋಗ್ಯತೆಯನ್ನನುಸರಿಸಿ ಆಶ್ರಿತ ವಸ್ತುವಿನ ಗುಣಗಳು ಪ್ರಕಾಶಕ್ಕೆ ಬರುತ್ತವೆ. ಉತ್ತಮವಾದ ಭೂಮಿಯಲ್ಲಿ ಬೀಜವನ್ನು ಬಿತ್ತಿದರೆ ಉತ್ತಮವಾದ ಬೆಳೆ ಸಿಗುತ್ತದೆ. ಮರುಭೂಮಿಯಲ್ಲಿ ಬಿತ್ತಿದರೆ ಬೀಜವೇ ಸೀದುಹೋಗುತ್ತದೆ. ಭರ್ತೃಹರಿಯು ತನ್ನ ನೀತಿಶತಕದಲ್ಲಿ ಈ ವಿಷಯವನ್ನು ಸುಂದರವಾಗಿ ವರ್ಣಿಸಿದ್ದಾನೆ :

"ಕಾದ ಕಬ್ಬಿಣದ ಮೇಲೆ ಬಿದ್ದ ನೀರಿನ ಹನಿ ಹೆಸರೇ ಇಲ್ಲದಂತೆ ನಾಶವಾಗುತ್ತದೆ. ಕಮಲದ ಎಲೆಯ ಮೇಲೆ ಅದೇ ನೀರಿನ ಹನಿ ಮುತ್ತಿನಂತೆ ಅಂದವಾಗಿ ಕಾಣುತ್ತದೆ. ಮುತ್ತಿನ ಚಿಪ್ಪಿನಲ್ಲಿ ಬಿದ್ದರೆ ಅದು ಮುತ್ತೇ ಆಗಿಬಿಡುತ್ತದೆ. ಇದು ಕ್ರಮವಾಗಿ ಅಧಮ, ಮಧ್ಯಮ ಮತ್ತು ಉತ್ತಮರ ಸ್ವಭಾವ."

## 102. ತಮೋದೀಪನ್ಯಾಯ

ದೀಪವನ್ನು ಹಿಡಿದುಕೊಂಡು ಕತ್ತಲೆಯನ್ನು ಹುಡುಕುತ್ತಾ ಹೋದರೆ ಕತ್ತಲೆ ಸಿಕ್ಕುವುದೆ ? ಕತ್ತಲೆಗೆ ವಿರುದ್ಧವಾದುದು ದೀಪ. ಹೀಗೆ ಅತ್ಯಂತ ವಿರುದ್ಧವಾದ ಸಾಧನದಿಂದ ಒಂದು ಕಾರ್ಯವನ್ನು ಸಾಧಿಸುವುದಕ್ಕೆ ಪ್ರಯತ್ನಿಸಿದಾಗ ಈ ನ್ಯಾಯವನ್ನು ಉಪಯೋಗಿಸುತ್ತಾರೆ.

## 103. ತಸ್ಕರಕಂದುನ್ಯಾಯ

ಕಂದುವೆಂದರೆ ಅಡಿಗೆಮಾಡುವವನು. ಕಳ್ಳನು ಅಡಿಗೆಯ ಕೆಲಸಕ್ಕೆ ಸೇರಿದ ಕಥೆಯೊಂದನ್ನವಲಂಬಿಸಿ ಈ ನ್ಯಾಯ ಹುಟ್ಟಿದೆ. ಒಬ್ಬ ಕಳ್ಳನು ತಲೆತಪ್ಪಿಸಿಕೊಳ್ಳುವುದಕ್ಕಾಗಿ ಅಡಿಗೆಯವರ ಕೊಠಡಿಗೆ ಸೇರಿಕೊಂಡನು. ಅಲ್ಲಿ ತಾನು ಅಡಿಗೆ ಕೆಲಸದವನೆಂದು ಹೇಳಿಕೊಂಡನು. ಅಡಿಗೆಕೆಲಸ ಅವನಿಗೆ ಬರುತ್ತಲೇ ಇರಲಿಲ್ಲ. ಮನೆಯೊಳಗಿನ ಕೆಲಸವಾದ್ದರಿಂದ ಪೋಲೀಸಿನವರ ಕಣ್ಣಿಗೆ ಬೀಳದೆ ತಪ್ಪಿಸಿಕೊಂಡಿರಲು ಸಾಧ್ಯವೆಂದು ಅವನು ಬಗೆದಿದ್ದನು. ಆದರೆ ಅಡಿಗೆಯ ಕೆಲಸವೇನೂ ಗೊತ್ತಿಲ್ಲದ್ದರಿಂದ ಅವನ ವಿಷಯ ಪ್ರಚಾರವಾಗಿ ಪೋಲೀಸಿನವರು ಸಂದೇಹದ ಮೇಲೆ ಅವನನ್ನು ಹುಡುಕಿಕೊಂಡು ಬಂದರು. ಅವನೇ ಕಳ್ಳನಾಗಿದ್ದನು ! 'ಅಭ್ಯಾಸವಿಲ್ಲದವನು ಅಗ್ನಿಹೋತ್ರ ಮಾಡಿ ಗಡ್ಡ ಸುಟ್ಟುಕೊಂಡನಂತೆ !' ತನಗೆ ಪರಿಚಯವಿಲ್ಲದ ಕೆಲಸಕ್ಕೆ ಕೈಹಾಕುವುದು ಅಪಾಯಕಾರಿ ಎಂಬುದು ಈ ನ್ಯಾಯದ ತಾತ್ಪರ್ಯ.

## 104. ತಿಲತಂಡುಲನ್ಯಾಯ

ಎಳ್ಳಿನೊಡನೆ ಅಕ್ಕಿಯನ್ನು ಬೆರಸಿದರೆ ಗೊತ್ತುಮಾಡುವುದು ಸುಲಭ. ಅವೆರಡರ ಭೇದ ಸ್ಫುಟವಾಗಿ ಎದ್ದುತೋರುವುದು. ಮಿಶ್ರಗೊಂಡ ವಸ್ತುಗಳು ಸ್ಪಷ್ಟವಾಗಿ ಗೊತ್ತಾಗುವಂತೆ ಇದ್ದಾಗ ಈ ನ್ಯಾಯವನ್ನು ಬಳಸುತ್ತಾರೆ. ಈ ಬಗೆಯಿಂದ ಕಾವ್ಯದಲ್ಲಿ ಅನೇಕ ಅಲಂಕಾರಗಳು ಮೇಲನಗೊಂಡರೆ ಅಲಂಕಾರಸಂಸೃಷ್ಟಿ ಎಂದು ಅಲಂಕಾರಿಕರು ಹೇಳುತ್ತಾರೆ.

ರಾತ್ರಿ ವರ್ಣನೆ :—

ಲಿಂಪತೀವ ತಮೋಽಂಗಾನಿ ವರ್ಷತೀವಾಂಜನಂ ನಭಃ ।
ಅಸತ್‌ಪುರುಷಸೇವೇವ ದೃಷ್ಟಿರ್ನಿಷ್ಫಲತಾಂ ಗತಾ ॥

ಅರ್ಥ :

'ಕತ್ತಲೆಯೂ ಅವಯವಗಳನ್ನೆಲ್ಲಾ ಲೇಪಿಸುತ್ತಿದೆಯೋ (ಬಣ್ಣವನ್ನು ಬಳಿದುಕೊಳ್ಳುವಂತೆ) ಎಂಬಂತೆ ತೋರುತ್ತದೆ. ಆಕಾಶವು ಕಾಡಿಗೆಯನ್ನು ಸುರಿಸುತ್ತಿದೆಯೋ ಎಂಬಂತೆ ತೋರುತ್ತದೆ. ದುಷ್ಟರ ಸೇವೆಯಂತೆ ಕಣ್ಣು ನಿಷ್ಫಲವಾಗಿದೆ.'

ಮೊದಲನೆಯ ಎರಡು ವಾಕ್ಯಗಳಲ್ಲಿ ಉತ್ಪ್ರೇಕ್ಷಾಲಂಕಾರವೂ ಕಡೆಯ ವಾಕ್ಯದಲ್ಲಿ ಉಪಮಾಲಂಕಾರವೂ ಸ್ಫುಟವಾಗಿ ತೋರುತ್ತವೆ.

ಪರಸ್ಪರ ಭೇದವು ತೋರದಂತೆ ವಸ್ತುಗಳು ಮೇಳಸಗೊಂಡರೆ ನೀರಕ್ಷೀರನ್ಯಾಯವನ್ನು ಬಳಸುತ್ತಾರೆ. ಕಾವ್ಯದಲ್ಲಿ ಅಲಂಕಾರಗಳು ಈ ಬಗೆಯಿಂದ ಮಿಶ್ರವಾದಲ್ಲಿ ಅಲಂಕಾರಸಂಕರವೆಂದು ಹೆಸರು.

## 105. ತುಲೋನ್ನಮನನ್ಯಾಯ

ತುಲಾ–ತಕ್ಕಡಿಯನ್ನು, ಉನ್ನಮನ–ಎತ್ತುವುದು. ತಕ್ಕಡಿಯ ಒಂದು ಭಾಗವನ್ನು ಮೇಲಕ್ಕೆತ್ತಿದರೆ ಇನ್ನೊಂದು ಭಾಗವು ಕೆಳಕ್ಕೆ ಇಳಿಯುವುದು. ಇನ್ನೊಂದು ಭಾಗವನ್ನು ಕೆಳಕ್ಕಿಳಸದೆ ಒಂದು ಭಾಗವನ್ನು ಮೇಲೇರಿಸಲು ಸಾಧ್ಯವಿಲ್ಲ. ಕೆಳಕ್ಕಿಳಿಸಲು ಬೇರೆ ಪ್ರಯತ್ನವನ್ನೂ ಮಾಡಬೇಕಾಗಿಲ್ಲ. ಮೇಲೇರಿಸುವ ಒಂದೇ ಪ್ರಯತ್ನದಿಂದ ಅದಕ್ಕೆ ವಿರೋಧಿಯಾದ ಇನ್ನೊಂದು ಪಕ್ಕದ ಇಳಿಯುವ ಕಾರ್ಯವೂ ನಡೆಯುವುದು.

ಒಬ್ಬನಿಗೆ ಉಪಕಾರ ಮಾಡುವುದರಿಂದ ಇನ್ನೊಬ್ಬನಿಗೆ ಅಪಕಾರವೂ ಆಗಬಹುದಾದರೆ ಈ ನ್ಯಾಯವನ್ನು ಉಪಯೋಗಿಸಬಹುದು. ಒಬ್ಬರನ್ನು ಮುಖ್ಯಮಂತ್ರಿ ಪದವಿಗೇರಿಸಿದರೆ ಇನ್ನೊಬ್ಬರು ಆ ಸ್ಥಾನದಿಂದ ಕೆಳಕ್ಕಿಳಿಯಬೇಕಾಗುವುದು. ಇದೇ ತುಲೋನ್ನಮನನ್ಯಾಯ.

## 106. ತುಷಕಂಡನನ್ಯಾಯ

ಹೊಟ್ಟನ್ನು ಕುಟ್ಟುವುದರಿಂದ ಫಲವಿಲ್ಲ. ಅನಾವಶ್ಯಕವಾದ ವಸ್ತು

ವ್ಯರ್ಥವಾದ ಕೆಲಸವನ್ನು ವರ್ಣಿಸುವಾಗ ಈ ನ್ಯಾಯವನ್ನು ಬಳಸುತ್ತಾರೆ. ಪಿಷ್ಟಪೇಷಣ ನ್ಯಾಯ, ಜಲಮಂಥನನ್ಯಾಯ, ಗರ್ದಭ ರೋಮಗಣನ ನ್ಯಾಯ ಮತ್ತು ಕಾಕದಂತಪರೀಕ್ಷಾ ನ್ಯಾಯಗಳು ಈ ಅರ್ಥವನ್ನೇ ವಿವರಿಸುತ್ತವೆ. 'ಹಿತೋಪದೇಶ'ದಲ್ಲಿ ಈ ಶ್ಲೋಕವಿದೆ :—

ಅವಿಚಾರಯತೋ ಯುಕ್ತಿಕಥನಂ ತುಷಕಂಡನಂ ।
ನೀಚೇಷೂಪಕೃತಂ ರಾಜನ್ ವಾಲುಕಾಸ್ವಿವ ಮೂತ್ರಿತಂ ॥

"ವಿಚಾರವಿಲ್ಲದವನಿಗೆ ಉಪಾಯ ಬೋಧಿಸುವುದು ತುಷಕಂಡನವೇ ಸರಿ. ರಾಜನೆ, ನೀಚರಿಗೆ ಉಪಕಾರ ಮಾಡುವುದೆಂದರೆ ಮರಳಿನಲ್ಲಿ ಮೂತ್ರ ವಿಸರ್ಜನ ಮಾಡಿದ ಹಾಗೆ !"

## 107. ತುಷ್ಯತು ದುರ್ಜನನ್ಯಾಯ

'ದುಷ್ಟನು ಸಂತೋಷಪಡಲಿ' ಎಂಬ ನ್ಯಾಯ. ಪ್ರತಿವಾದಿಯು ಹೇಳಿದ ಪಕ್ಷವು ಅಯುಕ್ತವಾಗಿದ್ದರೂ ವಾದಿಯು ಗಂಭೀರಭಾವದಿಂದ ಅಂಗೀಕರಿಸಿ ಪ್ರತಿವಾದಿಯ ಮೇಲೆ ದೋಷಾಂತರವನ್ನು ಹೊರಿಸುವಾಗ ಈ ನ್ಯಾಯವನ್ನುಪಯೋಗಿಸುತ್ತಾರೆ. "ಒಳ್ಳೆಯದು ; ನೀನು ಹೇಳಿದ ಮಾತು ಹೌದೆಂದು ಒಪ್ಪಿಕೊಳ್ಳೋಣ. ಆದರೆ ಈ ಇನ್ನೊಂದು ಆಕ್ಷೇಪಣೆಗೆ ಏನು ಉತ್ತರ ಹೇಳುತ್ತೀಯೆ ?" ಎಂಬ ಅಭಿಪ್ರಾಯ ಈ ನ್ಯಾಯದ ತಾತ್ಪರ್ಯ.

## 108. ತೃಣಾರಣಿಮಣಿನ್ಯಾಯ

ತೃಣವೆಂದರೆ ಇಲ್ಲಿ ಬಿದಿರು ; ಅರಣಿ–ಯಾಗದಲ್ಲಿ ಅಗ್ನಿಮಥನ ಮಾಡುವ ಮರದ ಸಾಧನ. ಮಣಿ–ಭೂತಕನ್ನಡಿ. ಇವು ಮೂರರಲ್ಲಿ ಪ್ರತಿಯೊಂದರಿಂದಲೂ ಬೆಂಕಿಯನ್ನು ಹುಟ್ಟಿಸಬಹುದು. ಬೆಂಕಿಗೆ ಕಾರಣ ಯಾವುದೆಂದರೆ, ಇವು ಮೂರೂ ಹೌದು. ಬೆಂಕಿಗೆ ತೃಣವೇ ಕಾರಣ, ಅರಣಿಯೇ ಕಾರಣ ಅಥವಾ ಮಣಿಯೇ ಕಾರಣ ಎಂದು ನಿಯಮ ಮಾಡಲಾಗುವುದಿಲ್ಲ. ತೃಣಜನ್ಯವಹ್ನಿಗೆ ತೃಣ, ಅರಣಿಜನ್ಯವಹ್ನಿಗೆ ಅರಣಿ, ಮಣಿಜನ್ಯವಹ್ನಿಗೆ ಮಣಿ ಕಾರಣ.

ಕಾರ್ಯ ಉಂಟಾಗಲು ಅನೇಕ ಕಾರಣಗಳಿದ್ದಾಗ ಅವುಗಳಲ್ಲಿ ಯಾವುದೋ ಒಂದನ್ನೇ ಕಾರಣವೆಂದು ಹಠಹಿಡಿಯುವುದು ತಪ್ಪೆಂದು ಈ ನ್ಯಾಯ ಬೋಧಿಸುತ್ತದೆ.

"ವಹ್ನಿತ್ವಾವಚ್ಛಿನ್ನಂ ಪ್ರತಿ ತೃಣಾದಿಷ್ವನ್ಯತಮಸ್ಯೈವ ಕಾರಣತ್ವಂ ನಾಭ್ಯುಪೇಯತೇ ಪರಸ್ಪರವ್ಯಭಿಚಾರಾತ್ । ಯತ್ರ ಕಾರ್ಯಕಾರಣಭಾವ ಬಾಹುಲ್ಯಂ ಕಾರ್ಯತಾವಚ್ಛೇದಕಂ ಕಾರಣತಾವಚ್ಛೇದಕಂ ಚ ನಾನಾ ತತ್ರಾಸ್ಯ ಪ್ರವೃತ್ತಿಃ."

## 109. ತೈಲಪಾತ್ರಧರನ್ಯಾಯ

ಪಾತ್ರೆಯಲ್ಲಿ ಎಣ್ಣೆಯನ್ನು ತುಂಬಿಕೊಂಡು ಒಬ್ಬನು ಹೋಗುತ್ತಾನೆ. ಎಣ್ಣೆ ತುಂಬಿ ತುಳುಕುವಂತಿದೆ. ಒಂದು ತೊಟ್ಟು ಎಣ್ಣೆಯೂ ಈಚೆಗೆ ಬೀಳಕೂಡದು. ಬಿದ್ದರೆ ಅವನಿಗೆ ಮರಣದಂಡನೆ ! ಇಂತಹ ಸ್ಥಿತಿಯಲ್ಲಿ ಆತನು ಎಷ್ಟು ಎಚ್ಚರಿಕೆಯಿಂದಿರಬೇಕು ! ಹೀಗೆ ಅತ್ಯಂತ ಜಾಗರೂಕತೆ ಅವಶ್ಯಕವಾದಾಗ ಈ ನ್ಯಾಯವನ್ನು ಉಪಯೋಗಿಸುತ್ತಾರೆ.

## 110. ದಗ್ಧಪಟನ್ಯಾಯ

ಪಟ ಎಂದರೆ ವಸ್ತ್ರ. ಅದು ಬೆಂಕಿಯಲ್ಲಿ ಸುಟ್ಟುಹೋದ ಮೇಲೂ ನೆರಳಿನಂತೆ ಅದರ ಆಕಾರವು ಸ್ವಲ್ಪಕಾಲ ಉಳಿದಿರುವುದು. ಕಾಗದವನ್ನು ಸುಟ್ಟುಹಾಕಿದರೂ ಅದರ ಆಕೃತಿ ಸ್ವಲ್ಪಕಾಲ ತೋರುವುದು. ಹೀಗೆ ಒಂದು ವಸ್ತು ಸಂಪೂರ್ಣ ನಾಶಹೊಂದಿ ಅದು ಇಲ್ಲವೆಂಬುದು ನಿಶ್ಚಿತವಾದರೂ ಬಹಳ ಮಸುಕಾಗಿ ಇದೆಯೋ ಎಂಬಂತೆ ತೋರುತ್ತಿದ್ದರೆ ಈ ನ್ಯಾಯವನ್ನು ಬಳಸುತ್ತಾರೆ. ಮಂತ್ರಿಮಂಡಳವು ರಾಜೀನಾಮೆ ಕೊಟ್ಟ ಮೇಲೆ ನೂತನ ಮಂತ್ರಿಮಂಡಳವು ಅಧಿಕಾರಕ್ಕೆ ಬರುವವರೆಗೆ ಮೊದಲಿನ ಮಂತ್ರಿಮಂಡಳ ಅಸ್ತಿತ್ವದಲ್ಲಿರುತ್ತದೆಯೆಂದು ರಾಜ್ಯಪಾಲರು ಸೂಚಿಸುವುದುಂಟು. ಇಂತಹ ಮಂತ್ರಿಮಂಡಳಕ್ಕೆ ಛಾಯಾಸಂಪುಟ (Shadow Cabinet) ಎನ್ನುತ್ತಾರೆ. ಈ ಸಂಪುಟ ದಗ್ಧಪಟನ್ಯಾಯದಂತೆ ಇರುತ್ತದೆಯೆನ್ನಬಹುದು !

ವೇದಾಂತಿಯು ಜೀವನ್ಮುಕ್ತಾವಸ್ಥೆಯಲ್ಲಿರುವಾಗ ಸರ್ವವೂ ಸಚ್ಚಿದಾನಂದ ಸ್ವರೂಪವೆಂಬ ದೃಢನಿಶ್ಚಯವನ್ನು ಪಡೆದಿರುತ್ತಾನೆ. ಆದರೆ ಅವನು ದೇಹವನ್ನು ಬಿಡುವವರೆಗೂ ಲೋಕವ್ಯವಹಾರ ತಪ್ಪಿದ್ದಲ್ಲ. ಆ ಸ್ಥಿತಿಯಲ್ಲಿ ಜೀವನ್ಮುಕ್ತರಿಗೆ ದೇಹೇಂದ್ರಿಯಗಳ, ಆಹಾರಪಾನೀಯಗಳ ಭೇದ ಜ್ಞಾನ ಇರುತ್ತದೆಯೆ ? ಇಲ್ಲವೆ ?—ಎಂಬ ಪ್ರಶ್ನೆ ಉದ್ಭವಿಸುತ್ತದೆ. ಇದಕ್ಕೆ ವೇದಾಂತಿಗಳು ಹೇಳುವುದೇನೆಂದರೆ, "ಆತ್ಮನಿಗೆ ಭೇದಜ್ಞಾನವು ದಗ್ಧಪಟನ್ಯಾಯದಂತೆ ಆಪಾತತಃ ಇರುತ್ತದೆ. ವಸ್ತ್ರವು ಸುಟ್ಟು ಹೋಗಿದ್ದರೂ 'ಇದು ವಸ್ತ್ರ' ಎಂಬಂತೆ ವ್ಯವಹಾರ ಮಾತ್ರ ಉಳಿದಿರುತ್ತದೆ."

## 111. ದಗ್ಧಬೀಜನ್ಯಾಯ

ಸುಟ್ಟುಹೋದ ಬೀಜ ಎಂದಿಗೂ ಮೊಳೆಯುವುದಿಲ್ಲ. ಕಾರಣಭೂತವಾದ ಅಂಶವು ನಷ್ಟವಾದಲ್ಲಿ ಕಾರ್ಯವೆಂದಿಗೂ ಜನಿಸುವುದಿಲ್ಲ. ಕಾಲಿನಲ್ಲಿ ನೆಟ್ಟ ಮುಳ್ಳಿನಿಂದ ನೋವು ಉಂಟಾಗಿದೆ. ಮುಳ್ಳನ್ನು ತೆಗೆದ ಮೇಲೆ

ನೋವಿರಲು ಕಾರಣವಿಲ್ಲ. 'ಚಕ್ರಭ್ರಮಣನ್ಯಾಯ'ದಂತೆ ಸ್ವಲ್ಪ ಕಾಲ ಉಳಿದಿದ್ದರೂ ಹೊಸ ನೋವು ಹುಟ್ಟಲು ಕಾರಣವಿಲ್ಲ.

ಜೀವಿಯು ಮಾಡಿರುವ ಪುಣ್ಯಪಾಪರೂಪವಾದ ಕರ್ಮವು ಜನ್ಮಕ್ಕೆ ಕಾರಣವಾಗುತ್ತದೆ. ಏಕೆಂದರೆ, ಪುಣ್ಯ ಪಾಪಗಳನ್ನು ಅನುಭವಿಸಿಯೇ ತೀರಿಸಬೇಕು. ಅವುಗಳನ್ನು ಅನುಭವಿಸಲು ಶರೀರಬೇಕು. ಆದ್ದರಿಂದ ಜೀವನು ಶರೀರವನ್ನು ಧರಿಸುತ್ತಾನೆ—ಎಂದರೆ ಹುಟ್ಟುತ್ತಾನೆ. ಕರ್ಮವು ನಷ್ಟವಾದರೆ ಶರೀರವೂ ಇಲ್ಲ—ಸಂಸಾರವೂ ಇಲ್ಲ. 'ಸ್ಯಾದ್ವಾದ ಮಂಜರಿ'ಯಲ್ಲಿ ಹೀಗಿದೆ :—

ದಗ್ಧೇ ಬೀಜೇ ಯಥಾತ್ಯಂತಂ ಪ್ರಾದುರ್ಭವತಿ ನಾಂಕುರಃ ।
ಕರ್ಮಬೀಜೇ ತಥಾ ದಗ್ಧೇ ನ ರೋಹತಿ ಭವಾಂಕುರಃ ॥

"ಬೀಜವು ಸುಟ್ಟುಹೋದರೆ ಹೇಗೆ ಮೊಳಕೆಯು ಹುಟ್ಟುವುದೇ ಇಲ್ಲವೋ ಹಾಗೆ ಕರ್ಮವೆಂಬ ಬೀಜ ಸುಟ್ಟುಹೋದರೆ ಸಂಸಾರವೆಂಬ ಮೊಳಕೆ ಹುಟ್ಟುವುದಿಲ್ಲ."

## 112. ದರಿದ್ರದಂಪತೀಕಂಬಲನ್ಯಾಯ

ದಂಪತಿಗಳು ಬಡವರು ; ಚಳಿಗಾಲ ; ಇರುವುದೊಂದೇ ಕಂಬಳಿ, ಅದೂ ಚಿಕ್ಕದು. ಇಬ್ಬರೂ ಅದನ್ನು ಹೊದೆದುಕೊಂಡಿದ್ದಾರೆ. ಸರಿಯಾಗಿ ಮೈಮುಚ್ಚುವುದಿಲ್ಲ. ಹೆಂಡತಿ ಅದನ್ನು ಎಳೆದುಕೊಂಡರೆ ಗಂಡನಿಗೆ ತಪ್ಪಿಹೋಗುವುದು. ಗಂಡನು ಅದನ್ನು ಎಳೆದುಕೊಂಡರೆ ಹೆಂಡತಿಗೆ ತಪ್ಪಿಹೋಗುವುದು ! ಇಬ್ಬರೂ ಹೊದೆಯುವುದಕ್ಕೆ ಅದು ಸಾಲದು ! ಹೀಗೆ ಒಬ್ಬರಿಗೆ ಉಪಕಾರ ಮಾಡಲು ಹೋದಾಗ ಇಷ್ಟವಿಲ್ಲದಿದ್ದರೂ ಇನ್ನೊಬ್ಬರಿಗೆ ಅಪಕಾರವಾಗುವಾಗ ಈ ನ್ಯಾಯವನ್ನು ಉಪಯೋಗಿಸುತ್ತಾರೆ ಮತ್ತು ಶಾಸ್ತ್ರದಲ್ಲಿ ಲಕ್ಷಣವನ್ನು ಪರಿಷ್ಕಾರ ಮಾಡಿದಾಗ ಹೇಗೆ ತಿರುಗಿಸಿದರೂ ದೋಷ ಸಂಭವಿಸಿದಲ್ಲಿ ಈ ನ್ಯಾಯವನ್ನು ಬಳಸುತ್ತಾರೆ. 'ಉಭಯತಸ್ಪಾಶಾ ರಜ್ಜುಃ' ಎಂಬ ನ್ಯಾಯವನ್ನು ಇದು ಹೋಲುತ್ತದೆ.

## 113. ದಂಡಸರ್ಪಮಾರಣನ್ಯಾಯ

ದೊಣ್ಣೆಯಿಂದ ಸರ್ಪವನ್ನು ಕೊಲ್ಲುವುದು. ಒಬ್ಬ ಮೂರ್ಖನ ಮನೆಗೆ ಸರ್ಪ ಹೊಕ್ಕಿತು. ಸರ್ಪವನ್ನು ದೊಣ್ಣೆಯಿಂದ ಹೊಡೆದು ಕೊಲ್ಲುತ್ತಾರೆಂದು ಅವನಿಗೆ ಗೊತ್ತಿತ್ತು. ದೊಣ್ಣೆಯನ್ನು ಹುಡುಕಿದನು ; ಸಿಗಲಿಲ್ಲ. ಒಂದು ಕೊಡಲಿ ಕೈಗೆ ಸಿಕ್ಕಿತು. ಅದರಿಂದಲೇ ಸರ್ಪವನ್ನು ಕೊಲ್ಲಬಹುದಾಗಿತ್ತು. ಆದರೆ ಅವನು ಹುಡುಕುತ್ತಿದ್ದುದು ದೊಣ್ಣೆ ತಾನೆ ! ಅದನ್ನು ಕಡಿದು ತರಲು ಕೊಡಲಿಯನ್ನು ತೆಗೆದುಕೊಂಡು ಹೊರ

ಟನು. ದೊಣ್ಣೆಯನ್ನು ಕಡಿದು ತರುವ ಹೊತ್ತಿಗೆ ಸರ್ಪ ಮಾಯವಾಗಿತ್ತು ! ಸಮಯಸ್ಫೂರ್ತಿಯಿಲ್ಲದೆ ಕೆಲಸವನ್ನು ಕೆಡಿಸಿಕೊಂಡಾಗ ಈ ನ್ಯಾಯ ಉಪಯುಕ್ತವಾಗುತ್ತದೆ.

## 114. ದಂಡಾಪೂಪಿಕಾನ್ಯಾಯ

ಅಪೂಪಿಕಾ ಎಂದರೆ ಹಿಟ್ಟಿನಿಂದ ಮಾಡಿದ ಒಂದು ಭಕ್ಷ್ಯ, ರೊಟ್ಟಿ ಅಥವಾ ಚಪಾತಿ ಎಂದಿಟ್ಟುಕೊಳ್ಳಬಹುದು. ಒಂದು ದೊಣ್ಣೆಗೆ ಚಪಾತಿಗಳನ್ನು ಕಟ್ಟಿ ತೂಗುಹಾಕಿದ್ದರು. ದೊಣ್ಣೆಯನ್ನು ಇಲಿಯು ತಿಂದುಹಾಕಿತು. ಚಪಾತಿಗಳ ಗತಿ ಏನಾಗಿರಬಹುದು ? ಇಲಿಗಳೇ ತಿಂದುಹಾಕಿದವೆಂಬುದು ನಿಶ್ಚಿತ. ದೊಣ್ಣೆಯನ್ನೇ ಇಲಿಗಳು ತಿಂದುಹಾಕಿದವೆಂದರೆ ಚಪಾತಿಗಳನ್ನು ತಿಂದವೆಂಬುದು ಅರ್ಥಾತ್‌ಸಿದ್ಧ. ಹೀಗೆ ಆರ್ಥಿಕವಾಗಿ ಒಂದು ವಸ್ತುವನ್ನು ಸಾಧಿಸುವಾಗ ಈ ನ್ಯಾಯವನ್ನು ಉಪಯೋಗಿಸುತ್ತಾರೆ.

"ದೇವದತ್ತನು ದೃಢಕಾಯನಾಗಿದ್ದಾನೆ. ಅವನು ಹಗಲು ಊಟ ಮಾಡುವುದಿಲ್ಲ" ಎಂದು ಹೇಳಿದರೆ, ದೇವದತ್ತನು ರಾತ್ರಿ ಊಟ ಮಾಡುತ್ತಾನೆಂದು ಆರ್ಥಿಕವಾಗಿ ಸಿದ್ಧವಾಗುತ್ತದೆ. ಏಕೆಂದರೆ, ಊಟವನ್ನೇ ಮಾಡದಿದ್ದರೆ ಅವನು ದೃಢಕಾಯನಾಗಿರಲು ಸಾಧ್ಯವಿಲ್ಲ. ಹಗಲು ಊಟ ಮಾಡದಿದ್ದರೆ ರಾತ್ರಿ ಊಟ ಮಾಡುತ್ತಾನೆಂದು ನಿಶ್ಚಿತವಾಗಿ ಹೇಳಬಹುದು. ಇದು ಅರ್ಥಾಪತ್ತಿ ಪ್ರಮಾಣದಿಂದ ಸಿದ್ಧವಾಗುತ್ತದೆಯೆಂದು ಕೆಲವರೂ, ಅನುಮಾನಪ್ರಮಾಣದಿಂದ ಎಂದು ಇತರರೂ ಹೇಳುವರು. ಕೈಮುತಿಕ ನ್ಯಾಯವೆಂಬುದೂ ಹೀಗೆಯೇ ಉಪಯುಕ್ತವಾಗುತ್ತದೆ. ಕಿಮುತ—ಎಷ್ಟರಮಟ್ಟಿಗೆ ? ಅದರ ವಿಷಯ ಹೇಳಬೇಕಾದ್ದೇನು ?—ಎಂದರ್ಥ.

ಈ ನ್ಯಾಯವನ್ನು ಕುವಲಯಾನಂದದಲ್ಲಿ ಕಾವ್ಯಾರ್ಥಪತ್ತಿ ಎಂಬ ಅಲಂಕಾರ ಪ್ರಕರಣದಲ್ಲಿ ಉಪಯೋಗಿಸಿದ್ದಾರೆ :—

"ಸ ಜಿತಸ್ತ್ವನ್ಮುಖೇನೇಂದುಃ ಕಾ ವಾರ್ತಾ ಸರಸೀರುಹಾಂ ।

ಅರ್ಥ :—ಪ್ರಿಯೆ, ನಿನ್ನ ಮುಖದಿಂದ ಚಂದ್ರನೇ ಪರಾಜಿತನಾಗಿದ್ದಾನೆ. ಕಮಲಗಳ ವಿಷಯ ಹೇಳತಕ್ಕದ್ದೇನು ?

ಕಮಲಗಳನ್ನು ಚಂದ್ರನು ಬಾಡಿಸುವುದರಿಂದ ಅವುಗಳಿಗಿಂತ ಚಂದ್ರನೇ ಶೂರ. ಮುಖವು ಚಂದ್ರನನ್ನೇ ಗೆದ್ದಮೇಲೆ ಕಮಲಗಳನ್ನು ಗೆದ್ದಹಾಗೆಯೇ. ಕಮಲಗಳು ಪರಾಜಿತವಾಗಿವೆಯೆಂಬುದು ದಂಡಾಪೂಪಿಕಾನ್ಯಾಯದಿಂದ ಸಿದ್ಧವಾಗುತ್ತದೆ.

ಈ ನ್ಯಾಯಕ್ಕೆ ಇನ್ನೊಂದು ಬಗೆಯಲ್ಲಿಯೂ ಅರ್ಥವನ್ನು ಹೇಳ

ಬಹುದು. ದೊಣ್ಣೆಗೆ ಚಪಾತಿಗಳನ್ನು ತೂಗುಹಾಕಿದ್ದರು. ಕಳ್ಳನು ದೊಣ್ಣೆಯನ್ನು ಎಳೆದುಕೊಂಡು ಓಡಿಹೋದನು. ಚಪಾತಿಗಳು ಕಳ್ಳನ ಪಾಲಾದವೆಂದು ಪುನಃ ಹೇಳಬೇಕಾದ್ದಿಲ್ಲ ; ಅರ್ಥಾಪತ್ತಿಯಿಂದ ಸಿದ್ಧ ವಾಗುತ್ತದೆ.

## 115. ದೀರ್ಘಶಷ್ಕುಲೀಭಕ್ಷಣನ್ಯಾಯ

ಉದ್ದವಾದ ಚಕ್ಕುಲಿಗಳನ್ನು ತಿನ್ನುವಾಗ ಪಂಚೇಂದ್ರಿಯಗಳೂ ಸುಖವನ್ನನುಭವಿಸುತ್ತವೆ ! ಚಕ್ಕುಲಿ ಉದ್ದವಾದ್ದರಿಂದ ಕೈಯಲ್ಲಿ ಹಿಡಿದು ಕೊಂಡು ತಿನ್ನುತ್ತೇವೆಂದು ಇಟ್ಟುಕೊಳ್ಳೋಣ. ಚಕ್ಕುಲಿಯ ಸ್ಪರ್ಶವನ್ನು ತ್ವಗಿಂದ್ರಿಯವು ತಿಳಿಯುತ್ತದೆ. ಅದರ ರೂಪವನ್ನು ಚಕ್ಷುರಿಂದ್ರಿಯ ಗ್ರಹಿಸು ತ್ತದೆ. ರುಚಿಯನ್ನು ಜಿಹ್ವೇಂದ್ರಿಯ ಅನುಭವಿಸುತ್ತದೆ. ಚಕ್ಕುಲಿಯಲ್ಲಿ ಸೇರಿದ ಜೀರಿಗೆ, ತುಪ್ಪ ಮುಂತಾದವುಗಳ ಸುಗಂಧವನ್ನು ಘ್ರಾಣೇಂದ್ರಿಯ ಅರಿತುಕೊಳ್ಳುತ್ತದೆ. 'ಕರಂ ಕುರಂ' ಎಂಬ ಶಬ್ದವನ್ನು ಶ್ರೋತ್ರೇಂದ್ರಿಯ ಕೇಳುತ್ತದೆ. ಹೀಗೆ ಏಕಕಾಲದಲ್ಲಿ ಶಬ್ದ, ಸ್ಪರ್ಶ, ರೂಪ, ರಸ, ಗಂಧ ಗಳೆಂಬ ವಿಷಯಗಳ ಜ್ಞಾನವು ಪಂಚೇಂದ್ರಿಯಗಳ ಮೂಲಕ ಆಗುವುದ ರಿಂದ ಅನೇಕ ವಿಷಯಗಳ ಅನೇಕ ಜ್ಞಾನಗಳು ಏಕಕಾಲದಲ್ಲಿ ಆಗಬಹುದು ಎಂಬುದಕ್ಕೆ ಇದನ್ನು ದೃಷ್ಟಾಂತವಾಗಿ ಶಾಸ್ತ್ರಗಳಲ್ಲಿ ಉಪಯೋಗಿಸುತ್ತಾರೆ. ಆದರೆ ಏಕಕಾಲದಲ್ಲಿ ಅನೇಕ ಜ್ಞಾನಗಳು ಉಂಟಾಗುವುದಿಲ್ಲ. ಏಕಕಾಲದಲ್ಲಿ ಎಲ್ಲವೂ ಉಂಟಾದಂತೆ ತೋರುತ್ತದೆಯೆಂಬುದು ಸಿದ್ಧಾಂತ. ಕ್ರಮಿಕ ವಾಗಿ ನಡೆದ ಕೆಲಸಗಳೂ ಏಕಕಾಲದಲ್ಲಿ ನಡೆದಂತೆ ತೋರಬಹುದು. ಅದಕ್ಕೆ "ಶತಪತ್ರ ಪತ್ರಶತ ಭೇದ ನ್ಯಾಯ"ವನ್ನು ದೃಷ್ಟಾಂತವಾಗಿ ಹೇಳುವರು.

ಮಾಘಕವಿಯ ಶಿಶುಪಾಲವಧ ಕಾವ್ಯದಲ್ಲಿ ಮದ್ಯಪಾನವನ್ನು ವರ್ಣಿ ಸುವ ಒಂದು ಸುಂದರವಾದ ಶ್ಲೋಕವಿದೆ :

ಕ್ರಾಂತಕಾಂತವದನಪ್ರತಿಬಿಂಬೇ ಭಗ್ನಬಾಲಸಹಕಾರ
ಸುಗಂಧೌ ।
ಸ್ವಾದುನಿ ಪ್ರಣದಿತಾಲಿನಿ ಶೀತೇ ನಿರ್ವವಾರ
ಮಧುನೀಂದ್ರಿಯವರ್ಗಃ ॥

ತಾತ್ಪರ್ಯ :—ಒಬ್ಬ ತರುಣಿಯು ಸುವರ್ಣಪಾತ್ರೆಯಲ್ಲಿ ಮದ್ಯ ವನ್ನು ಪಾನ ಮಾಡುತ್ತಿದ್ದಾಳೆ. ಅವಳ ಪ್ರಿಯನು ಭುಜದ ಹಿಂದೆ ನಿಂತಿ ದ್ದಾನೆ. ಆದ್ದರಿಂದ ಅವನ ಮುಖ ಮದ್ಯಪಾತ್ರೆಯಲ್ಲಿ ಪ್ರತಿಬಿಂಬಿತ ವಾಗಿದೆ. ಮಾವಿನಮರದ ಹೂವಿನಿಂದ ಮದ್ಯವು ಸುಗಂಧಿಯಾಗಿದೆ ; ರುಚಿಯಾಗಿದೆ ; ದುಂಬಿಗಳು ಮದ್ಯಪಾತ್ರೆಯ ಸುತ್ತಲೂ ಝೇಂಕರಿಸುತ್ತಾ ಇವೆ ; ಮದ್ಯವು ಶೀತಲವಾಗಿದೆ. ಆದುದರಿಂದ ಆ ತರುಣಿಯ ಪಂಚೇಂದ್ರಿಯಗಳೂ ತೃಪ್ತಿಹೊಂದಿದವು.

ಪ್ರಿಯಮುಖ ದರ್ಶನದಿಂದ ನೇತ್ರಗಳೂ, ಸುಗಂಧದಿಂದ ಘ್ರಾಣವೂ, ರುಚಿಯಾದ್ದರಿಂದ ಜಿಹ್ವೆಯೂ, ದುಂಬಿಗಳ ಝೇಂಕಾರದಿಂದ ಶ್ರೋತ್ರಗಳೂ, ಶೀತಲವಾದ್ದರಿಂದ ತ್ವಗಿಂದ್ರಿಯವೂ ಆನಂದಿಸಿದವೆಂದು ಕವಿಯ ಆಶಯ.

ಶಾಸ್ತ್ರಕಾರರ ದೀರ್ಘಶಷ್ಕುಲೀಭಕ್ಷಣವನ್ನೂ ಕವಿಯ ಮದ್ಯಪಾನ ವರ್ಣನೆಯನ್ನೂ ಹೋಲಿಸಿ ನೋಡಿರಿ. ಒರಟುತನಕ್ಕೂ ಸಹೃದಯತೆಗೂ ಇರುವ ಭೇದ ಎಷ್ಟು ಸ್ಫುಟವಾಗಿದೆ !

## 116. ದೇವದತ್ತಹಂತೃಹತನ್ಯಾಯ

ದೇವದತ್ತನನ್ನು ಯಾವನು ಕೊಂದಿರುವನೋ ಅವನನ್ನು ಕೊಂದರೆ ದೇವದತ್ತನು ಬದುಕುವುದಿಲ್ಲ. ಕೊಲೆಗಡುಕನ ಮರಣದಿಂದ ಕೊಲೆಯಾದ ವನು ಪುನಃ ಜೀವಿಸಲಾರನೆಂಬುದು ಅಭಿಮತವಾದ ಅಂಶ. 'ಮಿಂಚಿ ಹೋದುದಕ್ಕೆ ಚಿಂತಿಸಿ ಫಲವೇನು ?' ಎಂಬ ಕನ್ನಡ ಗಾದೆಗೂ ಇದಕ್ಕೂ ತಕ್ಕಮಟ್ಟಿಗೆ ಸಾಮ್ಯವಿದೆ. ಒಂದು ಕಾರ್ಯ ನಡೆಯುವುದಕ್ಕೆ ಮೊದಲೇ ಅದರ ಪರಿಹಾರವನ್ನು ಯೋಚಿಸಬೇಕು. ದೇವದತ್ತನನ್ನು ಕೊಲ್ಲಲು ಕೈಯೆತ್ತಿದವನನ್ನು ಕೊಂದರೆ ದೇವದತ್ತನು ಉಳಿದುಕೊಳ್ಳುವನು. ದೇವ ದತ್ತನು ಮೃತನಾದ ಮೇಲೆ ಕೊಲೆಗಡುಕನನ್ನು ಕೊಂದರೆ ಮಾತ್ರ ದೇವದತ್ತ ಬದುಕಲಾರ. ವ್ಯಾಕರಣಮಹಾಭಾಷ್ಯದಲ್ಲಿ ಈ ನ್ಯಾಯ ಅನೇಕ ಕಡೆ ಪ್ರಯೋಗಿಸಲ್ಪಟ್ಟಿದೆ.

## 117. ದೇವದತ್ತಶೌರ್ಯನ್ಯಾಯ

ದೇವದತ್ತನೆಂಬ ಮನುಷ್ಯ ಶೂರನೆಂದು ಪ್ರಸಿದ್ಧಿ. ಅವನಲ್ಲಿ ಶೌರ್ಯವಿದೆ. ಅವನು ದೇಶಾಂತರಕ್ಕೆ ಹೋದರೆ ಅಲ್ಲಿ ಅವನ ಶೌರ್ಯವು ಪ್ರಕಾಶಕ್ಕೆ ಬರಬಹುದು. ಜನರಿಗೆ ಆತನ ಶೌರ್ಯ ತಿಳಿಯದಿರಬಹುದು, ಆದರೆ ಅವನು ದೇವದತ್ತನೇ ಸರಿ. ಅಥವಾ ಇನ್ನಾವ ಕಾರಣದಿಂದಲೋ ಅವನಲ್ಲಿ ಹಿಂದಿನ ಶೌರ್ಯ ಇಲ್ಲದಿರಬಹುದು. ಆದರೂ ಅವನು ದೇವದತ್ತ ನಲ್ಲದೆ ಬೇರೆ ಪುರುಷನಾಗಲಾರ. ಗುಣವಾಗಲಿ, ವೇಷವಾಗಲಿ, ವ್ಯಕ್ತಿ ಯನ್ನೇ ಬದಲಿಸಲಾರದೆಂಬುದಕ್ಕೆ ಈ ನ್ಯಾಯ ದೃಷ್ಟಾಂತವಾಗುತ್ತದೆ. ಜರೀಪೇಟದವನು ಖಾದಿ ಟೋಪಿಯನ್ನು ಹಾಕಿದರೆ ಅವನು ಗಾಂಧಿಭಕ್ತ ನಾಗಲಾರ. ಟೋಪಿಯಿಂದ ವೇಷ ಬೇರೆ ಆಯಿತೇ ಹೊರತು ಅವನ ಸ್ವಭಾವ ಬೇರೆಯಾಗಿ ಅನ್ಯವ್ಯಕ್ತಿಯಾಗಲಾರನಷ್ಟೆ.

ಮಹಾಭಾಷ್ಯದಲ್ಲಿ ಗುಣಗಳು ಅಭೇದಕಗಳು ಎಂದು ಹೇಳಿ "ಗುಣ ಗಳು ವ್ಯಕ್ತಿಯ ಭೇದಕ್ಕೆ ಕಾರಣವಾಗಲಾರವು. ದೇವದತ್ತನು ತಲೆಯನ್ನು

ಬೋಳಿಸಿಕೊಂಡು ಮುಂಡಿಯಾಗಲಿ ಅಥವಾ ಜಟಾಧಾರಿಯಾಗಲಿ ಇಲ್ಲವೇ ಜುಟ್ಟನ್ನು ಬಿಡಿಸಲಿ, ಅವನು ದೇವದತ್ತನೇ ಎಂದು ಹೇಳಿದ್ದಾರೆ. ಇದಕ್ಕೆ, ವ್ಯಾಖ್ಯಾನಮಾಡುತ್ತಾ ಕೈಯಟನು ಹೇಳುವುದನ್ನು ನೋಡಿ "ಬೋಳು ದಲೆಯ ಮನುಷ್ಯ ಕಳ್ಳತನ ಮಾಡಿ ಆಮೇಲೆ ಜುಟ್ಟನ್ನು ಬಿಡಿಸಿಕೊಂಡರೂ, ಅವನನ್ನು ಕಳ್ಳನೆಂದೇ ವ್ಯವಹರಿಸುತ್ತಾರೆ" !

## 118. ದೇಹಲೀದೀಪನ್ಯಾಯ

ದೇಹಲಿಯೆಂದರೆ ಹೊಸ್ತಿಲು. ಅದರ ಬಳಿ ದೀಪವನ್ನಿಟ್ಟರೆ ಪ್ರಕಾಶವು ಒಳ ಜಗಲಿಗೂ ಹೊರ ಅಂಗಳಕ್ಕೂ ಹರಡುವುದು. ಬಡವರ ಮನೆಗಳಲ್ಲಿ ಈ ವಿಧಾನವನ್ನು ಈಗಲೂ ನೋಡಬಹುದು. ಒಂದೇ ಕೆಲಸ ದಿಂದ ಎರಡು ಕಾರ್ಯಗಳಾಗುವಂತಿದ್ದರೆ ಅಥವಾ ಒಂದೇ ಶಬ್ದಕ್ಕೆ ಎರಡು ಕಡೆ ಅನ್ವಯವಿದ್ದರೆ ದೃಷ್ಟಾಂತವಾಗಿ ಈ ನ್ಯಾಯವನ್ನು ಉಪಯೋಗಿಸು ತ್ತಾರೆ. ಕಾಕಾಕ್ಷಿಗೋಲಕನ್ಯಾಯದಂತೆಯೇ ಇದರ ಉಪಯೋಗವಿದೆ.

## 119. ಧಾನ್ಯಪಲಾಲನ್ಯಾಯ

ಪಲಾಲವೆಂದರೆ ಹೊಟ್ಟು. ಕಾಳಿನ ಮೇಲೆ ಹೊಟ್ಟು ಇರುತ್ತದೆ. ಹೊಟ್ಟು ತಿನ್ನಲು ಅನರ್ಹವೆಂದು ಕಾಳನ್ನು ಯಾರೂ ಎಸೆಯುವುದಿಲ್ಲ. ಹೊಟ್ಟನ್ನು ತೆಗೆದುಹಾಕಿ ಕಾಳನ್ನು ಉಪಯೋಗಿಸುತ್ತಾರೆ. ಹಾಗೆ ಸುಖ ವನ್ನೂ, ಪ್ರಯೋಜನವನ್ನೂ ಕೊಡತಕ್ಕ ವಸ್ತುವಿನಿಂದ ದುಃಖವೂ, ಕಷ್ಟವೂ, ಸಂಭವಿಸುವುದೆಂದು ಆ ವಸ್ತುವನ್ನೇ ತ್ಯಜಿಸುವುದು ಬುದ್ಧಿ ವಂತಿಕೆಯಲ್ಲ. ಈ ಬಗ್ಗೆ ಒಬ್ಬ ಕವಿಯು ಹೇಳುತ್ತಾನೆ : "ವಿಷಯ ಸುಖದಲ್ಲಿ ದುಃಖವೂ ಮಿಶ್ರವಾಗಿದೆಯೆಂದು ಅದನ್ನು ಬಿಟ್ಟುಬಿಡಬೇಕೆನ್ನು ವುದು ಬುದ್ಧಿಯಿಲ್ಲದವರ ಅಭಿಪ್ರಾಯ. ಊಟಮಾಡಬೇಕೆಂದಿರುವ ಯಾವನು ತಾನೇ ಹೊಟ್ಟು ಇದೆಯೆಂದು ಕಾಳುಗಳನ್ನು ಎಸೆಯುತ್ತಾನೆ ?" ಪಂಚದಶಿಯಲ್ಲಿ ಈ ಶ್ಲೋಕವಿದೆ.

ಗ್ರಂಥಮಭ್ಯಸ್ಯ ಮೇಧಾವೀ ಜ್ಞಾನವಿಜ್ಞಾನ ತತ್ಪರಃ ।
ಪಲಾಲಮಿವ ಧಾನ್ಯಾರ್ಥೀ ತ್ಯಜೇದ್ ಗ್ರಂಥಮಶೇಷತಃ ॥

"ಶಾಸ್ತ್ರಗಳನ್ನೋದಿ ಬುದ್ಧಿವಂತನೂ, ಜ್ಞಾನಿಯೂ ಆದಮೇಲೆ ಆ ಗ್ರಂಥಗಳನ್ನೆಲ್ಲಾ ಸಂಪೂರ್ಣವಾಗಿ ಬಿಟ್ಟುಬಿಡಬೇಕು. ಕಾಳನ್ನು ಬಯಸು ವವನು ಹೊಟ್ಟನ್ನು ಎಸೆಯುವ ಹಾಗೆ."

## 120. ಧೇನುಪನ್ನಗನ್ಯಾಯ

ಧೇನು-ಹಸು. ಪನ್ನಗ-ಹಾವು. ಹಸು ಹುಲ್ಲನ್ನು ತಿಂದು ಹಾಲು ಕೊಡುತ್ತದೆ. ಹಾವು ಹಾಲನ್ನು ಕುಡಿದು ವಿಷವನ್ನೀಯುತ್ತದೆ !

ಸತ್ಪುರುಷನು ಅಲ್ಪವಾದ ಉಪಕಾರವನ್ನೇ ದೊಡ್ಡದೆಂದೆಣಿಸಿ ಪ್ರತ್ಯುಪಕಾರಮಾಡುತ್ತಾನೆ. ದುಷ್ಟನು ಉಪಕಾರಕ್ಕೆ ಪ್ರತಿಯಾಗಿ ಅಪಕಾರವನ್ನೇ ಮಾಡುತ್ತಾನೆ ಎಂದು ವಿವರಿಸುವುದಕ್ಕೆ ಇದು ಉಪಯುಕ್ತವಾಗಿದೆ.

## 121. ನ ಖಲು ಕುಟಜಬೀಜಾದ್ ವಟಾಂಕುರೋ ಜಾಯತೇ

ಕೊಡಸಿನ ಬೀಜದಿಂದ ಆಲದ ಗಿಡ ಹುಟ್ಟುವುದಿಲ್ಲ. ಕಾರಣಕ್ಕೆ ಅನುಗುಣವಾದ ಕಾರ್ಯ ಹುಟ್ಟುತ್ತದೆ. ಒಳ್ಳೆಯ ಕೆಲಸಕ್ಕೆ ಒಳ್ಳೆಯ ಫಲ. ಕೆಟ್ಟ ಕೆಲಸಕ್ಕೆ ಕೆಟ್ಟ ಫಲ ಎಂಬುದು ಈ ನ್ಯಾಯದ ಅಭಿಪ್ರಾಯ. ಮನುಸ್ಮೃತಿಯಲ್ಲಿ ಈ ಶ್ಲೋಕವಿದೆ :

ಅನ್ಯದುಪ್ತಂ ಜಾತಮನ್ಯದಿತ್ಯೇತನ್ನೋಪಪದ್ಯತೇ ।<br>
ಉಪ್ಯತೇ ಯದ್ಧಿ ಯದ್ಬೀಜಂ ತತ್ತದೇವ ಪ್ರರೋಹತಿ<br>
॥ 10–40 ॥

"ಒಂದನ್ನು ಬಿತ್ತಲಾಯಿತು, ವಿರುದ್ಧವಾದ ಇನ್ನೊಂದು ಹುಟ್ಟಿತು ಎಂಬುದು ಸರಿಯಲ್ಲ. ಯಾವ ಬೀಜವನ್ನು ಬಿತ್ತಲಾಗುವುದೋ ಅದೇ ಗಿಡವಾಗುತ್ತದೆ."

As shall you sow, so shall you reap ಎಂಬ ಆಂಗ್ಲ ಗಾದೆಯನ್ನು ಇದು ಹೋಲುತ್ತದೆ.

## 122. ನಟಭಾರ್ಯಾನ್ಯಾಯ

ಸ್ತ್ರೀ ಪಾತ್ರವನ್ನು ವಹಿಸಿರುವ ನಟಿ ಸಮಯಾನುಸಾರವಾಗಿ ಎಲ್ಲ ನಟರಿಗೂ ಭಾರ್ಯೆಯಂತೆ ನಡೆದುಕೊಳ್ಳುತ್ತಾಳೆ. ಯಾರ ಹೆಂಡತಿಯ ಪಾತ್ರವನ್ನಾದರೂ ಅವಳು ನಿರ್ವಹಿಸುತ್ತಾಳೆ. ಸಂದರ್ಭಾನುಸಾರವಾಗಿ ಯಾರನ್ನು ಬೇಕಾದರೂ ಒಬ್ಬನು ಅನುಸರಿಸುತ್ತಾನೆಯೆನ್ನುವಾಗ ಈ ನ್ಯಾಯದ ಉಪಯೋಗ. 'ಪದ ಬಂದಂತೆ ಅರ್ಥ'. ವ್ಯಾಕರಣದಲ್ಲಿ ವ್ಯಂಜನಗಳು ಸ್ವರದ ಬಳಿ ಇದ್ದಾಗ ಸ್ವರಕ್ಕೆ ಹೇಳಿದ ಕಾರ್ಯ ವ್ಯಂಜನಕ್ಕೂ ಬರುತ್ತದೆಯೆಂದು ಹೇಳಲು ವ್ಯಾಕರಣಮಹಾಭಾಷ್ಯದಲ್ಲಿ ಈ ನ್ಯಾಯವನ್ನು ಬಳಸಿದ್ದಾರೆ. (ಅಷ್ಟಾ : 6–1–23). "ವ್ಯಂಜನಾನಿ ಪುನರ್ನಟಭಾರ್ಯಾವದ್ ಭವಂತಿ. ಯಥಾ ನಟಾನಾಂ ಸ್ತ್ರಿಯೋ ರಂಗಗತಾ— ಯೋ ಯಃ ಪೃಚ್ಛತಿ 'ಕಸ್ಯ ಯೂಯಂ? ಕಸ್ಯ ಯೂಯಂ?' ಇತಿ, ತಂ ತಂ ತವ ತವೇತ್ಯಾಹುಃ. ಏವಂ ವ್ಯಂಜನಾನ್ಯಪಿ ಯಸ್ಯ ಯಸ್ಯಾಚಃ ಕಾರ್ಯಮುಚ್ಯತೇ ತಂ ತಂ ಭಜಂತೇ." ನುತಿ ಎಂಬ ಶಬ್ದದಲ್ಲಿ ಉಕಾರವು ನಕಾರಸಂಬಂಧಿಯೂ ಆಗುತ್ತದೆ, ತಕಾರಸಂಬಂಧಿಯೂ ಆಗುತ್ತದೆ. ಸ್ವತಃ

ವ್ಯಕ್ತಿತ್ವವಿಲ್ಲದೆ ಪರಾಧೀನನಾಗಿ ಪರಾನುಸರಣೆ ಮಾಡತಕ್ಕವರಿಗೆ ಈ ನ್ಯಾಯವನ್ನು ಅನ್ವಯಿಸಬಹುದು.

## 123. ನಟಸಾಮಾಜಿಕನ್ಯಾಯ

ನಟನು ರಂಗಸ್ಥಳದಲ್ಲಿ ರಾಮನಂತೆಯೂ, ಭೀಮನಂತೆಯೂ ಅಭಿನಯಿಸುತ್ತಾನೆ. ರಾಮನ ದುಃಖವನ್ನೂ, ಭೀಮನ ಕ್ರೋಧವನ್ನೂ ತನ್ನದೋ ಎಂಬಂತೆ ತೋರಿಸಿ ಸಾಮಾಜಿಕರಿಗೆ ರಸದ ಔತಣವನ್ನು ಮಾಡಿಸುತ್ತಾನೆ. ಸಾಮಾಜಿಕನು ರಾಮ–ಭೀಮರೊಂದಿಗೆ ತಾದಾತ್ಮ್ಯ ಭಾವನೆಯನ್ನು ಹೊಂದಿ ರಸವನ್ನು ಸವಿಯುತ್ತಾನೆ. ಸಂಸಾರದಲ್ಲಿಯೂ ಪತ್ನೀಪುತ್ರರಲ್ಲಿಟ್ಟುಕೊಳ್ಳುವ ತಾದಾತ್ಮ್ಯ ಭಾವನೆಯೇ ಮನುಷ್ಯನ ಸುಖದುಃಖಗಳಿಗೆ ಕಾರಣ. ಪುತ್ರನಿಗೆ ಸಂತೋಷವಾದರೆ ತಾನೂ ಸಂತೋಷಪಡುತ್ತಾನೆ. ಅವನಿಗೆ ದುಃಖವಾದರೆ ತಾನೂ ದುಃಖಪಡುತ್ತಾನೆ.

## 124. ನಷ್ಟಾಶ್ವದಗ್ಧರಥನ್ಯಾಯ

ಓಡಿಹೋದ ಕುದುರೆಗಳು ಮತ್ತು ಸುಟ್ಟುಹೋದ ರಥ ಇವುಗಳ ನ್ಯಾಯ. ಈ ನ್ಯಾಯದ ಮೂಲದಲ್ಲಿ ಒಂದು ಕಥೆ ಇದೆ: ಇಬ್ಬರು ಪ್ರಯಾಣಿಕರು ತಮ್ಮ ತಮ್ಮ ರಥಗಳಲ್ಲಿ ಕುಳಿತು ಎಲ್ಲಿಗೋ ಹೋಗುತ್ತಿದ್ದರು. ರಾತ್ರಿ ಒಂದು ಹಳ್ಳಿಯಲ್ಲಿ ಇಳಿದುಕೊಂಡರು. ಅಕಸ್ಮಾತ್ ಗುಡಿಸಲಿಗೆ ಬೆಂಕಿಬಿದ್ದು ಒಬ್ಬನ ಕುದುರೆಗಳು ಸಿಗದಂತೆ ಓಡಿಹೋದವು. ಇನ್ನೊಬ್ಬನ ರಥ ಸುಟ್ಟುಹೋಯಿತು. ಬೆಳಗಾದ ಮೇಲೆ ಅವರ ಪ್ರಯಾಣಕ್ಕೆ ದೊಡ್ಡ ವಿಘ್ನ ಒದಗಿತು. ಒಬ್ಬನಿಗೆ ರಥವಿಲ್ಲ! ಇನ್ನೊಬ್ಬನಿಗೆ ಕುದುರೆಯಿಲ್ಲ! ಒಂದು ಉಪಾಯವನ್ನು ಯೋಚಿಸಿದರು. ಒಬ್ಬನ ರಥಕ್ಕೆ ಇನ್ನೊಬ್ಬನ ಕುದುರೆಗಳನ್ನು ಕಟ್ಟಿದರು. ಒಂದು ರಥವನ್ನೇರಿ ಇಬ್ಬರೂ ಮುಂದೆ ಪ್ರಯಾಣ ಮಾಡಿದರು! ಐಕಮತ್ಯದಲ್ಲಿ ಒಬ್ಬರಿಗೊಬ್ಬರು ಸಹಾಯ ಮಾಡಿ ಅಸಾಧ್ಯ ಕಾರ್ಯವನ್ನು ಸಾಧಿಸಬಹುದೆಂಬುದಕ್ಕೆ ಇದು ಉದಾಹರಣೆ.

ವಿನೋದಕ್ಕಾಗಿ ಹೇಳುವುದಾದರೆ, ವಿಧುರ ಮತ್ತು ವಿಧವೆಯರ ವಿವಾಹವನ್ನು ಈ ನ್ಯಾಯಕ್ಕೆ ಹೋಲಿಸಬಹುದು.

## 125. ನ ಹಿ ಕರಕಂಕಣದರ್ಶನಾಯಾದರ್ಶಾಪೇಕ್ಷಾ

ಕೈಬಳೆಯನ್ನು ನೋಡಲು ಕನ್ನಡಿ ಬೇಕಾಗಿಲ್ಲ. ಸ್ಪಷ್ಟವಾಗಿ, ನಿಸ್ಸಂದೇಹವಾಗಿ ತಿಳಿದುಬರುವ ವಸ್ತುವನ್ನು ಪರೀಕ್ಷಿಸಲು ಬೇರೆ ಪ್ರಮಾಣ ಬೇಕಾಗಿಲ್ಲ. 'ಕೈಯಲ್ಲಿರುವ ಹುಣ್ಣಿಗೆ ಕನ್ನಡಿಯೇಕೆ?' ಎಂದು ಕನ್ನಡ

ದಲ್ಲಿ ಗಾದೆಯುಂಟು. ಕರತಲಾಮಲಕದಂತೆ (ಕೈಯಲ್ಲಿರುವ ನೆಲ್ಲಿಯ ಕಾಯಿಯ ಹಾಗೆ) ಸ್ಪಷ್ಟವಾಗಿದೆಯೆಂದು ದೃಷ್ಟಾಂತ ಕೊಡುತ್ತಾರೆ.

'ಕರ್ಪೂರಮಂಜರಿ'ಯೆಂಬ ಪ್ರಾಕೃತಭಾಷೆಯ ನಾಟಕದಲ್ಲಿ 'ಹಸ್ತ ಕಂಕಣಂ ಕಿಂ ದರ್ಪಣೇನ ದೃಶ್ಯತೇ ?'—'ಕೈಯಲ್ಲಿರುವ ಬಳೆ ಕನ್ನಡಿ ಯಿಂದ ನೋಡಲ್ಪಡುವುದೆ ?' ಎಂಬ ವಾಕ್ಯವಿದೆ. ಕೈಬಳೆ ನೋಡಲು ಕನ್ನಡಿ ಬೇಕಾಗಿಲ್ಲ.

## 126. ನ ಹಿ ಕಾಕಿನ್ಯಾಂ ನಷ್ಟಾಯಾಂ ತದನ್ವೇಷಣಂ ಕಾರ್ಷಾಪಣೇನ ಕ್ರಿಯತೇ

ಕಾಕಿನಿ ಎಂದರೆ ಕವಡೆ, ಕಾಸು, ಅತ್ಯಂತ ಕಡಿಮೆ ಬೆಲೆಯ ಒಂದು ನಾಣ್ಯ. ಕಾರ್ಷಾಪಣವೆಂದರೆ ಒಂದು ಬೆಳ್ಳಿಯ ನಾಣ್ಯ. ಕಾಕಿನಿ ಕಳೆದು ಹೋದರೆ ಅದನ್ನು ಹುಡುಕುವುದಕ್ಕಾಗಿ ಕಾರ್ಷಾಪಣವನ್ನು ಯಾರೂ ವೆಚ್ಚ ಮಾಡುವುದಿಲ್ಲ. ಕಾಸಿನ ಲಾಭಕ್ಕಾಗಿ ರೂಪಾಯಿಯನ್ನು ಖರ್ಚು ಮಾಡುವುದು ಬುದ್ಧಿವಂತಿಕೆಯಲ್ಲ. ಅಲ್ಪ ಪ್ರಯೋಜನಕ್ಕಾಗಿ ಅಧಿಕ ಶ್ರಮ ವ್ಯರ್ಥವೆಂದು ತಾತ್ಪರ್ಯ.

## 127. ನ ಹಿ ಗೋಧಾ ಸರ್ಪಂತೀ ಸರ್ಪಣಾದಹಿರ್ಭವತಿ

ಗೋಧಾ ಎಂದರೆ ಹಾವಿನಂತಿರುವ ಒಂದು ಜಂತು ; ಹೆಂಟೆಗೊದ್ದ. ಅದು ಸರ್ಪಣದಿಂದ (ಸರ್ಪದಂತೆ ಹರಿಯುವುದರಿಂದ) ಸರ್ಪವೇ ಆಗ ಲಾರದು. ನಡೆ ನುಡಿಗಳನ್ನು ಅನುಕರಿಸುವುದರಿಂದ ಇತರರ ಸ್ವರೂಪವೇ ನಮಗೆ ಬರಲಾರದು. ಪಾಶ್ಚಾತ್ಯರ ವೇಷಭೂಷಣಗಳಿಂದ ನಾವು ಪಾಶ್ಚಾತ್ಯರೇ ಆಗಲಾರೆವು. ಅಥವಾ ಅವರಲ್ಲಿರುವ ಇತರ ಸದ್ಗುಣಗಳು ನಮಗೆ ಬರಲಾರವು.

> ಎಲೆ ಬೆಕ್ಕೆ ! ರೂಪಿನಿಂದಲೆ
> ಹುಲಿ ಜಾತಿಗೆ ಸೇರ್ದೆನೆಂದು ಗರ್ವಿಸಬೇಡ ॥

ಎಂಬ ಕನ್ನಡ ಪದ್ಯವನ್ನಿಲ್ಲಿ ಸ್ಮರಿಸಿಕೊಳ್ಳಬಹುದು. ಒಬ್ಬ ಕವಿಯು ಹೇಳುತ್ತಾನೆ :

"ನಾಯಿಗೆ ಸಿಂಹದ ಕೇಸರಗಳನ್ನು ಕಟ್ಟಿ ಅದೇ ಸಿಂಹವೆಂದು ಕರೆದ ಮಾತ್ರಕ್ಕೆ ಅದು ಸಿಂಹವಾದೀತೆ ? ಮದ್ದಾನೆಗಳ ಗಂಡಸ್ಥಳವನ್ನು ಭೇದಿಸ ಬಲ್ಲ ಸಿಂಹದ ಗರ್ಜನೆಯನ್ನು ಅದು ಮಾಡೀತೆ ?"

ವ್ಯಾಕರಣಶಾಸ್ತ್ರದಲ್ಲಿ ಪೂರ್ವಸೂತ್ರದಲ್ಲಿರುವ ಶಬ್ದವನ್ನು ಮುಂದಿನ ಸೂತ್ರಗಳಲ್ಲಿ ಅನುವೃತ್ತಿಮಾಡುತ್ತಾರೆ. ಈ ಶಬ್ದಗಳ ಅರ್ಥ ಪೂವ-

ಸೂತ್ರದಲ್ಲೊಂದು, ಉತ್ತರ ಸೂತ್ರದಲ್ಲಿ ಇನ್ನೊಂದು ಆಗಬಹುದು. ಇದು ಹೇಗೆ ಸಾಧ್ಯ ?

ಅ ನು ವೃ ತ್ತಿ ಯಿ ಂ ದ ಅರ್ಥವು ಬೇರೆಯಾಗುವುದೆ ? ಎಂದು ಆಕ್ಷೇಪಿಸುತ್ತಾ ಮಹಾಭಾಷ್ಯದಲ್ಲಿ ಈ ನ್ಯಾಯವನ್ನು ಉಪಯೋಗಿಸಿದ್ದಾರೆ.

## 128. ನ ಹಿ ತ್ರಿಪುತ್ರೋ ದ್ವಿಪುತ್ರ ಇತಿ ಕಥ್ಯತೇ

ಮೂವರು ಮಕ್ಕಳುಳ್ಳ ಪುರುಷನನ್ನು ಇಬ್ಬರು ಮಕ್ಕಳುಳ್ಳವನೆಂದು ಹೇಳುವುದಿಲ್ಲ. ದ್ವಿಪುತ್ರನಾದ ಮನುಷ್ಯನನ್ನು ಕರೆಯೆಂದರೆ ತ್ರಿಪುತ್ರನನ್ನು ಕರೆಯುವುದು ಸರಿಯಲ್ಲ. ಈ ನ್ಯಾಯದ ಹಿನ್ನೆಲೆಯನ್ನು ತಿಳಿದರೆ ನ್ಯಾಯದ ಅಭಿಪ್ರಾಯ ಸ್ಫುಟವಾಗುತ್ತದೆ. ನೂರು ರೂಪಾಯಿಗಳು ಒಬ್ಬನ ಬಳಿಯಲ್ಲಿವೆ ಎನ್ನೋಣ. ಅವನಲ್ಲಿ ಐವತ್ತು ರೂಪಾಯಿಗಳಿವೆ ಎಂದರೆ ತಪ್ಪೇನಿಲ್ಲವಷ್ಟೆ. ನೂರರಲ್ಲಿ ಐವತ್ತು ಇದ್ದೇ ಇರುತ್ತದೆ. ಹಾಗೆಯೇ ಒಬ್ಬನಿಗೆ ಮೂವರು ಮಕ್ಕಳಿದ್ದಾಗ ಇಬ್ಬರು ಮಕ್ಕಳು ಇದ್ದೇ ಇರಬೇಕು. ಆದ್ದರಿಂದ ತ್ರಿಪುತ್ರನನ್ನು ದ್ವಿಪುತ್ರನೆಂದೂ ಕರೆಯಬಹುದೆಂಬ ಶಂಕೆ ಹುಟ್ಟುತ್ತದೆ.

ಆದರೆ ಈ ರೀತಿ ವ್ಯವಹಾರವಿಲ್ಲ. ಸಂಖ್ಯೆ ಪರಿಮಾಣಗಳಲ್ಲಿ ಯಾವಾಗಲೂ ಅವಧಾರಣೆ ತೋರುತ್ತದೆ. ದ್ವಿಪುತ್ರನೆಂದರೆ ಇಬ್ಬರೇ ಮಕ್ಕಳುಳ್ಳವನೆಂದು ಅರ್ಥವಾಗುತ್ತದೆ. ಆದ್ದರಿಂದ ತ್ರಿಪುತ್ರನನ್ನು ದ್ವಿಪುತ್ರನೆಂದು ಕರೆಯಲು ಸಾಧ್ಯವಿಲ್ಲ. ಇದು ಶಬ್ದಶಕ್ತಿಯ ಸ್ವಭಾವ. ಐವತ್ತು ವರ್ಷ ವಯಸ್ಸಿನವನನ್ನು ಇಪ್ಪತ್ತು ವರ್ಷದವನೆಂದು ಹೇಳಲಾಗದು. ಒಂದು ಸೇರು ಅಕ್ಕಿಯನ್ನು ಪಾವು ಅಕ್ಕಿಯೆಂದು ಹೇಳಲಾಗದು. ಸೇರು ಅಕ್ಕಿಯಲ್ಲಿ ಪಾವು ಅಕ್ಕಿ ಇದ್ದೇ ಇದೆ. ಆದರೆ ಪಾವು ಅಕ್ಕಿ ಎಂದರೆ ಒಂದು ಪಾವು ಅಕ್ಕಿ ಮಾತ್ರ ಇದೆ, ಹೆಚ್ಚು ಇಲ್ಲ—ಎಂದು ಅರ್ಥವಾಗುತ್ತದೆ. ಹೀಗೆಯೇ ಒಂದು ಗಜ ಉದ್ದದ ದಾರವನ್ನು ಒಂದು ಅಡಿ ಎಂದು ವ್ಯವಹರಿಸಕೂಡದು.

ಮಹಾಭಾಷ್ಯದಲ್ಲಿ ಈ ನ್ಯಾಯವನ್ನು ಅನೇಕ ಕಡೆ ಬಳಸಿದ್ದಾರೆ.

## 129. ನ ಹಿ ನಿಂದಾನ್ಯಾಯ

'ನ ಹಿ ನಿಂದಾ ನಿಂದ್ಯಂ ನಿಂದಿತುಂ ಪ್ರವರ್ತತೇ, ಅಪಿತು ಸ್ತುತ್ಯಂ ಸ್ತೋತುಂ' ಎಂದು ನ್ಯಾಯದ ಆಕಾರ.

ನಿಂದೆಯು ನಿಂದ್ಯನನ್ನು ನಿಂದಿಸುವುದಕ್ಕೆ ಹೊರಟಿಲ್ಲ, ಮತ್ತೇನೆಂದರೆ ಸ್ತೋತ್ರಾರ್ಹನನ್ನು ಸ್ತುತಿಸುವುದಕ್ಕೆ ಹೊರಟಿರುತ್ತದೆ—ಎಂದರ್ಥ.

ವೇದ ಪುರಾಣ ಮುಂತಾದ ಗ್ರಂಥಗಳಲ್ಲಿ ಯಾವುದಾದರೊಂದು

ದೇವತೆಯನ್ನೋ ಶಾಸ್ತ್ರವನ್ನೋ ನಿಂದೆ ಮಾಡಿರುವುದು ಕಂಡುಬರುತ್ತದೆ. ಅದನ್ನು ನೋಡಿ ಅನೇಕರು ಆ ಗ್ರಂಥಗಳ ನಿಜವಾದ ಅಭಿಪ್ರಾಯವೇ ಅದು ಎಂಬುದಾಗಿ ಭ್ರಮಿಸುತ್ತಾರೆ. ಅಂತಹ ಅಭಿಪ್ರಾಯ ಸರಿಯಲ್ಲ ವೆಂದು ಬೋಧಿಸಲು ಈ ನ್ಯಾಯ ಹೊರಟಿದೆ. ದೇವತೆಯನ್ನೋ. ಶಾಸ್ತ್ರವನ್ನೋ ನಿಂದಿಸುವುದು ಆ ವಾಕ್ಯಗಳ ತಾತ್ಪರ್ಯವಲ್ಲ. ಇತರ ದೇವತೆಯನ್ನೂ, ಶಾಸ್ತ್ರವನ್ನೂ ಹೊಗಳುವುದೇ ಅವುಗಳ ತಾತ್ಪರ್ಯವೆಂದು ತಿಳಿಯಬೇಕು. ಕೆಲವು ಪುರಾಣಗಳಲ್ಲಿ ವಿಷ್ಣುನಿಂದೆ ಕಾಣಬಹುದು. ಅದು ಸತ್ಯವೆಂದು ನಾವು ಭಾವಿಸಬಾರದು. ಶಿವನನ್ನು ಹೊಗಳುವುದೇ ಆ ಪುರಾಣಗಳ ತಾತ್ಪರ್ಯವಿರುತ್ತದೆ. ಹಾಗೆಯೇ ಶಿವನಿಂದೆಯು ವಿಷ್ಣುವನ್ನು ಹೊಗಳುವುದಕ್ಕಾಗಿ ಹೊರಟಿರುತ್ತದೆ.

ಉದಾಹರಣೆ :—

"ಸಾಮವೇದಸ್ತು ಪಿತ್ರ್ಯಃ ಸ್ಯಾತ್ತಸ್ಮಾತ್ತಸ್ಯಾಶುಚಿರ್ಧ್ವನಿಃ" ಇದೊಂದು ಸ್ಮೃತಿಯ ವಾಕ್ಯ. ಸಾಮವೇದಕ್ಕೆ ಪಿತೃಗಳು ದೇವತೆ ಗಳೆಂದೂ ಆದ್ದರಿಂದ ಸಾಮಗಾನವು ಅಶುಚಿಯೆಂದೂ ಈ ವಾಕ್ಯ ಹೇಳು ತ್ತದೆ. ನಾಲ್ಕು ವೇದಗಳೂ ಪವಿತ್ರಗಳೆಂದು ಸಕಲ ಶಾಸ್ತ್ರ ಸಮ್ಮತವಾಗಿರು ವಾಗ ಈ ಮಾತನ್ನು ಅಂಗೀಕರಿಸುವುದು ಹೇಗೆ ? ಅಲ್ಲದೆ 'ವೇದಾನಾಂ ಸಾಮವೇದೋಽಸ್ಮಿ' ಎಂದು ಭಗವಂತನು ಗೀತೆಯಲ್ಲಿ ಹೇಳಿ ಸಾಮವೇದದ ಶ್ರೇಷ್ಠತೆಯನ್ನು ತೋರಿಸಿದ್ದಾನೆ. ಆದ್ದರಿಂದ ಮೇಲ್ಕಂಡ ಸ್ಮೃತಿಗೆ ಸಾಮವೇದದ ನಿಂದೆಯು ಅಭಿಮತವಲ್ಲ. ಇತರ ವೇದಗಳ ಸ್ತುತಿಯೇ ಅಭಿಮತ. ಒಂದು ವಿಶೇಷ ಸಂದರ್ಭದಲ್ಲಿ ಋಗ್ವೇದ ಮತ್ತು ಯಜುರ್ವೇದದ ಮಂತ್ರಗಳನ್ನೇ ಉಪಯೋಗಿಸಬೇಕೆಂದೂ, ಸಾಮವೇದದ ಮಂತ್ರವನ್ನು ಉಪಯೋಗಿಸಬಾರದೆಂದೂ ಹೇಳುವುದಕ್ಕಾಗಿ ಸ್ಮೃತಿಯು ಈ ಶೈಲಿಯ ನ್ನನುಸರಿಸಿದೆ. ಇನ್ನೊಂದು ಉದಾಹರಣೆ :—

ಮಹಾಭಾರತದಲ್ಲಿ ಹೀಗೆ ಹೇಳಿದೆ :

"ಋಷಿಗಳು ಭಾರತದ ಯೋಗ್ಯತೆಯನ್ನು ಪರೀಕ್ಷಿಸುವುದಕ್ಕಾಗಿ ನಾಲ್ಕು ವೇದಗಳನ್ನೂ ತಕ್ಕಡಿಯ ಒಂದು ಕಡೆಗೂ, ಭಾರತವನ್ನು ಇನ್ನೊಂದು ಕಡೆಗೂ ಇಟ್ಟರು. ವೇದಗಳಿಗಿಂತ ಇದೇ ದೊಡ್ಡದೂ, ಭಾರವಾದದ್ದೂ ಆಯಿತು. ಆದ್ದರಿಂದ ಇದಕ್ಕೆ 'ಮಹಾಭಾರತ'ವೆಂದೂ ಹೆಸರು ಬಂದಿತು."

ಈ ಮಾತುಗಳು ಮಹಾಭಾರತವನ್ನು ಪ್ರಶಂಸೆ ಮಾಡುವುದ ಕ್ಕಾಗಿಯೇ ಹೊರತು ವೇದಗಳನ್ನು ನಿಂದಿಸುವುದಕ್ಕಲ್ಲ.

130. ನ ಹಿ ಭಿಕ್ಷುಕೋ ಭಿಕ್ಷುಕಾಂತರಂ ಯಾಚಿತುಮರ್ಹತಿ ಸತ್ಯನ್ಯಸ್ಮಿನ್ನಭಿಕ್ಷುಕೇ

ಭಿಕ್ಷುಕನಲ್ಲದವನು ಇರುವಾಗ ಭಿಕ್ಷುಕನು ಇನ್ನೊಬ್ಬ ಭಿಕ್ಷುಕನನ್ನು ಯಾಚಿಸುವುದು ಸರಿಯಲ್ಲ ! ಉದಾರಿಗಳಾದ ಧನಿಕರು ಇರುವಾಗ ಅವರಲ್ಲಿ ತಾನೇ ಭಿಕ್ಷುಕನು ಯಾಚಿಸಬೇಕು. ತನ್ನಂತೆ ತಿರಿದು ತಿನ್ನುವ ಭಿಕ್ಷುಕನಿಗೆ ಗಂಟು ಬೀಳಬಹುದೋ ?

ತಾತ್ಪರ್ಯವೇನೆಂದರೆ : ಆಶ್ರಿತ ವಸ್ತು ಪ್ರಧಾನ ವಸ್ತುವಿನಿಂದಲೇ ನೇರವಾಗಿ ಸಂಬಂಧವನ್ನು ಪಡೆಯಬೇಕೇ ಹೊರತು ಇನ್ನೊಂದು ಆಶ್ರಿತ ವಸ್ತುವಿನೊಡನೆ ಸಂಬಂಧವನ್ನು ಪಡೆಯಬಾರದು.

ಒಬ್ಬ ಯಜಮಾನರಿಗೆ ಇಬ್ಬರು ಸೇವಕರಿದ್ದಾರೆಂದು ತಿಳಿಯೋಣ. ಯಜಮಾನನ ಆಜ್ಞೆಯನ್ನು ಇಬ್ಬರು ಸೇವಕರೂ ಪಾಲಿಸುತ್ತಾರೆ. ಆದರೆ ಸೇವಕನ ಮಾತನ್ನು ಇನ್ನೊಬ್ಬ ಸೇವಕನು ನಡೆಸುವುದಿಲ್ಲ. ಏಕೆಂದರೆ, ಅವರಿಬ್ಬರೂ ಸಮಾನರು. ಸಹಾಯ ಪಡೆಯಲು ಹಾತೊರೆಯುವ ಮನುಷ್ಯನಿಂದಲೇ ಸಹಾಯ ಬಯಸಬಾರದೆಂಬುದು ಈ ನ್ಯಾಯದ ತಾತ್ಪರ್ಯ.

ಧನಿಕನಿಲ್ಲದಿದ್ದಾಗ ಮಾತ್ರ ಭಿಕ್ಷುಕನು ಇನ್ನೊಬ್ಬ ಭಿಕ್ಷುಕನಿಗೆ ಗಂಟು ಬೀಳಬಹುದು !

ಶಾಸ್ತ್ರವಾಕ್ಯಗಳಿಗೆ ಅರ್ಥ ಮಾಡುವಾಗ ಯಾವ ಶಬ್ದಕ್ಕೆ ಯಾವ ಶಬ್ದದೊಡನೆ ಅನ್ವಯ ಮಾಡಬೇಕೆಂದು ನಿರ್ಧಾರ ಮಾಡಲು ಈ ನ್ಯಾಯ ಉಪಯೋಗವಾಗುತ್ತದೆ.

131. ನ ಹಿ ಭಿಕ್ಷುಕಾಃ ಸಂತೀತಿ ಸ್ಥಾಲ್ಯೋ ನಾಧಿಶ್ರೀಯಂತೇ ನ ಚ ಮೃಗಾಃ ಸಂತೀತಿ ಯವಾ ನೋಪ್ಯಂತೇ

ಭಿಕ್ಷುಕರು ಬರುತ್ತಾರೆಂದು ಪಾತ್ರೆಗಳನ್ನು ಒಲೆಯ ಮೇಲಿರಿಸಿ ಅಡಿಗೆ ಮಾಡದೆ ಇರುವುದಿಲ್ಲ. ಕಾಡು ಮೃಗಗಳಿವೆಯೆಂದು ಜವೆ ಗೋಧಿಯನ್ನು ಬಿತ್ತದೆ ಇರುವುದಿಲ್ಲ. ಭಿಕ್ಷುಕರು ಕಾಡಿಸುತ್ತಾರೆಂದು ಅಕ್ಕಿಯನ್ನು ತರದೆ ಅಡಿಗೆ ಮಾಡದೆ ಯಾವನು ಇದ್ದಾನು ? ಕಾಡು ಮೃಗಗಳು ಕಾಡಿದರೆ ತಕ್ಕ ರಕ್ಷಣೆಯನ್ನು ಮಾಡಿಕೊಳ್ಳಬೇಕು, ಅವುಗಳನ್ನು ಗುಂಡಿಟ್ಟು ಕೊಂದು ಬೆಳೆಯನ್ನು ಬೆಳೆಯಬೇಕು. ಹೀಗೆ ತಾನೆ ಲೋಕ ವ್ಯವಹಾರ ? ಅಡ್ಡಿಗಳಿವೆಯೆಂದೂ, ತೊಂದರೆಗಳಿವೆಯೆಂದೂ ವಿವೇಕಿಯಾದವನು ಸುಮ್ಮನೆ ಕುಳಿತಿರಬಾರದೆಂದು ಈ ನ್ಯಾಯ ಬೋಧಿಸುತ್ತದೆ. ದಾರಿಯಲ್ಲಿ ಮುಳ್ಳುಗಳಿದ್ದರೆ ಪಾದರಕ್ಷೆಗಳನ್ನು ಧರಿಸಿ ಹೋಗಬೇಕು. ಲೌಕಿಕವಾದ ವಿಷಯ ಸುಖವನ್ನೇ ಆಗಲಿ ಪರಲೋಕದ ಸುಖವನ್ನೇ ಆಗಲಿ ಪಡೆಯಲು ಕಷ್ಟಪಡ

ಬೇಕಾಗುತ್ತದೆ. ಕಷ್ಟಕ್ಕಾಗಿ ಹೆದರಬಾರದೆಂದೂ, ಅದನ್ನು ಸಾಧ್ಯವಾದರೆ ನಿವಾರಿಸಿಕೊಂಡು, ಇಲ್ಲವಾದರೆ ಅನುಭವಿಸಿಕೊಂಡು ಮುಂದುವರಿಯ ಬೇಕೆಂದೂ ಈ ನ್ಯಾಯದ ತಾತ್ಪರ್ಯ.

## 132. ನ ಹಿ ವರವಿಘಾತಾಯ ಕನ್ಯೋದ್ವಾಹಃ

ಕನ್ಯೆಯನ್ನು ಮದುವೆ ಮಾಡುವುದು ವರನನ್ನು ಕೊಲ್ಲುವುದಕ್ಕಲ್ಲ ! ವರನ ಅನುಕೂಲಕ್ಕಾಗಿಯೂ, ಕನ್ಯೆಯ ಕಲ್ಯಾಣಕ್ಕಾಗಿಯೂ ವಿವಾಹ ಮಾಡುತ್ತಾರೆ. ವರನನ್ನೇ ವಿವಾಹವು ಘಾತಿಸುವುದಾದರೆ ಅಂತಹ ವಿವಾಹದಿಂದೇನು ? ಕನ್ಯೆಯು ಇಷ್ಟಗಳಾಗಿದ್ದರೂ ಅಂತಹ ವಿವಾಹವನ್ನು ಯಾರೂ ಬಯಸರು. ವಸ್ತು ಅಪೇಕ್ಷಿತವಾಗಿದ್ದರೂ ಅದರಿಂದ ವಿಪತ್ತುಂಟಾಗುವುದಾದರೆ ಆ ವಸ್ತುವನ್ನು ಸ್ವೀಕರಿಸಕೂಡದು ಎಂದು ಈ ನ್ಯಾಯದ ತಾತ್ಪರ್ಯ.

## 133. ನ ಹಿ ವಿವಾಹಾನಂತರಂ ವರಪರೀಕ್ಷಾ

ಮದುವೆಯಾದ ಮೇಲೆ ವರಪರೀಕ್ಷೆ ಮಾಡುವುದಿಲ್ಲವಷ್ಟೆ. ಏನಿದ್ದರೂ ಮದುವೆಗೆ ಮೊದಲೇ ಆಗಬೇಕು. ಆಮೇಲೆ ಆಲೋಚಿಸಿದರೆ ಪ್ರಯೋಜನವಿಲ್ಲ. ಮಿಂಚಿಹೋದ್ದಕ್ಕೆ ಚಿಂತಿಸಿ ಫಲವೇನು ಎಂದು ಅಭಿಪ್ರಾಯ.

ಕೃತಕ್ಷೌರಸ್ಯ ನಕ್ಷತ್ರ ಪರೀಕ್ಷಾ ನ್ಯಾಯವನ್ನು ನೋಡಿ.

## 134. ನ ಹಿ ಸರ್ವಃ ಸರ್ವಂ ಜಾನಾತಿ

ಎಲ್ಲರಿಗೆ ಎಲ್ಲಾ ವಿಷಯಗಳೂ ಗೊತ್ತಿಲ್ಲ. ವಿದ್ಯೆ ಅಪಾರವಾದುದ್ದು. ಒಬ್ಬನು ಒಂದು ಶಾಸ್ತ್ರದಲ್ಲಿ, ಒಂದು ಕಲೆಯಲ್ಲಿ ವಿದ್ವಾಂಸನಿರಬಹುದು. ಅವನಿಗೆ ಇತರ ಶಾಸ್ತ್ರಗಳಲ್ಲಿ ಪರಿಶ್ರಮವಿರಬೇಂದು ನಂಬುವುದು ಸಾಧ್ಯವಿಲ್ಲ. ಮೇಧಾವಿಯು ಬಹು ಶಾಸ್ತ್ರಗಳಲ್ಲಿ ಪಂಡಿತನಾಗಿದ್ದರೂ ಜಗತ್ತಿನ ಸಕಲ ವಿಷಯಗಳನ್ನೂ ತಿಳಿದಿರಲು ಸಾಧ್ಯವಿಲ್ಲ.

ಒಬ್ಬ ತರ್ಕಪಂಡಿತನು ಎಣ್ಣೆಯನ್ನು ತರಲು ಗಾಣಿಗನ ಬಳಿಗೆ ಹೋದನಂತೆ. ಗಾಣಿಗನು ಕೋಣವನ್ನು ಕಟ್ಟಿ ಗಾಣವನ್ನು ಆಡಿಸುತ್ತಿದ್ದನು. ಕೋಣದ ಕೊರಳಿಗೆ ಒಂದು ಘಂಟೆಯನ್ನು ಕಟ್ಟಿದ್ದನು. ಪಂಡಿತನು ಕುತೂಹಲದಿಂದ "ಏನಯ್ಯಾ, ಕೋಣಕ್ಕೆ ಘಂಟೆಯೇಕೆ ?" ಎಂದು ಕೇಳಿದನು. ಗಾಣಿಗನು 'ಸ್ವಾಮಿ, ಗಾಣವನ್ನು ಕಟ್ಟಿ ಕೆಲಸಕ್ಕಾಗಿ ಎಷ್ಟೋ ಸಲ ಮನೆಯೊಳಗೆ ಹೋಗಿರುತ್ತೇನೆ. ಘಂಟೆಯ ಶಬ್ದವಾಗುತ್ತಿದ್ದರೆ ಗಾಣವನ್ನು ಕೋಣ ಆಡಿಸುತ್ತಿದೆಯೆಂದು ಗೊತ್ತಾಗುತ್ತದೆ.

ಶಬ್ದ ನಿಂತರೆ ಹೊರಗೆ ಬಂದು ಒಂದು ಏಟನ್ನು ಹಾಕುತ್ತೇನೆ' ಎಂದನು. ಈ ಉಪಾಯ ಪಂಡಿತನಿಗೆ ಹಿಡಿಸಲಿಲ್ಲ. "ಅಲ್ಲವಯ್ಯಾ, ಕೋಣ ಸುಮ್ಮನೆ ನಿಂತುಕೊಂಡು ಕತ್ತನ್ನು ಅಲ್ಲಾಡಿಸುತ್ತಿದ್ದರೆ ?" ಎಂದು ಕೇಳಿದನು. ಅದಕ್ಕೆ ಗಾಣಿಗನ ಉತ್ತರ "ಕೋಣ ನಿಮ್ಮಷ್ಟು ತರ್ಕವನ್ನು ಓದಿಲ್ಲ, ಸ್ವಾಮಿ !"

ಆದ್ದರಿಂದ "ನ ಹಿ ಸರ್ವಃ ಸರ್ವಂ ಜಾನಾತಿ" ಎಂಬುದು ಸರ್ವಕಾಲ ದಲ್ಲಿ ಸರ್ವರಿಗೂ ಅನ್ವಯಿಸತಕ್ಕದ್ದು.

## 135. ನ ಹಿ ಸಹಸ್ರೇಣಾಪ್ಯಂಧೈಃ ಪಾಟಚ್ಚರೇಭ್ಯೋ ಗೃಹಂ ರಕ್ಷ್ಯತೇ

ಪಾಟಚ್ಚರ–ಕಳ್ಳ. ಕುರುಡರು ನೂರು ಮಂದಿ ಸೇರಿದರೂ ಕಳ್ಳ ರಿಂದ ಮನೆಯನ್ನು ರಕ್ಷಿಸಲಾರರು. ಸಂಖ್ಯಾಬಲವು ಮುಖ್ಯವಲ್ಲ. ತಕ್ಕ ಸಾಮರ್ಥ್ಯ ಮುಖ್ಯವೆಂದು ಈ ನ್ಯಾಯ ಬೋಧಿಸುತ್ತದೆ. ಯುದ್ಧಕಲೆ ಯಲ್ಲಿ ಸುಶಿಕ್ಷಿತವಾದ ಸೇನೆ ತನಗಿಂತ ಎಷ್ಟೋ ಪಾಲು ದೊಡ್ಡದಾಗಿರುವ ಅಶಿಕ್ಷಿತ ಸೈನ್ಯವನ್ನು ಗೆದ್ದಿತೆಂಬುದನ್ನು ನಾವು ಇತಿಹಾಸದಲ್ಲಿ ಓದಿದ್ದೇವೆ. ಕುರುಡರು ನೂರು ಮಂದಿ ಸೇರಿದರೂ ಸರಿಯಾದ ದಾರಿಯನ್ನು ಹುಡುಕ ಲಾರರು. ರಾಜಕೀಯದಲ್ಲಿ ಪ್ರಜಾಪ್ರಭುತ್ವದಲ್ಲಿ ಇರುವ ಒಂದು ದೋಷ ವಿದು. ಆರಿಸಿದ ಪ್ರತಿನಿಧಿಗಳು ವಿದ್ಯಾವಂತರೂ ದಕ್ಷರೂ ಆಗಿದ್ದು ಪ್ರಜಾಕಲ್ಯಾಣವನ್ನು ಮಾಡುವ ತೀವ್ರೇಚ್ಛೆಯುಳ್ಳವರಾಗಿದ್ದರೆ ಮಾತ್ರ ಪ್ರಜಾಪ್ರಭುತ್ವ ಉತ್ತಮವಾದ ದಾರಿಯಲ್ಲಿ ಸಾಗಬಹುದು ; ಅದಿಲ್ಲದೆ ಪ್ರತಿನಿಧಿಗಳು ಅವಿವೇಕಿಗಳೂ, ಸ್ವಾರ್ಥಿಗಳೂ ಆದರೆ ಅಂತಹ ಸರ್ಕಾರವೇ ಏರ್ಪಟ್ಟು ಪ್ರಜೆಗಳು ನಾನಾ ಕಷ್ಟಕ್ಕೆ ಗುರಿಯಾಗುವರು. ಹಿಟ್ಲರನು ತನ್ನ 'ಮೆಯಿನ್ ಕೆಂಪ್' ಎಂಬ ಪುಸ್ತಕದಲ್ಲಿ ಪ್ರಜಾಪ್ರಭುತ್ವವನ್ನುದ್ದೇಶಿಸಿ "ಒಬ್ಬ ವಿವೇಚನಾಶಕ್ತಿಯುಳ್ಳ ಪುರುಷನು ಮಾಡುವ ಕೆಲಸವನ್ನು ನೂರು ಮಂದಿ ಮೂರ್ಖರು ಸೇರಿ ಮಾಡಬಲ್ಲರೆ ?" ಎಂದು ಪ್ರಶ್ನಿಸಿದ್ದಾನೆ.

## 136. ನ ಹಿ ಸುತೀಕ್ಷ್ಣಾಪ್ಯಸಿಧಾರಾ ಸ್ವಂ ಛೇತ್ತುಂ ಪ್ರಭವತಿ

ಕತ್ತಿಯ ಅಲಗು ಎಷ್ಟು ಹರಿತವಾಗಿದ್ದರೂ ತನ್ನನ್ನೇ ಕತ್ತರಿಸಿಕೊಳ್ಳ ಲಾರದು. ಅದು ಇತರ ವಿಷಯದಲ್ಲಿ ಕಾರ್ಯಕಾರಿಯೇ ಹೊರತು ತನ್ನ ವಿಷಯದಲ್ಲಿ ಅಲ್ಲ. ಇದು ವಸ್ತುಧರ್ಮ. ಬೆಂಕಿಯು ಇತರ ವಸ್ತು ಗಳನ್ನು ಸುಡಬಲ್ಲುದು ; ಆದರೆ ತನ್ನನ್ನು ತಾನೇ ಸುಟ್ಟುಕೊಳ್ಳಲಾರದು. ಕಣ್ಣು ಬಾಹ್ಯಪದಾರ್ಥಗಳನ್ನು ನೋಡಬಲ್ಲುದು, ಆದರೆ ತನ್ನನ್ನೇ ನೋಡಿ ಕೊಳ್ಳಲಾರದು. ಎಂತಹ ಬಲಶಾಲಿಯಾದರೂ ತನ್ನ ಭುಜದ ಮೇಲೆ

ತನ್ನನ್ನೇ ಹೊರಲಾರನು. ಎಂತಹ ಬುದ್ಧಿಶಾಲಿಯಾದರೂ, ಬಲವಂತನಾದರೂ ಇತರರ ಸಹಾಯ ಬೇಕಾಗುತ್ತದೆ ಎಂಬಲ್ಲಿ ಇದರ ಉಪಯೋಗವಾಗುತ್ತದೆ.

## 137. ನ ಹಿ ಸುಶಿಕ್ಷಿತೋಽಪಿ ನಟವಟುಃ ಸ್ವಸ್ಕಂಧಮಾರುಹ್ಯ ನೃತ್ಯತಿ

ನಾಟ್ಯಕಲೆಯಲ್ಲಿ ನಿಪುಣನಾಗಿದ್ದರೂ ನಟನು ತನ್ನ ಹೆಗಲನ್ನೇರಿ ಕುಣಿಯಲಾರನು. ಹಿಂದಿನ ನ್ಯಾಯದ ಅಭಿಪ್ರಾಯವನ್ನೇ ಇದಕ್ಕೂ ಹೇಳಬಹುದು.

"ಆಕಾಶೋ ವೈ ನಾಮರೂಪಯೋರ್ನಿರ್ವಹಿತಾ' ಎಂದು ವೇದ ವಚನವಿದೆ. 'ಆಕಾಶವು ಪದಾರ್ಥಗಳಿಗೆ ನಾಮರೂಪಗಳನ್ನು ಉಂಟು ಮಾಡಿತು' ಎಂದು ಅದರ ಅರ್ಥ. ಆಕಾಶವೆಂದರೇನು ? ಪಂಚಭೂತಗಳಲ್ಲಿ ಒಂದಾಗಿ ಪ್ರಸಿದ್ಧವಾದ ಆಕಾಶವೆ ? ಅಥವಾ ಪರಮಾತ್ಮನೆ ? ಎಂದು ವಿಚಾರ ನಡೆಯುತ್ತದೆ. ಪ್ರಸಿದ್ಧವಾದ ಆಕಾಶವಾದರೆ ಅದಕ್ಕೆ ನಾಮರೂಪಗಳನ್ನು ಅದೇ ಆಕಾಶವೇ ಉಂಟುಮಾಡಿಕೊಂಡಿದೆಯೆಂದು ಹೇಳಬೇಕಾಗುತ್ತದೆ. ಇಲ್ಲಿ ರೂಪವೆಂದರೆ ಧರ್ಮವಿಶೇಷದಿಂದ ಕೂಡಿರುವಿಕೆಯೆಂದರ್ಥ. ತನಗೆ ತಾನೇ ನಾಮರೂಪಗಳನ್ನುಂಟುಮಾಡಿಕೊಳ್ಳುವುದು ಎಂದಿಗೂ ಆಗದ ಕೆಲಸವೆಂದು ಹೇಳಿ ಈ ನ್ಯಾಯವನ್ನು ದೃಷ್ಟಾಂತವಾಗಿ ಕೊಡುತ್ತಾರೆ. ಆದ್ದರಿಂದ ಇಲ್ಲಿ ಆಕಾಶವೆಂದರೆ ಪರಮಾತ್ಮನೆಂದು ಸಿದ್ಧಾಂತವಾಗುತ್ತದೆ.

ನಾಸ್ತಿಕರು ದೇಹವೇ ಆತ್ಮ ಎಂದು ಹೇಳುತ್ತಾರೆ. ಬೇರೆ ಜೀವಾತ್ಮವನ್ನು ಅವರು ಒಪ್ಪುವುದಿಲ್ಲ. ಈ ಮತದ ಮೇಲೆ ಆಸ್ತಿಕರು ಹೀಗೆ ಆಕ್ಷೇಪವೆತ್ತುವರು. ದೇಹ ಪಂಚಭೂತಾತ್ಮಕವಾದ್ದರಿಂದ ಆತ್ಮನೆಂದರೆ ಪಂಚಭೂತಗಳ ಸಮುದಾಯವೆಂದು ಹೇಳಬೇಕಾಗುವುದು. ಕಣ್ಣು ಮುಂತಾದ ಇಂದ್ರಿಯಗಳಿಂದ ಪಂಚಭೂತಗಳ ಸ್ವರೂಪವನ್ನು ತಿಳಿದುಕೊಳ್ಳುತ್ತೇವೆ. ದೇಹವೇ ಆತ್ಮನಾದರೆ ಪಂಚಭೂತಗಳನ್ನು ಪಂಚಭೂತಗಳೇ ತಿಳಿಯುತ್ತವೆಯೆಂದು ಒಪ್ಪಬೇಕಾಗುವುದು. ಇದು ವಿರುದ್ಧ. ಪಂಚಭೂತಗಳು ವಿಷಯಗಳು, ವಿಷಯ ಬೇರೆ, ವಿಷಯವನ್ನರಿಯುವ ವಿಷಯಿ (ಆತ್ಮ) ಬೇರೆ.

ತನ್ನನ್ನು ತಾನೇ ತಿಳಿದುಕೊಳ್ಳುವುದು ಆಗದ ಮಾತು.

ದೇವರು ಸರ್ವಶಕ್ತನಾದರೆ ಅವನು ಆತ್ಮಹತ್ಯೆ ಮಾಡಿಕೊಳ್ಳಬಲ್ಲನೋ ? ಎಂಬುದೊಂದು ಮೂರ್ಖಪ್ರಶ್ನೆಯಿದೆ. ಇದಕ್ಕೆ ಉತ್ತರವಾಗಿ ಈ ನ್ಯಾಯವನ್ನು ಉದಹರಿಸಬಹುದು. ಅಥವಾ ದೇವರಿಗೆ ಆತ್ಮ

ಹತ್ಯೆ ಮಾಡಿಕೊಳ್ಳಲು ಶಕ್ತಿಯಿದೆ. ಆದರೆ ಇಚ್ಛೆಯಿಲ್ಲ. ಆದ್ದರಿಂದ ಆತ್ಮಹತ್ಯೆ ಮಾಡಿಕೊಳ್ಳುವುದಿಲ್ಲ ಎಂದು ಉತ್ತರಿಸಬಹುದು !

## 138. ನ ಹಿ ಸ್ವತೋಽಸತೀ ಶಕ್ತಿಃ ಕರ್ತುಮನ್ಯೇನ ಶಕ್ಯತೇ

ತನ್ನಲ್ಲಿ ಸ್ವತಃ ಇಲ್ಲದ ಶಕ್ತಿಯನ್ನು ಇತರರು ಉಂಟುಮಾಡಲು ಸಾಧ್ಯವಿಲ್ಲ. ಹಾಲಿನಲ್ಲಿ ಮೊಸರಾಗುವ ಶಕ್ತಿ ಇದೆ. ಅದು ಸ್ವತಃಸಿದ್ಧ ವಾದದ್ದು. ಹುಳಿಮಜ್ಜಿಗೆಯು ಅದಕ್ಕೆ ಸಾಮಗ್ರಿ. ಹಾಲಿನಲ್ಲಿ ಸ್ವತಃ ಶಕ್ತಿ ಇಲ್ಲದಿದ್ದರೆ ಬಲಾತ್ಕಾರದಿಂದ ಮೊಸರು ಮಾಡುವುದಕ್ಕೆ ಸಾಧ್ಯವಾಗು ತ್ತಿರಲಿಲ್ಲ. ನೀರನ್ನೋ, ಗಾಳಿಯನ್ನೋ ಮೊಸರು ಮಾಡಲು ಯಾರಿಗೂ ಸಾಧ್ಯವಿಲ್ಲ.

ಈ ತತ್ವವನ್ನನುಸರಿಸಿ ವಿಚಾರ ಮಾಡಿದಲ್ಲಿ ವಿಜ್ಞಾನದ ಯಾವ ಆವಿ ಷ್ಕಾರವೂ ನೂತನನಿರ್ಮಾಣವೆನಿಸಿಕೊಳ್ಳಲಾರದು. ಯಾವ ಪದಾರ್ಥ ದಲ್ಲಿ ಯಾವ ಶಕ್ತಿ ಇದೆ ಮತ್ತು ಯಾವ ಯಾವ ಪದಾರ್ಥಗಳ ಸಂಯೋಜನ ದಿಂದ ಯಾವ ಶಕ್ತಿ ಹೊರಗೆ ಕಾಣಿಸಿಕೊಳ್ಳುವುದು ಎಂಬುದನ್ನು ಕಂಡು ಹಿಡಿಯುವುದೇ ವಿಜ್ಞಾನದ ಕೆಲಸವೆಂದು ಹೇಳಬೇಕಾಗುವುದು.

ಶ್ಲೋಕ ವಾರ್ತಿಕ, ನ್ಯಾಯಮಂಜರಿ ಮುಂತಾದ ಗ್ರಂಥಗಳಲ್ಲಿ ಈ ನ್ಯಾಯ ಉಪಯೋಗಿಸಲ್ಪಟ್ಟಿದೆ.

## 139. ನಾಸಿಕಾಗ್ರೇಣ ಕರ್ಣಮೂಲಕರ್ಷಣ ನ್ಯಾಯ

ಮೂಗಿನ ತುದಿಯಿಂದ ಕಿವಿಯ ಬುಡವನ್ನು ತಳ್ಳಬೇಕು ! ಮೂಗನ್ನು ಎಷ್ಟು ಚಾಚಿದರೂ ಅದು ಕಿವಿಗೆ ತಗಲುವುದಿಲ್ಲ. ಅಸಾಧ್ಯ ವಾದ ಕೆಲಸವನ್ನು ಮಾಡುತ್ತೇನೆಂದು ಹೊರಟಾಗ ಈ ನ್ಯಾಯವನ್ನು ದೃಷ್ಟಾಂತವಾಗಿ ಉಪಯೋಗಿಸುತ್ತಾರೆ. ಕಾರ್ಯವನ್ನು ಸಾಧಿಸಬೇಕಾದರೆ ಸಮರ್ಥವಾದ ಸಾಧನ ಬೇಕು. ಸಾಧನವು ಸರ್ವಥಾ ಅಸಮರ್ಥವಾಗಿ ದ್ದಾಗ ಇದನ್ನು ದೃಷ್ಟಾಂತವಾಗಿ ಕೊಡಬಹುದು.

## 140. ನಿಮಿತ್ತಾಪಾಯೇ ನೈಮಿತ್ತಿಕಸ್ಯಾಪ್ಯಪಾಯಃ

ನಿಮಿತ್ತ–ಕಾರಣ. ನೈಮಿತ್ತಿಕ–ನಿಮಿತ್ತದಿಂದ ಜನಿಸಿದ ಕಾರ್ಯ. ನಿಮಿತ್ತವು ಹೋದರೆ ಅದರಿಂದ ಹುಟ್ಟಿದ ಕಾರ್ಯವೂ ಹೋಗುತ್ತದೆ. ರೋಗಕ್ಕೆ ಶರೀರದಲ್ಲುಂಟಾದ ದೋಷ ನಿಮಿತ್ತ. ಅದು ಹೋದರೆ ರೋಗವೂ ಹೋಗುತ್ತದೆ. ಮೋಡ ಚದುರಿದರೆ ಮಳೆ ನಿಲ್ಲುತ್ತದೆ. ಒಲೆಯಲ್ಲಿ ಬೆಂಕಿ ಇರುವವರೆಗೆ ಹಂಡೆಯ ನೀರು ಬಿಸಿಯಿರುತ್ತದೆ. ಹೊಲ ದಲ್ಲಿ ಪೈರುಗಳಿರುವವರೆಗೆ ಹಕ್ಕಿಗಳು ಮುತ್ತುತ್ತವೆ !

ಈ ನ್ಯಾಯ ಪ್ರಸಿದ್ಧವಾದುದು. ವ್ಯಾಕರಣಶಾಸ್ತ್ರದಲ್ಲಿ ವಿಶೇಷವಾಗಿ ಇದರ ಉಪಯೋಗವಾಗಿದೆ. ವೇದಾಂತಿಗಳ ಮತದಿಂದ ಭೇದ ದೃಷ್ಟಿಗೆ ಅಜ್ಞಾನವು ನಿಮಿತ್ತ. ಈ ಅಜ್ಞಾನ ತೊಲಗಿದರೆ ಭೇದ ದೃಷ್ಟಿಯೂ ಹೋಗಿ, ಸರ್ವವೂ ಬ್ರಹ್ಮವೇ ಎಂಬ ಅದ್ವಯಜ್ಞಾನ ಹುಟ್ಟುತ್ತದೆ.

## 141. ನಿರಸ್ತಪಾದಪೇ ದೇಶೇ ಏರಂಡೋಽಪಿ ದ್ರುಮಾಯತೇ

ಮರಗಳಿಲ್ಲದ ದೇಶದಲ್ಲಿ ಹರಳುಗಿಡವೂ ಮರವೆನಿಸಿಕೊಳ್ಳುತ್ತದೆ. ಸರಿಯಾದ ಯೋಗ್ಯತೆಯಿರತಕ್ಕವರು ಇಲ್ಲದ ಕಡೆಯಲ್ಲಿ ಅಲ್ಪನಿಗೂ ದೊಡ್ಡ ಮರ್ಯಾದೆ ದೊರೆಯುತ್ತದೆ. ವಿದ್ವಾಂಸರಿಲ್ಲದೆಡೆಯಲ್ಲಿ ಬರಿಯ ಅಕ್ಷರಸ್ಥನೇ ವಿದ್ವಾಂಸ, ಸಜ್ಜನರಿಲ್ಲದ ಊರಿನಲ್ಲಿ ಮೋಸಮಾಡದವನೇ ಸಜ್ಜನ, ವೈದ್ಯರಿಲ್ಲದೆಡೆ ಹರಕುಮುರುಕು ಚಿಕಿತ್ಸೆ ಮಾಡತಕ್ಕವನೇ ವೈದ್ಯ —ಎಂದು ಹೆಸರು ಪಡೆಯುತ್ತಾರಷ್ಟೆ. ಅಂತಹ ಸಂದರ್ಭದಲ್ಲಿ ಈ ನ್ಯಾಯದ ಉಪಯೋಗ.

## 142. ನಿರಾಮಯಸ್ಯ ಕಿಮಾಯುರ್ವೇದವಿದಾ ?

ರೋಗವಿಲ್ಲದವನಿಗೆ ವೈದ್ಯನಿಂದ ಆಗಬೇಕಾದ್ದೇನು ? ರೋಗಿಗೆ ತಾನೇ ವೈದ್ಯನಿಂದ ಪ್ರಯೋಜನ.

ಪ್ರಬಂಧ ಚಿಂತಾಮಣಿಯಲ್ಲಿ ಒಂದು ಕಥೆ ಇದೆ. ಭೋಜರಾಜನ ಆಸ್ಥಾನದಲ್ಲಿ ಬಾಣ, ಮಯೂರ ಎಂಬ ಇಬ್ಬರು ಕವಿಗಳಿದ್ದರು. ಬಾಣನ ಸಹೋದರಿಯನ್ನು ಮಯೂರನಿಗೆ ಕೊಟ್ಟು ವಿವಾಹವಾಗಿದ್ದಿತು. ಒಂದು ಸಲ ಬಾಣಕವಿಯು ದೂರದಿಂದ ತನ್ನ ಸಹೋದರಿಯನ್ನು ನೋಡಿ ಶೃಂಗಾರ ಪೂರ್ಣವಾದ ವರ್ಣನೆಯನ್ನು ಮಾಡಿದನು. ಅವಳು ತನ್ನ ಸಹೋದರಿಯೆಂಬುದು ಅವನಿಗೆ ಗೊತ್ತಾಗಲಿಲ್ಲ. ಆದರೆ ಇವನು ವರ್ಣನೆ ಮಾಡಿದ ಸಂಗತಿ ತಿಳಿದು ಸಹೋದರಿ ಕೋಪಗೊಂಡು ನಿನಗೆ ಕುಷ್ಠರೋಗ ಬರಲೆಂದು ಬಾಣಕವಿಯನ್ನು ಶಪಿಸಿದಳು. ಶಾಪದ ಬಲದಿಂದ ಬಾಣನಿಗೆ ಕುಷ್ಠರೋಗ ಬಂದಿತು. ಬಾಣನು ತನ್ನ ಕವಿತಾ ಸಾಮರ್ಥ್ಯದಿಂದ ಸೂರ್ಯದೇವನನ್ನು ಮೆಚ್ಚಿಸಿ ರೋಗವನ್ನು ಪರಿಹರಿಸಿಕೊಂಡನು.

ರಾಜಾಸ್ಥಾನದಲ್ಲಿ ಭೋಜರಾಜನು ಬಾಣಕವಿಯ ಸಾಮರ್ಥ್ಯವನ್ನು ಕೊಂಡಾಡಿದನು. ಅದಕ್ಕೆ ಮಯೂರ ಕವಿ "ಸೂರ್ಯನ ಅನುಗ್ರಹದಿಂದ ರೋಗ ಗುಣವಾಯಿತು. ಇದೇನು ದೊಡ್ಡ ವಿಷಯ ?" ಎಂದು ಚುಚ್ಚು ಮಾತನಾಡಿದನು. ಅದಕ್ಕೆ ಬಾಣನು "ದೇವರನ್ನು ಮೆಚ್ಚಿಸುವುದು

ಸುಲಭವೋ? ನೀನು ಇಂತಹ ಕೆಲಸವನ್ನು ಮಾಡಬಲ್ಲೆಯಾ ?" ಎಂದನು. ಅದಕ್ಕೆ ಮಯೂರ ಕವಿಯು "ನೀರಾಮಯಸ್ಯ ಕಿಮಾಯುರ್ವೇದವಿದಾ ?" ಆದರೂ ನನ್ನ ಸಾಮರ್ಥ್ಯವನ್ನು ನೋಡು ಎಂದು ಹೇಳಿ ಖಡ್ಗದಿಂದ ಕೈಕಾಲುಗಳನ್ನು ಕತ್ತರಿಸಿಕೊಂಡು ಚಂಡೀ ದೇವಿಯನ್ನು ಸ್ತುತಿಸಿದನು. ಆ ದೇವತೆಯ ಅನುಗ್ರಹದಿಂದ ಪುನಃ ಕೈಕಾಲುಗಳನ್ನು ಪಡೆದುಕೊಂಡು ರಾಜನ ಪ್ರೀತಿಗೆ ಪಾತ್ರನಾದನು.

ಈ ಕಥೆ ಕೆಲವು ಕಡೆ ವ್ಯತ್ಯಸ್ತವಾಗಿ ದೊರೆಯುತ್ತದೆ. ಬಾಣನ ಪತ್ನಿಯೇ ಮಯೂರನ ಸೋದರಿಯೆಂದೂ, ಮಯೂರನಿಗೆ ಕುಷ್ಠರೋಗ ಬಂದು ಸೂರ್ಯ ಶತಕವನ್ನು ರಚಿಸಿದನೆಂದೂ, ಬಾಣನೇ ಚಂಡೀ ಶತಕವನ್ನು ರಚಿಸಿದನೆಂದೂ ತಿಳಿದುಬರುತ್ತದೆ.

## 143. ನೃಪನಾಪಿತಪುತ್ರನ್ಯಾಯ

ಒಬ್ಬ ಮಂತ್ರಿಯು ರಾಜನಿಗೆ "ಎಲ್ಲರೂ ತಮ್ಮ ವಸ್ತುವೇ ಲೋಕೋತ್ತರವಾದದ್ದೆಂದು ತಿಳಿಯುತ್ತಾರೆ. ಅವರ ದೃಷ್ಟಿಯಲ್ಲಿ ಇತರರು ಉತ್ತಮರಾಗಿದ್ದರೂ ಸಾಮಾನ್ಯರೆಂಬ ಭಾವನೆಯೇ ಇರುತ್ತದೆ" ಎಂದನು. ರಾಜನು ಒಪ್ಪಿಕೊಳ್ಳಲಿಲ್ಲ. ರಾಜನು ಮಂತ್ರಿಯ ಪ್ರೇರಣೆಯಂತೆ ಅರಮನೆಯ ನಾಪಿತನನ್ನು ಕರೆದು "ಅತ್ಯಂತ ಸುಂದರವಾದ ಒಂದು ಮಗುವನ್ನು ತಂದು ತೋರಿಸು. ನಿನಗೆ ತಕ್ಕ ಬಹುಮಾನವನ್ನು ಕೊಡುತ್ತೇನೆ" ಎಂದನು. ನಾಪಿತನು ಬಹುಕಾಲ ಹುಡುಕಿದರೂ ಸುಂದರವಾದ ಮಗುವೆಂದು ಯಾವುದೂ ತೋರಲಿಲ್ಲ. ಕಡೆಗೆ ತನ್ನ ಮಗುವೇ ಬಹುಸುಂದರವೆಂದು ನಿರ್ಧರಿಸಿ ಅದನ್ನು ರಾಜನೆದುರಿಗೆ ಕರೆತಂದನು. ಅದು ಅತ್ಯಂತ ಕುರೂಪಿಯಾದ ಮಗುವಾಗಿತ್ತು ! ಆಗ ರಾಜನು ಮಂತ್ರಿಯ ಲೋಕಜ್ಞಾನವನ್ನು ಮೆಚ್ಚಿಕೊಂಡನಂತೆ. 'ಸರ್ವಃ ಕಾಂತಮಾತ್ಮೀಯಂ ಪಶ್ಯತಿ' ಎಂಬ ಶಾಕುಂತಲ ನಾಟಕದ ವಾಕ್ಯ ಈ ನ್ಯಾಯವನ್ನು ವಿವರಿಸುತ್ತದೆ.

## 144. ಪತಂಗದೀಪಕನ್ಯಾಯ

ಪತಂಗವು ದೀಪವನ್ನು ಕಂಡಾಗ ಯಾವುದೋ ಆಕರ್ಷಣೆಯಿಂದ ಅದರ ಮೇಲೆ ಎರಗುತ್ತದೆ. ಅದರಿಂದ ಪತಂಗವೇ ಸುಟ್ಟುಹೋಗುತ್ತದೆ. ಚಕ್ಷುರಿಂದ್ರಿಯದ ಆಕರ್ಷಣೆ ಈ ವಿಪತ್ತನ್ನು ತಂದೊಡ್ಡುತ್ತದೆ. ಹೀಗೆ ಬರಿಯ ರೂಪಕ್ಕೆ ಮರುಳಾಗಿ ತನ್ನ ನಾಶವನ್ನು ತಂದುಕೊಳ್ಳುವ ಸಂದರ್ಭದಲ್ಲಿ ಈ ನ್ಯಾಯ ಉಪಯುಕ್ತ.

## 145. ಪರ್ಜನ್ಯವಲ್ಲಕ್ಷಣಪ್ರವೃತ್ತಿಃ

ಲಕ್ಷಣಗಳ ಪ್ರವೃತ್ತಿಯು ಪರ್ಜನ್ಯದಂತೆ ಆಗುತ್ತದೆ. ಶಾಸ್ತ್ರದಲ್ಲಿ

ವಿಧಿ, ನಿಯಮ, ನಿಷೇಧಗಳಿಗೆ ಲಕ್ಷಣವೆಂದು ಹೆಸರು. ಪರ್ಜನ್ಯವೆಂದರೆ ಮೇಘ. ಮೇಘವು ಹೊಲ, ಗದ್ದೆಗಳಲ್ಲಿಯೂ, ಪರ್ವತ ಸಮುದ್ರ ಗಳಲ್ಲಿಯೂ ಮಳೆಯನ್ನು ಸುರಿಸುತ್ತದೆ. ಮಳೆ ಎಲ್ಲಿ ಬೇಕು, ಎಲ್ಲಿ ಬೇಡ ಎಂಬ ವಿವೇಚನೆ ಮೇಘಕ್ಕೆ ಇಲ್ಲ. ಹಾಗೆ ಲಕ್ಷಣವು ಎಲ್ಲಾ ಲಕ್ಷ್ಯಗಳಲ್ಲಿಯೂ ಪ್ರವರ್ತಿಸುತ್ತದೆ. ಕೆಲವು ಕಡೆ ಫಲವಿರುತ್ತದೆ. ಕೆಲವು ಕಡೆ ಸ್ಪಷ್ಟವಾದ ಫಲವಿರುವುದಿಲ್ಲ. ಏಕೆಂದರೆ ಆ ಫಲವು ಬೇರೆ ಕಾರಣಗಳಿಂದ ಸಿದ್ಧ ವಾಗಿಯೇ ಇರುತ್ತದೆ. ವ್ಯಾಕರಣಶಾಸ್ತ್ರದಲ್ಲಿ ವಿಶೇಷವಾಗಿ ಈ ನ್ಯಾಯ ಉಪಯುಕ್ತವಾಗುತ್ತದೆ.

ಈಶ್ವರನು ಜೀವಾತ್ಮರ ವಿಷಯದಲ್ಲಿ ಒಂದೇ ರೀತಿಯಲ್ಲಿ ವರ್ತಿಸು ತ್ತಾನೆಂದೂ, ಅವನಿಗೆ ಪಕ್ಷಪಾತವಿಲ್ಲವೆಂದೂ ಹೇಳುತ್ತಾರೆ. "ನ ಮೇ ದ್ವೇಷ್ಯೋಽಸ್ತಿ ನ ಪ್ರಿಯಃ" (ನನಗೆ ಶತ್ರುವೂ ಇಲ್ಲ ಪ್ರಿಯನೂ ಇಲ್ಲ) ಎಂದು ಶ್ರೀಕೃಷ್ಣನು ಗೀತೆಯಲ್ಲಿ ಹೇಳಿದ್ದಾನೆ. ಸೂರ್ಯನು ಶ್ರೀಮಂತರ ಮನೆಗೂ ಬೆಳಕು ಕೊಡುತ್ತಾನೆ, ಬಡವರ ಮನೆಗೂ ಬೆಳಕು ಕೊಡುತ್ತಾನೆ. ಕಾನೂನಿನ ದೃಷ್ಟಿಯಲ್ಲಿ ಎಲ್ಲರೂ ಒಂದೇ. ಹೀಗೆ ಪಕ್ಷಪಾತವಿರದೆ ನಡೆದು ಕೊಳ್ಳಬೇಕೆಂಬ ಸಂದರ್ಭದಲ್ಲಿಯೂ ಈ ನ್ಯಾಯ ಉಪಯುಕ್ತವಾಗುವುದು.

## 146. ಪಶ್ಯಸ್ಯದ್ರೌ ಜ್ವಲದಗ್ನಿಂ ನ ಪುನಃ ಪಾದಯೋರಧಃ

ಬೆಟ್ಟದಲ್ಲಿ ಉರಿಯುವ ಬೆಂಕಿಯನ್ನು ನೋಡುತ್ತಿದ್ದೀಯೆ. ಪಾದತಳ ದಲ್ಲಿರುವ ಬೆಂಕಿ ನಿನಗೆ ಕಾಣದು ! ಬರಿಯ ಪುಸ್ತಕದ ವಿದ್ಯೆ ಇದೆಯೋ ಹೊರತು ಲೋಕದಲ್ಲಿ ಹೇಗೆ ಬಾಳಬೇಕೆಂಬ ವ್ಯವಹಾರ ಜ್ಞಾನವಿಲ್ಲದ ಮನುಷ್ಯನಿಗೆ ಈ ನ್ಯಾಯ ಅನ್ವಯಿಸುತ್ತದೆ. ಇತರರಿಗೆ ನೀತಿಯನ್ನೊರೆ ಯುವ ನೀನು ನಿನ್ನ ಆಚರಣೆಯಲ್ಲಿ ನೀತಿಯನ್ನೇಕೆ ಕೈಬಿಟ್ಟೆ ?—ಎಂಬ ಆಕ್ಷೇಪವೂ ಇದರ ತಾತ್ಪರ್ಯವಾಗುತ್ತದೆ. ನಾಳಿನ ಚಿಂತೆ ಒತ್ತಟ್ಟು ಇರಲಿ, ಈ ದಿನದ ಸಮಸ್ಯೆ ಮೊದಲು ಬಗೆಹರಿಯಲಿ—ಎಂಬ ಅರ್ಥದಲ್ಲಿಯೂ ಇದನ್ನು ಉಪಯೋಗಿಸಬಹುದು.

ಹೇಮಚಂದ್ರನು ತನ್ನ ಪರಿಶಿಷ್ಟಪರ್ವದಲ್ಲಿ ಹೇಳುತ್ತಾನೆ :—

ಕಾ ಹಿ ಪುಂಗಣನಾ ತೇಷಾಂ ಯೇಽನ್ಯಶಿಕ್ಷಾವಿಚಕ್ಷಣಾಃ ।
ಯೇ ಸ್ವಂ ಶಿಕ್ಷಯಿತುಂ ದಕ್ಷಾಸ್ತೇಷಾಂ ಪುಂಗಣನಾ
ನೃಣಾಮ್ ॥

ತಾತ್ಪರ್ಯ :—ಯಾರು ಅನ್ಯರಿಗೆ ಬುದ್ಧಿ ಹೇಳುವುದರಲ್ಲಿ ದಕ್ಷರೋ ಅವರು ಪುರುಷರಲ್ಲ. ಯಾರು ತನ್ನನ್ನು ತಿದ್ದಿಕೊಳ್ಳುತ್ತಾರೋ ಅವರೇ ಪುರುಷರು.

ಇದು practice what you preach ಎಂಬ ಆಂಗ್ಲ ಗಾದೆಗೆ ಕೆಲವು ಅಂಶಗಳಲ್ಲಿ ಸಮವಾಗಿದೆ.

## 147. ಪಂಕಪ್ರಕ್ಷಾಲನನ್ಯಾಯ

ಪಂಕಪ್ರಕ್ಷಾಲನವೆಂದರೆ ಕೆಸರನ್ನು ತೊಳೆದುಕೊಳ್ಳುವುದು. ನಿಷ್ಕಾರಣವಾಗಿ ಕೆಸರನ್ನು ಮುಟ್ಟಿ ತೊಳೆದುಕೊಳ್ಳುವುದೇಕೆ ? ಕೆಸರನ್ನು ಮುಟ್ಟದಿರುವುದೇ ಉತ್ತಮ. ಪಂಚತಂತ್ರದಲ್ಲಿ ಒಂದು ಶ್ಲೋಕವಿದೆ :—

ಧರ್ಮಾರ್ಥಂ ಯಸ್ಯ ವಿತ್ತೇಹಾ ವರಂ ತಸ್ಯ ನಿರೀಹತಾ ।
ಪ್ರಕ್ಷಾಲನಾದ್ಧಿ ಪಂಕಸ್ಯ ದೂರಾದಸ್ಪರ್ಶನಂ ವರಂ ॥

"ಧರ್ಮ ಮಾಡುವುದಕ್ಕಾಗಿ ಯಾವನು ಹಣವನ್ನು ಬಯಸುತ್ತಾನೋ ಅವನು ಹಣವನ್ನು ಬಯಸದಿರುವುದೇ ಉತ್ತಮ. ಆಮೇಲೆ ಕೆಸರನ್ನು ತೊಳೆದುಕೊಳ್ಳುವುದಕ್ಕಿಂತ ಮೊದಲು ಅದನ್ನು ಮುಟ್ಟದೆ ದೂರವಿಡುವುದು ಉತ್ತಮ."

Prevention is better than cure ಎಂಬ ಆಂಗ್ಲ ಗಾದೆಗೆ ಇದು ಹೋಲುತ್ತದೆ.

## 148. ಪಂಗ್ವಂಧನ್ಯಾಯ

ಪಂಗು ಎಂದರೆ ಹೆಳವ, ಕುಂಟ ; ಅಂಧನೆಂದರೆ ಕುರುಡ. ಕುಂಟ ಕುರುಡರಿಬ್ಬರಿಗೂ ಪ್ರಯಾಣ ಮಾಡಬೇಕಾಗಿತ್ತು. ಕುಂಟನು ಕುರುಡನ ಹೆಗಲನ್ನೇರಿ ಕುಳಿತು ದಾರಿಯಲ್ಲಿರುವ ಹಳ್ಳ ತಿಟ್ಟುಗಳ ಬಗೆಗೆ ಕುರುಡನಿಗೆ ಎಚ್ಚರಿಕೆ ಕೊಡುತ್ತಿದ್ದನು. ಕುರುಡನು ಅವನ ಎಚ್ಚರಿಕೆಯಂತೆ ಪ್ರಯಾಣ ಮಾಡಿದನು. ಇಬ್ಬರೂ ಮುಂದಿನ ಹಳ್ಳಿಗೆ ಸುಖವಾಗಿ ಹೋಗಿ ಸೇರಿದರು ಎಂಬ ಕಥೆಯೊಂದಿದೆ. ಆ ಕಥೆಯ ಪ್ರಕಾರ ಕುರುಡನಾಗಲಿ, ಕುಂಟನಾಗಲಿ ಸ್ವತಃ ಪ್ರಯಾಣ ಮಾಡಲು ಸಾಧ್ಯವಾಗುತ್ತಿರಲಿಲ್ಲ. ಇಬ್ಬರಲ್ಲಿಯೂ ನ್ಯೂನತೆ ಇತ್ತು. ಪರಸ್ಪರ ಸಹಾಯದಿಂದ ಅಸಾಧ್ಯವಾದ ಕೆಲಸವನ್ನು ಸಾಧಿಸಿದರು. ಪರಸ್ಪರ ಸಹಾಯದಿಂದ ಉಭಯರೂ ಪ್ರಯೋಜನವನ್ನು ಪಡೆಯಬಹುದೆಂಬುದು ಈ ನ್ಯಾಯ ವಿವರಿಸುತ್ತದೆ.

## 149. ಪಂಜರಚಾಲನನ್ಯಾಯ

ಪಂಜರವನ್ನು ಚಲಿಸುವಂತೆ ಮಾಡುವುದು. ಪಂಜರದಲ್ಲಿರುವ ಒಂದು ಪಕ್ಷಿ ಅದನ್ನು ಅಲ್ಲಾಡಿಸದಿರದು. ಅನೇಕ ಪಕ್ಷಿಗಳನ್ನು ಒಂದು ಪಂಜರದಲ್ಲಿಟ್ಟರೆ ಅವುಗಳೆಲ್ಲಾ ಸೇರಿ ಪಂಜರವನ್ನು ಅಲ್ಲಾಡಿಸಬಲ್ಲವು. ಪ್ರತ್ಯೇಕವಾಗಿ ಒಂದು ವಸ್ತುವಿನಲ್ಲಿ ವಿಶಿಷ್ಟ ಶಕ್ತಿಯು ಕಂಡುಬರದಿದ್ದರೂ ಅನೇಕ ವಸ್ತುಗಳು ಸೇರಿದಾಗ ಅದು ಕಂಡುಬರುವುದೆಂದು ಈ ನ್ಯಾಯ ಬೋಧಿಸುತ್ತದೆ. ಐಕಮತ್ಯದಲ್ಲಿ ಬಲ ಉಂಟು ಎಂಬ ಅಭಿಪ್ರಾಯವನ್ನು ಇದು ಸೂಚಿಸಬಹುದು. ಬೇಡರವನು ಬೀಸಿದ ಒಂದು ಬಲೆಯಲ್ಲಿ

ಅನೇಕ ಪಾರಿವಾಳಗಳು ಸಿಕ್ಕಿಕೊಂಡವೆಂದೂ, ಚಿತ್ರಗ್ರೀವನೆಂಬ ವೃದ್ಧ ಪಾರಿವಾಳದ ಉಪದೇಶದಂತೆ ಅವುಗಳೆಲ್ಲಾ ಸೇರಿ ಬಲೆಯನ್ನು ಹಾರಿಸಿ ಕೊಂಡು ಹೋದವೆಂದೂ ಪಂಚತಂತ್ರದಲ್ಲಿ ಒಂದು ಕಥೆಯಿದೆ. ಹುಲ್ಲು ಗಳಿಂದ ಹೊಸೆದ ಹಗ್ಗದಿಂದ ಸಲಗವನ್ನೂ ಕೂಡ ಕಟ್ಟಿನಿಲ್ಲಿಸಬಹುದು.

## 150. ಪಾಟಚ್ಚರಲುಂಠಿತೇ ವೇಶ್ಮನಿ ಯಾಮಿಕ–ಜಾಗರಣಮಿತಿ ನ್ಯಾಯ

ವೇಶ್ಮನಿ–ಮನೆಯು, ಪಾಟಚ್ಚರ–ಕಳ್ಳರಿಂದ, ಲುಂಠಿತೇ–ದೋಚ ಲ್ಪಟ್ಟ ಮೇಲೆ, ಯಾಮಿಕ–ಕಾವಲುಗಾರರು, ಜಾಗರಣಮಿತಿನ್ಯಾಯ— ಎಚ್ಚರಗೊಂಡು ಕಾವಲು ಮಾಡಿದರು ಎಂಬ ನ್ಯಾಯ. ಕಳ್ಳರು ಮನೆ ಯನ್ನು ದೋಚಿದ ಮೇಲೆ ಕಾವಲುಗಾರನಿಗೆ ಎಚ್ಚರವಾಯಿತಂತೆ ! ಪೆಟ್ಟು ತಿಂದಮೇಲೆ ಬುದ್ಧಿ ಬಂದಿತು, ನೀರು ಹರಿದುಹೋದ ಮೇಲೆ ಅಣೆಕಟ್ಟನ್ನು ಮುಚ್ಚಿದರಂತೆ ! ಈ ನ್ಯಾಯದ ಉಪಯೋಗ ಸ್ಪಷ್ಟವಾಗಿದೆ. ಇದು 'Shutting the stable door after the horse is gone' ಎಂಬ ಆಂಗ್ಲಗಾದೆಯನ್ನು ಹೋಲುತ್ತದೆ.

## 151. ಪಾಟನಮಂತರೇಣ ವಿಷವ್ರಣಾನಾಂ ನೋಪಶಾಂತಿಃ

ವಿಷದ ಹುಣ್ಣುಗಳು ಒಡೆದ ಹೊರತು ಗುಣ ಹೊಂದುವುದಿಲ್ಲ. ಕುರು, ಬಾವು ಮುಂತಾದ ವ್ರಣಗಳಿಗೆ ಶಸ್ತ್ರಚಿಕಿತ್ಸೆ ಮಾಡಿ ಕೀವನ್ನು ಹೊರತೆಗೆಯುವುದೇ ಸರಿಯಾದ ಪರಿಹಾರ. ದುಷ್ಟರನ್ನು ದಂಡಿಸುವುದೇ ಸರಿಯಾದ ಮಾರ್ಗವೆಂಬುದು ಈ ನ್ಯಾಯದ ಉಪದೇಶ. ದುಃಖವನ್ನನು ಭವಿಸಿದರೆ ನಮ್ಮ ಪಾಪಕರ್ಮ ನಶಿಸುತ್ತದೆಯೆಂದು ದಾರ್ಶನಿಕರು ಹೇಳು ತ್ತಾರೆ. ಖಳನೊಡನೆ ಅಹಿಂಸೆ ಸಲ್ಲದು. ಶಠನಿಗೆ ಶಾಠ್ಯವೇ ಉತ್ತರ.

## 152. ಪಾನಕರಸನ್ಯಾಯ

ಸಕ್ಕರೆ, ನಿಂಬೆಹುಳಿ, ಕೇಸರಿ, ಏಲಕ್ಕಿ ಮುಂತಾದ ವಸ್ತುಗಳನ್ನು ಸೇರಿಸಿ ಮಾಡಿದ ಪಾನಕವು ವಿಲಕ್ಷಣವಾದ ಒಂದು ರುಚಿಯನ್ನು ಕೊಡು ತ್ತದೆ. ಅನೇಕ ಪದಾರ್ಥಗಳ ಮಿಶ್ರಣದಿಂದ ಅಪೂರ್ವವಾದ ಇನ್ನೊಂದು ಪದಾರ್ಥವು ಉತ್ಪನ್ನವಾಗುವುದೆಂಬುದಕ್ಕೆ ಇದನ್ನು ದೃಷ್ಟಾಂತವಾಗಿ ಉಪಯೋಗಿಸುತ್ತಾರೆ. ಶೃಂಗಾರಾದಿ ರಸಗಳು ಹೇಗೆ ಹುಟ್ಟುತ್ತವೆಯೆಂಬು ದಕ್ಕೆ ಆಲಂಕಾರಿಕರು ಹೇಳುವುದೇನೆಂದರೆ :—ವಿಭಾವ, ಅನುಭಾವ, ವ್ಯಭಿಚಾರಿಭಾವಗಳ ಸಂಯೋಗದಿಂದ ರತಿ ಮುಂತಾದ ಸ್ಥಾಯಿಭಾವವು ಅಭಿವ್ಯಕ್ತವಾಗುತ್ತದೆ. ಹೀಗೆ ಅಭಿವ್ಯಕ್ತವಾದ ಸ್ಥಾಯಿಭಾವವೇ ರಸವೆನಿಸಿ ಕೊಳ್ಳುತ್ತದೆ. ರಸವು ಪಾನಕವಿದ್ದಂತೆ ; ವಿಭಾವಾದಿಗಳು ಸಕ್ಕರೆ

ಮುಂತಾದವುಗಳಂತೆ. ಸಕ್ಕರೆಯನ್ನು ಬಿಟ್ಟು ಪಾನಕವಿಲ್ಲ. ಆದರೆ ಸಕ್ಕರೆಯೇ ಪಾನಕವಲ್ಲ.

ಒಂದು ವಾಕ್ಯದಲ್ಲಿ ಅನೇಕ ಪದಗಳಿರುತ್ತವೆ. ಪದಗಳ ಅರ್ಥಗಳೆಲ್ಲಾ ಸೇರಿ ಒಂದು ವಾಕ್ಯಾರ್ಥ ಹುಟ್ಟುತ್ತದೆ. ಪಾನಕರಸನ್ಯಾಯದಂತೆ ಪದಾರ್ಥ ಬೇರೆ, ವಾಕ್ಯಾರ್ಥ ಬೇರೆಯೆಂದು ಶಾಸ್ತ್ರಕಾರರು ಹೇಳುತ್ತಾರೆ.

## 153. ಪಿಣ್ಯಾಕಯಾಚನನ್ಯಾಯ

ಪಿಣ್ಯಾಕವೆಂದರೆ ಹಿಂಡಿ. ಎಣ್ಣೆ ತೆಗೆದು ಉಳಿದ ಚರಟ. ಹಿಂಡಿಯನ್ನು ಬೇಡಲು ಹೋದವನು ಒಂದು ಮಣ ಎಣ್ಣೆಯನ್ನು ಕೊಡುವೆನೆಂದು ಒಪ್ಪಿಕೊಂಡು ಬಂದನಂತೆ! ಇನ್ನೊಬ್ಬನ ಮಾತಿನ ಮೋಡಿಗೆ ಸಿಕ್ಕಿ ತನ್ನ ಕೈಲಾಗದಿರುವ ಕೆಲಸವನ್ನು ಒಪ್ಪಿಕೊಂಡ ಸಂದರ್ಭದಲ್ಲಿ ಈ ನ್ಯಾಯ ಉಪಯುಕ್ತ.

## 154. ಪಿತಾಪುತ್ರನ್ಯಾಯ

ತಂದೆ ಮತ್ತು ಮಗನ ನ್ಯಾಯ. ಒಬ್ಬನೇ ಮನುಷ್ಯ ಅವನ ಮಗನಿಗೆ ತಂದೆಯೆನಿಸುತ್ತಾನೆ. ತನ್ನ ತಂದೆಗೆ ಮಗನೆನಿಸುತ್ತಾನೆ. ಹೆಂಡತಿಗೆ ಗಂಡನಾಗಿಯೂ. ಸೇವಕನಿಗೆ ಸ್ವಾಮಿಯಾಗಿಯೂ ಶಿಷ್ಯನಿಗೆ ಗುರುವಾಗಿಯೂ ಗುರುವಿಗೆ ಶಿಷ್ಯನಾಗಿಯೂ ಇರುತ್ತಾನೆ. ಇದರಲ್ಲಿ ವಿರೋಧವಿಲ್ಲ. ಮಗ, ತಂದೆ ಮೊದಲಾದ ವ್ಯವಹಾರವೆಲ್ಲ ಸಾಪೇಕ್ಷವಾದವು. ಇನ್ನೊಂದು ವಸ್ತುವಿನ ಅಪೇಕ್ಷೆಯಿಂದ ಈ ಬಗೆಯ ಭಿನ್ನವ್ಯವಹಾರ ಬರುತ್ತದೆ. ಹೀಗೆಯೇ ದೊಡ್ಡದು–ಚಿಕ್ಕದು, ಒಳ್ಳೆಯದು–ಕೆಟ್ಟದು, ನುಣುಪು–ಒರಟು, ಬಹಳ–ಕಡಿಮೆ ಮುಂತಾದವು.

## 155. ಪಿತ್ರನುಸೃತಸ್ತನಂಧಯನ್ಯಾಯ

ಸ್ತನಂಧಯನೆಂದರೆ ಸ್ತನ್ಯಪಾನ ಮಾಡುವ ಬಾಲಕ. ಅವನನ್ನು ಸಮಾಧಾನ ಮಾಡುವುದಕ್ಕೆ, ಅವನ ಮನಸ್ಸಿಗೆ ರಂಜನೆಯನ್ನುಂಟುಮಾಡುವುದಕ್ಕೆ ತಂದೆಯು ಬಾಲಕನನ್ನು ಅನುಸರಿಸಿ ನಡೆದುಕೊಳ್ಳುವುದು ಸ್ವಾಭಾವಿಕ. ಬಾಲಕನ ಬಯಕೆಗಳು, ಮಾತುಗಳು, ಚೇಷ್ಟೆಗಳು ಕೇವಲ ಹಾಸ್ಯಾಸ್ಪದವಾಗಿದ್ದರೂ, ತಂದೆ ಅವುಗಳನ್ನು ಅರಿತಿದ್ದರೂ ಅವು ಯಥಾರ್ಥವೋ ಎಂಬಂತೆ ನಡೆದುಕೊಳ್ಳುತ್ತಾನೆ. ಮಗು ತನ್ನನ್ನು ಬಯ್ದರೂ, ಹೊಡೆದರೂ, ಗಡ್ಡವನ್ನೂ ಜಗ್ಗಿದರೂ ಅವನು ಕೋಪಿಸಿಕೊಳ್ಳುವುದಿಲ್ಲ. ಸಂತೋಷಪಡುತ್ತಾನೆ. ಹಾಗೆ ವಿದ್ವಾಂಸನು ಪಾಮರರ ಅವಿವೇಕದ ವರ್ತನೆಗಳನ್ನು ನೋಡಿ ಜುಗುಪ್ಸೆಪಡುವುದಿಲ್ಲ, ಕೋಪಿಸಿ

ಕೊಳ್ಳುವುದೂ ಇಲ್ಲ. ತನ್ನ ಪರಿಶುದ್ಧವಾದ ಆಚರಣೆಯಿಂದ ಮೂಢ ಜನರಿಗೆ ವಿವೇಕೋದಯವಾಗುವಂತೆ ನಡೆದುಕೊಳ್ಳುತ್ತಾನೆ. ಕೆಲವು ವೇಳೆ ಮೂಢನಂತೆ ತಾನೂ ನಡೆದುಕೊಳ್ಳುತ್ತಾನೆ. ಅವರಿಗೆ ಬುದ್ಧಿ ಕಲಿಸಿ ಸನ್ಮಾರ್ಗದತ್ತ ಒಯ್ಯುವುದಕ್ಕಾಗಿ ತಾನೂ ಹಾಗೇ ಮಾಡಬೇಕಾಗಿಬರುತ್ತದೆ. ಈ ನ್ಯಾಯ ವಿದ್ಯಾರಣ್ಯರ ಪಂಚದಶಿಯಲ್ಲಿ ಉಪಯೋಗಿಸಲ್ಪಟ್ಟಿದೆ.

## 156. ಪಿಪೀಲಕಾಗತಿನ್ಯಾಯ

ಪಿಪೀಲಿಕಾ ಎಂದರೆ ಇರುವೆ. ಅದು ಚಿಕ್ಕ ಕೀಟ. ಕಾಲು ತುಂಬ ಸಣ್ಣದು. ಆದರೂ ಅದು ನೆಲದಿಂದ ಹೊರಟು ನಡೆಯುತ್ತ ನಡೆಯುತ್ತ ಮರವನ್ನು ಹತ್ತಿ ಹಣ್ಣನ್ನು ಮುಟ್ಟುತ್ತದೆ. ಮಹಡಿಯಲ್ಲಿರುವ ಸಕ್ಕರೆ ಡಬ್ಬದಲ್ಲಿ ಇಳಿಯುತ್ತದೆ.

ನಮ್ಮ ನಡಿಗೆ ನಿಧಾನವಾದರೂ ಮುನ್ನಡೆಯೊಂದು ಇದ್ದಲ್ಲಿ ಒಂದಲ್ಲ ಒಂದು ದಿನ ಗುರಿಯನ್ನು ತಲುಪಬಹುದು. ಸಾಧನಾಮಾರ್ಗ ಕಿರಿದಾದರೂ ಹಿಂಜರಿಯದೆ ಸಾಗುತ್ತಿದ್ದರೆ ಮೋಕ್ಷವೆಂಬ ಪರಮಪುರುಷಾರ್ಥವನ್ನೂ ಪಡೆಯಲು ಸಾಧ್ಯ. ವಿದ್ಯೆ, ಧನ ಮೊದಲಾದುದರ ಸಂಪಾದನೆಯೂ ಈ ಕ್ರಮದಿಂದ ನಡೆಯಬಹುದು. "ಕ್ಷಣಶಃ ಕಣಶಶ್ಚೈವ ವಿದ್ಯಾಮರ್ಥಂ ಚ ಸಾಧಯೇತ್" ಎಂಬ ನೀತಿವಚನವನ್ನಿಲ್ಲಿ ಸ್ಮರಿಸಬಹುದು. ಎಷ್ಟು ಅಸಮರ್ಥನಾದರೂ ಸಾಧಿಸುವ ಹಠವಿದ್ದಲ್ಲಿ ಗುರಿಯನ್ನು ತಲುಪಲು ಸಾಧ್ಯವೆಂದು ಈ ನ್ಯಾಯ ಬೋಧಿಸುತ್ತದೆ. ಕನಿಷ್ಠ ದರ್ಜೆಯ ಸಾಮರ್ಥ್ಯದವನಿಗೆ ಇದು ಅನ್ವಯಿಸುತ್ತದೆ.

ಪ್ಲವಂಗಮಗತಿನ್ಯಾಯ ಮತ್ತು ವಿಹಂಗಮಗತಿನ್ಯಾಯಗಳನ್ನು ನೋಡಿ.

## 157. ಪಿಶಾಚಾನಾಂ ಪಿಶಾಚಭಾಷಯೈವೋತ್ತರಂ ದೇಯಂ

ಪಿಶಾಚಗಳಿಗೆ ಪಿಶಾಚಭಾಷೆಯಲ್ಲಿಯೇ ಉತ್ತರವನ್ನು ಕೊಡಬೇಕು! ಏಕೆಂದರೆ, ಪಿಶಾಚಗಳಿಗೆ ಸಂಸ್ಕೃತವಾಗಲಿ, ಕನ್ನಡವಾಗಲಿ ತಿಳಿಯುವುದಿಲ್ಲ! 'ದುಷ್ಟರಿಗೆ ದಂಡವೇ ತಕ್ಕ ಮದ್ದು, ಅವರೊಡನೆ ಸಾಮೋಪಾಯದಿಂದ ಕೆಲಸವಾಗದು' ಎಂಬುದು ಈ ನ್ಯಾಯದ ತಾತ್ಪರ್ಯ. 'ಯಕ್ಷಾನು-ರೂಪೋ ಬಲಿಃ, ಶಠಂ ಪ್ರತಿ ಶಾಠ್ಯಂ' ಎಂಬ ನ್ಯಾಯಗಳ ತಾತ್ಪರ್ಯವೂ ಹೀಗೆಯೇ.

## 158. ಪಿಷ್ಟಪೇಷಣನ್ಯಾಯ

ಹಿಟ್ಟನ್ನು ಪುನಃ ಹಿಟ್ಟು ಮಾಡುವುದು ವ್ಯರ್ಥ. ಹೇಳಿದ್ದನ್ನೇ

ಮತ್ತೆ ಹೇಳುವುದು ಮುಂತಾದ ಸಂದರ್ಭಗಳಲ್ಲಿ ವ್ಯರ್ಥವಾದ ಕೆಲಸವನ್ನು ಸೂಚಿಸುವುದಕ್ಕೆ ಈ ನ್ಯಾಯವನ್ನು ಉಪಯೋಗಿಸುತ್ತಾರೆ. 'ತುಷಕಂಡನ ನ್ಯಾಯ'ದ ಅಭಿಪ್ರಾಯವನ್ನೇ ಇದು ಸೂಚಿಸುತ್ತದೆ.

## 159. ಪಿಂಡಮುತ್ಸೃಜ್ಯ ಕರಂ ಲೇಢಿ

ತುತ್ತನ್ನು ಬಿಟ್ಟು ಕೈಯನ್ನು ನೆಕ್ಕುತ್ತಾನೆ ! ಮುಖ್ಯವಾದುದನ್ನು ಬಿಟ್ಟು ಅಲ್ಪಕ್ಕೆ ಆಸೆ ಪಡುವವನನ್ನು ಈ ನ್ಯಾಯ ವರ್ಣಿಸುತ್ತದೆ. ಹಸು ವಿನ ಹಾಲನ್ನು ಬಿಟ್ಟು ಅನ್ನದ ಗಂಜಿಯನ್ನು ಕುಡಿದನಂತೆ. ವ್ಯಕ್ತಿಯೇ ಎದುರಿಗೆ ಬಂದಾಗ ಚಿತ್ರವನ್ನು ನೋಡುತ್ತಾ ಕುಳಿತನಂತೆ—ಎಂಬ ಮಾತು ಗಳು ಈ ನ್ಯಾಯದ ಅರ್ಥವನ್ನು ವಿವರಿಸುತ್ತವೆ.

## 160. ಪೀಲುಪತ್ರಫಲನ್ಯಾಯ

ಪೀಲು ಎಂಬುದು ಒಂದು ಜಾತಿಯ ಮರ. ಗೋನುಮರ ಎಂದು ಹೇಳುತ್ತಾರೆ. ಅದರ ಎಲೆ ಕಹಿ. ಹಣ್ಣು ಮಾತ್ರ ಸಿಹಿ. ಒಂದೇ ಮರದ ಎಲೆಯ ರುಚಿ ಬೇರೆ, ಹಣ್ಣಿನ ರುಚಿ ಬೇರೆ. ಪೀಲುವಿನಲ್ಲಿ ಹುಟ್ಟಿ ದ್ದರಿಂದ ಎಲೆಯಂತೆ ಹಣ್ಣೂ ಕಹಿಯಾಗಿರಬೇಕು, ಅಥವಾ ಹಣ್ಣಿನಂತೆ ಎಲೆಯೂ ಸಿಹಿಯಾಗಿರಬೇಕು ಎಂಬ ತರ್ಕ ಇಲ್ಲಿ ನಡೆಯುವುದಿಲ್ಲ. ಅದು ಮೂರ್ಖತರ್ಕವಾಗುತ್ತದೆ. ಬೌದ್ಧಶಾಸ್ತ್ರಗಳಲ್ಲಿ ಈ ನ್ಯಾಯವನ್ನು ವಿಶೇಷವಾಗಿ ಬಳಸಿದ್ದಾರೆ.

ಗೋಮಯಪಾಯಸೀಯ ನ್ಯಾಯವನ್ನು ನೋಡಿ.

## 161. ಪುತ್ರಲಿಪ್ಸಯಾ ದೇವಂ ಭಜಂತ್ಯಾ ಭರ್ತಾಪಿ ನಷ್ಟಃ

ಒಬ್ಬಳು ತನಗೆ ಮಕ್ಕಳಿಲ್ಲದ್ದರಿಂದ ಮಕ್ಕಳಾಗಲೆಂದು ದೇವರ ಸೇವೆ ಯನ್ನು ಮಾಡುತ್ತಿದ್ದಳು. ಆಗ ಅವಳ ಗಂಡನು ಸತ್ತುಹೋದನು ! ಹೊಸ ವಸ್ತುವಿಗೆ ಆಸೆ ಪಡುತ್ತಿರುವಾಗ ಅದಕ್ಕೆ ಕಾರಣವಾದ ಮೂಲ ವಸ್ತುವೇ ನಾಶಹೊಂದಿದಾಗ ಈ ನ್ಯಾಯವನ್ನು ಉಪಯೋಗಿಸುತ್ತಾರೆ.

## 162. ಪುಷ್ಟಲಗುಡನ್ಯಾಯ

ಪುಷ್ಟಲಗುಡವೆಂದರೆ ದಪ್ಪವಾದ ದೊಣ್ಣೆ. ಹಳ್ಳಿಗೆ ಹೊಸಬರು ಬಂದರೆ ಊರ ನಾಯಿಗಳೆಲ್ಲಾ ಗುಂಪು ಕೂಡಿಕೊಂಡು ಬಗುಳುತ್ತಾ ಬರುವು ದನ್ನು ನೋಡಿದ್ದೇವೆ. ಅವುಗಳಲ್ಲಿ ಒಂದು ನಾಯಿಯ ಮೇಲೆ ದೊಣ್ಣೆ ಯನ್ನು ಬೀಸಿದರೆ ಎಲ್ಲಾ ನಾಯಿಗಳೂ ಹೆದರಿ ಸುಮ್ಮನೆ ಓಡಿಹೋಗು ವುವು. ಒಂದು ಪ್ರಯತ್ನದಿಂದ ಅನೇಕ ಪ್ರಯೋಜನಗಳು ಲಭಿಸುವಾಗ

ಈ ನ್ಯಾಯವನ್ನು ಉಪಯೋಗಿಸಬಹುದು. ಒಂದೇ ವಾದದಿಂದ ಅನೇಕ ಪ್ರತಿವಾದಿಗಳ ಮತವನ್ನು ಖಂಡಿಸಲು ಸಾಧ್ಯವಾಗುವ ಸಂದರ್ಭಗಳೂ ಇರುತ್ತವೆ. ಆಗ ದೃಷ್ಟಾಂತವಾಗಿ ಈ ನ್ಯಾಯವನ್ನು ಉಪಯೋಗಿಸುತ್ತಾರೆ. ಪುಷ್ಟವಾದ ನಾಯಿಯ ಮೇಲೆ ಲಗುಡ (ದೊಣ್ಣೆ)ವನ್ನು ಬೀಸುವುದು ಎಂದೂ ಅರ್ಥ ಮಾಡಬಹುದು.

## 163. ಪೃಷ್ಠತಾಡನೇ ದಂತಭಂಗಃ

ಅಂಡಿನ ಮೇಲೆ ಹೊಡೆದರೆ ಹಲ್ಲುಗಳು ಉದುರಿದುವಂತೆ ! ಯಾವಾಗಲೂ ಕಾರಣಕ್ಕೆ ಅನುಗುಣವಾದ ಕಾರ್ಯ ಹುಟ್ಟಬೇಕು ಮತ್ತು ಕಾರಣ ಒಂದು ಕಡೆ, ಕಾರ್ಯ ಇನ್ನೊಂದು ಕಡೆ ಆಗಬಾರದು. ಅಂತಹ ಸಂದರ್ಭದಲ್ಲಿ ಕಾರಣವು ದುಷ್ಟವಾಗಿ ಹೇತ್ವಾಭಾಸ ಎನಿಸಿಕೊಳ್ಳುತ್ತದೆ. ವಾದಿಯು ಈ ಬಗೆಯ ಅಸಂಗತ ಮಾತನ್ನಾಡಿದಾಗ ಪರಿಹಾಸ ಮಾಡಲು ಈ ನ್ಯಾಯವನ್ನು ಉಪಯೋಗಿಸುತ್ತಾರೆ.

ಕಾರ್ಯ ಕಾರಣಗಳು ಭಿನ್ನ ದೇಶಗಳಲ್ಲಿದ್ದರೆ ಅಲಂಕಾರಶಾಸ್ತ್ರದಲ್ಲಿ 'ಅಸಂಗತ್ಯಲಂಕಾರ' ಎಂದು ಹೇಳುತ್ತಾರೆ. ಉದಾ :—

ವಿಷಂ ಜಲಧರೈಃ ಪೀತಂ ಮೂರ್ಛಿತಾಃ ಪಥಿಕಾಂಗನಾಃ ।

ಅರ್ಥ :—ಮೋಡಗಳು ವಿಷವನ್ನು ಕುಡಿದವು. ಪಥಿಕರ ಹೆಂಡಿರು ಮೂರ್ಛಿತರಾದರು.

ಇದು ಮಳೆಗಾಲದ ವರ್ಣನೆ. ವಿಷವೆಂದರೆ ನೀರು ಎಂದು ಇನ್ನೊಂದು ಅರ್ಥವಿದೆ. ಮೋಡಗಳು ಕಾಮೋದ್ದೀಪಕಗಳು. ಪ್ರಿಯರು ದೂರದಲ್ಲಿ ಪ್ರಯಾಣ ಮಾಡುತ್ತಾ ಇದ್ದುದರಿಂದ ಅವರ ಹೆಂಡಿರು ವಿರಹಿಣಿಯಾಗಿದ್ದರು. ಮೋಡಗಳನ್ನು ನೋಡಿ ವಿರಹದುಃಖ ಹೆಚ್ಚಾಯಿತು" ಎಂದು ತಾತ್ಪರ್ಯ.

## 164. ಪ್ರಥಮಗ್ರಾಸೇ ಮಕ್ಷಿಕಾಪಾತಃ

ಮೊದಲಿನ ತುತ್ತಿನಲ್ಲೇ ನೊಣ ಬಿದ್ದಿತು ಎಂಬ ನ್ಯಾಯ. ಆರಂಭಿಸುವಾಗಲೇ ಎಲ್ಲಿ ದೊಡ್ಡ ವಿಘ್ನ ಸಂಭವಿಸುವುದೋ ಅಲ್ಲಿ ಇದರ ಉಪಯೋಗ.

'ಪ್ರಥಮಚುಂಬನೇ ದಂತಭಂಗಃ' ಎಂಬುದರ ಅಭಿಪ್ರಾಯವೂ ಇದೇ.

## 165. ಪ್ರಧಾನಮಲ್ಲನಿಬರ್ಹಣನ್ಯಾಯ

ಪ್ರಧಾನಮಲ್ಲ–ಮುಖ್ಯನಾದ ಜಟ್ಟಿಯನ್ನು, ನಿಬರ್ಹಣ–ಸೋಲಿಸವುದು. ಎಲ್ಲರಿಗಿಂತ ಬಲಶಾಲಿಯಾದ ಶತ್ರುವನ್ನು ಗೆದ್ದರೆ ಅವನಿಗಿಂತ ಅಲ್ಪಶಕ್ತಿಯವರನ್ನು ಗೆದ್ದಹಾಗೆಯೇ ಸರಿ ಎಂದು ಇದರ ತಾತ್ಪರ್ಯ. ವಾದಿಗೆ ಬಹುಮಂದಿ ಪ್ರತಿವಾದಿಗಳು ಇರಬಹುದು. ಅವರ ವಾದಗಳೂ

ಬೇರೆ ಬೇರೆ ಜಗೆಯಲ್ಲಿರಬಹುದು. ವಾದಿಯು ತನ್ನ ಸಿದ್ಧಾಂತವನ್ನು ಸ್ಥಾಪಿಸುವಾಗ ಪ್ರತಿವಾದಿಗಳೆಲ್ಲರಿಗೂ ಉತ್ತರವನ್ನು ಕೊಡಬೇಕಾಗಿಲ್ಲ. ಅವರಲ್ಲಿ ಇತರ ಮತಗಳನ್ನು ನಿರಾಕರಿಸಿ ತನ್ನ ಸಿದ್ಧಾಂತವನ್ನು ಮಂಡಿಸುವ ಪ್ರಬಲನಾದ ಪ್ರತಿವಾದಿಯನ್ನು ಖಂಡಿಸಿದರೆ ಇತರ ಪ್ರತಿವಾದಿಗಳು ಸೋತ ಹಾಗೆಯೇ ಸರಿ.

ಜಗತ್ತಿನ ಸೃಷ್ಟಿಗೆ ಶೂನ್ಯವು ಕಾರಣವೆಂದು ಬೌದ್ಧರೂ, ಪರಮಾಣುಗಳು ಕಾರಣವೆಂದು ತಾರ್ಕಿಕರೂ, ಪ್ರಧಾನ (ಪ್ರಕೃತಿಯು) ಕಾರಣವೆಂದು ಸಾಂಖ್ಯರೂ ಹೇಳುತ್ತಾರೆ. ಇವರಲ್ಲಿ ಸಾಂಖ್ಯರೇ ಪ್ರಬಲರಾದ ಪ್ರತಿವಾದಿಗಳು. ವೇದಾಂತಿಗಳು ಸಾಂಖ್ಯರ ಮತವನ್ನು ಖಂಡಿಸುತ್ತಾರೆ. ಇದರಿಂದ ಬೌದ್ಧರನ್ನೂ, ತಾರ್ಕಿಕರನ್ನೂ ಖಂಡಿಸಿದಂತೆಯೇ ಆಗುತ್ತದೆ. (ಬ್ರ.ಸೂ. 1–4–28 ಮತ್ತು ಅದರ ಶಾಂಕರ ಭಾಷ್ಯವನ್ನು ನೋಡಿರಿ.)

ಪೂರ್ವದಲ್ಲಿ ರಾಜರು ತಮ್ಮ ಆಸ್ಥಾನದಲ್ಲಿ ಜಟ್ಟಿಗಳನ್ನು ಪೋಷಿಸುತ್ತಿದ್ದರು. ಪರರಾಜರ ಜಟ್ಟಿಯು ಬಂದು ಈ ಜಟ್ಟಿಗಳಲ್ಲಿ ಮುಖ್ಯನಾದವನನ್ನು ಕುಸ್ತಿಯಲ್ಲಿ ಗೆದ್ದರೆ ಉಳಿದ ಜಟ್ಟಿಗಳೆಲ್ಲರನ್ನೂ ಗೆದ್ದಂತೆಯೇ ಸರಿಯೆಂದು ಭಾವಿಸಿ ಅವನಿಗೆ ಬಹುಮಾನ ಸಲ್ಲುತ್ತಿತ್ತು. ಇದು ಈ ನ್ಯಾಯದ ಉತ್ಪತ್ತಿಗೆ ಕಾರಣವಾಗಿರಬೇಕು.

## 166. ಪ್ರಯೋಜನಮನುದ್ದಿಶ್ಯ ನ ಮಂದೋऽಪಿ ಪ್ರವರ್ತತೇ

ದಡ್ಡನೂ ಕೂಡ ಪ್ರಯೋಜನವಿಲ್ಲದೆ ಕೆಲಸ ಮಾಡುವುದಿಲ್ಲ. ಹೀಗಿರಲು ಬುದ್ಧಿಶಾಲಿಯು ವ್ಯರ್ಥವಾದ ಕಾರ್ಯವನ್ನು ಮಾಡುವನೆ ? ಆದ್ದರಿಂದ ಶಾಸ್ತ್ರದಲ್ಲಿ ಉಪಯೋಗಿಸಿರುವ ಪ್ರತಿಯೊಂದು ಶಬ್ದಕ್ಕೂ ಒಂದು ಅರ್ಥವಿರಲೇಬೇಕೆಂದೂ, ನಿಷ್ಫಲವಾದ ಒಂದು ಶಬ್ದವೂ ಇರಲು ಶಕ್ಯವಿಲ್ಲವೆಂಬುದೂ ಅಭಿಪ್ರಾಯ.

ಅಪಾರವಾದ ಈ ಸೃಷ್ಟಿಯಲ್ಲಿ ನಿಷ್ಫಲವಾದ ಒಂದು ಪ್ರಾಣಿಯಾಗಲಿ, ಜಡವಸ್ತುವಾಗಲಿ ಇಲ್ಲವೆಂದು ಆಸ್ತಿಕರು ನಂಬುತ್ತಾರೆ. 'ಔಷಧಕ್ಕೆ ಬರದ ಮೂಲಿಕೆ ಇಲ್ಲ' ಎಂಬ ಗಾದೆಯುಂಟು. ಆದರೆ 'ಯೋಜಕಸ್ತತ್ರ ದುರ್ಲಭಃ.'

ಮುದ್ರಾರಾಕ್ಷಸವೆಂಬ ನಾಟಕದಲ್ಲಿ ಚಾಣಕ್ಯನು ಒಂದೆಡೆಯಲ್ಲಿ ಹೇಳುತ್ತಾನೆ: 'ವಿನಾ ಪ್ರಯೋಜನಂ ಸ್ವಪ್ನೇऽಪಿ ನ ಚೇಷ್ಟತೇ ಕೌಟಿಲ್ಯಃ'– ಪ್ರಯೋಜನವಿಲ್ಲದೆ ಚಾಣಕ್ಯನು ಸ್ವಪ್ನದಲ್ಲಿಯೂ ಅಲ್ಲಾಡುವುದಿಲ್ಲ.

## 167. ಪ್ಲವಂಗಮಗತಿನ್ಯಾಯ

ಪ್ಲವಂಗಮ–ಕಪಿ. ಕಪಿಯು ನೆಗೆಯುತ್ತ ಹೋಗಿ ಮರದ ಹಣ್ಣನ್ನು

ತಲುಪುತ್ತದೆ. ಮಧ್ಯಮ ದರ್ಜೆಯ ಸಾಮರ್ಥ್ಯದವನಿಗೆ ಈ ನ್ಯಾಯ ಅನ್ವಯಿಸುತ್ತದೆ. ಕಪಿಯ ವೇಗ ಇರುವೆಗಿಂತ ಅಧಿಕ, ಹಕ್ಕಿಗಿಂತ ಕಡಿಮೆ.

ಪಿಪೀಲಿಕಾಗತಿನ್ಯಾಯ ಮತ್ತು ವಿಹಂಗಮನ್ಯಾಯಗಳನ್ನು ನೋಡಿ.

## 168. ಫಲವತ್‌ಸಹಕಾರನ್ಯಾಯ

ಸಹಕಾರವೆಂದರೆ ಸುವಾಸನೆಯನ್ನು ಬೀರುವ ಸಿಹಿ ಮಾವಿನ ಮರ. ಅದು ಫಲಭರಿತವಾದಾಗ ಜನರಿಗೆ ಸಿಹಿಯಾದ ಹಣ್ಣುಗಳನ್ನೂ, ಜೊತೆಯಲ್ಲಿ ಸುವಾಸನೆಯನ್ನೂ, ಬಿಸಿಲಲ್ಲಿ ದಣಿದ ಪಥಿಕರಿಗೆ ನೆರಳನ್ನೂ ಕೊಡುತ್ತದೆ. ಮರವನ್ನು ಬೆಳಸಿರುವುದು ಹಣ್ಣಿಗಾಗಿ. ಅದರೊಡನೆ ಸುವಾಸನೆಯೂ, ನೆರಳೂ ಅಪ್ರಾರ್ಥಿತವಾಗಿ ದೊರಕುತ್ತವೆ. ಒಂದು ಪ್ರಯೋಜನವನ್ನು ಬಯಸಿ ಮಾಡಿದ ಕಾರ್ಯದಿಂದ ಇತರ ಪ್ರಯೋಜನಗಳೂ ಆನುಷಂಗಿಕವಾಗಿ ದೊರೆತಾಗ ಈ ನ್ಯಾಯವನ್ನು ಬಳಸುತ್ತಾರೆ. ಆಪಸ್ತಂಬಧರ್ಮಸೂತ್ರದಲ್ಲಿ "ಆಮ್ರೇ ಫಲಾರ್ಥೇ ನಿಚಿತೇ ಛಾಯಾ ಗಂಧ ಇತ್ಯನೂತ್ಪದ್ಯೇತೆ" ಎಂಬ ವಚನವಿದೆ. ಧರ್ಮಸಂಪಾದನೆಗಾಗಿ ಮಾಡಿದ ಕಾರ್ಯದಿಂದ ಅರ್ಥಕಾಮಗಳೂ ದೊರೆಯುತ್ತವೆಯೆಂದು ಅದರ ತಾತ್ಪರ್ಯ. ಈ ವಚನವೇ ಈ ನ್ಯಾಯಕ್ಕೆ ಮೂಲವಾಗಿರಬಹುದು.

## 169. ಬಕಬಂಧನನ್ಯಾಯ

ಕೊಕ್ಕರೆಯನ್ನು ಹಿಡಿಯುವ ನ್ಯಾಯ. ಕೊಕ್ಕರೆಯನ್ನು ಹಿಡಿಯುವ ಉಪಾಯವೇನೆಂದು ಒಬ್ಬನು ಕೇಳಿದನಂತೆ. ಉಪಾಯಜ್ಞನು ಹೇಳಿದ್ದೇನೆಂದರೆ: "ಒಂದು ಬೆಣ್ಣೆಯ ಮುದ್ದೆಯನ್ನು ತೆಗೆದುಕೊಂಡು ಹೋಗಿ ಕೊಕ್ಕರೆಯ ತಲೆಯ ಮೇಲೆ ಇಡಬೇಕು. ಬಿಸಿಲಿಗೆ ಬೆಣ್ಣೆ ಕರಗಿ ಕೊಕ್ಕರೆಯ ಕಣ್ಣಿನ ಮೇಲೆ ಹರಿದು ಕಣ್ಣು ಕಾಣಿಸದಂತಾಗುತ್ತದೆ. ಆಗ ಕೊಕ್ಕರೆ ಇದ್ದಲ್ಲಿಯೇ ಇರುತ್ತದೆ. ಹೋಗಿ ಹಿಡಿದುಕೊಳ್ಳಬೇಕು!"

ಕೊಕ್ಕರೆಯನ್ನು ಮೊದಲು ಹಿಡಿಯದೆ ಅದರ ತಲೆಯ ಮೇಲೆ ಬೆಣ್ಣೆಯನ್ನಿಡುವುದು ಹೇಗೆ?

ದಡ್ಡತನದ ಉಪಾಯವನ್ನು–ಬಳಸು ದಾರಿಯನ್ನು–ಸೂಚಿಸುವಾಗ ಈ ನ್ಯಾಯ ಉಪಯುಕ್ತವಾಗುತ್ತದೆ.

## 170. ಬಧಿರಕರ್ಣಜಪನ್ಯಾಯ

ಕಿವುಡನಿಗೆ ಕಿವಿಮಾತು ಹೇಳುವ ನ್ಯಾಯ. ವ್ಯರ್ಥವಾದ ಪ್ರಯತ್ನವನ್ನು ಇದು ಸೂಚಿಸುತ್ತದೆ. ಅರಣ್ಯರೋದನನ್ಯಾಯದ ಅರ್ಥವೇ ಇದಕ್ಕೂ ಅನ್ವಯಿಸುತ್ತದೆ.

ಮೂರ್ಖಂಗೆ ಬುದ್ಧಿಯನು ನೂರ್ಕಾಲ ಹೇಳಿದರೆ
ಗೋರ್ಕಲ್ಲ ಮೇಲೆ ಮಳೆ ಸುರಿದರಾ ಕಲ್ಲು
ನೀರ್ಕೊಂಬುದೇನೋ ಸರ್ವಜ್ಞ ॥

ಎಂಬ ಸರ್ವಜ್ಞ ಮೂರ್ತಿಯ ಪದ್ಯವನ್ನಿಲ್ಲಿ ಸ್ಮರಿಸಿಕೊಳ್ಳಬಹುದು.

"ಬಧಿರೇ ಕರ್ಣಜಾಪೋಽಯಮಂಧೇ ನೃತ್ಯಪ್ರದರ್ಶನಂ" ಎಂಬುದಾಗಿ ಒಂದು ಮಾತಿದೆ. ಕುರುಡನೆದುರಿಗೆ ನರ್ತನ ಮಾಡಿದ ಹಾಗೆ ಎಂದು 'ಅಂಧೇ ನೃತ್ಯ ಪ್ರದರ್ಶನಂ' ಎಂಬುದರ ಅರ್ಥ.

## 171. ಬಲವದಪಿ ಶಿಕ್ಷಿತಾನಾಮಾತ್ಮನ್ಯಪ್ರತ್ಯಯಂ ಚೇತಃ

ದೊಡ್ಡ ವಿದ್ವಾಂಸರ ಮನಸ್ಸಿಗೂ ಆತ್ಮವಿಶ್ವಾಸ ಇರುವುದಿಲ್ಲ. ಈ ಮಾತನ್ನು ಅಭಿಜ್ಞಾನ ಶಾಕುಂತಲದಲ್ಲಿ ಕಾಳಿದಾಸನು ಹೇಳಿದ್ದಾನೆ. ವಿದ್ವಾಂಸರು ಮೆಚ್ಚಿದ ಹೊರತು ತನ್ನ ನಾಟಕವು ಚೆನ್ನಾಗಿದೆಯೆಂದು ಹೇಳಿಕೊಳ್ಳಲಾರೆನೆಂದು ಹೇಳಿ ಈ ನ್ಯಾಯವನ್ನು ಉದಾಹರಿಸಿದ್ದಾನೆ. ಶಾಸ್ತ್ರದಲ್ಲಿ ವಾಕ್ಯಾರ್ಥವನ್ನು ಮಾಡುವಾಗ ವಾದಿ ಪ್ರತಿವಾದಿಗಳು ವಿದ್ವಾಂಸರಾಗಿದ್ದರೂ ಮೂರನೆಯವರನ್ನು ಸಾಕ್ಷಿಯಾಗಿ ಅಂಗೀಕರಿಸುತ್ತಾರೆ. ಒಂದು ಕಾರ್ಯದ ವಿವೇಚನೆ ಮಾಡುವಾಗ ತನಗೆ ದೃಢವಾದ ವಿಶ್ವಾಸ ಹುಟ್ಟಿದರೂ ಇನ್ನೊಬ್ಬರ ಅಭಿಪ್ರಾಯವನ್ನು ಕೇಳಬೇಕು. 'ಪ್ರತ್ಯಕ್ಷವಾದರೂ ಪ್ರಮಾಣಿಸಿ ನೋಡು' ಎಂಬ ಗಾದೆಯನ್ನು ಇದು ಹೋಲುತ್ತದೆ.

## 172. ಬಹುಚ್ಛಿದ್ರಘಟಪ್ರದೀಪನ್ಯಾಯ

ಅನೇಕ ರಂಧ್ರಗಳಿರುವ ಗಡಿಗೆಯಲ್ಲಿ ದೀಪವನ್ನು ಇಟ್ಟರೆ ರಂಧ್ರಗಳ ಮೂಲಕ ಪ್ರಕಾಶವು ಹೊರಗೆ ಚಿಮ್ಮುತ್ತದೆ. ಶರೀರದಲ್ಲಿ ಐದು ಜ್ಞಾನೇಂದ್ರಿಯಗಳಿವೆ. ಇವುಗಳ ಮೂಲಕ ಜ್ಞಾನವು ಘಟ ಮುಂತಾದ ವಿಷಯಗಳನ್ನು ವ್ಯಾಪಿಸುತ್ತದೆ. ಇದಕ್ಕೆ ದೃಷ್ಟಾಂತ ಬಹುಚ್ಛಿದ್ರಘಟ. ಒಂದೇ ಜ್ಞಾನ ಎಂಬ ವಸ್ತು ನಾನಾ ಮುಖವಾಗಿ ಹೊರಗೆ ವ್ಯಾಪಿಸುವುದೆಂದೂ, ವಿಷಯಗಳು ಮಾತ್ರ ಬೇರೆಯವೆಂದೂ ಈ ನ್ಯಾಯ ಬೋಧಿಸುತ್ತದೆ.

ದಕ್ಷಿಣಾಮೂರ್ತಿಸ್ತೋತ್ರದಲ್ಲಿ ಶ್ರೀ ಶಂಕರಾಚಾರ್ಯರು "ನಾನಾಚ್ಛಿದ್ರ ಘಟೋದರ ಸ್ಥಿತ ಮಹಾದೀಪ ಪ್ರಭಾ ಭಾಸ್ವರಂ" ಎಂಬ ಶ್ಲೋಕದಲ್ಲಿ ಈ ನ್ಯಾಯವನ್ನು ಉಪಯೋಗಿಸಿ ಜ್ಞಾನವನ್ನು ವರ್ಣಿಸಿದ್ದಾರೆ.

## 173. ಬಹುರಾಜಕದೇಶನ್ಯಾಯ

ಒಂದು ದೇಶಕ್ಕೆ ಬಹುಮಂದಿ ರಾಜರುಗಳಿದ್ದರೆ ಆ ದೇಶದ ಗತಿ

ಏನಾದೀತು ? ಪರಸ್ಪರ ವಿರುದ್ಧವಾದ ಆಜ್ಞೆಯನ್ನು ಹೊರಡಿಸುವುದರಿಂದ ದಂಗೆ, ದೊಂಬಿಗಳು ಏಳುತ್ತವೆ. ಅರಾಜಕ ದೇಶದ ಗತಿಯೇ ಅದಕ್ಕೆ ಒದಗುತ್ತದೆ. ದೇಶದಲ್ಲಿ ಐಕಮತ್ಯವಿರಬೇಕಾದರೆ ರಾಜನು ಒಬ್ಬನೇ ಇರಬೇಕು.

ದೇಹದಲ್ಲಿ ಪಂಚೇಂದ್ರಿಯಗಳಿರುವವಷ್ಟೆ ? ಇವುಗಳಿಗೆ ಪ್ರೇರಕರು ಎಷ್ಟು ಮಂದಿ ? ಬಹು ಮಂದಿ ಪ್ರೇರಕರಾದರೆ ಇಂದ್ರಿಯಗಳಿಗೆ ಹೊಂದಾಣಿಕೆಯಿಲ್ಲದೆ ದೇಹವ್ಯಾಪಾರಕ್ಕೆ ಭಂಗ ಬರುತ್ತದೆ. ಬಹುರಾಜಕ ದೇಶದಂತೆ ಅವ್ಯವಸ್ಥೆಯಾದೀತು. ಆದ್ದರಿಂದ ಒಬ್ಬನೇ ಇಂದ್ರಿಯಗಳ ಪ್ರೇರಕನೆಂದು ಅನುಭೂತಿ ಪ್ರಕಾಶದಲ್ಲಿ ಹೇಳಿದ್ದಾರೆ.

ಒಂದು ಸಂಸಾರದಲ್ಲಿ ಅನೇಕರು ಯಜಮಾನರಾದರೂ ಬಹುರಾಜಕ ದೇಶವೇ ಆಗುವುದು.

## 174. ಬೀಜವೃಕ್ಷನ್ಯಾಯ

ಬೀಜ ಮೊದಲೋ ವೃಕ್ಷ ಮೊದಲೋ ? ಬೀಜದಿಂದ ಮರ ಹುಟ್ಟಿತೋ ? ಮರದಿಂದ ಬೀಜ ಹುಟ್ಟಿತೋ ? ಮೊದಲು ಇದ್ದದ್ದು ಯಾವುದು ? ಇದನ್ನು ನಿರ್ಧರಿಸಲಾಗುವುದಿಲ್ಲ. ಈಗಿರುವ ಮರಕ್ಕೆ ಹಿಂದಿನ ಬೀಜ ನಿಮಿತ್ತ. ಆ ಬೀಜಕ್ಕೆ ಅದರ ಹಿಂದಿದ್ದ ಮರ ನಿಮಿತ್ತ. ಇದು ಅನ್ಯೋನ್ಯಾಶ್ರಯವೇನೂ ಅಲ್ಲ. ಬೀಜ ವೃಕ್ಷಗಳಿರುವುದೂ ಒಂದಕ್ಕೊಂದು ಕಾರಣವಾಗಿರುವುದೂ ಸತ್ಯವಾಗಿದೆ. ಪ್ರಾಮಾಣಿಕವಾಗಿದೆ. ಆದ್ದರಿಂದ ಇದು ಅನಾದಿಯೆಂದು ಒಪ್ಪಬೇಕಾಗುತ್ತದೆ. ಯಾವುದು ಪ್ರಾಮಾಣಿಕವಾಗಿದೆಯೋ ಆದರೆ ಕಾರ್ಯಕಾರಣಗಳ ವ್ಯವಸ್ಥೆ ಮಾಡಲು ಸಾಧ್ಯವಿಲ್ಲವೋ ಅದು ಅನಾದಿಯೆಂದು ಶಾಸ್ತ್ರಕಾರರು ಒಪ್ಪುತ್ತಾರೆ.

ಬೀಜಾಂಕುರನ್ಯಾಯ, ಅಂಡಕುಕ್ಕುಟೀ ನ್ಯಾಯಗಳನ್ನು ಇದೇ ರೀತಿ ಬಳಸುತ್ತಾರೆ.

## 175. ಬ್ರಾಹ್ಮಣಪರಿವ್ರಾಜಕನ್ಯಾಯ

ಪರಿವ್ರಾಜಕರೆಂದರೆ ಸಂನ್ಯಾಸಿಗಳು. ಅವರಲ್ಲಿ ಅನೇಕ ತಾರತಮ್ಯವಿದೆ. ಬ್ರಾಹ್ಮಣರು ಮಾತ್ರ ಪರಿವ್ರಾಜಕರಾಗಲು ಅರ್ಹರೆಂದು ಧರ್ಮಶಾಸ್ತ್ರ ಹೇಳುತ್ತದೆ. 'ಬ್ರಾಹ್ಮಣರೂ ಬಂದರು, ಪರಿವ್ರಾಜಕರೂ ಬಂದರು'. ಈ ವಾಕ್ಯದಲ್ಲಿ ಪರಿವ್ರಾಜಕರೆಂದು ಹೇಳಿದುದು ಪುನರುಕ್ತಿಯಾಗಿ ತೋರುತ್ತದೆ. 'ಬ್ರಾಹ್ಮಣರು ಬಂದರು' ಎಂದರೆ ಸಾಕು. ಪರಿವ್ರಾಜಕರು ಅವರಲ್ಲಿಯೇ ಅಂತರ್ಭೂತರೆಂಬ ಶಂಕೆ ಹುಟ್ಟುತ್ತದೆ. ಇದಕ್ಕೆ ಸಮಾಧಾನವೇನೆಂದರೆ :—ಬ್ರಾಹ್ಮಣರೆಲ್ಲ ಪರಿವ್ರಾಜಕರಲ್ಲ. ಪರಿ

ವ್ರಾಜಕರು ಸಂನ್ಯಾಸಾಶ್ರಮವನ್ನು ಸ್ವೀಕರಿಸಿದವರು. ಅವರಿಗೆ ಇತರ ಬ್ರಾಹ್ಮಣರಿಗಿಂತ ಒಂದು ಪ್ರಾಶಸ್ತ್ಯವನ್ನು ತೋರಿಸುವುದಕ್ಕಾಗಿ ಪುನಃ 'ಪರಿವ್ರಾಜಕರೂ ಬಂದರು' ಎಂದು ಪ್ರಯೋಗಿಸಬಹುದು. ಹೀಗೆ ಕೆಲವು ವೇಳೆ ಪುನರುಕ್ತಿಯಂತೆ ತೋರಿಬಂದಾಗ ಆ ದೋಷವನ್ನು ನಿರಾಕರಿಸುವು ದಕ್ಕೆ ಈ ನ್ಯಾಯವನ್ನು ಉಪಯೋಗಿಸುತ್ತಾರೆ.

## 176. ಬ್ರಾಹ್ಮಣವಸಿಷ್ಠನ್ಯಾಯ

"ಬ್ರಾಹ್ಮಣರೂ, ವಸಿಷ್ಠರೂ ಬಂದರು." ಇಲ್ಲಿ ಪುನರುಕ್ತಿ ದೋಷ ವಿಲ್ಲ. ವಸಿಷ್ಠರು ಎಲ್ಲಾ ಬ್ರಾಹ್ಮಣರಂತಲ್ಲ. ಅವರು ಮಹಾತಪಸ್ವಿ ಗಳು. ಆದ್ದರಿಂದ ಅವರಿಗೆ ಪ್ರಾಶಸ್ತ್ಯವನ್ನು ಬೋಧಿಸುವುದಕ್ಕಾಗಿ ಈ ರೀತಿ ಪ್ರಯೋಗ ಮಾಡಬಹುದು. ಬ್ರಾಹ್ಮಣಪರಿವ್ರಾಜಕನ್ಯಾಯ ದಂತೆಯೇ ಇದರ ತಾತ್ಪರ್ಯವಿದೆ.

ಮಹಾಭಾಷ್ಯದಲ್ಲಿ ವ್ಯಾಕರಣ ಶಾಸ್ತ್ರವನ್ನುದ್ದೇಶಿಸಿ "ಇದು ವೈದಿಕ ಮತ್ತು ಲೌಕಿಕ ಶಬ್ದಗಳ ಅನುಶಾಸನ" ಎಂದು ಹೇಳಿದ್ದಾರೆ. ಅದಕ್ಕೆ ಹರದತ್ತನು ವ್ಯಾಖ್ಯಾನ ಮಾಡುತ್ತಾ ತನ್ನ 'ಪದಮಂಜರಿ'ಯಲ್ಲಿ "ವೈದಿಕ ಶಬ್ದಗಳೂ ಲೌಕಿಕ ಶಬ್ದಗಳೇ ಆಗಿದ್ದರೂ ಬ್ರಾಹ್ಮಣವಸಿಷ್ಠನ್ಯಾಯದಂತೆ ಅತಿರಿಕ್ತವಾಗಿ ಪುನಃ ಹೇಳಿದ್ದಾರೆ" ಎಂದು ಬರೆದಿದ್ದಾನೆ.

ವೇದವೂ ಲೋಕದಲ್ಲಿ ಪ್ರಚಾರದಲ್ಲಿರುವುದರಿಂದ ವೈದಿಕ ಶಬ್ದಗಳೂ ಲೌಕಿಕ ಶಬ್ದಗಳೇ ಸರಿಯೆಂದು ಹರದತ್ತನ ಆಶಯ.

## 177. ಬ್ರಾಹ್ಮಣಶ್ರಮಣನ್ಯಾಯ

ಶ್ರಮಣನೆಂದರೆ ಬೌದ್ಧಭಿಕ್ಷು. "ಬ್ರಾಹ್ಮಣನಾದ ಶ್ರಮಣನು ಬಂದನು." ಈ ವಾಕ್ಯದಲ್ಲಿ 'ಬ್ರಾಹ್ಮಣನಾದ' ಎಂಬ ವಿಶೇಷಣ ಕೂಡು ವುದಿಲ್ಲ. ಶ್ರಮಣನು ಬ್ರಾಹ್ಮಣನಲ್ಲವಷ್ಟೆ ? ಎಂಬ ಶಂಕೆ ಮೂಡುತ್ತದೆ. ಇದಕ್ಕೆ ಸಮಾಧಾನವೇನೆಂದರೆ : ಈ ಶ್ರಮಣನು ಮೊದಲು ಬ್ರಾಹ್ಮಣ ನಾಗಿ ಹುಟ್ಟಿ ಈಗ ಬೌದ್ಧನಾಗಿ ಮತಾಂತರಗೊಂಡಿದ್ದಾನೆ. "ಪೂರ್ವದಲ್ಲಿ ಬ್ರಾಹ್ಮಣನಾಗಿದ್ದು ಈಗ ಶ್ರಮಣನಾಗಿರುವವನು ಬಂದನು" ಎಂದು ಅರ್ಥ. ಸಾಂಪ್ರತದಲ್ಲಿ ಅನನ್ವಿತವಾದ ಅರ್ಥವಿದ್ದರೆ ಅದನ್ನು ಪೂರ್ವ ಕಾಲಕ್ಕೆ ಯೋಜಿಸಿಕೊಳ್ಳಬೇಕೆಂದು ತಾತ್ಪರ್ಯ. ಉಪಾಧ್ಯಾಯರು, ಗುಮಾಸ್ತರು ಮುಂತಾದವರನ್ನು ಅಧಿಕಾರದಿಂದ ನಿವೃತ್ತರಾದ ಮೇಲೂ ಅದೇ ಅಧಿಕಾರದ ಹೆಸರಿನಿಂದ ವ್ಯವಹರಿಸುತ್ತಾರಷ್ಟೆ. ಹಾಗೆಯೇ ಇದು.

## 178. ಭಕ್ಷಿತೇಽಪಿ ಲಶುನೇ ನ ಶಾಂತೋ ವ್ಯಾಧಿಃ

'ಬೆಳ್ಳುಳ್ಳಿಯನ್ನು ತಿಂದರೂ ರೋಗವು ಗುಣವಾಗಲಿಲ್ಲ'. ಬೆಳ್ಳುಳ್ಳಿ

ನಿಷಿದ್ಧವಾದ ಪದಾರ್ಥ. ಅದನ್ನು ತಿನ್ನಬಾರದೆಂದು ಶಾಸ್ತ್ರದಲ್ಲಿ ನಿಷೇಧ ಇದೆ. ಅಲ್ಲದೆ ಅದರಲ್ಲಿ ತೀವ್ರವಾದ ದುರ್ಗಂಧವಿದೆ. ಔಷಧಕ್ಕೆ ದೋಷ ವಿಲ್ಲವೆಂದು ರೋಗಿಯೊಬ್ಬನು ಹೇಗೋ ಕಷ್ಟದಿಂದ ಅದನ್ನು ತಿಂದನು. ಆದರೂ ರೋಗ ಗುಣ ಹೊಂದಲಿಲ್ಲ. ಬಾಯಿ ದುರ್ಗಂಧವಾದದ್ದೇ ಫಲ. ಇಷ್ಟವಿಲ್ಲದ ಕಾರ್ಯವನ್ನು ಫಲಾಶೆಯಿಂದ ಮಾಡಿದರೂ ಫಲವು ದೊರಕದಿರುವಾಗ ಈ ನ್ಯಾಯವನ್ನು ಉಪಯೋಗಿಸುತ್ತಾರೆ.

## 179. ಭರ್ಮನ್ಯಾಯ

ಒಬ್ಬ ರಾಜನ ಆಸ್ಥಾನದಲ್ಲಿ ಭರ್ಮ ಎಂಬ ಮಹಾವಿದ್ವಾಂಸನಿದ್ದನು. ಅವನ ಪಾಂಡಿತ್ಯಕ್ಕಾಗಿ ರಾಜನು ಅವನನ್ನು ಬಹಳ ಗೌರವದಿಂದ ಕಾಣು ತ್ತಿದ್ದನು. ಆಸ್ಥಾನದಲ್ಲಿದ್ದ ಇತರ ಪಂಡಿತರಿಗೆ ಭರ್ಮನ ಮೇಲೆ ಅಸೂಯೆಯುಂಟಾಯಿತು. ಅವನನ್ನು ದೂರ ಅಟ್ಟದಲ್ಲದೆ ತಮ್ಮ ಬೇಳೆ ಬೇಯುವುದಿಲ್ಲವೆಂದು ಎಲ್ಲರೂ ಸೇರಿ ಮಂತ್ರಾಲೋಚನೆ ಮಾಡಿದರು. ಒಂದು ದಿನ ಭರ್ಮನನ್ನು ಮೋಸದಿಂದ ದೂರದ ಕಾಡಿಗೆ ಕರೆದೊಯ್ದು ಕಣ್ಣುಕಟ್ಟಿ ಬಿಟ್ಟರು. ರಾಜನ ಬಳಿಗೆ ಬಂದು ಭರ್ಮ ಆಕಸ್ಮಿಕ ರೋಗ ದಿಂದ ಮೃತನಾದನೆಂದೂ ಅವನ ದಹನಕ್ರಿಯೆಯನ್ನು ತಾವು ಮಾಡಿದು ದಾಗಿಯೂ ತಿಳಿಸಿಬಿಟ್ಟರು. ರಾಜನು ಅವರ ಮಾತನ್ನು ನಂಬಿದನು.

ಭರ್ಮ ಎಲ್ಲೆಲ್ಲಿಯೋ ಅಲೆದು ಬಹಳ ಕಾಲದ ಮೇಲೆ ನಗರಕ್ಕೆ ಬಂದು ರಾಜನನ್ನು ಭೇಟಿಮಾಡಲು ಪ್ರಯತ್ನಿಸಿದನು. ಅಧಿಕಾರಿಗಳು ಪಂಡಿತರ ಕುತಂತ್ರಕ್ಕೆ ಬಲಿಯಾಗಿ ರಾಜನ ಭೇಟಿಯಾಗಲು ಬಿಡಲಿಲ್ಲ. ಭರ್ಮ ಉಪಾಯಗಾಣದೆ ನಗರದ ಹೊರಗಡೆ ಸುತ್ತುತ್ತಿದ್ದನು. ಈ ಸುಳಿವನ್ನರಿತ ಪಂಡಿತರು ಭರ್ಮ ಸತ್ತು ಪ್ರೇತವಾಗಿ ಅಲೆಯುತ್ತಿದ್ದಾ ನೆಂದೂ, ಆಗಾಗ ಜನರಿಗೆ ಕಾಣಿಸಿಕೊಳ್ಳುತ್ತಿರುವನೆಂದೂ ರಾಜನಿಗೆ ತಿಳಿಸಿ ದರು. ಒಮ್ಮೆ ರಾಜನು ಸಂಚಾರ ಹೋಗಿದ್ದಾಗ ಭರ್ಮ ಅವನನ್ನು ಕಂಡು ರಾಜನ ಬಳಿಗೆ ಧಾವಿಸುತ್ತಾ ಬಂದನು. ರಾಜನು ನೀನಾರೆಂದು ಕೇಳಲು "ನಾನು ಭರ್ಮ" ಎಂದು ಉಸುರಿದನು. ರಾಜನು ಭರ್ಮನ ಪ್ರೇತವೇ ಇದೆಂದು ಭಾವಿಸಿ ಅಲ್ಲಿ ನಿಲ್ಲದೆ ಹೊರಟುಹೋದನು. ಕಾಲ ಕ್ರಮದಲ್ಲಿ, ಪಂಡಿತರ ತಂತ್ರವೆಲ್ಲಾ ಬಯಲಾಗಿ ಅವನೇ ಭರ್ಮನೆಂದು ರಾಜನಿಗೆ ಗೊತ್ತಾಯಿತು.

ಇದು ಈ ನ್ಯಾಯಕ್ಕೆ ಮೂಲವಾದ ಕಥೆ. ರಾಜನೇ ಪ್ರತ್ಯಕ್ಷವಾಗಿ ಭರ್ಮನನ್ನು ನೋಡಿದರೂ ಅವನಿಗೆ ವಿಶ್ವಾಸ ಹುಟ್ಟಲಿಲ್ಲ. ರಾಜನ ಬುದ್ಧಿಯು ಕಾರಣಾಂತರಗಳಿಂದ ದೂಷಿತವಾಗಿದ್ದುದೇ ಇದಕ್ಕೆ ಕಾರಣ. 'ಭರ್ಮ' ಪದಕ್ಕೆ ಬದಲಾಗಿ 'ಭರ್ಚ್ಬ' ಎಂದೂ ಕೆಲವೆಡೆ ಇದೆ.

ಪೂರ್ವಗ್ರಹ (Prejudice) ದಿಂದಾಗಲಿ ಇತರ ಕಾರಣಗಳಿಂದಾಗಲಿ ಬುದ್ಧಿಯು ದೂಷಿತವಾಗಿದ್ದಲ್ಲಿ ಅದು ಯಥಾರ್ಥವನ್ನು ಗ್ರಹಿಸುವುದಿಲ್ಲ ಎಂಬುದಕ್ಕೆ ಈ ನ್ಯಾಯವನ್ನು ದೃಷ್ಟಾಂತವಾಗಿ ಉಪಯೋಗಿಸುತ್ತಾರೆ.

## 180. ಭಸ್ಮನ್ಯಾಜ್ಯಾಹುತಿನ್ಯಾಯ

ಬೂದಿಯಲ್ಲಿ ತುಪ್ಪವನ್ನು ಹೋಮ ಮಾಡಿದ ನ್ಯಾಯ. ವಿಧ್ಯುಕ್ತ ವಾದ ರೀತಿಯಲ್ಲಿ ಅಗ್ನಿಯಲ್ಲಿ ಹೋಮ ಮಾಡಿದರೆ ಯೋಗ್ಯವಾದ ಫಲ ದೊರಕುತ್ತದೆ. ಬೂದಿಯಲ್ಲಿ ಹೋಮ ಮಾಡಿದರೆ ತುಪ್ಪವೂ ವ್ಯರ್ಥ, ಫಲವೂ ಇಲ್ಲ. ಯಾವ ಕಾರ್ಯವನ್ನಾದರೂ ಪಾತ್ರಾಪಾತ್ರವನ್ನರಿತು ಯೋಗ್ಯ ಪಾತ್ರದಲ್ಲಿ ಮಾಡಿದರೆ ಫಲ ದೊರಕುತ್ತದೆಯೆಂದು ತಾತ್ಪರ್ಯ. ಮರಳಿನಲ್ಲಿ ಬೀಜವನ್ನು ಬಿತ್ತಿದ ಹಾಗೆ, ಹೊಳೆಯಲ್ಲಿ ಹುಣಿಸೆ ಹಣ್ಣನ್ನು ಕದಡಿದ ಹಾಗೆ ಎಂಬ ಕನ್ನಡದ ಗಾದೆಗಳು ಈ ನ್ಯಾಯವನ್ನು ಹೋಲುತ್ತವೆ.

## 181. ಭಾಂಡಾಲೇಖ್ಯನ್ಯಾಯ

ಭಾಂಡ–ಗಡಿಗೆಯ ಮೇಲಿರುವ, ಆಲೇಖ್ಯ–ಚಿತ್ರ (Design). ಈ ಚಿತ್ರವು ಎಲ್ಲಾ ಗಡಿಗೆಗಳ ಮೇಲೂ ಕುಂಬಾರನಿಂದ ಗುರುತಿಸಲ್ಪಟ್ಟಿರುತ್ತದೆ. ಸೂರ್ಯ, ಚಕ್ರ, ಮರ ಮುಂತಾದವುಗಳು Trade-Mark ಎನಿಸಿಕೊಂಡು ಪಾತ್ರೆಗಳ ಮೇಲೆ ಚಿತ್ರಿತವಾಗಿರುವುದನ್ನು ಈಗಲೂ ನಾವು ನೋಡುತ್ತೇವಷ್ಟೆ. ಒಬ್ಬ ಕುಂಬಾರ ತನ್ನ ಗಡಿಗೆಗಳಿಗೆಲ್ಲಾ ಸೂರ್ಯನ ಗುರುತನ್ನಿಟ್ಟುಕೊಂಡಿರುತ್ತಾನೆನ್ನೋಣ. ಆಗ 'ಗಡಿಗೆ' ಎಂದರೆ ಸಾಕು. ಸೂರ್ಯನ ಗುರುತುಳ್ಳ ಗಡಿಗೆ ಎಂದು ಹೇಳುವುದೇಕೆ? ಸೂರ್ಯನ ಗುರುತು ಅವನ ಎಲ್ಲಾ ಗಡಿಗೆಗಳ ಮೇಲೂ ಇರುವುದರಿಂದ ಆ ವಿಶೇಷಣ ಅದೇ ಕುಂಬಾರನ ಇತರ ಗಡಿಗೆಗಳನ್ನು ಬೇರ್ಪಡಿಸಲಾರದು. ಅದು ಸಾಧಾರಣ ವಾದ ವಿಶೇಷಣ. ವ್ಯರ್ಥವೆಂದೇ ಹೇಳಬೇಕು. ಸೂರ್ಯನಿಗೆ ಬದಲಾಗಿ ಚಕ್ರವನ್ನು ಗುರುತಾಗಿಯೂ ಇಟ್ಟುಕೊಳ್ಳಬಹುದು. ಹೀಗೆ ಎಲ್ಲಿ ವಿಶೇಷಣ ವ್ಯರ್ಥವೋ, ಅಲ್ಲಿ ಈ ನ್ಯಾಯವನ್ನು ದೃಷ್ಟಾಂತವಾಗಿ ಉಪಯೋಗಿಸುತ್ತಾರೆ.

ಇದನ್ನು 'ಭಂಡಾಲೇಖ್ಯ' ನ್ಯಾಯವೆಂದು ಕೆಲವರು ಕರೆದಿದ್ದಾರೆ. ಭಂಡ–ಮೋಸಗಾರನ, ಅಲೇಖ್ಯ–ಬರಹ. ದೇವದತ್ತನ ಹೆಂಡತಿ ಗಂಡನ್ನು ಹಡೆಯುವಳೋ ಹೆಣ್ಣನ್ನೊ? ಎಂದು ಕೇಳಿದಾಗ ಒಬ್ಬ ಭಂಡ ಜೋಯಿಸನು 'ಗಂಡು ; ಅಲ್ಲ ಹೆಣ್ಣು ;' ಎಂದು ಗೋಡೆಯ ಮೇಲೆ ಬರೆದಿಟ್ಟನು. ಗಂಡು ಮಗುವಾದರೆ 'ಗಂಡು ; ಅಲ್ಲ ಹೆಣ್ಣು' ಎಂದು ಓದಿ ಹೇಳುತ್ತಾನೆ. ಹೆಣ್ಣು ಮಗುವಾದರೆ 'ಗಂಡು ಅಲ್ಲ, ಹೆಣ್ಣು' ಎಂದು ಓದಿ ಹೇಳುತ್ತಾನೆ !

ಇದು ಹೀಗೆಯೇ ಎಂಬ ವ್ಯವಸ್ಥೆ ಎಲ್ಲಿ ಇಲ್ಲವೋ, ನಮ್ಮ ಇಷ್ಟಾನು ಸಾರ ವಾಕ್ಯಾರ್ಥವನ್ನು ಮಾಡಲು ಸಾಧ್ಯವೋ ಅಂತಹ ಸಂದರ್ಭದಲ್ಲಿ ಈ ನ್ಯಾಯವನ್ನು ಉಪಯೋಗಿಸುತ್ತಾರೆ.

## 182. ಭಿಕ್ಷುಪಾದಪ್ರಸಾರಣನ್ಯಾಯ

ಒಬ್ಬ ಸಂನ್ಯಾಸಿಯು ಧನವಂತನ ಮನೆಯಲ್ಲಿ ಸೇರಿಕೊಂಡು ಯಥೇಷ್ಟವಾಗಿ ಭೋಜನವಸ್ತ್ರಾದಿಗಳನ್ನು ಪಡೆಯುತ್ತಾ ಸುಖವಾಗಿ ಜೀವಿಸಲು ಬಯಸಿದ್ದನು. ಮೊದಲನೆಯ ಸಲ ಮನೆಗೆ ಕಾಲಿಟ್ಟಾಗ ಧನಿಕನು ಮಾಡಿದ ಸ್ವಲ್ಪ ಸತ್ಕಾರವನ್ನೇ ತುಂಬಾ ಮೆಚ್ಚಿದಂತೆ ತೋರ್ಪಡಿಸಿಕೊಂಡನು. ಮೆಲ್ಲಗೆ ಪರಿಚಯವನ್ನು ಬೆಳಸಿಕೊಂಡು ಕ್ರಮೇಣ ಅಭೀಷ್ಟವನ್ನು ಸಾಧಿಸಿಕೊಂಡನು.

ಈ ಕಥೆ ಈ ನ್ಯಾಯಕ್ಕೆ ಮೂಲವಾಗಿದೆ. ದುರ್ಜನರಿಗೆ ಸ್ವಲ್ಪ ಅವಕಾಶವನ್ನು ಕೊಟ್ಟರೂ ಕ್ರಮೇಣ ತಮ್ಮ ವ್ಯಾಪ್ತಿಯನ್ನು ಬೆಳೆಸಿಕೊಂಡು, ಸರ್ವವನ್ನೂ ಅಪಹರಿಸುತ್ತಾರೆಂದು ಈ ನ್ಯಾಯದ ತಾತ್ಪರ್ಯ.

'ಉಷ್ಟ್ರಪಾದಪ್ರಸಾರಣನ್ಯಾಯ'ವೂ ಈ ಬಗೆಯದೇ. ಮಳೆ ಬರುತ್ತಿದ್ದಾಗ ಒಂದು ಒಂಟೆ ತನ್ನ ಒಂದು ಕಾಲನ್ನು ಗುಡಿಸಲೊಳಗೆ ಇಟ್ಟುಕೊಳ್ಳಲು ಮನೆಯ ಒಡೆಯನ ಅನುಮತಿ ಕೇಳಿತಂತೆ. ಅವನು ಕನಿಕರದಿಂದ ಒಪ್ಪಿದ. ಆಮೇಲೆ ಎರಡು ಕಾಲು, ಮೂರು, ನಾಲ್ಕು ಕಾಲುಗಳನ್ನೂ ಕ್ರಮವಾಗಿ ಒಂಟೆ ಒಳಗಿಟ್ಟುಕೊಂಡಿತು. ಮನೆಯ ಒಡೆಯ ಆಕ್ಷೇಪಿಸಿದ. ಆಗ ಒಂಟೆ 'ಎಲೈ, ಈ ಗುಡಿಸಲು ನನ್ನದು. ನೀನು ಹೊರಗೆ ಹೋಗು' ಎಂದು ಆತನನ್ನೇ ಹೊರಡಿಸಿತು !

## 183. ಭೂಮಿರಥಿಕನ್ಯಾಯ

ರಥಿಕನಾದ ಯೋಧನು ಭೂಮಿಯ ಮೇಲೆ ಯುದ್ಧರಥವನ್ನು ಚಿತ್ರಿಸಿಕೊಂಡು ಯುದ್ಧ ವಿದ್ಯೆಯನ್ನು ಅಭ್ಯಾಸ ಮಾಡುವ ಪದ್ಧತಿ ಹಿಂದೆ ಇತ್ತು. ಡಮ್ಮಿಗಳಿಗೆ ಭರ್ಜಿಯನ್ನು ಚುಚ್ಚಿ ಅಭ್ಯಾಸ ಮಾಡುವ ಹಾಗೆ. ಈ ಅಭ್ಯಾಸವೆಲ್ಲಾ ಯುದ್ಧಕಾಲದಲ್ಲಿ ದೃಢವಾಗಿರಲೆಂದು ನಡೆಯುತ್ತದೆ.

ಪ್ರಕೃತದಲ್ಲಿ ಸರಿಯಾದ ಫಲವಿಲ್ಲದಿದ್ದರೂ ಕಾಲಾಂತರದಲ್ಲಿ ಪ್ರಯೋಗ ಮಾಡುವಾಗ ಯಾವುದು ಫಲಕಾರಿಯಾಗುವುದೋ ಅದನ್ನು ವರ್ಣಿಸುವುದಕ್ಕೆ ಈ ನ್ಯಾಯವನ್ನು ಉಪಯೋಗಿಸುತ್ತಾರೆ,

## 184. ಭೂಲಿಂಗನ್ಯಾಯ

ಭೂಲಿಂಗ ಎಂಬುದೊಂದು ಪಕ್ಷಿ. ಅದು 'ಮಾ ಸಾಹಸಂ' ಎಂದು ಕೂಗುತ್ತಿರುವುದಂತೆ.

"ಸಾಹಸ ಕೃತ್ಯವನ್ನು ಮಾಡಬೇಡ" ಎಂದು ಅದರ ಅರ್ಥ. ಆದರೆ ತಾನು ಮಾಡುವುದು ಸಾಹಸ ಕೃತ್ಯವೆ! ಸಿಂಹವು ಮಾಂಸವನ್ನು ತಿನ್ನುತ್ತಿರುವಾಗ ಅದರ ದಾಡೆಯಲ್ಲಿರುವ ಮಾಂಸದ ತುಣುಕನ್ನು ಭೂಲಿಂಗ ಪಕ್ಷಿ ಕಿತ್ತುಕೊಂಡು ತಿನ್ನುತ್ತದೆಯಂತೆ. ಸಿಂಹದ ಬಾಯಲ್ಲಿ ತಾನು ನುಗ್ಗುತ್ತದೆ. ಆದರೆ 'ಮಾ ಸಾಹಸಂ' ಎಂದು ಕೂಗುತ್ತದೆ! 'ನುಡಿದಂತೆ ನಡೆಯಬೇಕು' ಎಂಬುದು ಈ ನ್ಯಾಯದ ತಾತ್ಪರ್ಯ.

## 185. ಭೃಂಗಕೀಟನ್ಯಾಯ

ಭೃಂಗವೆಂದರೆ ರೆಕ್ಕೆಯುಳ್ಳ ಒಂದು ಬಗೆಯ ಹುಳು. ಇದಕ್ಕೆ ಭ್ರಮರವೆಂಬ ಹೆಸರೂ ಇದೆ. 'ಕುರುಡಿ ಹುಳು' ಎಂದು ಕೆಲವೆಡೆ ಹೇಳುತ್ತಾರೆ. ಇದು ಮಣ್ಣಿನಿಂದ ಗೂಡು ಕಟ್ಟಿಕೊಳ್ಳುತ್ತದೆ. ಅದರಲ್ಲಿ ನಾನಾ ಬಗೆಯ ಕೀಟಗಳನ್ನು ತಂದು ಸಾಕುತ್ತದೆ. ಗೂಡಿನ ಸುತ್ತಲೂ 'ಗುಂಯ್' ಎಂದು ಕೂಗುತ್ತಾ ಹಾರಾಡುತ್ತದೆ. ಆ ಕೀಟವು ಈ ಭೃಂಗದ ಸಹವಾಸದಿಂದ ಅದನ್ನೇ ನೋಡಿ, ಅದರ ಶಬ್ದವನ್ನೇ ಕೇಳಿ ಕಡೆಗೆ ಭೃಂಗವೇ ಆಗಿಬಿಡುತ್ತದೆಯಂತೆ! ದುರ್ಜನನು ಸಜ್ಜನ ಸಹವಾಸದಿಂದ ಸಜ್ಜನನೇ ಆಗುತ್ತಾನೆಂದು ಈ ನ್ಯಾಯ ಬೋಧಿಸುತ್ತದೆ. ಒಳ್ಳೆಯವನು ಕೇಡಿಯಾಗುತ್ತಾನೆಂದೂ ಸೂಚಿಸಬಹುದು. ಜೀವಾತ್ಮನು ಪರಮಾತ್ಮನ ಧ್ಯಾನದಿಂದ ಪರಮಾತ್ಮನೇ ಆಗುವನೆಂಬ ಅದ್ವೈತ ದರ್ಶನವನ್ನು ಬೋಧಿಸಲು ಈ ನ್ಯಾಯವನ್ನು ಉಪಯೋಗಿಸುತ್ತಾರೆ. ಇದಕ್ಕೆ ಭ್ರಮರ ಕೀಟ ನ್ಯಾಯವೆಂದೂ ಹೆಸರು.

## 186. ಭೌತವಿಚಾರನ್ಯಾಯ

ಭೂತ ಹಿಡಿದವನು ಭೌತ. ಅವನ ವಿಚಾರ ಸರಣಿಯೇ ಭೌತ ವಿಚಾರ. ಹುಚ್ಚನ ಹುಚ್ಚು ಕಲ್ಪನೆ ಎಂದರ್ಥ. ಆತ್ಮ ತತ್ತ್ವ ವಿವೇಕ ಎಂಬ ಗ್ರಂಥದಲ್ಲಿ ಈ ನ್ಯಾಯಕ್ಕೆ ಮೂಲವಾದ ಕಥೆ ಇದೆ—

ಭೂತ ಹಿಡಿದವನೊಬ್ಬನು ಅರಮನೆಯ ಬಳಿ ಹೋದನು. ಮಹಾದ್ವಾರದ ಬಳಿ ಆನೆಯೊಂದನ್ನು ಕಟ್ಟಿದ್ದರು. ಅದಕ್ಕೆ ಎರಡು ಕೋರೆಯ ಹಲ್ಲುಗಳು ಹೊರಚಾಚಿದ್ದವು. ಅದು ಆಗಾಗ ಘೀಂಕಾರ ಮಾಡುತ್ತಿತ್ತು. ಮೋಡದ ತುಂಡಿನಂತೆಯೂ ಕತ್ತಲೆಯಂತೆಯೂ ಕಪ್ಪಾದ ಆನೆಯನ್ನು ನೋಡಿ ಆತನು ಹೀಗೆ ವಿಚಾರ ಮಾಡಿದನು—

1. ಇದು ಏನು? ಅಂಧಕಾರವು ಮೂಲಂಗಿಯನ್ನು ತಿನ್ನುತ್ತಾ ನಿಂತಿದೆಯೋ?
2. ಅಥವಾ ಮೇಘವು ಕೊಕ್ಕರೆಗಳನ್ನು ಸುರಿಸುತ್ತಾ ಗುಡುಗುತ್ತಿದೆಯೋ?

3. ಅಥವಾ "ರಾಜದ್ವಾರೇ ಶ್ಮಶಾನೇ ಚ ಯಸ್ತಿಷ್ಠತಿ ಸ ಬಾಂಧವಃ" ಎಂಬ ವಚನವಿರುವುದರಿಂದ ರಾಜದ್ವಾರದಲ್ಲಿ ಇರುವ ಇದು ನನ್ನ ನಂಟನಿರಬಹುದೊ ?
4. ಅಥವಾ ನೆಲದ ಮೇಲೆ ಕಪ್ಪಗೆ ಒಂದು ವಸ್ತು ಕಾಣುವುದಲ್ಲ, ಆದರ ನೆರಳಿರಬಹುದೊ ?

ಅನಂತರ ಈ ಊಹೆಗಳನ್ನೆಲ್ಲಾ ಯುಕ್ತಿಯಿಂದ ನಿರಾಕರಿಸಿದನು—

1. ಅಂಧಕಾರವು ಎರಡು ಮೊರಗಳನ್ನು ಬಡಿಯುವುದಿಲ್ಲವಾದ್ದರಿಂದ ಇದು ಅಂಧಕಾರವಲ್ಲ.
2. ಮೇಘಕ್ಕೆ ನಾಲ್ಕು ಕಂಭಗಳಿರುವುದಿಲ್ಲವಾದ್ದರಿಂದ ಇದು ಮೇಘವಲ್ಲ.
3. ನಂಟನು ದೊಣ್ಣೆಯನ್ನು ಬೀಸುವುದಿಲ್ಲವಾದ್ದರಿಂದ ಇದು ನನ್ನ ನಂಟನಲ್ಲ.
4. ನೆರಳು ಮನುಷ್ಯರ ತಲೆಗಳನ್ನು ಉಗುಳುವುದಿಲ್ಲವಾದ್ದರಿಂದ ಇದು ನೆರಳಲ್ಲ. ಆದ್ದರಿಂದ ಇದು ಒಂದು ವಸ್ತುವೇ ಅಲ್ಲ !

ಹುಚ್ಚನು ಯುಕ್ತಿಯನ್ನು ಹೇಳುವಾಗ ಹೀಗೆ ಭ್ರಮಿಸಿದ್ದನು—

1. ಆನೆಯ ಕಿವಿಗಳನ್ನು ಮೊರಗಳೆಂದು ತಿಳಿದಿದ್ದನು.
2. ಕಾಲುಗಳನ್ನು ಕಂಬಗಳೆಂದು ಭಾವಿಸಿದ್ದನು.
3. ಸೊಂಡಿಲನ್ನು ದೊಣ್ಣೆಯೆಂದು ಊಹಿಸಿದ್ದನು.
4. ಲದ್ದಿಯನ್ನು ಮನುಷ್ಯರ ತಲೆಬರುಡೆಗಳೆಂದು ಕಲ್ಪಿಸಿ ಕೊಂಡಿದ್ದನು.

ಅವಿವೇಕಿಗಳ ವಾದದಿಂದಲೂ, ಕಲ್ಪನೆಯಿಂದಲೂ ನಿಜವಾದ ವಸ್ತು ಸ್ವರೂಪವು ವ್ಯತ್ಯಾಸ ಹೊಂದುವುದಿಲ್ಲ ಎಂದು ಈ ನ್ಯಾಯದ ತಾತ್ಪರ್ಯ.

## 187. ಭ್ರಷ್ಟಾವಸರನ್ಯಾಯ

ಅವಸರ-ಯೋಗ್ಯವಾದ ಸಮಯದಲ್ಲಿ, ಭ್ರಷ್ಟ-ತಪ್ಪಿಹೋದದ್ದು. ಒಬ್ಬ ಗೃಹಸ್ಥನು ಭಿಕ್ಷೆ ಹಾಕುವುದಕ್ಕೆ ಮಧ್ಯಾಹ್ನ ಒಂದು ಕಾಲವನ್ನು ಗೊತ್ತುಮಾಡಿದ್ದನು. ಆ ಕಾಲದಲ್ಲಿ ಬಂದವರಿಗೆಲ್ಲಾ ತಪ್ಪದೆ ಭಿಕ್ಷೆ ದೊರಕುತ್ತಿತ್ತು. ಅನಂತರ ಅವನು ತನ್ನ ಬೇರೆ ಕೆಲಸದ ಮೇಲೆ ಹೊರಟು ಹೋಗುತ್ತಿದ್ದನು. ಕಾಲ ಮೀರಿ ಬಂದವರಿಗೆ ಭಿಕ್ಷೆ ಇಲ್ಲ. ಬೇರೆಯವರಿಗೆಲ್ಲ ಭಿಕ್ಷೆ ಹಾಕಿದ್ದರಿಂದ ಕಾಲ ಮೀರಿ ಬಂದ ನನಗೂ ಭಿಕ್ಷೆಯನ್ನು ಹಾಕಲೇ ಬೇಕು ಎಂಬ ವಾದ ಇಲ್ಲಿ ನಿಲ್ಲುವುದಿಲ್ಲ.

ಶಾಸ್ತ್ರದಲ್ಲಿ ವಾದ ವಿವಾದಗಳು ಬೆಳೆದಾಗ ಸಮಯೋಚಿತವಾಗಿ

ನಮ್ಮ ವಾದವನ್ನು ಮಂಡಿಸಬೇಕು. ಅಕಾಲದಲ್ಲಿ ಮಂಡಿಸಿದರೆ ಭ್ರಷ್ಟಾವಸರವಾಗುತ್ತದೆ.

## 188. ಮಕ್ಷಿಕಾನ್ಯಾಯ

ನೊಣ ಗಾಯವಾದ ಜಾಗವನ್ನು ಅರಸುತ್ತದೆ. ಕಾಗೆ ಕೊಳೆಯನ್ನು ಹುಡುಕುವಂತೆ ಯಾವಾತನು ದೋಷವನ್ನೇ ಹುಡುಕುತ್ತಾನೋ ಅವನ ಸ್ವಭಾವವನ್ನು ಹೇಳುವಾಗ ಈ ನ್ಯಾಯ ಉಪಯುಕ್ತ.

## 189. ಮಣಿಮಂತ್ರಾದಿನ್ಯಾಯ

ಬೆಂಕಿಗೆ ಸುಡುವ ಶಕ್ತಿ ಇದಿಯಷ್ಟೆ. ಈ ಶಕ್ತಿಯನ್ನು ತಡೆ ಹಿಡಿಯಬಲ್ಲ ಒಂದು ಬಗೆಯ ಮಣಿ ಇರುವುದಂತೆ. ಬೆಂಕಿಯನ್ನು ಮಂತ್ರ ಶಕ್ತಿಯಿಂದಲೂ ತಡೆಯಬಹುದು. ಆದ್ದರಿಂದ ಬೆಂಕಿಯಲ್ಲಿರುವ ದಾಹ ಶಕ್ತಿಗೆ ಮಣಿಮಂತ್ರಾದಿಗಳು ಪ್ರತಿಬಂಧಕಗಳೆಂದು ಗೊತ್ತಾಗುತ್ತದೆ.

ಕಾರಣದಿಂದ ಕಾರ್ಯ ಹುಟ್ಟುತ್ತದೆ, ಕಾರಣದಲ್ಲಿ ಕಾರ್ಯೋತ್ಪಾದನಾ ಶಕ್ತಿ ಇದೆ. ಇದು ಲೋಕಸಿದ್ಧ. ಸಾಧಿಸಲು ಯುಕ್ತಿಯೇನೂ ಬೇಕಾಗಿಲ್ಲ. ಕೆಲವು ವೇಳೆ ಕಾರಣವಿದ್ದರೂ ಕಾರ್ಯ ಹುಟ್ಟುವುದಿಲ್ಲ. ಮೋಡವಿದ್ದರೂ ಮಳೆ ಬರುವುದಿಲ್ಲ. ಅಗ್ನಿಯಿದ್ದರೂ ಸುಡುವುದಿಲ್ಲ. ಅಂತಹ ಸ್ಥಳದಲ್ಲಿ ಈ ನ್ಯಾಯ ಪ್ರವರ್ತಿಸುತ್ತದೆ. ಈ ನ್ಯಾಯವು ಅಲ್ಲಿ ಯಾವುದೋ ಪ್ರತಿಬಂಧಕ ಸಾಮಗ್ರಿಯಿದೆಯೆಂದು ತಿಳಿಯಬೇಕಾಗಿ ಬೋಧಿಸುತ್ತದೆ.

ಜ್ಞಾನಸಾಮಾನ್ಯಕ್ಕೂ ಕಾಮಿನೀಜಿಜ್ಞಾಸೆ ಪ್ರತಿಬಂಧಕವೆಂದು ಶಾಸ್ತ್ರಕಾರರು ಹೇಳುತ್ತಾರೆ. ಕಾಂತನು ಕಾಂತೆಯನ್ನು ಕುರಿತು ಆಲೋಚಿಸುವುದೇ ಕಾಮಿನೀ ಜಿಜ್ಞಾಸೆ. ಗುರು ಪಾಠ ಹೇಳುತ್ತಿದ್ದರೆ ಶಿಷ್ಯನಿಗೆ ಅದರ ಜ್ಞಾನವಾಗುತ್ತಲೇ ಹೋಗಬೇಕು. ಇದು ನಿಯಮ. ಯಾವಾಗ ಶಿಷ್ಯನಿಗೆ ಪಾಠ ಗೊತ್ತಾಗಲಿಲ್ಲವೋ ಆಗ ಅಲ್ಲಿ ಒಂದು ಪ್ರತಿಬಂಧಕವಿದ್ದಿರಬೇಕು. ಪ್ರಾಯಶಃ ಅದು ಶಿಷ್ಯನ ಕಾಮಿನೀ ಜಿಜ್ಞಾಸೆಯಾಗಿರಬಹುದು !

## 190. ಮಧು ಪಶ್ಯಸಿ ದುರ್ಬುದ್ಧೇ ಪ್ರಪಾತಂ ನಾನುಪಶ್ಯಸಿ

ದುರ್ಬುದ್ಧಿಯವನೇ, ನಿನಗೆ ಜೇನುತುಪ್ಪ ಕಾಣಿಸುತ್ತದೆ ; ಕೆಳಗಿರುವ ಕೊರಕಲು ಕಾಣಿಸುವುದಿಲ್ಲ ! ದೇವೀಭಾಗವತದಲ್ಲಿ ಈ ಶ್ಲೋಕವಿದೆ :—

ಮಧು ಪಶ್ಯತಿ ಮೂಢಾತ್ಮಾ ಪ್ರಪಾತಂ ನೈವ ಪಶ್ಯತಿ ।
ಕರೋತಿ ನಿಂದಿತಂ ಕರ್ಮ ನರಕಾನ್ನಬಿಭೇತಿ ಚ ॥

"ಮೂಢನು ದೊಡ್ಡ ಹಳ್ಳದಲ್ಲಿ ಕಟ್ಟಿರುವ ಜೇನುಗೂಡನ್ನು ನೋಡಿ ಆನಂದದಿಂದ ಅದನ್ನು ಕೀಳಲು ಮುಂದೆ ನುಗ್ಗುತ್ತಾನೆ. ಆದರೆ ಹಳ್ಳವು

ಬಹಳ ವಿಷಮವಾಗಿದೆಯೆಂದೂ, ಜೇನಿನ ಆಸೆಗೆ ಪ್ರಾಣವನ್ನೇ ತೆರಬೇಕಾಗುವುದೆಂದೂ ಆಲೋಚಿಸುವುದೇ ಇಲ್ಲ. ಹಾಗೆ ಮನುಷ್ಯನು ಪಾಪಕಾರ್ಯ ಮಾಡುವುದಕ್ಕೆ ನುಗ್ಗುತ್ತಾನೆ. ಅದರಿಂದ ನರಕವಾಗುವುದರ ಭಯವೇ ಇರುವುದಿಲ್ಲ."

ಈ ಮಧುದೃಷ್ಟಾಂತವು ಮಹಾಭಾರತದಲ್ಲಿ ಅನೇಕ ಕಡೆ ಬರುತ್ತದೆ. ವನಪರ್ವದಲ್ಲಿ,

> ಮಧು ಪ್ರಪಶ್ಯಂತಿ ನ ತು ಪ್ರಪಾತಂ ।
> ಯದ್ದ್ಯೂತಮಾಲಂಬ್ಯ ಹರಂತಿ ರಾಜ್ಯಂ ॥

ಎಂಬ ಶ್ಲೋಕವಿದೆ.

ಅರ್ಥ :—ಕೌರವರು ಜೇನನ್ನು ನೋಡುತ್ತಿದ್ದಾರೆಯೇ ವಿನಾ ಹಳ್ಳವನ್ನು ನೋಡುತ್ತಿಲ್ಲ. ಇವರು ಜೂಜಿನ ಮೂಲಕ ಪಾಂಡವರ ರಾಜ್ಯವನ್ನು ಅಪಹರಿಸುತ್ತಿದ್ದಾರೆ.

ಯಾವ ಕಾರ್ಯಕ್ಕೆ ತೊಡಗುವಾಗಲೂ ಅದರ ಸಾಧಕ ಬಾಧಕಗಳೆರಡನ್ನೂ ಪರಿಶೀಲಿಸಬೇಕಾಗುತ್ತದೆ. ಎಲ್ಲಿ ಸುಖಕ್ಕಿಂತ ದುಃಖ ಅಧಿಕವೋ, ಒಳ್ಳೆಯದಕ್ಕಿಂತ ಕೇಡು ಹೆಚ್ಚೋ ಅಂತಹ ಕಾರ್ಯವನ್ನು ಬಿಟ್ಟು ಬಿಡುವುದೇ ಉತ್ತಮವೆಂದು ಈ ನ್ಯಾಯ ಬೋಧಿಸುತ್ತದೆ.

## 191. ಮಧ್ಯಮಣಿನ್ಯಾಯ

ಹಾರದ ಮಧ್ಯದಲ್ಲಿ ದೊಡ್ಡದಾಗಿರುವ ಒಂದು ನೀಲಿ ಮಣಿಯನ್ನೋ ಕೆಂಪನ್ನೋ ಪೋಣಿಸಿರುತ್ತಾರೆ. ಅದು ಹಾರದ ಎರಡು ಪಾರ್ಶ್ವಗಳಿಗೂ ಸೌಂದರ್ಯವನ್ನು ಕೊಡುತ್ತದೆ ಅಥವಾ ಮೂಗುತಿಯಲ್ಲಿ (ನಾಸಿಕಾಭರಣ) ಎರಡು ಮುತ್ತುಗಳೂ ಮಧ್ಯದಲ್ಲಿ ಕೆಂಪೂ ಇರುತ್ತದೆ. ಕೆಂಪಿನ ಕಾಂತಿಯು ಇಕ್ಕೆಲದ ಮುತ್ತುಗಳ ಮೇಲೆ ಹರಡಿರುತ್ತದೆ. ವಾಕ್ಯದಲ್ಲಿರುವ ಒಂದು ಶಬ್ದವು ಪೂರ್ವೋತ್ತರ ವಿಷಯಗಳೆರಡಕ್ಕೂ ಸಂಬದ್ಧವಾದಾಗ ಈ ನ್ಯಾಯವನ್ನು ಪ್ರವರ್ತಿಸುತ್ತಾರೆ. ದೇಹಲೀದೀಪ ನ್ಯಾಯದಂತೆಯೇ ಇದರ ತಾತ್ಪರ್ಯ.

## 192. ಮರ್ಕಟಕಿಶೋರನ್ಯಾಯ

ಮರ್ಕಟ–ಕಪಿ, ಕಿಶೋರ–ಕಪಿಯ ಮರಿ. ಅದು ತನ್ನ ತಾಯಿಯನ್ನು ಗಟ್ಟಿಯಾಗಿ ಅವಚಿ ಹಿಡಿದುಕೊಂಡಿರುತ್ತದೆ. ತಾಯಿ ಕಪಿಯಾದರೋ ಮರದಿಂದ ಮರಕ್ಕೆ ನೆಗೆಯುತ್ತ ಅಲೆಯುತ್ತದೆ. ಮರಿಯೇನಾದರೂ ತನ್ನ ಹಿಡಿತವನ್ನು ಸಡಿಲಿಸಿದರೆ ಬೀಳುವುದು ನಿಶ್ಚಯ. ಮರಿಯ ಹಂಗು ತಾಯಿಗೆ ಇಲ್ಲ. ಆದರೆ ಗಟ್ಟಿಯಾಗಿ ಹಿಡಿದುಕೊಂಡಿದ್ದರೆ ತಾಯಿಯಿಂದ ರಕ್ಷಣೆ ಉಂಟು.

ಭಕ್ತಿಯ ಒಂದು ಪ್ರಕಾರ ಈ ನ್ಯಾಯದಂತಿರುತ್ತದೆ. ಭಕ್ತನು ತನ್ನ ವ್ಯವಹಾರವನ್ನು ಎಚ್ಚರಿಕೆಯಿಂದ ನೋಡಿಕೊಳ್ಳುತ್ತ ಭಗವಂತನಿಗೆ ಶರಣಾಗಿರುತ್ತಾನೆ. ಭಕ್ತಿಯ ಇನ್ನೊಂದು ಪ್ರಕಾರಕ್ಕೆ 'ಮಾರ್ಜಾಲಕಿಶೋರ ನ್ಯಾಯ'ವನ್ನು ನೋಡಿ.

## 193. ಮಲ್ಲಗ್ರಾಮನ್ಯಾಯ

ಮಲ್ಲಪ್ರಧಾನವಾದ ಗ್ರಾಮ ಮಲ್ಲಗ್ರಾಮ. ಮಲ್ಲ ಎಂದರೆ ಜಟ್ಟಿ. ಯಾವ ಊರಿನಲ್ಲಿ ಮಲ್ಲರು ಹೆಚ್ಚಾಗಿರುತ್ತಾರೋ ಅದಕ್ಕೆ ಮಲ್ಲಗ್ರಾಮ ಎಂದು ಹೆಸರು ಬರುವುದು ಸಹಜ. ಮಲ್ಲರಲ್ಲದವರೂ ಅಲ್ಲಿರುತ್ತಾರೆ. ಮಾವಿನ ತೋಪು—ಇದ್ದ ಹಾಗೆ. ತೋಪಿನಲ್ಲಿ ಬೇರೆ ಮರಗಳೂ ಇರುತ್ತವೆ. 'ಪ್ರಾಧಾನ್ಯೇನ ನಿರ್ದೇಶಃ.'

## 194. ಮಹತೋ ವಂಶಸ್ತಂಬಾಲ್ಲಟ್ವಾ ಅಪಕೃಷ್ಯತೇ ಇತಿನ್ಯಾಯಃ

ವಂಶಸ್ತಂಬ—ಬಿದಿರುಮಟ್ಟಿ. ಲಟ್ವಾ—ಒಂದು ಬಗೆಯ ಸಣ್ಣ ಹಕ್ಕಿ. ಬಿದಿರುಮಟ್ಟಿಯಲ್ಲಿ ಒಂದು ಹಕ್ಕಿ ಇದೆ. ಮುಳ್ಳುಗಳಿಂದ ತುಂಬಿದ ಗಹನವಾದ ಬಿದಿರು ಮೆಳೆಯಲ್ಲಿ ನುಗ್ಗಿ ಆ ಹಕ್ಕಿಯನ್ನು ಹಿಡಿದಂತೆ, ಬಹು ಶ್ರಮದಿಂದ ಅತ್ಯಲ್ಪ ಲಾಭವನ್ನು ಗಳಿಸುವಾಗ ಈ ನ್ಯಾಯ ಉಪಯುಕ್ತವಾಗುತ್ತದೆ. 'ಬೆಟ್ಟವನ್ನಗೆದು ಇಲಿ ಹಿಡಿದಂತೆ.' ಶ್ರಮ ಅಧಿಕ, ಫಲ ಕಡಿಮೆ.

'ಋಲೃಕ್' ಸೂತ್ರದ ವ್ಯಾಕರಣ ಮಹಾಭಾಷ್ಯದಲ್ಲಿ ಈ ನ್ಯಾಯವನ್ನು ಬಳಸಿದ್ದಾರೆ.

## 195. ಮಹಾದರ್ಪಣಮುಖದರ್ಶನನ್ಯಾಯ

ದೊಡ್ಡ ಕನ್ನಡಿಯಲ್ಲಿ ಮುಖವನ್ನು ನೋಡಿಕೊಂಡರೆ ಮುಖವು ದೊಡ್ಡದಾಗಿ ಕಾಣಿಸುತ್ತದೆ. ಅದೇ ಮುಖವು ಕಣ್ಣಿನ ಪಾಪೆಯಲ್ಲಿ ಪ್ರತಿಬಿಂಬಿಸಿದಾಗ ಚಿಕ್ಕದಾಗಿ ಕಾಣಿಸುತ್ತದೆ. ಭೂತಗನ್ನಡಿಯಲ್ಲಿ ಮುಖವು ಹತ್ತರಷ್ಟು ದೊಡ್ಡದಾಗಿ ತೋರಬಹುದು. ತಾತ್ಪರ್ಯವೇನೆಂದರೆ, ಒಂದೇ ವಸ್ತು ವ್ಯಂಜಕಭೇದದಿಂದ ಉತ್ಕೃಷ್ಟವಾಗಿಯೂ ತೋರಬಹುದು. ನಿಕೃಷ್ಟವಾಗಿಯೂ ತೋರಬಹುದು. ಹಳದಿ ಕನ್ನಡಕದಲ್ಲಿ ಜಗತ್ತೆಲ್ಲಾ ಹಳದಿಯಾಗಿ ತೋರುವುದು. ಬಳಸುವ ಸಾಧನದಲ್ಲಿ ದೋಷವಿದ್ದರೆ ವಸ್ತುವೂ ದುಷ್ಟವಾಗಿ ಕಾಣುತ್ತದೆ.

## 196. ಮಹಾರ್ಣವಯುಗಚ್ಛಿದ್ರಕೂರ್ಮ ಗ್ರೀವಾರ್ಪಣ ನ್ಯಾಯ

ಮಹಾಸಾಗರದಲ್ಲಿ ಒಂದು ರಂಧ್ರವಿರುವ ನೊಗವನ್ನು ಎಸೆದಿದ್ದಾರೆ. ಅದು ಅಲೆಗಳ ಹೊಡೆತಕ್ಕೆ ಸಿಕ್ಕಿ ನಾಲ್ಕು ದಿಕ್ಕುಗಳಲ್ಲೂ ಎಲ್ಲಿಂದೆಲ್ಲಿಗೋ ತಳ್ಳಲ್ಪಡುತ್ತಿದೆ. ಸಾಗರ ಮಧ್ಯದಲ್ಲಿ ಒಂದು ಆಮೆ ನೂರು ವರ್ಷಗಳಿಗೆ ಒಂದು ಸಲ ಮೇಲೇಳುತ್ತದೆ.

ಈ ಆಮೆಯು ಕತ್ತು ನೊಗದ ರಂಧ್ರದಲ್ಲಿ ಸಿಕ್ಕಿಕೊಳ್ಳುವ ಪ್ರಸಂಗ ಯಾವಾಗ ಒದಗಬಹುದು ?

ಹೀಗೆ ಅತ್ಯಂತ ದುರ್ಲಭವಾದ ಒಂದು ಘಟನೆಯನ್ನು ವರ್ಣಿಸು ವಾಗ ಈ ನ್ಯಾಯುವನ್ನು ಬಳಸುತ್ತಾರೆ. 'ಬೋಧಸಾರ' ಎಂಬ ವೇದಾಂತ ಗ್ರಂಥದಲ್ಲಿ ಈ ಶ್ಲೋಕ ಬರುತ್ತದೆ.

ಮಹಾರ್ಣವಯುಗಚ್ಛಿದ್ರಕೂರ್ಮ ಗ್ರೀವಾ ಪ್ರವೇಶವತ್ ।
ಅನೇಕಜನ್ಮನಾಮಂತೇ ವಿವೇಕೀ ಜಾಯತೇ ಪುಮಾನ್ ॥

ಆಮೆಯು ಕತ್ತು ನೊಗದ ರಂಧ್ರದಲ್ಲಿ ಸಿಕ್ಕಿಕೊಳ್ಳುವಂತೆ, ಎಷ್ಟೋ ಜನ್ಮಗಳನ್ನೆತ್ತಿ ಮನುಷ್ಯ ಜನ್ಮ ಬಂದು ಪುರುಷನು ಅವಿವೇಕಿಯಾಗುತ್ತಾನೆ.

## 197. ಮಂಡೂಕತೋಲನನ್ಯಾಯ

ಕಪ್ಪೆಗಳನ್ನು ತಕ್ಕಡಿಯಲ್ಲಿಟ್ಟು ತೂಗಿದಂತೆ. ಒಂದು ಕೈಗೆ ಸಿಕ್ಕಿದರೆ ಇನ್ನೊಂದು ಕೈಯಿಂದ ತಪ್ಪಿಸಿಕೊಳ್ಳುತ್ತದೆ. ಚಂಚಲಚಿತ್ತರಾದವರನ್ನು ಒಂದೆಡೆ ಸೇರಿಸುವುದು ಕಷ್ಟ.

## 198. ಮಾತ್ಸ್ಯನ್ಯಾಯ

ದೊಡ್ಡ ಮೀನು ಚಿಕ್ಕ ಮೀನನ್ನು ನುಂಗುತ್ತದೆ. ಬಲಶಾಲಿಗಳು ದುರ್ಬಲರನ್ನು ತುಳಿಯುತ್ತಾರೆಂದು ಈ ನ್ಯಾಯ ಬೋಧಿಸುತ್ತದೆ. ಇದು The fittest will survive ಎಂಬ ಆಂಗ್ಲ ಗಾದೆಯನ್ನು ಹೋಲುತ್ತದೆ.

## 199. ಮಾರಣಾಯ ಗೃಹೀತಃ ಅಂಗಚ್ಛೇದಂ ಸ್ವೀಕರೋತಿ

ವಧೆಗಾಗಿ ಹಿಡಿಯಲ್ಪಟ್ಟವನು ಅಂಗಚ್ಛೇದವನ್ನು ಒಪ್ಪಿಕೊಳ್ಳು ತ್ತಾನೆ. ಒಬ್ಬ ಅಪರಾಧಿಗೆ ನ್ಯಾಯಾಧೀಶನು ಮರಣಶಿಕ್ಷೆಯನ್ನು ವಿಧಿಸಿರು ತ್ತಾನೆ. ಕಿವಿಯನ್ನೋ, ಕೈಯನ್ನೋ ಕತ್ತರಿಸಿಕೊಳ್ಳುವುದಾದರೆ ಮರಣ ಶಿಕ್ಷೆಯನ್ನು ರದ್ದುಪಡಿಸುತ್ತೇನೆಂದು ನ್ಯಾಯಾಧೀಶನು ಹೇಳಿದರೆ ಅಪರಾಧಿಯು ಒಪ್ಪಿಕೊಳ್ಳದಿರುವನೆ ? "ಸರ್ವನಾಶೇ ಸಮುತ್ಪನ್ನೇ

ಅರ್ಧಂ ತ್ಯಜತಿ ಪಂಡಿತಃ" ಎಂಬ ನ್ಯಾಯವನ್ನು ಇದು ಹೋಲುತ್ತದೆ. ಮರಣಕ್ಕಿಂತ ಅಂಗಚ್ಛೇದವು ಕಡಿಮೆ ತರಹೆಯದು.

## 200. ಮಾರ್ಜಾಲಕಿಶೋರನ್ಯಾಯ

ಮಾರ್ಜಾಲ—ಬೆಕ್ಕು. ಕಿಶೋರ—ಬೆಕ್ಕಿನ ಮರಿ. ಅದು ತನ್ನ ಯೋಗಕ್ಷೇಮವನ್ನು ನೋಡಿಕೊಳ್ಳುವುದಿಲ್ಲ. ಎಲ್ಲವೂ ತಾಯಿಬೆಕ್ಕಿಗೆ ಸೇರಿದ್ದು. ತಾಯಿಬೆಕ್ಕು ಮರಿಯನ್ನು ಬಾಯಲ್ಲಿ ಕಚ್ಚಿ ಹಿಡಿದು ಬೇರೆ ಬೇರೆ ಕಡೆಗೆ ಒಯ್ಯುತ್ತದೆ. ತಾನು ಬಿದ್ದೇನೆಂದು ಮರಿಗೆ ಭಯವಿಲ್ಲ. ಅದು ಎಲ್ಲ ವಿಧದಲ್ಲೂ ತಾಯಿಗೆ ಶರಣಾಗಿ ನಿಶ್ಚಿಂತೆಯಿಂದ ಇರುತ್ತದೆ.

ಭಕ್ತಿಯ ಒಂದು ಪ್ರಕಾರ ಈ ನ್ಯಾಯದಂತಿರುತ್ತದೆ. ಭಕ್ತನು ಯಾವ ಚಿಂತೆಯನ್ನೂ ಹಚ್ಚಿಕೊಳ್ಳದೆ ಎಲ್ಲವನ್ನೂ ಭಗವಂತನಿಗೆ ಒಪ್ಪಿಸಿ ಶಾಂತನಾಗಿರುತ್ತಾನೆ. ಇವನ ರಕ್ಷಣೆಯ ಹೊರೆಯೆಲ್ಲವೂ ಆತನ ಸ್ವಾಮಿಗೆ ಸೇರಿದ್ದು. 'ಮರ್ಕಟಕಿಶೋರನ್ಯಾಯ'ವನ್ನು ನೋಡಿ.

## 201. ಮಾಲತೀಗುಂಧಗುಣವಿದ್ದರ್ಭೇ ನ ರಮತೇ ಹ್ಯಲಿಃ

ಜಾಜಿಹೂವಿನ ಸುಗಂಧವನ್ನು ಬಲ್ಲ ದುಂಬಿಯು ದರ್ಭೆಯನ್ನು ಪ್ರೀತಿಸುವುದಿಲ್ಲ. ಅರ್ಥ ಸ್ಪಷ್ಟವಾಗಿದೆ. ದುಃಖದ ವಿಷಯದಲ್ಲಿ ಮನುಷ್ಯನ ಪ್ರವೃತ್ತಿಯೇ ಬೇರೆ. ಕಡಿಮೆ ಪ್ರಮಾಣದ ದುಃಖ ಸರ್ವರಿಗೂ ಸಂಮತ. ಆದರೆ ಸುಖದ ವಿಷಯದಲ್ಲಿ ಇದಕ್ಕೆ ವಿರುದ್ಧ ವಾದ ಪ್ರವೃತ್ತಿ. ಕಡಿಮೆ ಪ್ರಮಾಣದ ಸುಖ ಯಾರಿಗೂ ಸಂಮತವಲ್ಲ.

## 202. ಮಾಪರಾಶಿಪ್ರವಿಷ್ಟಮಷೀನ್ಯಾಯ

"ಉದ್ದಿನ ರಾಶಿಯಲ್ಲಿ ಇದ್ದಿಲ ಚೂರು." ಒಂದೇ ಬಣ್ಣವಾಗಿರು ವುದರಿಂದ ಗುರುತಿಸುವುದು ಕಷ್ಟಸಾಧ್ಯ. ಈ ದೃಷ್ಟಾಂತವು ಮೃಚ್ಛಕಟಿಕ ಎಂಬ ನಾಟಕದಲ್ಲಿ ಬರುತ್ತದೆ. ಶಕಾರನೂ ಅವನ ಮಿತ್ರನಾದ ವಿಟನೂ ರಾತ್ರಿ ವಸಂತಸೇನೆಯ ಬೆನ್ನಟ್ಟಿ ಬರುತ್ತಾರೆ. ವಸಂತಸೇನೆ ಕತ್ತಲಿನಲ್ಲಿ ಮರೆಯಾದಾಗ ಶಕಾರನು ಹೇಳುತ್ತಾನೆ "ಭಾವ, ಈ ಗಾಢಾಂಧಕಾರದಲ್ಲಿ ವಸಂತಸೇನೆಯು ಉದ್ದಿನ ರಾಶಿಯಲ್ಲಿ ಸೇರಿದ ಇದ್ದಿಲ ಚೂರಿನಂತೆ ಮಾಯ ವಾದಳು !" ಈ ನ್ಯಾಯ ಉದಯನಾಚಾರ್ಯರ 'ಕಿರಣಾವಲಿಯಲ್ಲಿ' ಉಪ ಯೋಗಿಸಲ್ಪಟ್ಟಿದೆ.

## 203. ಮುನಿರ್ಮನುತೇ ಮೂರ್ಖೋ ಮುಚ್ಯತೇ

ಮುನಿಯು ಜಪಮಾಡುತ್ತಾನೆ, ಮೂರ್ಖನು ಮುಕ್ತನಾಗುತ್ತಾನೆ !

ಇದು ಅಸಾಧ್ಯವಾದ ಸಂಗತಿ. ಕಾರಣವಿದ್ದಲ್ಲಿ ಕಾರ್ಯ ಹುಟ್ಟಬೇಕು. ಮುನಿಯು ಜಪಿಸಿದರೆ ಮುನಿಯು ಮುಕ್ತನಾಗಬೇಕಲ್ಲದೆ ಮೂರ್ಖನಲ್ಲ. ಯಾರೋ ಮಾಡಿದುದಕ್ಕೆ ಇನ್ನು ಯಾರೋ ಹೊಣೆಯಾಗುವುದು ನ್ಯಾಯ ಸಂಮತವಲ್ಲವೆಂದು ತಾತ್ಪರ್ಯ. ಕಷ್ಟ ಒಬ್ಬರದು–ಫಲ ಬೇರೊಬ್ಬರದು. "ಪೃಷ್ಠತಾಡನೇ ದಂತಭಂಗಃ" ಎಂಬ ನ್ಯಾಯವನ್ನು ಇದು ಹೋಲುತ್ತದೆ.

## 204. ಮುಂಡಿತಶಿರಸೋ ನಕ್ಷತ್ರಾನ್ವೇಷಣಮ್

ಕ್ಷೌರ ಮಾಡಿಸಿಕೊಂಡು ಆಮೇಲೆ ನಕ್ಷತ್ರವನ್ನು ವಿಚಾರಿಸಿದನಂತೆ ! ಸಂದ ಮಾತಿಗೆ ಬೆಂದು ಫಲವೇನು ? ಎಂದು ತಾತ್ಪರ್ಯ. "ಕೃತಕ್ಷೌರಸ್ಯ ನಕ್ಷತ್ರಪರೀಕ್ಷಾ" ಎಂಬ ನ್ಯಾಯದ ರೂಪಾಂತರವಿದು.

## 205. ಮೃತಂ ಡುಂಡುಭಮಾಸಾಧ್ಯ ಕಾಕೋऽಪಿ ಗರುಡಾಯತೇ

ಸತ್ತುಹೋದ ಹಾವು ಸಿಕ್ಕಿದರೆ ಕಾಗೆಯೂ ಗರುಡನಾಗುತ್ತದೆ ! ದುರ್ಬಲರು ಕೈಗೆ ಸಿಕ್ಕಿದಾಗ ಹೇಡಿಗಳೂ ವೀರರಾಗುತ್ತಾರೆ. ಇದು ಜಗತ್ತಿನ ಸ್ವಭಾವ. ಈ ದೃಷ್ಟಾಂತವನ್ನು ಇಟ್ಟುಕೊಂಡು ದಾರ್ಶನಿಕರು ಹೇಳುವುದನ್ನು ಕೇಳಿ—

"ವಿಪದಾಬಾಧತೇऽಲ್ಪಾಪಿ ಮನಸ್ತು ಯದಿ ದುರ್ಬಲಂ."
ಮನಸ್ಸು ದುರ್ಬಲವಾದಾಗ ಅಲ್ಪವಾದ ಕಷ್ಟವೂ ಬಹುವಾಗಿ ಪೀಡಿಸುತ್ತದೆ

## 206. ಯ ಏವ ಕರೋತಿ ಸ ಏವ ಭುಂಕ್ತೇ

ಯಾವನು ಮಾಡುವನೋ ಅವನೇ ಅನುಭವಿಸುವನು. 'ಬಿತ್ತಿದವನು ಉಂಡಾನು' ಎಂಬ ಗಾದೆಯ ಅರ್ಥ ಇದೇ. ಸತ್ಕರ್ಮವಾಗಲಿ, ದುಷ್ಕರ್ಮವಾಗಲಿ ಅನುಗುಣವಾದ ಫಲವನ್ನು ಕರ್ತನು ಉಣ್ಣಬೇಕು, ಇತರರಿಗೆ ಫಲ ಸಂಬಂಧವಿಲ್ಲ ಎಂಬುದು ಈ ನ್ಯಾಯದ ತಾತ್ಪರ್ಯ. ಇದು ಸನಾತನಶಾಸ್ತ್ರಗಳ ಸರ್ವ ಸಂಮತವಾದ ಸಿದ್ಧಾಂತವೂ ಹೌದು.

## 207. ಯತ್ ಕರಭಸ್ಯ ಪೃಷ್ಠೇ ನ ಮಾತಿ ತತ್ ಕಂಠೇ ನಿಬಧ್ಯತೇ

ಒಂಟೆಯು ಬೆನ್ನಿನ ಮೇಲೆ ಹಿಡಿಸಲಾರದ ಹೊರೆಯನ್ನು ಅದರ ಕತ್ತಿಗೆ ಕಟ್ಟುತ್ತಾನೆ! ಹೊರೆಯನ್ನು ಹೊರುವುದಕ್ಕೆ ಒಂಟೆ ಪ್ರಸಿದ್ಧವಾದ ಪ್ರಾಣಿ. ಹೊರಲಾರದಷ್ಟು ಭಾರವನ್ನು ಬೆನ್ನಿನ ಮೇಲೆ ಹೇರಿ ಇನ್ನೂ

ಕತ್ತಿಗೆ ಭಾರವನ್ನು ಕಟ್ಟುವುದಾದರೆ ಆ ಪ್ರಾಣಿಯ ಗತಿಯೇನು? ಸಹಿಸಲು ಅಶಕ್ಯವಾದ ಕಷ್ಟಗಳು ಮೇಲಿಂದ ಮೇಲೆ ಒದಗಿದಾಗ ದೈವವನ್ನು ಕುರಿತು ಹೇಳುವ ಮಾತಿದು. ಬಲಶಾಲಿಯು ಹೊರಲಾರದ ಕಾರ್ಯಭಾರವನ್ನು ದುರ್ಬಲನಿಗೆ ವಹಿಸುವ ಸಂದರ್ಭದಲ್ಲಿಯೂ ಇದನ್ನು ಬಳಸಬಹುದು.

## 208. ಯದಶ್ವೇನ ಹೃತಂ ಪುರಾ ತದ್ಗರ್ದಭಃ ಪ್ರಾಪ್ತುಂ ಕೇನೋಪಾಯೇನ ಶಕ್ನುಯಾತ್

ಕುದುರೆಯು ಮೊದಲು ಅಪಹರಿಸಿಕೊಂಡು ಹೋದದ್ದನ್ನು ಕತ್ತೆಯು ಯಾವ ಉಪಾಯದಿಂದ ತರಲು ಸಮರ್ಥವಾದೀತು ? ಶೂರನಿಗೂ, ಹೇಡಿಗೂ ಮತ್ತು ವಿದ್ವಾಂಸನಿಗೂ, ದಡ್ಡನಿಗೂ, ಸ್ಪರ್ಧೆ ತರವಲ್ಲ ಎಂದೂ, ಹೇಡಿಯೂ ದಡ್ಡನೂ ಎಂದಿಗೂ ಜಯಿಸಲಾರರೆಂದೂ ಈ ನ್ಯಾಯ ಬೋಧಿಸುತ್ತದೆ.

## 209. ಯಸ್ಯ ನಾಸ್ತಿ ಪುತ್ರೋ ನ ತಸ್ಯ ಪುತ್ರಸ್ಯ ಕ್ರೀಡನಕಾನಿ ಕ್ರಿಯಂತೇ

ಯಾರಿಗೆ ಮಗನೇ ಇಲ್ಲವೋ ಅವನ ಮಗನಿಗೋಸ್ಕರ ಆಟದ ಸಾಮಾನುಗಳನ್ನು ಯಾರೂ ಮಾಡುವುದಿಲ್ಲ! 'ಮಗುವೇ ಇಲ್ಲದೆ ಕುಲಾವಿ ಹೊಲಿಸಿದರಂತೆ' ಎಂಬ ಗಾದೆಯನ್ನು ಇದು ಹೋಲುತ್ತದೆ. ಸಿದ್ಧವಸ್ತುವಿಗಾಗಿ ಶ್ರಮಿಸಬೇಕಲ್ಲದೆ ಸಾಧ್ಯಕ್ಕಾಗಿ ಅಲ್ಲ ಎಂಬುದು ಈ ನ್ಯಾಯದ ತಾತ್ಪರ್ಯ.

## 210. ಯಾಚಿತಕಮಂಡನನ್ಯಾಯ

ಬೇಡಿಕೊಂಡು ತಂದ ಒಡವೆಯ ನ್ಯಾಯ. ಶ್ರೀಮಂತರ ಮನೆಯಿಂದ ಒಡವೆಯನ್ನು ಎರವಲಾಗಿ ತಂದು ತಾನು ಸಿಂಗರಿಸಿಕೊಳ್ಳುವ ಪದ್ಧತಿ ಲೋಕದಲ್ಲುಂಟು. ಇದು ಶ್ರೀಮಂತನ ವೈಭವ ಕೀರ್ತಿಗಳನ್ನು ಮೆರೆಸುವುದೇ ಹೊರತು ಬಡವನಿಗೆ ಪ್ರಯೋಜನವೇನೂ ಇಲ್ಲವೆಂದು ಬೋಧಿಸುತ್ತದೆ. ತಾತ್ಕಾಲಿಕವಾಗಿ ಬಡವನನ್ನು ಸಿಂಗರಿಸಿದರೂ ತನ್ಮೂಲಕ ಒಡವೆಯ ಯಜಮಾನನಿಗೇ ಅದು ಭೂಷಣವಾಗುತ್ತದೆ.

ಬೇಡಿತಂದುದರಿಂದ ಅಲಂಕರಿಸಿಕೊಳ್ಳುವುದಕ್ಕಿಂತ ಸುಮ್ಮನಿರುವುದೇ ಲೇಸು.

## 211. ಯಾದೃಶೋ ಯಕ್ಷಸ್ತಾದೃಶೋ ಬಲಿಃ

ಎಂತಹ ಯಕ್ಷನೋ ಅಂತಹ ಬಲಿ. ಯಕ್ಷನಿಗೆ ಬಲಿಯನ್ನು ಕೊಡ

ಬೇಕು. ಬಲಿ ಅವನಿಗೆ ಅನುರೂಪವಾಗಿರಬೇಕು. ಒಳ್ಳೆಯವನಿಗೆ ಒಳ್ಳೆಯ ಬಲಿ; ಕೆಟ್ಟವನಿಗೆ ಕೆಟ್ಟದು.

ಪ್ರತಿಕಕ್ಷಿಯು ಯೋಗ್ಯನಾದರೆ ಯೋಗ್ಯರಾಗಿ ನಾವೂ ನಡೆದುಕೊಳ್ಳಬೇಕು; ಅವನು ವಂಚಕನಾದರೆ ನಾವೂ ವಂಚಕರಾಗುವುದು ತಪ್ಪಲ್ಲ ಎಂಬ ಅಭಿಪ್ರಾಯವನ್ನು ಈ ನ್ಯಾಯ ಬೋಧಿಸುತ್ತದೆ. "ಪಿಶಾಚಾನಾಂ ಪಿಶಾಚ ಭಾಷಯೈವ ಉತ್ತರಂ ದೇಯಂ" ಎಂಬ ನ್ಯಾಯವನ್ನು ಇದು ಹೋಲುತ್ತದೆ.

## 212. ಯಾವಚ್ಛಿರಸ್ತಾವತೀ ಶಿರೋವ್ಯಥಾ

ತಲೆಯಿರುವವರಿಗೆ ತಲೆನೋವು ಬರುತ್ತದೆ. ಮೂಗು ಇರುವವರೆಗೆ ನೆಗಡಿ ತಪ್ಪಿದ್ದಲ್ಲ! ಯಾವುದೋ ಕಾರಣದಿಂದ ಮತ್ತೆ ಮತ್ತೆ ತೊಂದರೆ ಬರುತ್ತದೆ. ಅದು ಅನಿವಾರ್ಯ ಎಂದು ವಿವರಿಸುವಾಗ ಈ ನ್ಯಾಯ ಉಪಯುಕ್ತ.

## 213. ಯಾವತ್ತೈಲಂ ತಾವದ್ ವ್ಯಾಖ್ಯಾನಂ

ಎಣ್ಣೆ ಇರುವ ವರೆಗೆ ವ್ಯಾಖ್ಯಾನ ನಡೆಯುತ್ತದೆ. ದೀಪದಲ್ಲಿ ಎಣ್ಣೆ ಖರ್ಚಾದ ಮೇಲೆ ದೀಪ ಉರಿಯದು, ಎಣ್ಣೆ ಇಲ್ಲ. ಅಲ್ಲಿಗೆ ಉಪನ್ಯಾಸವೂ ಮುಗಿಯಿತು.

ಹಣ ಇರುವವರೆಗೆ ಮೆರೆತ, ಹೊಟ್ಟೆ ತುಂಬಿರುವ ವರೆಗೆ ಕುಣಿತ. ಕಾಸಿಗೆ ತಕ್ಕ ಕಜ್ಜಾಯ. ಘಂಟೆ ಹೊಡೆಯುವ ವರೆಗೆ ಪಾಠ. ಕಲಿತು ಬಂದದ್ದನ್ನು ಹೇಳಿ ಮುಗಿಸುವ ವರೆಗೆ ಉಪನ್ಯಾಸ—ಇವೆಲ್ಲ ಸಾಮಾನ್ಯವಾಗಿ ಒಂದೇ ಅರ್ಥದ ಮಾತುಗಳು.

## 214. ರಜ್ಜುಸರ್ಪನ್ಯಾಯ

ರುಜ್ಜುವೆಂದರೆ ಹಗ್ಗ. ದೂರದಲ್ಲಿ ನೋಡಿದಾಗ ಅಥವಾ ಬೆಳಕು ಸರಿಯಾಗಿಲ್ಲದಾಗ ಹಗ್ಗವು ಹಾವಿನಂತೆ ಕಾಣುತ್ತದೆ. ಹಾವೆಂಬ ಭ್ರಮೆಯಿಂದ ಭಯ, ನಡುಕ ಹುಟ್ಟಬಹುದು. ಹತ್ತಿರ ಹೋಗಿ ತೋರಿಸಿದಾಗ ಅದು ಹಾವಲ್ಲವೆಂದೂ ಹಗ್ಗವೆಂದೂ ತಿಳಿದುಬರುತ್ತದೆ. ಆಗ ಭಯವೂ ಇಲ್ಲ, ನಡುಕವೂ ಇಲ್ಲ.

ವೇದಾಂತದಲ್ಲಿ ಈ ನ್ಯಾಯದ ಉಪಯೋಗ ವಿಶೇಷವಾಗಿ ಬರುತ್ತದೆ. ಬ್ರಹ್ಮಮಯವಾದ ಜಗತ್ತನ್ನು ಮನುಷ್ಯನು ಭ್ರಾಂತಿಯಿಂದ ಅನ್ಯಥಾ ತಿಳಿದುಕೊಂಡಿದ್ದಾನೆಂದೂ ಸದ್ಗುರುವಿನ ಉಪದೇಶದಿಂದ ಭ್ರಾಂತಿಯು ತೊಲಗಲಾಗಿ ಸರ್ವವೂ ಬ್ರಹ್ಮಮಯವೆಂಬ ಜ್ಞಾನ ಹುಟ್ಟುತ್ತದೆಯೆಂದೂ ವಿವರಿಸುವಾಗ ಈ ನ್ಯಾಯವನ್ನು ಬಳಸುತ್ತಾರೆ.

## 215. ರಥಕಾರಾಧಿಕರಣನ್ಯಾಯ

ಇದು ಮೀಮಾಂಸಾಶಾಸ್ತ್ರದಲ್ಲಿ ಪ್ರಸಿದ್ಧವಾಗಿದ್ದರೂ ಇತರ ಕಡೆಗಳಲ್ಲಿಯೂ ಹೆಚ್ಚು ಉಪಯೋಗಕ್ಕೆ ಬರುತ್ತದೆ. ವೇದದಲ್ಲಿ ಆಧಾನ ಪ್ರಕರಣದಲ್ಲಿ "ವರ್ಷಾಸು ರಥಕಾರ ಆದಧೀತ" ಎಂಬ ವಾಕ್ಯವಿದೆ. "ವರ್ಷಾಕಾಲದಲ್ಲಿ ರಥಕಾರನು ಆಧಾನ ಹೋಮವನ್ನು ಮಾಡಿಕೊಳ್ಳಬೇಕು" ಎಂದು ಅದರ ಅರ್ಥ. ಇಲ್ಲಿ ರಥಕಾರನೆಂದರೆ ಯಾರು ಎಂಬುದು ಪ್ರಶ್ನೆ. ಪೂರ್ವಪಕ್ಷ ಹೀಗೆ ಬರುತ್ತದೆ: "ಆಧಾನ ಹೋಮ ಮಾಡಬೇಕಾದರೆ ವೇದವನ್ನು ಉಚ್ಚರಿಸಬೇಕಾಗುತ್ತದೆ. ವೇದೋಚ್ಚಾರಣೆಗೆ ತ್ರೈವರ್ಣಿಕನಾದ ದ್ವಿಜನೇ ಅಧಿಕಾರಿ. ರಥವನ್ನು ಮಾಡತಕ್ಕ ದ್ವಿಜನೇ ರಥಕಾರ. 'ರಥಂ ಕರೋತೀತಿ ರಥಕಾರಃ' ಎಂದು ಯೋಗವನ್ನು ಹೇಳಬೇಕು."

ಸಿದ್ಧಾಂತ ಹೀಗೆ: ರಥಕಾರನೆಂದರೆ ಸಂಕರಜಾತಿಯಲ್ಲಿ ಹುಟ್ಟಿದ ಶೂದ್ರನೆಂದರ್ಥ ಮಾಡಬೇಕು. "ಮಾಹಿಷ್ಯೇಣ ಕರಣ್ಯಾಂ ತು ರಥಕಾರಃ ಪ್ರಜಾಯತೇ" ಎಂದು ಯಾಜ್ಞವಲ್ಕ್ಯಸ್ಮೃತಿಯಲ್ಲಿ ಹೇಳಿದೆ. "ಮಾಹಿಷ್ಯನಿಂದ ಕರಣಿಯಲ್ಲಿ ಹುಟ್ಟಿದವನಿಗೆ ರಥಕಾರನೆಂದು ಹೆಸರು." ಕ್ಷತ್ರಿಯನಿಂದ ವೈಶ್ಯಸ್ತ್ರೀಯಲ್ಲಿ ಹುಟ್ಟಿದವನು ಮಾಹಿಷ್ಯ. ವೈಶ್ಯನಿಂದ ಶೂದ್ರ ಸ್ತ್ರೀಯಲ್ಲಿ ಹುಟ್ಟಿದ ಸ್ತ್ರೀ ಕರಣಿ. ಇಲ್ಲಿ ರಥಕಾರನೆಂದರೆ ರಥವನ್ನು ಮಾಡತಕ್ಕವನು ಎಂದು ಅರ್ಥವಲ್ಲ. ರಥಕಾರ ಶಬ್ದಕ್ಕೆ ಶೂದ್ರವಿಶೇಷವೆಂಬುದು ರೂಢಾರ್ಥ. ಯೋಗಾರ್ಥಕ್ಕಿಂತ ರೂಢಾರ್ಥ ಪ್ರಬಲ. "ರೂಢಿರ್ಯೋಗಾಪಹಾರಿಣೀ" ಎಂಬ ವಚನ ಉಂಟು. ಇನ್ನು ಶೂದ್ರನಿಗೆ ವೇದಾಧಿಕಾರವಿಲ್ಲ ಎಂಬ ಶಂಕೆಗೆ ಉತ್ತರವೇನೆಂದರೆ: ಆಧಾನಕ್ಕೆ ಬೇಕಾದ ವೇದ ಮಂತ್ರವನ್ನು ಮಾತ್ರ ರಥಕಾರನು ಕಲಿಯಬಹುದು. "ವರ್ಷಾಸು ರಥಕಾರಃ ಆದಧೀತ" ಎಂಬ ವಾಕ್ಯಬಲದಿಂದ "ಶೂದ್ರನು ವೇದವನ್ನು ಕಲಿಯಕೂಡದು" ಎಂಬ ವಾಕ್ಯಕ್ಕೆ ಸಂಕೋಚವನ್ನು ಮಾಡುವುದೇ ಯುಕ್ತ.

ಇತರ ಕಡೆಯಲ್ಲಿ ಈ ನ್ಯಾಯದ ಉಪಯೋಗ ಹೇಗಾಗುವುದೆಂದು ನೋಡೋಣ.

ಪಂಕಜ ಎಂಬ ಶಬ್ದ ಉಂಟಷ್ಟೆ. ಇದರ ಅರ್ಥ ಕಮಲದ ಹೂ. ಇದು ರೂಢಾರ್ಥ. "ಕೆಸರಿನಲ್ಲಿ ಹುಟ್ಟಿದುದು" ಎಂಬುದು ಯೋಗಾರ್ಥ. "ಪಂಕಜನೇತ್ರ" ಮುಂತಾದ ಸ್ಥಳಗಳಲ್ಲಿ ರೂಢಾರ್ಥವಾದ ಕಮಲವೆಂದು ತಿಳಿಯಬೇಕು. 'ಕೆಸರಿನಲ್ಲಿ ಹುಟ್ಟಿದುದು' ಎಂದು ತಿಳಿಯಬಾರದು. ರಥಕಾರಾಧಿಕರಣನ್ಯಾಯವು ಇದಕ್ಕೆ ಆಧಾರ. 'ರೂಢಿರ್ಯೋಗಾಪಹಾರಿಣೀ'.

## 216. ರಾಜಪುತ್ರವ್ಯಾಧನ್ಯಾಯ

ರಾಜಪುತ್ರನೊಬ್ಬನು ದೈವದುರ್ವಿಪಾಕದಿಂದ ತನ್ನ ತಾಯಿತಂದೆಗಳನ್ನು ಕಳೆದುಕೊಂಡು ಬಾಲ್ಯದಲ್ಲಿ ಒಬ್ಬ ವ್ಯಾಧನ ಬಳಿ ಬೆಳೆದನು. ಅವನು ತನ್ನನ್ನು ವ್ಯಾಧನೆಂದೇ ತಿಳಿದುಕೊಂಡಿದ್ದನು. ಅವನ ವೃತ್ತಾಂತವನ್ನು ಬಲ್ಲ ಒಬ್ಬ ಕಾರುಣಿಕ ಪುರುಷನು "ಅಯ್ಯಾ, ನೀನು ಈ ದೇಶದ ರಾಜನ ಮಗ. ಒಂದಾನೊಂದು ಕಾರಣದಿಂದ ನೀನು ವ್ಯಾಧನ ಬಳಿ ಬೆಳೆದಿದ್ದೀಯೆ. ನೀನು ವ್ಯಾಧನಲ್ಲ" ಎಂದು ಅವನ ಚರಿತ್ರೆಯನ್ನು ತಿಳಿಸಿದನು. ಅನಂತರ ಆ ಹುಡುಗನು ತನ್ನ ನಿಜಸ್ಥಿತಿಯನ್ನರಿತು ವ್ಯಾಧಕರ್ಮಗಳನ್ನು ಬಿಟ್ಟು ರಾಜಧಾನಿಗೆ ಹೋಗಿ ಪಿತೃಪಿತಾಮಹಪರಂಪರೆಯಿಂದ ಬಂದ ರಾಜಪದವಿಯನ್ನನುಭವಿಸಿದನು. ಹಾಗೆ ಅಜ್ಞಾನದಿಂದ ನಾನು ಜೀವನೆಂದು ಭ್ರಮಿಸಿದವನಿಗೆ ವೇದಾಂತವು "ಅಯ್ಯಾ, ನೀನು ಬ್ರಹ್ಮವೇ ಆಗಿರುವೆ. ನಿತ್ಯದುಃಖಿಯಾದ ಜೀವನಲ್ಲ" ಎಂದು ಬೋಧಿಸುತ್ತದೆ. ಇದರಿಂದ ಮುಮುಕ್ಷು ತನ್ನ ನಿಜಸ್ವರೂಪವನ್ನರಿತು ಸುಖಿಯಾಗುತ್ತಾನೆ. ಅದ್ವೈತಸಿದ್ಧಾಂತದ ಈ ರಾಜಪುತ್ರ ನಿದರ್ಶನವು ಬೃಹದಾರಣ್ಯಕ ಶಾಂಕರ ಭಾಷ್ಯದಲ್ಲಿ ಉದಾಹೃತವಾಗಿದೆ (ಬೃಹ 2–1).

ಇಲ್ಲಿ ಭ್ರಮೆಯು ನಿವೃತ್ತವಾಗುತ್ತದೆ, ವಸ್ತುವೇನೂ ಬೇರೆಯಾಗುವುದಿಲ್ಲ. ಇಂತಹ ಸಂದರ್ಭದಲ್ಲಿ ಈ ನ್ಯಾಯದ ಬಳಕೆ.

## 217. ರಾಸಭ ರಟಿತನ್ಯಾಯ

ರಾಸಭರಟಿತ—ಕತ್ತೆ ಕಿರುಚುವುದು. ಕತ್ತೆಯು ಕಿರುಚುವಾಗ ಮೊದಲು ದೊಡ್ಡ ಶಬ್ದ. ಆಮೇಲೆ ಚಿಕ್ಕದಾಗುತ್ತ ಹೋಗುತ್ತದೆ. ಮೇಲ್ನೋಟಕ್ಕೆ ಮಹತ್ತಾಗಿ ತೋರಿ ವಿಮರ್ಶೆ ಮಾಡಿದಾಗ ಯಾವುದು ತುಚ್ಛವೋ ನಿಷ್ಫಲವೋ ಅದನ್ನು ವರ್ಣಿಸಲು ಈ ನ್ಯಾಯದ ಉಪಯೋಗವಾಗುತ್ತದೆ.

## 218. ರೇಖಾಗವಯನ್ಯಾಯ

ಗವಯವೆಂದರೆ ಗೋವಿನಂತಿರುವ ಒಂದು ಪ್ರಾಣಿ ; ಕಾಡುಹಸು. ಗವಯಾಕಾರದಲ್ಲಿ ಬರೆದ ರೇಖೆಯನ್ನು ನೋಡಿ ಅದೇ ಗವಯವೆಂದು ಮೊದಲು ತಿಳಿದಿರುತ್ತಾನೆ. ನಿಜವಾದ ಗವಯವನ್ನು ನೋಡಿದ ಮೇಲೆ ರೇಖೆಯು ಗವಯವಲ್ಲವೆಂದೂ ಸತ್ಯವಾದ ಗವಯವನ್ನು ತಿಳಿಯಲು ಅದು ಮಾರ್ಗವೆಂದೂ ಭಾವಿಸುತ್ತಾನೆ. ಚಿತ್ರತುರಗನ್ಯಾಯವನ್ನು ನೋಡಿ.

## 219. ವನಸಿಂಹನ್ಯಾಯ

ಕಿರಾತರು ಬೇಟೆಗಾಗಿ ಹುಡುಕುತ್ತಿದ್ದ ಸಿಂಹವು ಒಂದು ವನದಲ್ಲಿ ಸೇರಿಕೊಂಡಿತು. ವನವು ದಟ್ಟವಾದ್ದರಿಂದ ಸಿಂಹವನ್ನು ಬೇಟೆಯಾಡುವದು ಅಸಾಧ್ಯವಾಯಿತು. ಸಿಂಹದ ಭಯದಿಂದ ವನವನ್ನು ಪ್ರವೇಶಿಸಿ ಸೌದೆ ಮುಂತಾದವುಗಳಿಗಾಗಿ ಅದನ್ನು ಕತ್ತರಿಸುವುದು ತಪ್ಪಿಹೋಯಿತು. ಸಿಂಹ ದಿಂದ ವನಕ್ಕೂ, ವನದಿಂದ ಸಿಂಹಕ್ಕೂ ಪರಸ್ಪರ ಉಪಕಾರವಾಯಿತು.

ಪರಸ್ಪರೋಪಯೋಗವನ್ನು ಚಿತ್ರಿಸುವಾಗ ಈ ನ್ಯಾಯ ಪ್ರವೃತ್ತ ವಾಗುತ್ತದೆ.

## 220. ವಧೂ ಹಸ್ತಮಾಷಮಾಪನನ್ಯಾಯ

ಸೊಸೆಯ ಕೈಯಲ್ಲಿ ಉದ್ದನ್ನು ಅಳೆಯಿಸುವ ನ್ಯಾಯ. ಒಬ್ಬ ಬ್ರಾಹ್ಮಣನ ಮನೆಯಲ್ಲಿ ಬಂದ ಭಿಕ್ಷುಕರಿಗೆಲ್ಲಾ ಒಂದು ಮುಷ್ಟಿ ಉದ್ದಿನ ಕಾಳನ್ನು ದಾನ ಮಾಡುವ ಪದ್ಧತಿ ಇತ್ತು. ಅವನ ಹೆಂಡತಿ ಈ ಕೆಲಸವನ್ನು ಮಾಡಬೇಕಾಗಿತ್ತು. ಆ ಬ್ರಾಹ್ಮಣ ಜಿಪುಣ. ಮನೆತನದ ಪದ್ಧತಿಯಾದ್ದ ರಿಂದ ಹೇಗೋ ನಡೆಸಿಕೊಂಡು ಬಂದಿದ್ದನು. ಅವನ ಮಗನಿಗೆ ಮದುವೆ ಯಾಗಿ ಪುಟ್ಟ ಸೊಸೆ ಮನೆಗೆ ಬಂದಳು.

ಬ್ರಾಹ್ಮಣನಿಗೆ ಒಂದು ಉಪಾಯ ಹೊಳೆಯಿತು. ಸೊಸೆಯ ಮುಷ್ಟಿ ಚಿಕ್ಕದು. ಅವಳಿಂದ ಉದ್ದನ್ನು ಕೊಡಿಸುವುದಾದರೆ ಸ್ವಲ್ಪ ಉದ್ದು ಸಾಕು. ಸರಿ ; ಸೊಸೆ ಇನ್ನುಮೇಲ ಭಿಕ್ಷುಕರಿಗೆ ಉದ್ದನ್ನು ದಾನ ಮಾಡ ಬೇಕೆಂದು ಗೊತ್ತು ಮಾಡಿದನು. ಅವನ ದುರದೃಷ್ಟ ಬೇರೆಯಿತ್ತು. ಅವನ ಹೆಂಡತಿ ಮುದುಕಿ, ಕುರೂಪಿ. ಸೊಸೆ ಯುವತಿ, ಸುಂದರಿ. ಆದ್ದರಿಂದ ಭಿಕ್ಷುಕರ ಸಂಖ್ಯೆ ಬಹಳವಾಯಿತು. ಮೊದಲಿಗಿಂತ ಉದ್ದಿನ ಖರ್ಚು ಹೆಚ್ಚಾಯಿತು ! ಇದರ ಉಪಯೋಗ ಸ್ಪಷ್ಟವಾಗಿದೆ.

## 221. ವರಮದ್ಯ ಕಪೋತಃ ಶ್ವೋ ಮಯೂರಾತ್

ನಾಳೆ ದೊರೆಯಬಹುದಾದ ನವಿಲಿಗಿಂತ ಈ ದಿನ ದೊರೆತ ಪಾರಿವಾಳ ಉತ್ತಮ. 'ವರಂ ಸಾಂಶಯಿಕಾನ್ನಿಷ್ಕಾತ್...' ಎಂಬ ನ್ಯಾಯದ ತಾತ್ಪರ್ಯವೇ ಇದರದು. ಮುಂದಿನ ಈ ನ್ಯಾಯವನ್ನು ನೋಡಿ.

## 222. ವರಂ ಸಾಂಶಯಿಕಾನ್ನಿಷ್ಕಾತ್ ಅಸಾಂಶಯಿಕಃ ಕಾರ್ಷಾಪಣಃ

ಸಂಶಯಗ್ರಸ್ತವಾದ ಸುವರ್ಣನಾಣ್ಯಕ್ಕಿಂತಲೂ ಅಸಂದಿಗ್ಧವಾದ ಬೆಳ್ಳಿಯ ನಾಣ್ಯ ಉತ್ತಮ. ಸುವರ್ಣನಾಣ್ಯ ದೊರಕುವದೋ ಇಲ್ಲವೋ ನಿಶ್ಚಿತವಿಲ್ಲ. ಬೆಳ್ಳಿಯ ನಾಣ್ಯ ದೊರಕುವುದಂತೂ ನಿಶ್ಚಿತವಾಗಿದೆ. ಇಂತಹ

ಪರಿಸ್ಥಿತಿಯಲ್ಲಿ ಬೆಳ್ಳಿಯ ನಾಣ್ಯವನ್ನು ಕೈಬಿಡುವುದು ವಿವೇಕವಲ್ಲ. ನಿಶ್ಚಿತವಾದ ಲಾಭ ಪರಿಮಿತವಾಗಿದ್ದರೂ ಗ್ರಾಹ್ಯವೆಂಬುದು ಇದರ ತಾತ್ಪರ್ಯ. 'A bird in hand is worth two in the bush' ಎಂಬ ಆಂಗ್ಲ ಗಾದೆಗೆ ಇದು ಸಮವಾಗಿದೆ.

## 223. ವರಾಟಿಕಾನ್ವೇಷಣಾಯ ಪ್ರವೃತ್ತಶ್ಚಿಂತಾಮಣಿಂ ಲಬ್ಧವಾನ್

ಕವಡೆಯನ್ನು ಹುಡುಕಲು ಹೊರಟವನಿಗೆ ಚಿಂತಾಮಣಿ ಸಿಕ್ಕಿತಂತೆ ! ಬಯಸಿದ್ದು ಕವಡೆಯಾದರೂ ದೊರಕಿದ್ದು ಚಿಂತಾಮಣಿ. ಸಣ್ಣ ಪ್ರಯತ್ನದಿಂದ ದೊಡ್ಡ ಫಲ ದೊರಕಿದಾಗ, ಅಲ್ಪ ಲಾಭದ ಉದ್ದೇಶದಿಂದ ಹೊರಟವನಿಗೆ ಅನಿರೀಕ್ಷಿತವಾಗಿ ಮಹತ್ತರ ಲಾಭವಾದಾಗ ಈ ನ್ಯಾಯ ಉಪಯುಕ್ತವಾಗುತ್ತದೆ.

ಶಬ್ದವು ನಿತ್ಯ, ಪ್ರಕೃತಿ ಪ್ರತ್ಯಯ ಮುಂತಾದ ವಿಭಾಗವೆಲ್ಲವೂ ಕೃತಕ, ಆರೋಪಿತ. ಶಬ್ದವು ಅರ್ಥರೂಪದಲ್ಲಿ ವಿವೃತ್ತವಾಗುತ್ತದೆ—ಮುಂತಾದ ಪ್ರಕ್ರಿಯೆ ವ್ಯಾಕರಣ ದರ್ಶನದಲ್ಲಿ ಬರುತ್ತದೆ. ಇದನ್ನೇ ವಿಸ್ತಾರವಾಗಿ ಭರ್ತೃಹರಿ ವಾಕ್ಯಪದೀಯದಲ್ಲಿ ನಿರೂಪಿಸಿದ್ದಾನೆ. ಇದೆಲ್ಲವೂ ಅದ್ವೈತ ವೇದಾಂತದ ಪ್ರಕ್ರಿಯೆಯಂತೆಯೇ ಇದೆ. ಶಬ್ದವಿಚಾರಕ್ಕೆ ತೊಡಗಿದವನು ಈ ಪ್ರಸಂಗದಲ್ಲಿ ವೇದಾಂತದ ಪ್ರಕ್ರಿಯೆಯನ್ನು ಸಹ 'ವರಾಟಿಕಾನ್ವೇಷಣ ನ್ಯಾಯ'ದಿಂದ ತಿಳಿದುಕೊಳ್ಳಲೆಂದು ಭರ್ತೃಹರಿಯು ಹೀಗೆ ವಿವರಿಸಿದ್ದಾನೆ ಎಂಬುದಾಗಿ ಭಟ್ಟೋಜಿದೀಕ್ಷಿತರು ತಮ್ಮ 'ಶಬ್ದಕೌಸ್ತುಭ'ದಲ್ಲಿ ಬರೆದಿದ್ದಾರೆ.

## 224. ವಿಕ್ರೀತೇ ಕರಿಣಿ ಕಿಮಂಕುಶೇ ವಿವಾದಃ

ಆನೆಯನ್ನು ಮಾರಿದ ಮೇಲೆ ಅಂಕುಶಕ್ಕಾಗಿ ವಿವಾದವೇಕೆ ? ಆನೆ ಬಹಳ ಬೆಲೆ ಬಾಳತಕ್ಕ ಪ್ರಾಣಿ. ಅದನ್ನು ಮಾರಿದವನು, ಕೊಂಡುಕೊಂಡವನಿಗೆ ಅಂಕುಶವನ್ನು ಕೊಡುವುದಿಲ್ಲ—ಎಂದು ಹೇಳತಕ್ಕದ್ದು ಸರಿಯಲ್ಲ. ಆನೆ ಹೋದ ಮೇಲೆ ಅಂಕುಶಕ್ಕಾಗಿ ಜಗಳವೆ ?

ಬಹುಮೂಲ್ಯದ ವಸ್ತುವನ್ನು ಕಳೆದುಕೊಂಡಾಗ ಸಣ್ಣಪುಟ್ಟ ವಸ್ತುವಿಗಾಗಿ ಜಗಳವಾಡುವುದು ಸರಿಯಲ್ಲ. ಹಸುವನ್ನು ಮಾರಿದವನು ಹಗ್ಗವನ್ನು ಬಿಟ್ಟುಕೊಡುವುದು ಉತ್ತಮ.

## 225. ವಿಪ್ರಲಕದಲೀಫಲಲಿಪ್ಸಯಾ ಜಿಹ್ವಾಚ್ಛೇದನಮ್

ಬಾಳೇಹಣ್ಣಿನ ಆಸೆಯಿಂದ ನಾಲಗೆಯನ್ನು ಕತ್ತರಿಸಿಕೊಳ್ಳುವುದು !

ನಾಲಗೆಯನ್ನು ಕತ್ತರಿಸಿಕೊಳ್ಳುವುದಾದರೆ ಬಾಳೆಹಣ್ಣಿನ ಗೊನೆಯನ್ನೇ ಕೊಡುತ್ತೇನೆಂದು ಒಬ್ಬನು ಹೇಳಿದನು. ಅದರ ಆಸೆಗಾಗಿ ನಾಲಗೆಯನ್ನೇ ಕತ್ತರಿಸಿಕೊಳ್ಳಲು ಬುದ್ಧಿವಂತನು ಸಿದ್ಧನಾದನು! ನಾಲಗೆಯನ್ನು ಕತ್ತರಿಸಿ ಕೊಳ್ಳುವವನಿಗೆ ಬಾಳೆಹಣ್ಣಿನಿಂದೇನು? ಉದ್ದಿಷ್ಟ ವಸ್ತು ಶ್ರೇಷ್ಠ ವಾಗಿದ್ದರೂ ಮೂಲಘಾತವಾಗುವ ಪ್ರಸಂಗದಲ್ಲಿ ಆ ವಸ್ತುವನ್ನು ತ್ಯಜಿಸು ವುದುತ್ತಮವೆಂದು ಈ ನ್ಯಾಯ ಬೋಧಿಸುತ್ತದೆ.

## 226. ವಿಷಕೃಮಿನ್ಯಾಯ

ವಿಷದಲ್ಲಿ ಬೆಳೆಯುವ ಕೃಮಿಗಳ ನ್ಯಾಯ. ವಿಷವು ಪ್ರಾಣಿಯನ್ನು ಕೊಲ್ಲುವ ಶಕ್ತಿಯುಳ್ಳದ್ದು. ಅನೇಕ ಕೃಮಿಗಳು ವಿಷದಲ್ಲಿಯೇ ಹುಟ್ಟಿ ಬೆಳೆಯುವುವಲ್ಲವೆ? ಒಬ್ಬರಿಗೆ ವಿಷವಾದದ್ದು ಎಲ್ಲರಿಗೂ ವಿಷವಲ್ಲ. ಹಾಗೆಯೇ ಒಬ್ಬರಿಗೆ ಅಮೃತವಾದದ್ದು ಎಲ್ಲರಿಗೂ ಅಮೃತವಾಗದು. "One man's food is another man's poison" ಎಂಬ ಆಂಗ್ಲ ಗಾದೆ ಯನ್ನು ಇದು ಹೋಲುತ್ತದೆ. ಈ ನ್ಯಾಯವನ್ನುಪಯೋಗಿಸಿರುವ ಒಂದು ಶ್ಲೋಕದ ಅರ್ಥವಿದು :—

"ಬ್ರಾಹ್ಮಣ, ಈ ಊರಿನಲ್ಲಿ ದೊಡ್ಡವರು ಯಾರು?

ತಾಳೆ ಮರಗಳು!

ಇಲ್ಲಿ ದಾನಮಾಡುವ ಪುರುಷನಾರು?

ಅಗಸ! ಬೆಳಿಗ್ಗೆ ಬಟ್ಟೆಯನ್ನು ಕೊಟ್ಟರೆ ಸಾಯಂಕಾಲ ತಂದು ಕೊಡುತ್ತಾನೆ.

ದಕ್ಷನಾದ ಪುರುಷನು ಯಾರು?

ಪರಸ್ತ್ರೀಯನ್ನೂ, ಪರಧನವನ್ನೂ ಅಪಹರಿಸುವುದರಲ್ಲಿ ಎಲ್ಲರೂ ದಕ್ಷರು!

ಹಾಗಾದರೆ ನೀನು ಜೀವಿಸಿರುವುದು ಹೇಗೆ?

ವಿಷಕೃಮಿ ನ್ಯಾಯದಿಂದ ಜೀವಿಸುತ್ತಿದ್ದೇನೆ!"

## 227. ವಿಹಂಗಮನ್ಯಾಯ

ಹಕ್ಕಿಯು ಬಹುವೇಗದಿಂದ ಹಾರಿ ಮರದ ಮೇಲಿರುವ ಹಣ್ಣನ್ನು ಸೇರಬಲ್ಲುದು. ಕಪಿಯ ವೇಗಕ್ಕಿಂತ ಹಕ್ಕಿಯ ವೇಗ ಅಧಿಕ. ಉತ್ತಮಾಧಿ ಕಾರಿಯಾದವನು ಬಹುಬೇಗ ತನ್ನ ಗುರಿಯನ್ನು ಸಾಧಿಸಬಲ್ಲನು.

ಪ್ಲವಂಗಮಗತಿನ್ಯಾಯ ಮತ್ತು ಪಿಪೀಲಿಕಾಗತಿನ್ಯಾಯಗಳನ್ನು ನೋಡಿ.

## 228. ವೀಚೀತರಂಗನ್ಯಾಯ

ಸಮುದ್ರದಲ್ಲಿ ಒಂದು ಅಲೆಯು ಇನ್ನೊಂದು ಅಲೆಯನ್ನು ಎಬ್ಬಿಸುತ್ತದೆ. ಕೊನೆಯ ಅಲೆ ತೀರವನ್ನು ಸೇರುತ್ತದೆ. ಶಬ್ದವು ತಾನು ಹುಟ್ಟಿದ ಸ್ಥಳದಿಂದ ಕಿವಿಗೆ ಬಂದು ಸೇರುವುದು ಹೇಗೆ ? ವೀಚೀತರಂಗನ್ಯಾಯದಂತೆ ಶಬ್ದವು ಶಬ್ದಾಂತರವನ್ನು ಹುಟ್ಟಿಸುತ್ತಾ ಕಿವಿಯ ಬಳಿಗೆ ಸೇರುತ್ತದೆಯೆಂದು ಹೇಳುತ್ತಾರೆ.

## 229. ವೃಕ್ಷಪ್ರಕಂಪನನ್ಯಾಯ

ಮರವನ್ನು ಅಲ್ಲಾಡಿಸಿದರೆ ಕೊಂಬೆಗಳೂ ಎಲೆಗಳೂ ಅಲ್ಲಾಡುತ್ತವೆ. ಒಂದು ಕಾರ್ಯದ ಪರಿಣಾಮ ಒಂದೇ ವಸ್ತುವಿಗಲ್ಲ. ಅದಕ್ಕೆ ಸಂಬಂಧಿಸಿದ ಎಲ್ಲವೂ ಪರಿಣಾಮಕ್ಕೆ ಒಳಗಾಗುತ್ತದೆ ಎಂದು ಹೇಳುವಾಗ ಇದರ ಬಳಕೆ.

## 230. ವೃದ್ಧಕುಮಾರೀವಾಕ್ಯನ್ಯಾಯ

ವೃದ್ಧಳಾಗಿದ್ದರೂ ಮದುವೆಯಾಗದ ಹೆಂಗಸು ವೃದ್ಧಕುಮಾರಿ. ಮಹಾಭಾಷ್ಯದಲ್ಲಿ ಈ ನ್ಯಾಯ ವಿವರಿಸಲ್ಪಟ್ಟಿದೆ. ಒಬ್ಬ ವೃದ್ಧಕುಮಾರಿಗೆ ದೇವೇಂದ್ರನು ಪ್ರಸನ್ನನಾಗಿ ಒಂದು ವರವನ್ನು ಕೇಳಿಕೋ ಎಂದು ಹೇಳಿದನು. ಅವಳು ಹೀಗೆ ವರವನ್ನು ಕೇಳಿಕೊಂಡಳು : "ನನ್ನ ಮಕ್ಕಳು ಚಿನ್ನದ ತಟ್ಟೆಯಲ್ಲಿ ಬೇಕಾದಷ್ಟು ಹಾಲು ತುಪ್ಪವನ್ನು ಹಾಕಿಕೊಂಡು ಊಟ ಮಾಡುತ್ತಿರಬೇಕು !" ಅವಳು ಕೇಳಿದುದೇನೋ ಒಂದೇ ವರ. ಅದರಲ್ಲಿ ಎಷ್ಟೊಂದು ಇಷ್ಟಾರ್ಥಗಳು ಸೇರಿಕೊಂಡಿವೆ ! ಅವಳಿಗೆ ಮದುವೆಯಾಗಬೇಕು, ಅನೇಕ ಮಕ್ಕಳು ಹುಟ್ಟಬೇಕು, ಹಸುಗಳೂ, ಧನಧಾನ್ಯಗಳೂ ಮನೆಯಲ್ಲಿ ಸದಾಕಾಲ ತುಂಬಿರಬೇಕು ! ಇದೇ ವೃದ್ಧಕುಮಾರಿಯ ಚಾತುರ್ಯದ ವಾಕ್ಯ. ಕಾಂಸ್ಯಭೋಜನನ್ಯಾಯವೂ ಇದೇ ಅರ್ಥದಲ್ಲಿದೆ.

ಒಂದು ಮಾತು ಅನೇಕಾರ್ಥಗರ್ಭಿತವಾದಾಗ ವಿವರಣೆಗೋಸ್ಕರ ಈ ನ್ಯಾಯವನ್ನು ಉಪಯೋಗಿಸುತ್ತಾರೆ.

## 231. ವೃದ್ಧಿಮಿಷ್ಟವತೋ ಮೂಲಮಪಿ ನಷ್ಟಮ್

ಬಡ್ಡಿಗೆ ಆಸೆಮಾಡಿದವನ ಅಸಲೂ ಹೋಯಿತು. ಇದಕ್ಕೆ ದೃಷ್ಟಾಂತವಾಗಿ ಕೆಲವು ಫುಢಾರಿ ಸಾಹುಕಾರರು ಈಗಲೂ ಕಂಡುಬರುತ್ತಾರೆ. ಇನ್ನೊಂದು ಅಭೀಷ್ಟಕ್ಕಾಗಿ ಪ್ರಯತ್ನಿಸಿ ಮೂಲವನ್ನೂ ಕಳೆದುಕೊಂಡಾಗ ಈ ನ್ಯಾಯ ಪ್ರವೃತ್ತವಾಗುತ್ತದೆ. ಇದಕ್ಕೊಂದು ಉದಾಹರಣೆ :—

"ಭಕ್ಷ್ಯಾಶಯಾ ಹಿ ಮಂಜೂಷಾಂ ದಷ್ಟ್ವಾಖುಸ್ತೇನ ಭಕ್ಷಿತಃ"

"ಇಲಿ ತಿಂಡಿಯ ಆಸೆಯಿಂದ ಒಂದು ಹಾವಿನ ಬುಟ್ಟಿಯನ್ನು ಕಡಿದು ಒಳಹೊಕ್ಕಿತು. ಹಾವು ಅದನ್ನು ತಿಂದುಬಿಟ್ಟಿತು."

"ಪುತ್ರಲಿಪ್ಸಯಾ ದೇವಂ ಭಜಂತ್ಯಾ ಭರ್ತಾಪಿ ನಷ್ಟಃ"

ಎಂಬ ನ್ಯಾಯದ ತಾತ್ಪರ್ಯವೂ ಇದೇ.

## 232. ವೃಶ್ಚಿಕಭಿಯಾ ಪಲಾಯಮಾನ ಆಶೀವಿಷಮುಖೇ ನಿಪತಿತಃ

ಚೇಳಿನ ಭಯದಿಂದ ಓಡುತ್ತಿದ್ದವನು ವಿಷಸರ್ಪದ ಬಾಯಿಗೆ ಸಿಕ್ಕಿಬಿದ್ದನು ! ಒದಗಿದ ವಿಪತ್ತನ್ನು ತಪ್ಪಿಸಿಕೊಳ್ಳಲು ಪ್ರಯತ್ನಿಸಿ ಅದಕ್ಕಿಂತ ದೊಡ್ಡ ವಿಪತ್ತಿನಲ್ಲಿ ಸಿಕ್ಕಿಕೊಂಡನೆಂದು ವರ್ಣಿಸಲು ಈ ನ್ಯಾಯ ಉಪಯುಕ್ತವಾಗುತ್ತದೆ.

"ಸರ್ವವೂ ಅಸತ್ಯ, ಯಾವುದೂ ವಾಸ್ತವವಾಗಿ ಇಲ್ಲ" ಎಂದು ಶೂನ್ಯವಾದಿಗಳು ಹೇಳುತ್ತಾರೆ. ಅವರ ಉದ್ದೇಶವೇನೆಂದರೆ, ಯಾವುದನ್ನೂ ನಾವು ಪ್ರೀತಿಸಲೂಬಾರದು, ದ್ವೇಷಿಸಲೂಬಾರದು. ಏಕೆಂದರೆ, ಪ್ರೀತಿಗಾಗಲಿ, ದ್ವೇಷಕ್ಕಾಗಲಿ ಪಾತ್ರವಾದ ವಸ್ತು ಅಸತ್ಯವಾದ್ದರಿಂದ ಅದು ಹೇಯವೇ ಸರಿ. ಹೀಗೆ ಪದಾರ್ಥವೆಲ್ಲವೂ ಹೇಯವಾದರೆ ಮನುಷ್ಯನಿಗೆ ವೈರಾಗ್ಯಬುದ್ಧಿ ಉತ್ಪನ್ನವಾಗುತ್ತದೆ. ಆದ್ದರಿಂದ ಶೂನ್ಯವಾದ ಆವಶ್ಯಕ.

ಆದರೆ ಈ ಶೂನ್ಯವಾದಿಗಳ ಮೇಲೆ ಹೀಗೆ ಆಕ್ಷೇಪ ಮಾಡಬಹುದು. ಸಕಲವೂ ಅಸತ್ಯವಾಗಿ ಸರ್ವವೂ ಶೂನ್ಯವಾದರೆ ಯಾವುದು ಹೇಯವಸ್ತು ? ವಸ್ತು ಒಂದಿದ್ದರೆ ತಾನೇ ಅದು ಹೇಯವೋ ಗ್ರಾಹ್ಯವೋ ಎಂಬ ಪ್ರಶ್ನೆ ಏಳುತ್ತದೆ ? ಆದ್ದರಿಂದ ಶೂನ್ಯವಾದ ಹೇಗೆ ಸಿದ್ಧಿಸುತ್ತದೆ ?

ಈ ಸಂದರ್ಭದಲ್ಲಿ ಶೂನ್ಯವಾದಿಯು ಚೇಳಿನ ಭಯಕ್ಕೆ ಓಡುತ್ತಾ ಸರ್ಪದ ಬಾಯಿಗೆ ಸಿಕ್ಕಿಕೊಂಡಂತಾಯಿತು.

## 233. ವೃಶ್ಚಿಕೀಗರ್ಭನ್ಯಾಯ

ಚೇಳಿನ ಮರಿಗಳು ತಾಯಿಚೇಳಿನ ಗರ್ಭವನ್ನು ಭೇದಿಸಿಕೊಂಡು ಹೊರಕ್ಕೆ ಬರುತ್ತವೆ. ತಾಯಿ ಚೇಳು ಸತ್ತುಹೋಗುತ್ತದೆ. ತನ್ನನ್ನು ಸಾಕಿ ಸಲಹಿದ ಉಪಕಾರಿಯನ್ನೇ ನಾಶಮಾಡಿ ತಾನು ಅಭಿವೃದ್ಧಿ ಹೊಂದಲು ಪ್ರಯತ್ನಿಸಿರುವ ಮನುಷ್ಯನಿಗೆ ಈ ನ್ಯಾಯ ಅನ್ವಿತವಾಗುತ್ತದೆ. 'ಕರ್ಕಟಕೀ ಗರ್ಭ' ದೃಷ್ಟಾಂತವನ್ನೂ ಕೊಡುವುದುಂಟು. ಕರ್ಕಟಕೀ ಎಂದರೆ ಏಡಿ. ಏಡಿಯ ಮರಿಗಳೂ ತಾಯಿಯ ಹೊಟ್ಟೆಯನ್ನೊಡೆದು ಹುಟ್ಟುತ್ತವೆ. 'ಕದಳೀ' ದೃಷ್ಟಾಂತವನ್ನೂ ಕೊಡುತ್ತಾರೆ. ಕದಳಿ ಎಂದರೆ ಬಾಳೆಯ ಮರ. ಗೊನೆಯು ಬಿಟ್ಟ ಮೇಲೆ ಬಾಳೆಯ ಮರದ

ಆಯುಸ್ಸು ಮುಗಿದಂತೆಯೇ. ಬಾಳೆಗೊನೆಯು ಬಾಳೇ ಮರಕ್ಕೆ ಮೃತ್ಯುವಾಗುತ್ತದೆ. ಅಶ್ವತರೀಗರ್ಭನ್ಯಾಯದಂತೆಯೇ ಇದು.

## 234. ಶತಪತ್ರಪತ್ರಶತಭೇದನ್ಯಾಯ

ಶತಪತ್ರವೆಂದರೆ ಕಮಲದ ಹೂ. ಆದರಲ್ಲಿರುವ ಪತ್ರಶತಗಳನ್ನು (ನೂರು ದಳಗಳನ್ನು) ಚುಚ್ಚುವ ನ್ಯಾಯ. ದಳಗಳನ್ನು ಒಂದರ ಮೇಲೆ ಒಂದರಂತೆ ಇಟ್ಟು ಸೂಜಿಯಿಂದ ಚುಚ್ಚಿದರೆ ಒಂದೇ ಕ್ಷಣದಲ್ಲಿ ನೂರು ದಳಗಳನ್ನೂ ಸೂಜಿಯು ಭೇದಿಸುತ್ತದೆ. ಒಂದು ದಳವಾದ ಮೇಲೆ ಒಂದು ದಳದಂತೆ ಕ್ರಮವಾಗಿ ಸೂಜಿಯು ಭೇದಿಸಿಕೊಂಡು ಹೋಗಿದ್ದರೂ ನಮಗೆ ಏಕಕಾಲದಲ್ಲಿ ಭೇದಿಸಿದಂತೆ ತೋರುತ್ತದೆ. ವೇಗಾತಿಶಯವೇ ಇದಕ್ಕೆ ಕಾರಣ. ಕ್ರಮವಿದ್ದರೂ ಗೋಚರಿಸುವುದಿಲ್ಲ.

ಅಲಂಕಾರಶಾಸ್ತ್ರದಲ್ಲಿ ವ್ಯಂಗ್ಯವು ಸಂಲಕ್ಷ್ಯಕ್ರಮ, ಅಸಂಲಕ್ಷ್ಯಕ್ರಮ ಎಂದು ಎರಡು ವಿಧ. ಎರಡನೆಯದರಲ್ಲಿ ವ್ಯಂಗ್ಯ ಪ್ರತೀತಿಯಾಗುವಾಗ ಕ್ರಮವಿದ್ದರೂ ಅದು ಗೋಚರಿಸುವುದಿಲ್ಲ. ಹೀಗೆ ವೇಗಾತಿಶಯದಿಂದ ಕ್ರಮವು ತೋರದಿದ್ದ ಸಂದರ್ಭದಲ್ಲಿ ಈ ನ್ಯಾಯವನ್ನು ಪ್ರಯೋಗಿಸುತ್ತಾರೆ.

## 235. ಶತೇ ಪಂಚಾಶನ್ನ್ಯಾಯ

ನೂರರಲ್ಲಿ ಐವತ್ತು ಇದ್ದೇ ಇರುತ್ತದೆ. ವ್ಯಾಪಕ ಇದ್ದಲ್ಲಿ ವ್ಯಾಪ್ಯವಾದದ್ದು ಇರುತ್ತದೆ. ನೂರು ವ್ಯಾಪಕ ಸಂಖ್ಯೆ. ಐವತ್ತು ವ್ಯಾಪ್ಯ. ವ್ಯಾಪ್ಯವಾದದ್ದು ಇದೆಯೇ ಎಂದು ವಿಚಾರಿಸಬೇಕಾದ್ದೇ ಇಲ್ಲ. ಸಮುದ್ರದ ನೀರು ಎಂದೊಡನೆ ಅದರಲ್ಲಿ ಉಪ್ಪು ಇದೆ ಎಂದು ಸಿದ್ಧ.

ಭಗವದ್ಗೀತೆಯಲ್ಲಿ :

ಯಾವಾನರ್ಥ ಉದಾಪನೇ ಸರ್ವತಃ ಸಂಪ್ಲುತೋದಕೇ ।
ತಾವಾನ್ ಸರ್ವೇಷು ವೇದೇಷು ಬ್ರಾಹ್ಮಣಸ್ಯ
ವಿಜಾನತಃ ॥ 2–46 ॥

ಎಂದು ಹೇಳಿದೆ.

"ಒಂದು ಕೊಳದಲ್ಲಿ ಸ್ನಾನ ಪಾನ ಮುಂತಾದ ಯಾವ ಪ್ರಯೋಜನ ದೊರೆಯುತ್ತದೆಯೋ ಅದೆಲ್ಲವೂ ಸರ್ವತ್ರ ಜಲದಿಂದ ತುಂಬಿದ ದೊಡ್ಡ ಕೆರೆಯಲ್ಲಿ ದೊರೆಯುತ್ತದೆ. ಏಕೆಂದರೆ ಅದರಲ್ಲಿ ಅಂತರ್ಭಾವ ಹೊಂದುತ್ತದೆ. ಹಾಗೆಯೇ ಎಲ್ಲ ವೇದಗಳಿಂದ ದೊರಕುವ ಫಲವು ಪರಮಾರ್ಥವನ್ನರಿತ ಬ್ರಹ್ಮಜ್ಞಾನಿಗೆ ದೊರಕುತ್ತದೆ."

ಮನುಷ್ಯ, ರಾಜ, ದೇವತೆ, ಇಂದ್ರ, ಮೊದಲಾದವರ ಆನಂದಗಳೆಲ್ಲವೂ ಬ್ರಹ್ಮಾನಂದದಲ್ಲಿ ಅಡಕವಾಗಿವೆ.

ರಾಜನಿದ್ದ ಮೇಲೆ ಮಂತ್ರಿ ಇರುತ್ತಾನೆ, ರಾಮನಿದ್ದಲ್ಲಿ ಲಕ್ಷ್ಮಣ ನಿರುತ್ತಾನೆ—ಇತ್ಯಾದಿ ಲೌಕಿಕ ವಿಷಯಗಳನ್ನು ಹೇಳುವಾಗಲೂ ಈ ನ್ಯಾಯವನ್ನು ಬಳಸುವುದುಂಟು.

## 236. ಶಲಭನ್ಯಾಯ

ಶಲಭವೆಂದರೆ ದೀಪದ ಹುಳು—ಪತಂಗ. ಅದಕ್ಕೆ ದೀಪದಲ್ಲಿ ಏನೋ ಆಕರ್ಷಣೆ ಕಂಡುಬರುತ್ತದೆ. ಪ್ರಾಯಶಃ ಆಹಾರವಸ್ತುವೆಂದು ದೀಪವನ್ನು ತಿನ್ನಲು ಹೋಗಿ ತಾನು ನಾಶವಾಗುತ್ತದೆ. ದೀಪದ ತೇಜಸ್ಸನ್ನು ಸಹಿಸಲಾರದೆ ಅದರ ಮೇಲೆ ನುಗ್ಗಿ ತಾನೇ ದಗ್ಧವಾಗುತ್ತದೆ ಯೆಂದು ಕವಿಗಳು ವರ್ಣಿಸುತ್ತಾರೆ. "ಶಲಭತಾಂ ಲಭತಾಮಸುಹೃದ್ ಗಣಃ" ಎಂದು ಮಾಘನು ಹೇಳಿದ್ದಾನೆ. "ನಿನ್ನ ಶತ್ರುಗಳು ನಿನ್ನ ಮೇಲೆ ಯುದ್ಧಕ್ಕೆ ಬಂದು ದೀಪಕ್ಕೆ ಎರಗಿದ ಶಲಭದಂತೆ ಧ್ವಂಸಗೊಳ್ಳಲಿ" ಎಂದು ಉದ್ಧವನು ಶ್ರೀಕೃಷ್ಣನಿಗೆ ಹೇಳುವ ಮಾತು ಇದು.

## 237. ಶಾಕಟಿಕನ್ಯಾಯ

ಶಾಕಟಿಕನೆಂದರೆ ಗಾಡಿ ಹೊಡೆಯುವವನು. ಒಬ್ಬ ಶಾಕಟಿಕನು ಗಾಡಿಯನ್ನು ಹೊಡೆಯುತ್ತಾ, ಅರಣ್ಯಮಾರ್ಗದಲ್ಲಿ ಪ್ರಯಾಣ ಮಾಡು ತ್ತಿದ್ದನು. ಕಳ್ಳರು ಬಂದು ಮುತ್ತಿದರು. "ನೂರು ರೂಪಾಯಿಗಳನ್ನು ಕೊಡಬೇಕು, ಇಲ್ಲದಿದ್ದರೆ ನಿನ್ನ ತಲೆಯನ್ನು ಕತ್ತರಿಸಿಹಾಕುತ್ತೇವೆ" ಎಂದು ಹೆದರಿಸಿದರು. ಇವನು ರೈತ ; ನೂರರವರೆಗೆ ಎಣಿಸಲು ಬಾರದು. ನೂರು ಎಂದರೆಷ್ಟೋ ತಿಳಿಯದು. "ಐದು ಇಪ್ಪತ್ತು ರೂಪಾಯಿಗಳನ್ನು ಕೊಡುತ್ತೇನೆ, ನನ್ನನ್ನು ಬಿಟ್ಟುಬಿಡಿ" ಎಂದನು. ಕಳ್ಳರಿಗೆ ಗಾಡಿಯವನ ಮಾತು ಅರ್ಥವಾಗಲಿಲ್ಲ. ನೂರು ರೂಪಾಯಿಗಳನ್ನು ಕೊಡಲೇ ಬೇಕೆಂದರು. ಗಾಡಿಯವನು "ತಲೆ ಕಡಿದರೂ ಚಿಂತೆಯಿಲ್ಲ. ನೂರು ರೂಪಾಯಿಗಳನ್ನು ಕೊಡಲಾರೆ. ಐದು ಇಪ್ಪತ್ತು ರೂಪಾಯಿಗಳನ್ನು ಬೇಕಾದರೆ ಕೊಡುತ್ತೇನೆ !" ಎಂದನು. ಇದು ಶಾಕಟಿಕ ನ್ಯಾಯ. ಅರ್ಥ ಒಂದೇ ಆಗಿದ್ದರೂ ಬೇರೆ ಬೇರೆ ಶಬ್ದವನ್ನಿಟ್ಟು ಅದಕ್ಕಾಗಿ ವಿವಾದ ಮಾಡುವ ಸಂದರ್ಭದಲ್ಲಿ ಈ ನ್ಯಾಯ ಉಪಯುಕ್ತವಾಗುತ್ತದೆ. ಉದಾ : "ಆತ್ಮನು ಪ್ರತ್ಯಕ್ಷನಲ್ಲ, ಅಪರೋಕ್ಷ" ಎಂಬ ಒಂದು ವಾದ 'ನ್ಯಾಯ ಮಂಜರಿ' ಯಲ್ಲಿ ಬರುತ್ತದೆ. ಈ ವಾದ ನಿಲ್ಲತಕ್ಕದಲ್ಲ. ಅಪರೋಕ್ಷ ನೆಂದರೆ ಪ್ರತ್ಯಕ್ಷನೆಂದೇ ಅರ್ಥ.

## 238. ಶಾಖಾಚಂದ್ರನ್ಯಾಯ

ಕೊಂಬೆಗಳ ಸಂದಿನಲ್ಲಿ ಚಂದ್ರನಿದ್ದಾನೆಂದು ಹೇಳಿ ಮಕ್ಕಳಿಗೆ ಚಂದ್ರ

ನನ್ನು ತೋರಿಸುವುದುಂಟು. ಕೊಂಬೆಗಳ ಸಂದಿನಲ್ಲಿ ನೋಡಿದರೆ ಚಂದ್ರನು ಕಾಣಿಸುತ್ತಾನೆ. ಆದರೆ ಸಂದಿನಲ್ಲಿ ಚಂದ್ರನಿಲ್ಲ. ಕೊಂಬೆಗಳು ಹತ್ತಿರದಲ್ಲೇ ಕಾಣಿಸುತ್ತಿರುವುದರಿಂದ ಅವುಗಳ ಮೂಲಕ ಚಂದ್ರನನ್ನು ತೋರಿಸುವುದು ಸುಲಭ. ಇಲ್ಲದಿದ್ದರೆ ಮಗು ಚಂದ್ರನಿಗಾಗಿ ಆಕಾಶವನ್ನೆಲ್ಲಾ ಹುಡುಕುತ್ತದೆ. ಕೊಂಬೆಗಳಿಗೂ ಚಂದ್ರನಿಗೂ ಯಾವ ಸಂಬಂಧವೂ ಇಲ್ಲ. ಆದರೂ ಸಂಬಂಧವನ್ನು ಕಲ್ಪಿಸುತ್ತೇವೆ. ಚಂದ್ರದರ್ಶನಕ್ಕೆ ಕೊಂಬೆ ಉಪಾಯವಾಗಿದೆ. ಮುಖ್ಯವಾದ ಲಕ್ಷ್ಯವನ್ನು ಬೋಧಿಸುವಾಗ ಅದಕ್ಕೆ ಅನುಕೂಲಿಸಲೆಂದು ಇನ್ನೊಂದು ಉಪಾಯಭೂತವಾದ ವಸ್ತುವನ್ನು ತೋರಿಸಿಕೊಡಬೇಕಾಗುತ್ತದೆ. ಆಗ ಈ ನ್ಯಾಯ ಪ್ರವೃತ್ತವಾಗುತ್ತದೆ. 'ಅರುಂಧತೀ ಪ್ರದರ್ಶನ ನ್ಯಾಯ'ವನ್ನು ನೋಡಿರಿ.

### 239. ಶಾಂತೇ ಕರ್ಮಣಿ ವೇತಾಲೋದಯಃ

ಶಾಂತಿಕರ್ಮಗಳೆಲ್ಲಾ ಮುಗಿದಮೇಲೆ ಭೇತಾಳ ಬಂದಿತು ! ಬಹಳ ಪರಿಶ್ರಮದಿಂದ ಕಾರ್ಯವನ್ನು ಮುಗಿಸುತ್ತಾ ಬಂದಿರುವಾಗ ದೊಡ್ಡದೊಂದು ವಿಘ್ನ ಬಂದಿತೆಂಬುದನ್ನು ಈ ನ್ಯಾಯ ಬೋಧಿಸುತ್ತದೆ.

### 240. ಶಿರೋವೇಷ್ಟನೇನ ನಾಸಿಕಾಸ್ಪರ್ಶ ನ್ಯಾಯ

ತಲೆಯನ್ನು ಬಳಸಿಕೊಂಡು ಮೂಗನ್ನು ಮುಟ್ಟುವುದು. ಕೈಯಿಂದ ನೇರವಾಗಿ ಮೂಗನ್ನು ಹಿಡಿದುಕೊಳ್ಳದೆ ತಲೆಯ ಸುತ್ತ ಕೈ ತರುವುದೇಕೆ ! ಇದೇ "ದ್ರಾವಿಡಪ್ರಾಣಾಯಾಮ". ಪ್ರಾಣಾಯಾಮವನ್ನು ಮಾಡುವಾಗ ಮೂಗನ್ನು ಹಿಡಿದುಕೊಂಡು ಶ್ವಾಸನಿರೋಧ ಮಾಡಬೇಕೆಂದು ಶಾಸ್ತ್ರದಲ್ಲಿ ವಿಧಿಸಿದೆ. ಆದರೆ ಕೈಯಿಂದ ತಲೆಯನ್ನು ಬಳಸುವುದು ದ್ರಾವಿಡ ಪದ್ಧತಿ. ಸರಳವಾಗಿ ಮಾಡಬಹುದಾದ ಕೆಲಸವನ್ನು ವ್ಯರ್ಥವಾಗಿ ಬಳಸು ದಾರಿಯಿಂದ ಮಾಡುವುದು ಸರಿಯಲ್ಲವೆಂದು ಈ ನ್ಯಾಯದ ಅಭಿಪ್ರಾಯ. "ಕೊಂಕಣ ಸುತ್ತಿ ಮೈಲಾರಕ್ಕೆ ಹೋದ ಹಾಗೆ" ಎಂಬ ಕನ್ನಡ ಗಾದೆಯನ್ನು ಇದು ಹೋಲುತ್ತದೆ.

### 241. ಶೀರ್ಷೇ ಸರ್ಪೋ ದೇಶಾಂತರೇ ವೈದ್ಯಃ

ತಲೆಯ ಮೇಲೆ ಸರ್ಪ, ದೇಶಾಂತರದಲ್ಲಿ ವೈದ್ಯ ! ಕಷ್ಟಕ್ಕೆ ತಕ್ಕ ಪರಿಹಾರ ಕೂಡಲೇ ದೊರಕುವಂತಿರಬೇಕು. ಕಾಲಾಂತರದಲ್ಲಿ ದೊರಕಿದರೆ ಅದು ನಿರರ್ಥಕವೇ ಸರಿ. ಅದು ಊಟಕ್ಕಿಲ್ಲದ ಉಪ್ಪಿನಕಾಯಿ ಆಗುತ್ತದೆ. ಮನೆಗೆ ಬೆಂಕಿ ಹತ್ತಿಕೊಂಡಾಗ ಬಾವಿ ತೋಡಿಸಿದಂತೆ ಆಗುತ್ತದೆ. ಮುದ್ರಾರಾಕ್ಷಸವೆಂಬ ನಾಟಕದಲ್ಲಿರುವ ಒಂದು ಶ್ಲೋಕದ ಅರ್ಥ ಇದು :

"ಮೇಲೆ ಆಕಾಶದಲ್ಲಿ ಮೇಘವು ಗುಡುಗುತ್ತಿದೆ. ಕಾಂತೆಯಾದರೋ

ಬಹು ದೂರದಲ್ಲಿರುವಳು. ಇದೇನು ಬಂದಿತು ? ದಿವ್ಯ ಮೂಲಿಕೆಯು ಹಿಮವತ್ಪರ್ವತದಲ್ಲಿದೆ ; ಸರ್ಪವು ತಲೆಯ ಮೇಲೆ ಎರಗಿದೆ !"

## 242. ಶುಕನಲಿಕಾನ್ಯಾಯ

ಶುಕ—ಗಿಳಿ. ನಲಿಕಾ—ಲಾಳದ ಕಡ್ಡಿ. ಹಕ್ಕಿಯನ್ನು ಹಿಡಿಯ ತಕ್ಕವರು ಲಾಳದ ಕಡ್ಡಿಗೆ ಒಂದು ಬಗೆಯ ಅಂಟನ್ನು ಹಚ್ಚಿ ಇಡುತ್ತಾರೆ. ಗಿಳಿ ಅದರ ಮೇಲೆ ಕುಳಿತಾಗ ಕಾಲು ಅಂಟಿಕೊಂಡು ಹಾರಲಾರದೆ ಸಿಕ್ಕಿ ಬೀಳುತ್ತದೆ. ಅನಂತರ ಅದು ಲಾಳದ ಕಡ್ಡಿಯನ್ನು ಕಂಡಾಗೆಲ್ಲ ಹೆದರಿ ಕೂಗಿಕೊಳ್ಳುತ್ತದೆಯಂತೆ. ಅದರ ಮೇಲೆ ಎಂದಿಗೂ ಕುಳಿತುಕೊಳ್ಳುವುದಿಲ್ಲ. ಹಿಂದಿನ ಅನುಭವದ ಭಯ ತುಂಬಿರುತ್ತದೆ.

ಹಿಂದೆ ಯಾವುದೋ ಸಂದರ್ಭದಲ್ಲಿ ಕಾರಣಾಂತರದಿಂದ ಅನುಭವವನ್ನು ನೆನೆಸಿಕೊಂಡು, ಈಗ ನಿಷ್ಕಾರಣವಾಗಿ ಭಯ ಸಂದೇಹಾದಿಗಳನ್ನು ಪಡೆದಾಗ ಈ ನ್ಯಾಯವನ್ನು ಬಳಸುತ್ತಾರೆ.

ವಿರಾಟಪರ್ವದಲ್ಲಿ ಕೌರವರು ಗೋಗ್ರಹಣ ಮಾಡಿದಾಗ ಅರ್ಜುನನು ಕೌರವರ ಮೇಲೆ ಸಂಮೋಹನಾಸ್ತ್ರವನ್ನು ಬಿಡುತ್ತಾನೆ. ಕೌರವ ಸೈನಿಕರಿಗೆ ಅಸ್ತ್ರ ಮಹಿಮೆಯಿಂದ ನಿಷ್ಕಾರಣವಾಗಿ ಭಯ ಹುಟ್ಟಿ, ಅಲ್ಲಲ್ಲಿ ಅಡಗಿಕೊಳ್ಳುತ್ತಾರೆ. ಒಂದು ಬಗೆಯ ಸಂಮೋಹನಾಸ್ತ್ರಕ್ಕೆ ಶುಕ ಎಂದು ಹೆಸರಿದೆ. ಮೇಲ್ಕಂಡ ನ್ಯಾಯದಿಂದ ಅಸ್ತ್ರಕ್ಕೆ ಈ ಹೆಸರು ಬಂದಿರಬಹುದು.

## 243. ಶೂರ್ಪನ್ಯಾಯ

ಶೂರ್ಪವೆಂದರೆ ಧಾನ್ಯವನ್ನು ಕೇರುವ ಮೊರ. ಅದರಿಂದ ಕೇರಿದರೆ ಗಟ್ಟಿಯಾದ ಕಾಳು ಉಳಿಯುತ್ತದೆ. ಹೊಟ್ಟು ಹಾರಿಹೋಗುತ್ತದೆ. ಬೇಕಾದ್ದನ್ನು ಗ್ರಹಿಸಿ ಬೇಡವಾದ್ದನ್ನು ವಿಸರ್ಜಿಸುವಾಗ ಇದರ ಉಪಯೋಗ. ಇದು ಚಾಲನೀನ್ಯಾಯವಿದ್ದಂತೆ.

## 244. ಶೃಂಗಗ್ರಾಹಿಕಾನ್ಯಾಯ

ಹಸುಗಳ ಮಂದೆಯಲ್ಲಿ 'ನಿನ್ನ ಹಸು ಯಾವುದು ? ಯಾವ ಹಸು ಹೆಚ್ಚು ಹಾಲು ಕೊಡುತ್ತದೆ ?' ಎಂದು ಕೇಳಿದರೆ ಗೊಲ್ಲನು ಆ ಯಾ ಹಸುವಿನ ಕೊಂಬನ್ನು ಮುಟ್ಟಿ ತೋರಿಸಿ 'ಇದು ನನ್ನ ಹಸು, ಇದು ಹೆಚ್ಚು ಹಾಲನ್ನು ಕೊಡುತ್ತದೆ' ಎಂದು ಹೇಳುತ್ತಾನೆ. ದೂರದಲ್ಲಿಯೇ ನಿಂತು "ಅಗೋ, ಆ ಕೆಂಪು ಬಣ್ಣದ ಹಸು ಹೆಚ್ಚು ಹಾಲನ್ನು ಕೊಡುತ್ತದೆ" ಮುಂತಾಗಿ ಹೇಳಿದರೆ ಸ್ಪಷ್ಟವಾಗಿ ಇದೇ ಹಸುವೆಂದು ಗೊತ್ತಾಗುವುದಿಲ್ಲ. ಹೀಗೆ ಸ್ಪಷ್ಟವಾಗಿ ತಿಳಿಯಲೆಂದು ಪದಾರ್ಥವನ್ನು ಸಾಕ್ಷಾತ್ ನಿರ್ದೇಶ ಮಾಡಿದಾಗ ಈ ನ್ಯಾಯ ಉಪಯುಕ್ತವಾಗುತ್ತದೆ.

## 245. ಶ್ಯಾಲಶುನಕನ್ಯಾಯ

ಶ್ಯಾಲನೆಂದರೆ ಹೆಂಡತಿಯ ಸೋದರ-ಭಾವಮೈದುನ. ಒಬ್ಬ ಯುವಕನು ತನ್ನ ನವವಧುವನ್ನು ಕೆಣಕಿ ವಿನೋದವಾಡಬೇಕೆಂದು ಬಯಸುತ್ತಾನೆ. ತನ್ನ ನಾಯಿಗೆ ಹೆಂಡತಿಯ ತಮ್ಮನ ಹೆಸರನ್ನಿಡುತ್ತಾನೆ. ಆ ಹೆಸರನ್ನು ಕೂಗಿ ನಾಯಿಯನ್ನು ಮೂದಲಿಸುತ್ತಾನೆ. ಮುಗ್ಧೆಯಾದ ಹೆಂಡತಿಗೆ ತಮ್ಮನನ್ನೇ ಹಾಸ್ಯ ಮಾಡಿದಂತಾಗಿ ಕೋಪಬರುತ್ತದೆ. ಅದನ್ನು ಕೇಳಿಕೊಳ್ಳಲಾರಳು, ನುಂಗಿಕೊಳ್ಳಲೂ ಆರಳು. ಇವಳ ಪೇಚನ್ನು ಕಂಡು ಯುವಕನು ವಿನೋದಪಡುತ್ತಾನೆ. ಇದು ಶ್ಯಾಲಶುನಕನ್ಯಾಯ.

ಇಲ್ಲಿ ಶ್ಯಾಲನನ್ನು ಮೂದಲಿಸುವ ಉದ್ದೇಶ ಯುವಕನಿಗೆ ಇಲ್ಲ. ಅವನು ಮೂದಲಿಸುವುದು ನಾಯಿಯನ್ನು ಮಾತ್ರ. ಇದು ತಿಳಿಯದೆ ಹೆಂಡತಿ ಕೋಪಿಸಿಕೊಳ್ಳುತ್ತಾಳೆ. ಹಾಗೆ ಶೈವಪುರಾಣಗಳಲ್ಲಿ ವಿಷ್ಣುವಿನ ನಿಂದೆ ಬರುತ್ತದೆ. ವೈಷ್ಣವ ಪುರಾಣಗಳಲ್ಲಿ ಶಿವನ ನಿಂದೆ ಬರುತ್ತದೆ. ಇಲ್ಲಿ ಯಾರನ್ನು ನಿಂದಿಸುವುದೂ ಪುರಾಣಕಾರರ ಉದ್ದೇಶವಲ್ಲ. ಈಶ್ವರನು ಒಬ್ಬನೇ. ಅವನನ್ನೇ ಭಜಿಸಬೇಕು. ಇತರ ದೇವತೆಗಳನ್ನು ಅಲ್ಪ ಫಲಕ್ಕಾಗಿ ಭಜಿಸುವವರು ಮೂಢರು—ಎಂಬುದನ್ನು ಬೋಧಿಸಲು ಶಿವ ವಿಷ್ಣು ನಿಂದೆಗಳನ್ನು ಮಾಡಿದ್ದಾರೆ. ವಾಸ್ತವವಾಗಿ ಈ ನಿಂದೆ ಕ್ಷುದ್ರ ದೇವತೆಗಳಿಗೆ ಸಂಬಂಧಿಸಿದ್ದೆಂದೂ, ಶಿವವಿಷ್ಣುಗಳಿಗೆ ಸಂಬಂಧಿಸಿದ್ದಲ್ಲವೆಂದೂ ತಿಳಿಯಬೇಕು. ನಾಯಿಗೆ ಶ್ಯಾಲನ ಹೆಸರಿಟ್ಟಂತೆ ಈ ದೇವತೆಗಳಿಗೆ ಶಿವನೆಂದೂ, ವಿಷ್ಣುವೆಂದೂ ಹೆಸರಿಟ್ಟು ನಿಂದಿಸಿದ್ದಾರೆ. ಮಹಾಭಾರತಕ್ಕೆ ನೀಲಕಂಠರು ಬರೆದ ವ್ಯಾಖ್ಯಾನದ ಪೀಠಿಕೆಯನ್ನು ನೋಡಿ.

## 246. ಶ್ಯೇನಕಪೋತೀಯನ್ಯಾಯ

ಶ್ಯೇನ—ಗಿಡುಗ, ಕಪೋತ—ಪಾರಿವಾಳ. ಒಂದು ಪಾರಿವಾಳ ಸಹಜವಾಗಿ ಹಾರಾಡುತ್ತಾ ಬಂದು ಕೊಂಬೆಯ ಮೇಲೆ ಕುಳಿತುಕೊಂಡಿತು. ಅನಿರೀಕ್ಷಿತವಾಗಿ ಹಾರಿ ಬಂದ ಒಂದು ಗಿಡುಗ ಅದನ್ನು ಎತ್ತಿಕೊಂಡು ಹೋಯಿತು. ಅದು ದೈವಲೀಲೆ. ಹೀಗೆ ಅನಿರೀಕ್ಷಿತವಾಗಿ ಶತ್ರುವಿನಿಂದ ಆಪತ್ತು ಒದಗಿದಾಗ ಈ ನ್ಯಾಯ ಉಪಯುಕ್ತವಾಗುತ್ತದೆ.

## 247. ಶ್ವಪುಚ್ಛೋನ್ನಾಮನ್ಯಾಯ

ನಾಯಿಯ ಬಾಲ ಯಾವಾಗಲೂ ಡೊಂಕು. ಅದನ್ನು ಎಳೆದು ಎತ್ತಿ ಸರಿಪಡಿಸಲು ಯತ್ನಿಸುವುದು ವ್ಯರ್ಥ. ಮೂರ್ಖನಿಗೆ ಬುದ್ಧಿ ಹೇಳುವುದು ನಿರರ್ಥಕ. ಅವನು ತನ್ನ ಬುದ್ಧಿಯನ್ನು ಬದಲಾಯಿಸುವುದಿಲ್ಲ—ಎಂಬುದು ತಾತ್ಪರ್ಯ.

## 248. ಶ್ವಶ್ರೂನಿರ್ಗಚ್ಛೋಕ್ತಿನ್ಯಾಯ

ಅತ್ತೆಯು 'ಹೊರಟುಹೋಗು' ಎಂದು ಹೇಳಿದ ನ್ಯಾಯ. ಒಬ್ಬ ಭಿಕ್ಷುಕನು ಒಂದು ಮನೆಗೆ ಹೋಗಿ ಭಿಕ್ಷೆ ಬೇಡಿದನು. ಸೊಸೆಯು ಹೊರಗೆ ಬಂದು 'ಭಿಕ್ಷೆ ಇಲ್ಲ, ಮುಂದೆ ಹೋಗಪ್ಪ' ಎಂದು ಹೇಳಿದಳು. ಭಿಕ್ಷುಕನು ಸಪ್ಪೆ ಮೋರೆ ಹಾಕಿಕೊಂಡು ಹೊರಟನು. ಅಷ್ಟರಲ್ಲಿ ಅತ್ತೆ ಹೊರಗೆ ಬಂದು 'ನೀನೇಕೆ ಅವನನ್ನು ಕಳಿಸಿದೆ ?' ಎಂದು ಸೊಸೆಯನ್ನು ಗದರಿಸಿ ಭಿಕ್ಷುಕನನ್ನು ಪುನಃ ಬರಬೇಕೆಂದು ಕೂಗಿ ಹೇಳಿದಳು. ಅವನು ಆಸೆಯಿಂದ ಹಿಂದಿರುಗಿ ಬಂದು ಬಾಗಿಲ ಬಳಿ ನಿಂತನು. ಅತ್ತೆ ಹೇಳಿದಳು : 'ಇಗೋ, ನಾನು ಈ ಮನೆಗೆ ಯಜಮಾನಿ. ಈ ಹುಡುಗಿಗೆ ಇಲ್ಲಿ ಯಾವ ಅಧಿಕಾರವೂ ಇಲ್ಲ. ಅವಳು ನಿನ್ನನ್ನು ಕಳಿಸಿದ್ದು ತಪ್ಪು. ಉತ್ತರ ಹೇಳುವವಳು ನಾನು, ಇವಳಲ್ಲ. ಕೇಳು : ಭಿಕ್ಷೆ ಹಾಕುವುದಿಲ್ಲ. ಹೊರಟುಹೋಗು !"

ದೀರ್ಘಕಾಲದವರೆಗೆ ವಾದ ಮಾಡಿ ಕಡೆಯಲ್ಲಿ ವಾದಿಯ ಅಭಿಪ್ರಾಯ ವನ್ನೇ ಪ್ರತಿವಾದಿಯೂ ಹೇಳುವುದಾದರೆ ಅದುವರೆಗೆ ಮಾಡಿದ ವಾದ ವೆಲ್ಲಾ ನಿಷ್ಫಲವಾಗುತ್ತದೆ. ಅದೇ ರೀತಿಯಲ್ಲಿ ಒಂದು ಗುರಿಯನ್ನು ಸಾಧಿಸಬಹುದಾದ ಸರಳ ಪ್ರಯತ್ನವನ್ನು ದೂಷಣೆ ಮಾಡಿ ಬಹು ಶ್ರಮ ದಿಂದ ಅದೇ ಗುರಿಯನ್ನೇ ಬೇರೆ ಮಾರ್ಗದಲ್ಲಿ ಸಾಧಿಸುವುದಾದರೆ ಆ ಶ್ರಮವೂ ನಿಷ್ಫಲವೆಂದೇ ಹೇಳಬೇಕಾಗುತ್ತದೆ. ಇಂತಹ ಸಂದರ್ಭಗಳಲ್ಲಿ ದೃಷ್ಟಾಂತವಾಗಿ ಈ ನ್ಯಾಯವನ್ನು ಉಪಯೋಗಿಸಬಹುದು.

## 249. ಸಕೃತ್‌ಪ್ರವೃತ್ತಾಯಾಃ ಕಿಮವಗುಂಠನೇನ

ಒಮ್ಮೆ ಹೊಸ್ತಿಲು ದಾಟಿದವಳಿಗೆ ಬುರುಕಿಯೇಕೆ ? ಒಮ್ಮೆ ಅಡ್ಡ ದಾರಿಗೆ ಇಳಿದರೆ ತೀರಿತು ಅವಳು ಗರತಿಯೆನ್ನಿಸಿಕೊಳ್ಳುವುದಿಲ್ಲ. ಒಂದು ಸಲವಾದರೂ ಅದು ಅಪರಾಧವೇ. ಅದನ್ನು ಸಮಾಜವು ಕ್ಷಮಿಸುವುದಿಲ್ಲ. ಶಾಸ್ತ್ರದಲ್ಲಿ ಕೆಲವು ಸಾಂಪ್ರದಾಯಿಕ ನಿಯಮಗಳಿರುತ್ತವೆ. ಯಾವುದಾ ದರೂ ಒಂದು ಸ್ಥಳದಲ್ಲಿ ಆ ನಿಯಮ ವ್ಯಭಿಚರಿತವಾದರೂ ಸಾಕು, ಅದನ್ನು ಅನ್ಯತ್ರ ಆದರಿಸಲೇಬೇಕಾಗಿಲ್ಲ. ಅದಕ್ಕೆ ವ್ಯತಿರಿಕ್ತವಾಗಿ ವಿವಾದ ವನ್ನು ಬೆಳೆಸಬಹುದು ; ಸಿದ್ಧಾಂತವನ್ನು ಕಟ್ಟಬಹುದು. ಅಂತಹ ಸಮಯ ದಲ್ಲಿ ವ್ಯಭಿಚರಿತ ನಿಯಮವನ್ನು ಅಲ್ಲಗಳೆಯುವುದಕ್ಕೆ ಈ ನ್ಯಾಯ ಉಪಯುಕ್ತವಾಗುತ್ತದೆ.

## 250. ಸದೃಶಾತ್ ಸದೃಶೋದ್ಭವಃ

ಸದೃಶವಸ್ತುವಿನಿಂದ ಸದೃಶವಸ್ತುವೇ ಹುಟ್ಟುತ್ತದೆ. ಒಳ್ಳೆಯದ ರಿಂದ ಒಳ್ಳೆಯದು ; ಕೆಟ್ಟದರಿಂದ ಕೆಟ್ಟದು. ಮನುಷ್ಯನಿಂದ ಮನುಷ್ಯನೂ,

ಮೃಗದಿಂದ ಮೃಗವೂ, ಪಕ್ಷಿಯಿಂದ ಪಕ್ಷಿಯೂ, ಹುಳುವಿನಿಂದ ಹುಳುವೂ, ಮರದಿಂದ ಮರವೂ ಹುಟ್ಟುತ್ತವೆ. ಜಿಂಕೆಯಿಂದ ಜಿಂಕೆ ಹುಟ್ಟುವುದೇ ಹೊರತು ತೋಳ ಹುಟ್ಟದು. ಕಾಗೆಯಿಂದ ಗೂಗೆ ಹುಟ್ಟದು.

ಇದೊಂದು ಸಾಮಾನ್ಯ ನಿಯಮ. ಜಯಂತಭಟ್ಟನು ಈ ನಿಯಮವನ್ನು ಸಾರ್ವತ್ರಿಕವಾಗಿ ಅಂಗೀಕರಿಸುವುದಿಲ್ಲ.

ನ ಚೈಷ ನಿಯಮೋ ಲೋಕೇ ಸದೃಶಾತ್ ಸದೃಶೋದ್ಭವಃ।
ವೃಶ್ಚಿಕಾದೇಃ ಸಮುತ್ಪಾದೋ ಗೋಮಯಾದಪಿ ದೃಶ್ಯತೇ ॥

ಎಂದು ತನ್ನ 'ನ್ಯಾಯಮಂಜರಿ'ಯಲ್ಲಿ ಹೇಳುತ್ತಾನೆ. ಗೋಮಯ (ಸಗಣಿ)ದಿಂದ ಚೇಳು ಹುಟ್ಟುತ್ತದೆ ಎಂದು ಅವನು ಹೇಳಿದ್ದಾನೆ. ಗೋಮಯದಿಂದ ಚೇಳು ಹುಟ್ಟುತ್ತದೆ ಎಂಬ ಹೇಳಿಕೆ ಜಯಂತಭಟ್ಟನೊಬ್ಬನಿಂದಲೇ ಬಂದುದಲ್ಲ. ನಮ್ಮ ಪ್ರಾಚೀನ ಗ್ರಂಥಗಳಲ್ಲಿ ಈ ವಿಷಯ ಬಹಳ ಕಡೆ ಬಂದಿದೆ. ಪತಂಜಲಿ ಋಷಿಗಳು ವ್ಯಾಕರಣ ಮಹಾಭಾಷ್ಯದಲ್ಲಿಯೂ, ಶ್ರೀ ಶಂಕರಾಚಾರ್ಯರೂ ಶ್ರೀ ರಾಮಾನುಜಾಚಾರ್ಯರೂ ಬ್ರಹ್ಮಸೂತ್ರ ಭಾಷ್ಯದಲ್ಲಿಯೂ, ಉದಯನಾಚಾರ್ಯರು ಕುಸುಮಾಂಜಲಿ ವೃತ್ತಿಯಲ್ಲಿಯೂ ಇದನ್ನು ಹೇಳಿದ್ದಾರೆ. ಕುಸುಮಾಂಜಲಿ ವೃತ್ತಿಯ ವ್ಯಾಖ್ಯಾನಕಾರನಾದ ಹರಿದಾಸನು ಚೇಳು ಸಗಣಿಯಿಂದಲೂ, ಚೇಳಿನಿಂದಲೂ ಹುಟ್ಟುತ್ತದೆಯೆಂದು ಹೇಳುತ್ತಾನೆ. ಚೇಳಿನ ಗರ್ಭದಿಂದ ಚೇಳು ಹುಟ್ಟುವುದನ್ನು ಯಾರೂ ಅಲ್ಲಗಳೆಯುವುದಿಲ್ಲ. ಆದರೆ ಗೋಮಯದಿಂದ ಚೇಳು ಹುಟ್ಟುತ್ತದೆಯೇ ಎಂಬುದು ವಿವಾದಕ್ಕೆ ಎಡೆ ಮಾಡಿದೆ. ಗೋಮಯದ ಬೆರಣಿಗಳ ಮಧ್ಯದಲ್ಲಿ ಆಗತಾನೇ ಹುಟ್ಟಿರಬಹುದಾದ ಅತ್ಯಂತ ಚಿಕ್ಕ ಚೇಳಿನ ಮರಿಗಳನ್ನು ಈ ಲೇಖಕನೇ ಪ್ರತ್ಯಕ್ಷವಾಗಿ ನೋಡಿದ್ದಾನೆ. ನೋಡಿದಾಗ ಮರಿಗಳಿಗೆ ಚಲಿಸುವ ಸಾಮರ್ಥ್ಯ ಕೂಡ ಇರಲಿಲ್ಲ. ತಾಯಿಚೇಳಿನ ಸುಳಿವೂ ಅಲ್ಲಿರಲಿಲ್ಲ. ಅಂಟಿಕೊಂಡಿದ್ದ ಬೆರಣಿಗಳ ಸಂದಿನಲ್ಲಿ ಚೇಳಿನ ಮರಿಗಳಿದ್ದವು.

ಈ ಕಾಲದ ವಿಜ್ಞಾನಿಗಳು ಗೋಮಯದಿಂದ ಚೇಳು ಹುಟ್ಟುತ್ತದೆ ಎಂಬುವುದನ್ನು ನಂಬುವುದಿಲ್ಲ. ಪ್ರಾಣಿಯಿಂದಲೇ ಪ್ರಾಣಿ ಹುಟ್ಟುತ್ತದೆ ಎಂಬುದು ಅವರ ಸಿದ್ಧಾಂತವೆಂದು ತೋರುತ್ತದೆ. ಹೊಟ್ಟೆಯಲ್ಲಿ ಜಂತು ಆಗುವುದು ಹೇಗೆ ? ಮಾವಿನ ಹಣ್ಣಿನ ಬೀಜದೊಳಗೆ ಹುಳು ಇರುವುದು ಹೇಗೆ ? ಅಕ್ಕಿಯಲ್ಲಿ ಹುಳುವಾಗುವುದು ಹೇಗೆ ? ಮುಂತಾದ ಪ್ರಶ್ನೆಗಳಿಗೆ ಅವರು ತಕ್ಕ ಉತ್ತರಗಳನ್ನು ಸಿದ್ಧಮಾಡಿಕೊಂಡಿದ್ದಾರೆ. ಜಡವಾದ ಅನ್ನದಿಂದ ಜೀವಾಣು ಹುಟ್ಟುವುದು ಹೇಗೆ? ಎಂಬ ಪ್ರಶ್ನೆಗೆ ಇನ್ನೂ ಸರಿಯಾದ ಉತ್ತರ ಇಲ್ಲ. ಚರ್ಚೆ ದೀರ್ಘವಾದೀತೆಂದು ವಿರಮಿಸುತ್ತೇವೆ.

## 251. ಸರ್ವಂ ಬಲವತಃ ಪಥ್ಯಮ್

ಬಲಶಾಲಿಗೆ ಎಲ್ಲವೂ ಹಿತಕರ. ಜೀರ್ಣಶಕ್ತಿಯ ಬಲವಿದ್ದರೆ ಯಾವ ಆಹಾರವನ್ನಾದರೂ ತಿನ್ನಬಹುದು. ಹಣದ ಬಲವಿದ್ದರೆ ಎಂತಹ ಸಾಹಸಕ್ಕಾದರೂ ಕೈಹಾಕಬಹುದು. ಅಧಿಕಾರದ ಬಲವಿದ್ದರೆ ಎಂತಹ ಅಕಾರ್ಯವನ್ನಾದರೂ ಮಾಡಬಹುದು ! Might is Right ಎಂಬ ಆಂಗ್ಲ ಗಾದೆಯನ್ನು ಕೆಲವು ಅಂಶಗಳಲ್ಲಿ ಇದು ಹೋಲುತ್ತದೆ. ಶಿವನು ಹಾಲಾಹಲ ವಿಷವನ್ನೇ ಕುಡಿದನು. ಅವನಿಗೇನೂ ಆಗಲಿಲ್ಲ. ಬಲಶಾಲಿಗಳ ಕೆಲಸಕ್ಕೆ ಬಲಹೀನರು ಕೈಹಾಕಬಾರದೆಂದು ಈ ನ್ಯಾಯದ ತಾತ್ಪರ್ಯ.

## 252. ಸರ್ವನಾಶೇ ಸಮುತ್ಪನ್ನೇ ಅರ್ಧಂ ತ್ಯಜತಿ ಪಂಡಿತಃ

ಸರ್ವವೂ ನಾಶವಾಗುವ ಸಂದರ್ಭದಲ್ಲಿ ಬುದ್ಧಿವಂತನು ಅರ್ಧವನ್ನು ಬಿಟ್ಟುಕೊಡುತ್ತಾನೆ. ಅರ್ಧವನ್ನು ಬಿಟ್ಟುಕೊಡುವುದರಿಂದ ಉಳಿದ ಅರ್ಧವು ತನಗೆ ಉಳಿಯುವ ಸಂದರ್ಭದಲ್ಲಿ ಮಾತ್ರ ಹಾಗೆ ಮಾಡುತ್ತಾನೆ. ಶಸ್ತ್ರಚಿಕಿತ್ಸಕನು ಕಾಲನ್ನೋ ಕೈಯನ್ನೋ ಕತ್ತರಿಸಿ ರೋಗವು ಉಳಿದೆಡೆಗೆ ಹರಡದಂತೆ ಮಾಡಿ ಪ್ರಾಣವನ್ನುಳಿಸುತ್ತಾನೆ. ಭಾರತೀಯ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಗಾಂಧೀಜಿ ಮುಂತಾದ ನಾಯಕರು ಈ ನ್ಯಾಯವನ್ನನುಸರಿಸಿಯೇ ಪಾಕಿಸ್ತಾನದ ನಿರ್ಮಾಣಕ್ಕೆ ಒಪ್ಪಿಕೊಂಡರು. ದೇಶಕ್ಕೆ ಸ್ವಾತಂತ್ರ್ಯವೇ ದೊರಕುವುದಿಲ್ಲ ಮತ್ತು ಹಿಂದೂ ಮುಸ್ಲಿಮರಿಗೆ ಅಂತರ್ಯುದ್ಧವು ನಡೆದು ಪ್ರಜಾಹಿಂಸೆಯಾಗುತ್ತದೆ—ಎಂಬ ಸಂದರ್ಭದಲ್ಲಿ ಪಾಕಿಸ್ತಾನಕ್ಕೆ ಸಮ್ಮತಿಸಿ ಉಳಿದ ಭಾಗಗಳಿಗೆ ಸ್ವಾತಂತ್ರ್ಯವನ್ನು ಪಡೆಯುವುದೇ ಲೇಸೆಂದು ಅವರು ಭಾವಿಸಿದರು.

## 253. ಸಾಕ್ಷಃ ಪುರುಷಃ ಪರೇಣ ಚೇನ್ನೀಯತೇ ನೂನಮಕ್ಷಿಭ್ಯಾಂ ನ ಪಶ್ಯತಿ

ಕಣ್ಣಿರುವ ಪುರುಷನನ್ನು ಇನ್ನೊಬ್ಬನು ಕೈಹಿಡಿದು ಕರೆದುಕೊಂಡು ಹೋಗುವುದಾದರೆ ಆ ಪುರುಷನಿಗೆ ನಿಜವಾಗಿಯೂ ಕಣ್ಣು ಕಾಣಿಸುವುದಿಲ್ಲ ! ಕಣ್ಣಿನಲ್ಲಿ ನೋಡುವ ಸಾಮರ್ಥ್ಯವಿದ್ದಿದ್ದರೆ ಇನ್ನೊಬ್ಬನನ್ನು ಅವನು ಅವಲಂಬಿಸಬೇಕಾದ್ದಿರಲಿಲ್ಲ. ಪರಾಶ್ರಯದಿಂದ ಒಂದು ಕೆಲಸವನ್ನು ಮಾಡಿದಾಗ ಸ್ವತಃ ಅದನ್ನು ಮಾಡಲು ಶಕ್ತಿಯಿಲ್ಲವೆಂದು ಸಿದ್ಧವಾಗುತ್ತದೆ.

## 254. ಸಿಕತಾಕೂಪನ್ಯಾಯಃ

ಸಿಕತಾ ಎಂದರೆ ಮರಳು. ಮರಳಿನಲ್ಲಿ ಭಾವಿಯನ್ನು ತೋಡಿದಷ್ಟೂ ಕುಸಿದುಹೋಗುತ್ತದೆ. ಅದು ವ್ಯರ್ಥವಾದ ಕೆಲಸ. ನೀರು ದೊರೆಯುವ

ಸಂಭವವೇ ಇಲ್ಲ. ಹುರುಳಿಲ್ಲದ ವಾದವನ್ನು ನಿಂದಿಸುವುದಕ್ಕೆ ಈ ನ್ಯಾಯವನ್ನು ಉಪಯೋಗಿಸುತ್ತಾರೆ. ಬೌದ್ಧರಲ್ಲಿ ವೈನಾಶಿಕರೆಂಬ ಒಂದು ಪಂಗಡವಿದೆ. ಅವರ ವಾದವನ್ನು ದೂಷಿಸುವಾಗ ಬ್ರಹ್ಮಸೂತ್ರಭಾಷ್ಯದಲ್ಲಿ ಶ್ರೀಶಂಕರಾಚಾರ್ಯರು ಈ ನ್ಯಾಯವನ್ನು ಉಪಯೋಗಿಸಿದ್ದಾರೆ(ಬ್ರ. ಸೂ. ೨-೨-೩೨).

## 255. ಸಿಕತಾತೈಲನ್ಯಾಯ

ಮರಳಿನಿಂದ ಎಣ್ಣೆಯನ್ನು ತೆಗೆದ ಹಾಗೆ. ಮೊಲದ ಕೊಂಬಿನಂತೆ ಅಸತ್ಯವಾದ ವಿಷಯವನ್ನು ವರ್ಣಿಸಲು ಇದು ಉಪಯುಕ್ತವಾಗುತ್ತದೆ. ಭರ್ತೃಹರಿಯು ತನ್ನ ನೀತಿಶತಕದ ಒಂದು ಶ್ಲೋಕದಲ್ಲಿ ಹೀಗೆ ಹೇಳುತ್ತಾನೆ:

"ಕಷ್ಟಪಟ್ಟರೆ ಒಂದು ವೇಳೆ ಮರಳಿನಲ್ಲಾದರೂ ಎಣ್ಣೆಯನ್ನು ಪಡೆಯಬಹುದು. ಬಾಯಾರಿದವನು ಬಿಸಿಲ್‌ಗುದುರೆಯಲ್ಲಿ ನೀರನ್ನೂ ಕುಡಿಯಬಹುದು. ಅಲೆಯುತ್ತಿದ್ದರೆ ಯಾವಾಗಲಾದರೂ ಮೊಲದ ಕೊಂಬು ಸಿಕ್ಕಿದರೂ ಸಿಕ್ಕಬಹುದು. ಆದರೆ ಹಠಮಾರಿಗಳಾದ ಮೂರ್ಖಜನರ ಮನಸ್ಸನ್ನು ಒಪ್ಪಿಸಲು ಮಾತ್ರ ಸಾಧ್ಯವಿಲ್ಲ !"

## 256. ಸಿಂಹಮೇಷನ್ಯಾಯ

ಒಂದು ಸಿಂಹದ ಮರಿ ಕುರಿಗಳ ಮಂದೆಯಲ್ಲಿ ಸೇರಿಹೋಯಿತು. ಅದು ತನ್ನನ್ನು ಕುರಿಯೆಂದೇ ಭಾವಿಸಿ 'ಬ್ಯಾ, ಬ್ಯಾ' ಎಂದು ಅರಚುತ್ತ ತಿರುಗುತ್ತಿತ್ತು. ಒಂದು ದಿನ ಒಂದು ಸಿಂಹವು ಅದನ್ನು ನೋಡಿ ಅಚ್ಚರಿಗೊಂಡು 'ಅಯ್ಯಾ, ನೀನು ಸಿಂಹವೇ ಸರಿ, ಕುರಿಯಲ್ಲ. ಕುರಿಮಂದೆಯಲ್ಲಿ ಸೇರಿ ಕುರುಬನ ಕೈಯಲ್ಲಿ ಸಿಕ್ಕಿ ನರಳುತ್ತಿರುವುದೇಕೆ ?" ಎಂದು ಕೇಳಿತು. ಸಿಂಹದ ಮರಿಗೆ ನಂಬಿಕೆಯಾಗಲಿಲ್ಲ. ಸಿಂಹವು ಅದನ್ನು ಒಂದು ಕೊಳದ ಬಳಿಗೆ ಕರೆದೊಯ್ದು ಅದರ ಪ್ರತಿಬಿಂಬವನ್ನು ನೋಡಿಕೊಳ್ಳುವಂತೆ ಹೇಳಿತು. ಪ್ರತಿಬಿಂಬವನ್ನು ನೋಡಿಕೊಂಡಾಗ ತಾನು ಸಿಂಹ ಎಂಬ ನಂಬಿಕೆಯಾಗಿ ಗರ್ಜಿಸುತ್ತ ಕಾಡಿಗೆ ಹೊರಟುಹೋಯಿತು ! ವಿವರಗಳಿಗೆ ರಾಜಪುತ್ರವಧ ನ್ಯಾಯವನ್ನು ನೋಡಿ.

## 257. ಸಿಂಹಾವಲೋಕನನ್ಯಾಯ

ಸಿಂಹವು ಸಂಚರಿಸುವಾಗ ಅಲ್ಲಲ್ಲಿ ನಿಂತು ಹಿಂದಕ್ಕೆ ನೋಡುತ್ತಾ ಹೋಗುವುದಂತೆ. ಅದು ಸಿಂಹದ ಸ್ವಭಾವ. ಪ್ರಾಯಶಃ ತಾನು ಕೊಂದು ಹಾಕಿರುವ ಪ್ರಾಣಿಯನ್ನು ಅಪಹರಿಸಲು ಇನ್ನೊಂದು ಸಿಂಹ ಬಂದೀತೇನೋ ಎಂಬ ಶಂಕೆ ಇರಬಹುದು.

ಶಾಸ್ತ್ರಗ್ರಂಥಗಳಲ್ಲಿಯೂ ಪ್ರತಿವಾದಿಯನ್ನು ಖಂಡಿಸಿ ತನ್ನ ಸಿದ್ಧಾಂತ ವನ್ನು ಸ್ಥಾಪಿಸಿದ ಮೇಲೆ ಪುನಃ ಹಿಂದಿನ ಸಂಗತಿಯನ್ನು ಸಂಕ್ಷೇಪವಾಗಿ ಪರ್ಯಾಲೋಚಿಸುವುದುಂಟು. ಆಗ ಈ ನ್ಯಾಯ ಉಪಯುಕ್ತವಾಗುತ್ತದೆ. ನಮ್ಮ ದಿನಚರ್ಯೆಯಲ್ಲಿ ಕೂಡ 'ನಾವು ಇದುವರೆಗೆ ಮಾಡಿದುದೇನು, ಇದರ ಫಲಿತಾಂಶವೇನಾದೀತು ?' ಎಂದು ವಿಮರ್ಶೆ ಮಾಡಿಕೊಳ್ಳುವುದು ಆವಶ್ಯಕ ವಾಗಿರುತ್ತದೆ. ಅದರಿಂದ ಮುಂದೆ ನಾವು ಮಾಡಬೇಕಾದ ಕಾರ್ಯಗಳನ್ನು ಗೊತ್ತುಪಡಿಸಿಕೊಳ್ಳಲು ಸಹಾಯವಾಗುತ್ತದೆ.

## 258. ಸುವರ್ಣಕುಂಡಲನ್ಯಾಯ

ಚಿನ್ನದಿಂದ ಕಿವಿಯ ಒಡವೆ ಸಿದ್ಧವಾಗುತ್ತದೆ. ಚಿನ್ನ ಪ್ರಕೃತಿ, ಕುಂಡಲ ವಿಕೃತಿ. ಪ್ರಕೃತಿ–ವಿಕೃತಿಗಳು ಪರಸ್ಪರ ಭಿನ್ನವೋ ಅಭಿನ್ನವೋ ? ಎರಡು ಬಗೆಯ ವ್ಯವಹಾರವೂ ಉಂಟು. ಚಿನ್ನದಿಂದ ಕುಂಡಲ, ಚಿನ್ನದ ಕುಂಡಲ ಎನ್ನುವಾಗ ಅವೆರಡಕ್ಕೂ ಭೇದ ತೋರುತ್ತದೆ. ಚಿನ್ನವೇ ಕುಂಡಲ, ಕುಂಡಲವೇ ಚಿನ್ನ ಎಂದೂ ಹೇಳಬಹುದಷ್ಟೆ. ಇಲ್ಲಿ ಅಭೇದ ತೋರುತ್ತದೆ. ಮಣ್ಣಿನಿಂದ ಗಡಿಗೆ, ಮಣ್ಣೇ ಗಡಿಗೆ. 'ಮೃತ್ತಿಕೇತ್ಯೇವ ಸತ್ಯಂ' ಎನ್ನುತ್ತದೆ ಉಪನಿಷತ್ತು. ಪ್ರಕೃತಿ ವಿಕೃತಿಗಳು ಪರಮಾರ್ಥದಲ್ಲಿ ಅಭಿನ್ನಗಳೇ. ಹೀಗೆ ವ್ಯವಹಾರದಲ್ಲಿ ಭೇದವಿದ್ದರೂ ಪರಮಾರ್ಥದಲ್ಲಿ ಅಭೇದವೇ ಎಂದು ಹೇಳುವಾಗ ಈ ನ್ಯಾಯ ಉಪಯುಕ್ತವಾಗುತ್ತದೆ.

## 259. ಸುಂದೋಪಸುಂದನ್ಯಾಯ

ಸುಂದ, ಉಪಸುಂದ ಎಂಬ ಇಬ್ಬರು ದೈತ್ಯರಿದ್ದರು. ಅವರು ಅಣ್ಣ ತಮ್ಮಂದಿರು. ಸಹೋದರ ಪ್ರೇಮ ಅನ್ಯೋನ್ಯವಾಗಿತ್ತು. ಅವರು ತಪಸ್ಸಿನಿಂದ ಬ್ರಹ್ಮನನ್ನು ಮೆಚ್ಚಿಸಿ ತಮ್ಮನ್ನು ಯಾರೂ ಕೊಲ್ಲದಂತೆ ವರ ವನ್ನು ಬೇಡಿದರು. ಅದಕ್ಕೆ ಬ್ರಹ್ಮನು ಒಪ್ಪಲಿಲ್ಲ. ಮರಣವೇ ಇಲ್ಲದಂತೆ ವರವನ್ನು ಕೊಡಲು ಸಾಧ್ಯವಿಲ್ಲವೆಂದನು. ದೈತ್ಯರು ಜಾಣತನದಿಂದ ವರ ವನ್ನು ಹೀಗೆ ಮುಂದಿಟ್ಟರು : "ನಮ್ಮಿಬ್ಬರಲ್ಲಿಯೇ ಒಬ್ಬರಿಂದ ಒಬ್ಬರಿಗೆ ಮರಣವಾಗಬಹುದೇ ಹೊರತು ಇತರರು ಯಾರೂ ನಮ್ಮನ್ನು ಕೊಲ್ಲ ಬಾರದು." ಬ್ರಹ್ಮನು 'ಅಸ್ತು' ಎಂದನು. ಅಣ್ಣ ತಮ್ಮಂದಿರಾದ ತಾವು ಜಗಳವಾಡುವುದೇ ಇಲ್ಲವೆಂದು ಅವರು ತಿಳಿದುಕೊಂಡಿದ್ದರು.

ಇಬ್ಬರೂ ಜಗತ್ತನ್ನು ಪೀಡಿಸತೊಡಗಿದರು. ಇವರ ಉಪದ್ರವ ಮಿತಿಮೀರಿತು. ಬ್ರಹ್ಮನ ಆಜ್ಞೆಯಂತೆ ವಿಶ್ವಕರ್ಮನು 'ತಿಲೋತ್ತಮೆ' ಎಂಬ ಅಪ್ಸರೆಯನ್ನು ಸೃಜಿಸಿದನು. ಅವಳು ದಿವ್ಯಸುಂದರಿ. ಅವಳನ್ನು ನೋಡಿ ಸುಂದೋಪಸುಂದರು ಮೋಹಗೊಂಡರು. ಇಬ್ಬರೂ ಅವಳ ಒಂದೊಂದು ಕೈಯನ್ನು ಹಿಡಿದು ನಿಂತರು. ಇಬ್ಬರಿಗೂ ಹೊಡೆದಾಟ

ಪ್ರಾರಂಭವಾಯಿತು. ಇದಕ್ಕೆ ಸರಿಯಾಗಿ 'ನಿಮ್ಮಲ್ಲಿ ಶೂರನಾದವನನ್ನು ನಾನು ಕೈಹಿಡಿಯುತ್ತೇನೆ'ಂದು ತಿಲೋತ್ತಮೆ ಹೇಳಿದಳು. ಸರಿ ; ಹೊಡೆದಾಡಿಕೊಂಡು ಇಬ್ಬರೂ ಸತ್ತುಹೋದರು.

ಹೀಗೆ ಪರಸ್ಪರವಾಗಿ ಒಂದು ಇನ್ನೊಂದನ್ನು ನಾಶಗೊಳಿಸುತ್ತದೆ ಎಂಬುದನ್ನು ವಿವರಿಸಲು ಈ ನ್ಯಾಯವನ್ನು ಉಪಯೋಗಿಸುತ್ತಾರೆ.

## 260. ಸೂಚೀಕಟಾಹನ್ಯಾಯು

ಕಟಾಹ–ಹಂಡೆ. ಪಾತ್ರೆ ಕೆಲಸದವನ ಬಳಿಗೆ ಇಬ್ಬರು ಹೋಗುತ್ತಾರೆ. ಒಬ್ಬನು ತನಗೆ ಸೂಜಿಯೊಂದನ್ನು ಮಾಡಿಕೊಡಬೇಕೆಂದೂ, ಇನ್ನೊಬ್ಬನು ಹಂಡೆಯನ್ನು ಮಾಡಿಕೊಡಬೇಕೆಂದೂ ಕೇಳುತ್ತಾನೆ. ಹಂಡೆಯನ್ನು ಕೇಳುವವನೇ ಮೊದಲು ಬಂದಿದ್ದನೆನ್ನೋಣ. ಮೊದಲು ಬಂದಿದ್ದರಿಂದ ಹಂಡೆಯನ್ನು ಮೊಡುತ್ತಾ ಕೆಲಸಗಾರನು ಇರಬೇಕೆ ? ಅಥವಾ ಸೂಜಿಯನ್ನು ಮಾಡಿಕೊಟ್ಟು ಆಮೇಲೆ ಹಂಡೆಯ ಕೆಲಸಕ್ಕೆ ತೊಡಗಬೇಕೆ ? ಸೂಜಿಯ ಕೆಲಸ ಅಲ್ಪವಾದದ್ದು, ಬೇಗನೆ ಮುಗಿದುಹೋಗುತ್ತದೆ. ಆದ್ದರಿಂದ ಆ ಕೆಲಸವನ್ನೇ ಅವನು ಮೊದಲು ಮಾಡುತ್ತಾನೆ. ಹಾಗೆ ಲಘುವಾದ ಕಾರ್ಯವನ್ನು ಮೊದಲು ಮಾಡಿ ಅನಂತರ ದೊಡ್ಡ ಕಾರ್ಯಕ್ಕೆ ತೊಡಗಬೇಕೆಂದೂ ಇದರಿಂದ ವೃಥಾ ಇನ್ನೊಬ್ಬನ ಕಷ್ಟವನ್ನು ತಪ್ಪಿಸಬಹುದೆಂದೂ ಸೂಚಿಸುವಾಗ ಈ ನ್ಯಾಯ ಉಪಯುಕ್ತವಾಗುತ್ತದೆ.

## 261. ಸೂಚೀಮುಖಿನ್ಯಾಯು

ಕಾಡಿನಲ್ಲಿ ಚಳಿಯಿಂದ ನಡುಗುತ್ತಿದ್ದ ಕಪಿಗಳಿಗೆ ಗುಲಗಂಜಿಗಳು ಕಾಣಿಸಿದವು. ಕೆಂಪಗಿದ್ದುದರಿಂದ ಅವು ಬೆಂಕಿ ಕೆಂಡಗಳೆಂದು ಭ್ರಮಿಸಿದವು. ಬೆಂಕಿ ಕಾಯಿಸುವುದಕ್ಕಾಗಿ ಗುಲಗುಂಜಿಗಳ ಮೇಲೆ ಹುಲ್ಲನ್ನಿಟ್ಟು ಊದಿದವು. ಎಷ್ಟು ಶ್ರಮಿಸಿದರೂ ಬೆಂಕಿ ಹತ್ತಲೇ ಇಲ್ಲ ! ಇದೆಲ್ಲವನ್ನೂ ನೋಡುತ್ತ ಮರದ ಮೇಲೆ ಗೂಡಿನಲ್ಲಿ ಕುಳಿತಿದ್ದ ಸೂಚೀಮುಖಿ ಎಂಬ ಹಕ್ಕಿ ನಗುತ್ತ "ಓ ಕಪಿಗಳೇ, ಅವು ಗುಲಗಂಜಿ, ಕೆಂಡಗಳಲ್ಲ. ಎಷ್ಟು ಊದಿದರೆ ತಾನೆ ಬೆಂಕಿಯುಂಟಾದೀತು ? ಅದಕ್ಕೆ ಬದಲು ನನ್ನ ಹಾಗೆ ಗೂಡನ್ನು ಕಟ್ಟಿಕೊಂಡು ಬೆಚ್ಚಗೆ ವಾಸಮಾಡಬಾರದೆ ?" ಎಂದಿತು.

ತಮಗೆ ಅವಮಾನವಾಯಿತೆಂದು ಕಪಿಗಳಿಗೆ ಸಿಟ್ಟು ಬಂದಿತು. "ನಮಗೆ ಬುದ್ಧಿ ಹೇಳಲು ನೀನು ಯಾರು ?" ಎಂದು ರೇಗಿ ಮರಹತ್ತಿ ಆ ಹಕ್ಕಿಯ ಗೂಡನ್ನು ಕಿತ್ತು ಬಿಸಾಡಿದವು.

ದುರ್ಜನರಿಗೆ ಬುದ್ಧಿ ಹೇಳುವದು ಅಪಾಯಕಾರಿಯೆಂದು ಈ ನ್ಯಾಯ ಬೋಧಿಸುತ್ತದೆ.

## 262. ಸೂತ್ರಬದ್ಧಶಕುನಿನ್ಯಾಯ

ಹಗ್ಗದಿಂದ ಕಟ್ಟಿಹಾಕಿರುವ ಪಕ್ಷಿ ಆಕಾಶದಲ್ಲಿ ಕೆಲವು ದೂರ ಹಾರ ಬಲ್ಲುದು. ದಿಕ್ಕು ದಿಕ್ಕಿಗೆ ಹಾರಿ ತಪ್ಪಿಸಿಕೊಳ್ಳಲು ಪ್ರಯತ್ನಿಸುವುದು. ಹಗ್ಗದ ಕಟ್ಟನ್ನು ತಪ್ಪಿಸಿಕೊಳ್ಳಲಾರದೆ ಪುನಃ ಕೆಳಕ್ಕೆ ಇಳಿಯುವುದು. ಹಾಗೆ ಸಂಸಾರ ಬಂಧನದಲ್ಲಿ ಸಿಕ್ಕಿಕೊಂಡಿರುವ ಮನುಷ್ಯನೂ ಸಂಸಾರದಿಂದ ತಪ್ಪಿಸಿಕೊಳ್ಳಲು ಪ್ರಯತ್ನಿಸಿ, ತಪ್ಪಿಸಿಕೊಳ್ಳಲಾರದೆ ತೊಳಲುತ್ತಿರುವನು. ತನ್ನ ಸ್ವಾತಂತ್ರ್ಯ ಪರಿಮಿತವಾದದ್ದು. ಒಂದು ಎಲ್ಲೆಪಾಡಿಗೆ ಒಳಪಟ್ಟು ಮಾತ್ರ ಕೆಲಸ ಮಾಡಬಹುದು ಎಂಬುದನ್ನು ಸೂಚಿಸುವುದಕ್ಕೆ ಈ ನ್ಯಾಯವನ್ನು ವಿನಿಯೋಗಿಸಬಹುದು.

## 263. ಸೂತ್ರಶಾಟಿಕಾನ್ಯಾಯ

ಸೂತ್ರ—ನೂಲು, ಶಾಟಿಕಾ—ಬಟ್ಟೆ. ನೂಲಿನಿಂದ ಬಟ್ಟೆಯಾಗುತ್ತದೆಯೆಂಬುದು ಗೊತ್ತಿರುವ ವಿಷಯ. "ನೂಲಿನಿಂದ ಬಟ್ಟೆಯನ್ನು ನೇಯುತ್ತಾನೆ" ಎಂಬ ಮಾತು ಸಾಮಾನ್ಯವಾದದ್ದು. ವಿರೋಧವೇನೂ ತೋರುವುದಿಲ್ಲ. ಸೂಕ್ಷ್ಮವಾಗಿ ವಿಚಾರ ಮಾಡಿದರೆ, ಈ ಮಾತಿನಲ್ಲಿ ವಿರೋಧವುಂಟು. ಹೇಗೆಂದರೆ, ಯಾವುದನ್ನು ನೇಯುತ್ತಾನೆ ? ಬಟ್ಟೆಯನ್ನು. ಹಾಗಾದರೆ ಬಟ್ಟೆಯನ್ನು ನೇಯಬೇಕಾದ್ದಿಲ್ಲ. ಸಿದ್ಧವಾದ ಬಟ್ಟೆಯನ್ನು ಪುನಃ ಯಾರೂ ನೇಯುವುದಿಲ್ಲ. "ಬಟ್ಟೆಯಾದರೆ, ನೇಯಬೇಕಾದ್ದಿಲ್ಲ, ನೇಯಬೇಕಾದರೆ, ಅದು ಬಟ್ಟೆಯಲ್ಲ." ನೂಲನ್ನು ನೇಯುತ್ತಾನೆ ಎಂಬುದು—ವಿರುದ್ಧ. "ಬಟ್ಟೆಯಾಗುವಂತೆ ನೂಲನ್ನು ನೇಯುತ್ತಾನೆ" ಎಂದು ಹೇಳಬೇಕಾಗುತ್ತದೆ. "ಬಟ್ಟೆಯನ್ನು ನೇಯುತ್ತಾನೆ" ಮುಂತಾದ ಪ್ರಯೋಗಗಳು ಬೇಕಾದಷ್ಟು ಉಂಟು. ಅವುಗಳ ಗತಿ ಏನು ಎಂದು ಕೇಳಬಹುದು. ಉತ್ತರವೇನೆಂದರೆ, ಮುಂದೆ ಹೇಳಬೇಕಾದ ಹೆಸರನ್ನು ಮೊದಲೇ ಹೇಳುತ್ತೇವೆ. ಸಾಧ್ಯವನ್ನು ಸಿದ್ಧವೆಂದು ತಿಳಿದು ವ್ಯವಹರಿಸುತ್ತೇವೆ. "ಮುಂದೆ ಬಟ್ಟೆಯಾಗುವಂತೆ ನೇಯುತ್ತಾನೆ" ಎಂದು ಅರ್ಥ ಮಾಡಬೇಕು. ಇದಕ್ಕೆ ಭಾವಿಸಂಜ್ಞಾವ್ಯವಹಾರವೆಂದು ಹೆಸರು. ಇಂತಹ ಸ್ಥಳದಲ್ಲಿ ಈ ನ್ಯಾಯ ಪ್ರವೃತ್ತವಾಗುತ್ತದೆ. ಮನೆಯನ್ನು ಕಟ್ಟುತ್ತಾನೆ, ಪತ್ರವನ್ನು ಬರೆಯುತ್ತಾನೆ, ಕೋಟನ್ನು ಹೊಲೆಯುತ್ತಾನೆ ಮುಂತಾದ ಸ್ಥಳಗಳಲ್ಲಿ ಭಾವಿಸಂಜ್ಞೆಯಿಂದಲೇ ವ್ಯವಹಾರವೆಂದು ತಿಳಿಯಬೇಕು.

## 264. ಸೂರ್ಯೋದಯಾಸ್ತನ್ಯಾಯ

ಸೂರ್ಯನು ಹುಟ್ಟುವುದೂ ಇಲ್ಲ, ಮುಳುಗುವುದೂ ಇಲ್ಲ. ಆದರೂ

ಸೂರ್ಯನು ಹುಟ್ಟಿದನೆಂದೂ ಮುಳುಗಿದನೆಂದೂ ಹೇಳುತ್ತೇವೆ. ಕಣ್ಣಿಗೆ ಕಾಣಿಸಿದಾಗ ಹುಟ್ಟಿದನೆಂದೂ ಮರೆಯಾದಾಗ ಮುಳುಗಿದನೆಂದು ವ್ಯವಹಾರ ಬಂದಿದೆ. ಹಾಗೆಯೇ ಆತ್ಮನಿಗೆ ಹುಟ್ಟು ಸಾವುಗಳಿಲ್ಲದಿದ್ದರೂ ಮನುಷ್ಯನು ಹುಟ್ಟಿದನೆಂದೂ ಸತ್ತನೆಂದೂ ವ್ಯವಹಾರ ಇದ್ದೇ ಇದೆ. ಶರೀರಸಂಬಂಧ ವಾದಾಗ ಹುಟ್ಟಿದನೆಂದೂ ಶರೀರವಿಯೋಗವಾದಾಗ ಸತ್ತನೆಂದೂ ಹೇಳುತ್ತಾರೆ.

ಹೀಗೆ ಒಂದಾನೊಂದು ಉಪಾಧಿ (ನಿಮಿತ್ತ)ಯಿಂದ ಲೋಕವ್ಯವ ಹಾರ ನಡೆದಿರುತ್ತದೆ. ಪರಮಸತ್ಯವು ಬೇರೆಯೇ ಇರುತ್ತದೆ. ಬರಿಯ ಲೋಕವಾದದಿಂದ ಸತ್ಯದ ಶೋಧನೆಯಾಗುವುದಿಲ್ಲವೆಂದು ಅಭಿಪ್ರಾಯ.

## 265. ಸೋಪಾನಾರೋಹಣನ್ಯಾಯ

ಮೆಟ್ಟಿಲುಗಳನ್ನು ಒಂದೊಂದಾಗಿ ಹತ್ತಿ ಮಹಡಿಯನ್ನು ಸೇರು ತ್ತೇವೆ. ನೆಲದಿಂದ ಮಹಡಿಗೆ ನೆಗೆಯುವುದು ಅಸಾಧ್ಯ. ಅಪಾಯ ಕಾರಿಯೂ ಹೌದು. ಅದರಂತೆ ಯಾವ ಕಾರ್ಯವನ್ನಾದರೂ ಹೆಜ್ಜೆ ಹೆಜ್ಜೆ ಯಾಗಿ ಸಾಧಿಸಬೇಕೆಂದು ಈ ನ್ಯಾಯ ಬೋಧಿಸುತ್ತದೆ.

## 266. ಸ್ಥಾಲೀಪುಲಾಕನ್ಯಾಯ

ಪುಲಾಕ-ಅನ್ನದ ಅಗಳು. ಅನ್ನ ಮಾಡುವಾಗ ಅಕ್ಕಿ ಬೆಂದಿದೆಯೇ ? —ಎಂದು ಹೇಗೆ ಪರೀಕ್ಷೆ ಮಾಡುತ್ತಾರೆಂಬುದು ಎಲ್ಲರಿಗೂ ಗೊತ್ತು. ಒಂದು ಅಗಳನ್ನು ಹಿಚಕಿದರೆ ಬೆಂದಿರುವುದು ಗೊತ್ತಾಗುತ್ತದೆ. ಹಿಚಕಿದ ಕಾಳು ಬೆಂದಿದ್ದರೆ ಎಲ್ಲಾ ಕಾಳುಗಳೂ ಬೆಂದಿವೆ, ಇಲ್ಲದಿದ್ದರೆ ಯಾವುದೂ ಬೆಂದಿಲ್ಲವೆಂದು ಊಹಿಸಬಹುದು. ಹೀಗೆ ಏಕಾಂಶವನ್ನು ಪರೀಕ್ಷಿಸಿ ಸಮೂಹದ ಯೋಗ್ಯತೆಯನ್ನು ಊಹಿಸುವ ಪದ್ಧತಿಯನ್ನು ಈ ನ್ಯಾಯ ವಿವರಿಸುತ್ತದೆ. ವಿದ್ಯಾರ್ಥಿಯನ್ನು ಪರೀಕ್ಷಿಸುವುದಾದರೂ ಹೀಗೆಯೇ ತಾನೆ ? ಅವನು ಓದಿರುವ ಪ್ರತಿಯೊಂದು ಪುಟದಲ್ಲಿಯೂ ಪ್ರಶ್ನೆ ಕೇಳಿ ಪರೀಕ್ಷಿಸುವುದಿಲ್ಲ.

## 267. ಸ್ಥಾವರಜಂಗಮವಿಷನ್ಯಾಯ

ಮೂಲಿಕೆಗಳು ಅಥವಾ ಲೋಹಗಳಿಂದ ಉತ್ಪನ್ನವಾಗುವ ವಿಷ ಸ್ಥಾವರವಿಷ. ಪ್ರಾಣಿಗಳ ವಿಷ ಜಂಗಮವಿಷ. ಈ ಎರಡು ವಿಷಗಳೂ ಘೋರವಾದವು. ಮರಣವನ್ನುಂಟುಮಾಡತಕ್ಕವುಗಳು. ಆದರೂ ಇವು ಪರಸ್ಪರ ವಿರುದ್ಧ. ಸ್ಥಾವರ ವಿಷದ ವಿಪತ್ತನ್ನು ಜಂಗಮ ವಿಷವೂ, ಜಂಗಮ ವಿಷದ ವಿಪತ್ತನ್ನು ಸ್ಥಾವರ ವಿಷವೂ ಪರಿಹರಿಸುತ್ತದೆಯಂತೆ. ಸರ್ಪವಿಷಕ್ಕೆ ವತ್ಸನಾಭಿ ಔಷಧವೆಂದು ಹೇಳುತ್ತಾರೆ.

ಮಹಾಭಾರತದ ಕಥೆಯೂ ಇದಕ್ಕೆ ಅನುಗುಣವಾಗಿದೆ. ಭೀಮಸೇನನಿಗೆ ದುರ್ಯೋಧನನು ವಿಷಮಿಶ್ರವಾದ ಊಟವನ್ನು ಹಾಕಿ ಎಚ್ಚರ ತಪ್ಪಿಸಿ ನದಿಯಲ್ಲಿ ಮುಳುಗಿಸಿದನು. ಭೀಮಸೇನನು ಪಾತಾಳಕ್ಕೆ ಹೋದನು. ಅಲ್ಲಿ ವಿಷೋಲ್ಬಣಗಳಾದ ಘೋರ ಸರ್ಪಗಳು ಭೀಮನನ್ನು ಕಚ್ಚಿದವು. ಅವನು ತಿಂದಿದ್ದ ವಿಷದ ಶಕ್ತಿಯು ಕಡಿಮೆಯಾಗಿ ಅವನಿಗೆ ಎಚ್ಚರಿಕೆಯಾಯಿತು ಎಂಬುದು ಪ್ರಸಿದ್ಧವಾಗಿದೆ. ಯುಕ್ತಿಗೆ ಪ್ರತಿಯುಕ್ತಿಯನ್ನು ಹೂಡಿ ಕೆಲಸವು ನಡೆಯದಂತೆ ಮಾಡಿದಾಗ ಈ ನ್ಯಾಯವನ್ನು ಬಳಸಬಹುದು.

## 268. ಸ್ಥೂಣಾನಿಖನನನ್ಯಾಯ

ಕಂಬವನ್ನು ಹೂಳುವ ನ್ಯಾಯ. ಸ್ಥೂಣಾ–ಕಂಬ. ಕಂಬವನ್ನು ನೆಲದಲ್ಲಿ ಹೂಳುವಾಗ ಪುನಃ ಪುನಃ ಅಲ್ಲಾಡಿಸಿ, ಸಂದಿನಲ್ಲಿ ಮಣ್ಣನ್ನು ತುರುಕಿ, ಎಳೆದು, ಸುತ್ತಲೂ ತುಳಿದು ಹೂಳುತ್ತೇವೆ. ಕಂಬವು ದೃಢವಾಗಿ ನಿಲ್ಲಲೆಂಬುದು ಉದ್ದೇಶ. ಹಾಗೆ ಒಂದು ಸಿದ್ಧಾಂತವನ್ನು ದೃಢವಾಗಿ ಸ್ಥಾಪಿಸಬೇಕಾದರೆ ಅನೇಕ ಬಗೆಯ ಪೂರ್ವಪಕ್ಷಗಳನ್ನೂ, ಶಂಕೆಗಳನ್ನೂ ಉದ್ಭವಿಸಿ ಅವುಗಳಿಗೆ ಸಮಾಧಾನ ಹೇಳಬೇಕು. ಒಮ್ಮೆ ಸಿದ್ಧಾಂತವಾದಂತೆ ತೋರಿದರೂ ಪುನಃ ಇನ್ನೊಂದು ದೃಷ್ಟಿಯಿಂದ ಆಕ್ಷೇಪಿಸಿ ಉತ್ತರ ಹೇಳಬೇಕಾಗುತ್ತದೆ. ಇಂತಹ ಸನ್ನಿವೇಶದಲ್ಲಿ ದೃಷ್ಟಾಂತವಾಗಿ ಈ ನ್ಯಾಯವನ್ನು ಉಪಯೋಗಿಸುತ್ತಾರೆ.

## 269. ಸ್ಫಟಿಕಲೌಹಿತ್ಯನ್ಯಾಯ

ಲೌಹಿತ್ಯ–ಕೆಂಪುಬಣ್ಣ. ಸ್ಫಟಿಕದ ಬಳಿ ಒಂದು ಕೆಂಪು ಗುಲಾಬಿಯ ಹೂವನ್ನಿಟ್ಟರೆ ಅದರ ಕೆಂಪು ಸ್ಫಟಿಕದಲ್ಲಿ ಪ್ರತಿಬಿಂಬಿಸುತ್ತದೆ. ಶುದ್ಧವಾದ ಸ್ಫಟಿಕವು ಕೆಂಪಾಗಿರುವಂತೆ ತೋರುತ್ತದೆ. ಕೆಂಪು ಬಣ್ಣವನ್ನೇನೂ ಸ್ಫಟಿಕಕ್ಕೆ ಬಳಿದಿರುವುದಿಲ್ಲ. ಹಾಗೆ ಇನ್ನೊಂದು ವಸ್ತುವಿನ ಗುಣ ಇತರ ವಸ್ತುವಿನಲ್ಲಿರುವಂತೆ ಕೆಲವು ವೇಳೆ ಕಂಡುಬರುತ್ತದೆ. ವಾಸ್ತವವಾಗಿ ಆ ಗುಣ ಅದರಲ್ಲಿರುವುದಿಲ್ಲ. ಆಗ ಈ ನ್ಯಾಯ ಪ್ರವೃತ್ತವಾಗುವುದು.

## 270. ಸ್ವವಿಷಮೂರ್ಛಿತೋ ಭುಜಂಗಃ ಆತ್ಮಾನಮೇವ ದಶತಿ

ತನ್ನ ವಿಷದಿಂದಲೇ ಎಚ್ಚರದಪ್ಪಿದ ಸರ್ಪವು ತನ್ನನ್ನೇ ಕಚ್ಚಿಕೊಳ್ಳುತ್ತದೆ! ಮನುಷ್ಯನೂ ಕೂಡ ತನ್ನ ತಪ್ಪುಗಳಿಗಾಗಿ ತಾನೇ ರೇಗಿಕೊಂಡು

ತನ್ನನ್ನೇ ಪರಚಿಕೊಳ್ಳುವುದುಂಟು! ತಪ್ಪುಗಳ ಮೇಲೆ ತಪ್ಪುಗಳನ್ನು ಮಾಡಿ ತಾನೇ ವಿಪತ್ತಿಗೆ ಒಳಗಾದಾಗ ಈ ನ್ಯಾಯ ಉಪಯುಕ್ತವಾಗುತ್ತದೆ.

## 271. ಸ್ವಾಂಗುಲಿಜ್ವಾಲಯಾ ಪರದಾಹನ್ಯಾಯ

ತನ್ನ ಬೆರಳಿಗೆ ಬಟ್ಟೆಯನ್ನು ಸುತ್ತಿ ಬೆಂಕಿ ಹಚ್ಚಿಸಿಕೊಂಡು ಇನ್ನೊಬ್ಬನನ್ನು ಸುಡುವುದಕ್ಕೆ ಪ್ರಯತ್ನಿಸುವ ನ್ಯಾಯ! ಇನ್ನೊಬ್ಬನ ಮೈಗೆ ಬೆಂಕಿ ಹತ್ತುವುದೋ ಇಲ್ಲವೋ, ತನ್ನ ಬೆರಳನ್ನು ಸುಡುವುದಂತೂ ನಿಶ್ಚಯ. ತಾನು ಹಾಳಾಗುವುದರ ಮೂಲಕ ಇನ್ನೊಬ್ಬನನ್ನು ಹಾಳು ಮಾಡಲು ಪ್ರಯತ್ನಿಸುವಾಗ ಈ ನ್ಯಾಯ ಪ್ರವೃತ್ತವಾಗುತ್ತದೆ.

## 272. ಸ್ವೇದಜನಿಮಿತ್ತೇನ ಶಾಟಕತ್ಯಾಗನ್ಯಾಯ

ಸ್ವೇದಜವೆಂದರೆ ಹೇನು ಅಥವಾ ಕೂರೆ. ಶಾಟಕವೆಂದರೆ ಬಟ್ಟೆ. ಬಟ್ಟೆಯಲ್ಲಿ ಹೇನು ಇದೆಯೆಂದು ಬಟ್ಟೆಯನ್ನೇ ಎಸೆದುಬಿಡುವುದು! ಬತ್ತದಲ್ಲಿ ಹೊಟ್ಟು ಇದೆಯೆಂದು ಬತ್ತವನ್ನೇ ಎಸೆಯುವುದುಂಟೆ? ಯಾವ ಅಂಶದಲ್ಲಿ ತೊಂದರೆ ಇದೆಯೋ ಅದನ್ನು ಪರಿಹರಿಸಿ ಮುಖ್ಯ ವಸ್ತುವನ್ನು ಉಳಿಸಿಕೊಳ್ಳುವುದೇ ಜಾಣತನ. ಈ ನ್ಯಾಯದ ಉಪಯೋಗ ಸ್ಪಷ್ಟವಾಗಿದೆ.

## 273. ಹಿರಣ್ಯನಿಧಿನ್ಯಾಯ

ಚಿನ್ನದ ನಿಧಿಯನ್ನು ಹೂತಿಟ್ಟಿರುವ ನೆಲದ ಮೇಲೆ ಜನರು ತಿರುಗಾಡುತ್ತಿರಬಹುದು. ನೆಲದಲ್ಲಿಯೇ ನಿಧಿಯಡಗಿರುವುದು ಅವರಿಗೆ ತಿಳಿದಿರುವುದಿಲ್ಲ. ರೋಗ ಬಂದಾಗ ಯಾವ ಯಾವ ವೈದ್ಯರನ್ನೋ ಹುಡುಕಿಕೊಂಡು ಹೋಗುವುದುಂಟು. ಕಡೆಗೆ ಮನೆಯಲ್ಲಿರುವ ಅಜ್ಜಿಯ ಚಿಕಿತ್ಸೆಯಿಂದಲೇ ಗುಣವಾಗುವುದೂ ಉಂಟು. ಜೀವನದಲ್ಲಿ ಇಂತಹ ಘಟನೆಗಳು ಎಷ್ಟೋ ನಡೆಯುತ್ತವೆ. ಹೃದಯದಲ್ಲಿಯೇ ದೇವರು ನೆಲೆಸಿದ್ದರೂ ದೂರದ ಯಾತ್ರೆಗೆ ಹೋಗುವುದಿಲ್ಲವೆ ?

> "ಹಿರಣ್ಯನಿಧಿಂ ನಿಹಿತಮಕ್ಷೇತ್ರಜ್ಞಾ ಉಪರ್ಯುಪರಿ ಸಂಚರಂತೋ
> ನ ವಿಂದೇಯುಃ,ಏವಮೇವೇಮಾಃ ಸರ್ವಾಃ ಪ್ರಜಾ ಅಹರಹ
> ರ್ಬ್ರಹ್ಮಲೋಕಂ ಗಚ್ಛಂತ್ಯ ಏತಂ ಬ್ರಹ್ಮಲೋಕಂ ನ
> ವಿಂದಂತ್ಯನೃತೇನ ಹಿ ಪ್ರತ್ಯೂಢಾಃ" (ಛಾಂ. 8–3–2).

ಚಿನ್ನದ ನಿಧಿಯನ್ನು ನೆಲದಲ್ಲಿ ಹೂತಿಟ್ಟಿದ್ದರೂ ಆ ಸ್ಥಳದ ಪರಿಚಯವಿಲ್ಲದವರು ಅದರ ಮೇಲೆ ತಿರುಗಾಡುತ್ತಲೇ ಇರುತ್ತಾರೆ, ಆದರೂ ಅವರು ಅದನ್ನು ಪಡೆಯುವುದಿಲ್ಲ—ತಿಳಿದಿರುವುದಿಲ್ಲ. ಹಾಗೆಯೇ ಎಲ್ಲ

ಜನರೂ ಸುಷುಪ್ತಿಯ ಕಾಲದಲ್ಲಿ ಪ್ರತಿದಿನ (ಹೃದಯಾಕಾಶದಲ್ಲಿರುವ) ಬ್ರಹ್ಮವನ್ನು ಸೇರುತ್ತಿದ್ದರೂ ಅದನ್ನರಿತಿರುವುದಿಲ್ಲ. ಏಕೆಂದರೆ, ಅವರು ಅವಿದ್ಯಾದಿ ದೋಷಗಳಿಂದ ಕೂಡಿರುತ್ತಾರೆ.

## 274. ಹ್ರದನಕ್ರನ್ಯಾಯ

**ಹ್ರದ–ಮಡು, ನಕ್ರ–ಮೊಸಳೆ.** ಮಡುವಿನಲ್ಲಿ ಮೊಸಳೆ ಇರುತ್ತದೆ. ಮಡು ಆಳವಾದ್ದರಿಂದ ಮೊಸಳೆಗೆ ರಕ್ಷಣೆ ದೊರೆಯುತ್ತದೆ. ಮೊಸಳೆ ಇರುವುದರಿಂದ ಮಡುವಿನ ಬಳಿಗೆ ಯಾರೂ ಬರದೆ ಅದರ ನೀರು ಹಾಗೆಯೇ ಉಳಿದಿರುತ್ತದೆ. ಮೊಸಳೆಯಿಂದ ಮಡುವಿಗೂ, ಮಡುವಿನಿಂದ ಮೊಸಳೆಗೂ ರಕ್ಷಣೆ ದೊರೆಯುತ್ತದೆ. ವನಸಿಂಹ ನ್ಯಾಯದ ತಾತ್ಪರ್ಯವೇ ಇದಕ್ಕೂ ಉಂಟು.

# ಪರಿಶಿಷ್ಟ

## ವೈಯರ್ಥ್ಯ ಬೋಧಕ ನ್ಯಾಯಗಳು

ನಾವು ಮಾಡುವ ಕೆಲಸಕ್ಕೆ ಪ್ರತಿಫಲ ಇರಬೇಕು. ಎಲ್ಲಿ ಕೆಲಸವು ವ್ಯರ್ಥವಾಗುತ್ತದೆಯೋ ಅಲ್ಲಿ ಕೆಲಸದ ವೈಯರ್ಥ್ಯವನ್ನು ತಿಳಿಸುವುದಕ್ಕಾಗಿ ಮುಂದೆ ಬರೆದ ನ್ಯಾಯಗಳನ್ನು ಬಳಸುತ್ತಾರೆ. ಈ ನ್ಯಾಯಗಳ ಒಟ್ಟು ಅಭಿಪ್ರಾಯ ಒಂದೇ ಆದರೂ ಸೂಕ್ಷ್ಮವಾದ ಅರ್ಥಭೇದ ಇರುವುದರಿಂದ, ಸಂದರ್ಭಾನುಸಾರವಾಗಿ ತಕ್ಕ ನ್ಯಾಯವನ್ನು ಆರಿಸಿ ಬಳಸಬೇಕಾಗುತ್ತದೆ. ಒಂದನ್ನೇ ಎಲ್ಲೆಡೆಯೂ ಬಳಸಲಾಗುವುದಿಲ್ಲ.

### 1. ಅರಣ್ಯರೋದನನ್ಯಾಯ

ಕಾಡಿನಲ್ಲಿ ಅಳುವುದರಿಂದ ಪ್ರಯೋಜನವೇನು ? ಕೇಳುವವರು ಯಾರು ?

### 2. ಅಂಧದರ್ಪಣನ್ಯಾಯ

ಕುರುಡನಿಗೆ ಕನ್ನಡಿ ಕೊಟ್ಟರೆ ಯಾವ ಉಪಯೋಗವೂ ಆಗುವುದಿಲ್ಲ.

### 3. ಆಕಾಶರೋಮಂಥನ್ಯಾಯ

ಆಕಾಶವನ್ನು ಮೆಲಕುಹಾಕುವುದು.

### 4. ಆಕಾಶಮುಷ್ಟಿಹನನನ್ಯಾಯ

ಆಕಾಶವನ್ನು ಮುಷ್ಟಿಯಿಂದ ಗುದ್ದುವುದು.

5. ಊಷರವೃಷ್ಟಿನ್ಯಾಯ

ಮರಳುಗಾಡಿನಲ್ಲಿ ಮಳೆ ಸುರಿದಂತೆ.

6. ಕಾಕದಂತಪರೀಕ್ಷಾನ್ಯಾಯ

ಕಾಗೆಗಳಿಗೆ ಹಲ್ಲುಗಳೆಷ್ಟೆಂದು ಪರೀಕ್ಷೆ ಮಾಡುವುದು.

7. ಗರ್ದಭರೋಮಗಣನನ್ಯಾಯ

ಕತ್ತೆಗೆ ಕೂದಲುಗಳೆಷ್ಟಿರುತ್ತವೆ ? —ಎಂದು ಎಣಿಸುವುದು.

8. ಜಲತಾಡನನ್ಯಾಯ

ನೀರನ್ನು ಬಡಿಯುತ್ತ ಕುಳಿತಿರುವುದು.

9. ಜಲಮಂಥನನ್ಯಾಯ

ಕಡೆಗೋಲಿಂದ ನೀರನ್ನು ಕಡೆಯುವುದು. ಅದರಿಂದ ಬೆಣ್ಣೆ ಬರುವುದಿಲ್ಲ.

10. ಪಿಷ್ಟಪೇಷಣನ್ಯಾಯ

ಹಿಟ್ಟನ್ನು ಬೀಸುವುದು. ಹೇಳಿದ್ದನ್ನೇ ಮತ್ತೆ ಹೇಳುವುದು ವ್ಯರ್ಥ.

11. ಬಧಿರಕರ್ಣಜಪನ್ಯಾಯ

ಕಿವುಡನಿಗೆ ಕಿವಿಮಾತು ಹೇಳುವುದು.

12. ಮೂರ್ಖಸೇವನನ್ಯಾಯ

ವಿದ್ಯಾಗಂಧವಿಲ್ಲದ ಸಾಹುಕಾರನ ಸೇವೆ ಮಾಡಿದರೆ ಬರುವ ಫಲ ವೇನು ? ಗುಣಗ್ರಹಣ ಮಾಡಲು ಯಾರಿಗೆ ಶಕ್ತಿಯಿಲ್ಲವೋ ಅಂಥವರ ಸೇವೆ ವ್ಯರ್ಥ.

13. ಮೃತಮಾರಣನ್ಯಾಯ

ಸತ್ತಿದ್ದನ್ನು ಮತ್ತೆ ಬಡಿಯುವುದು.

14. ಶವೋದ್ವರ್ತನನ್ಯಾಯ


ಹೆಣಕ್ಕೆ ಎಣ್ಣೆ ಹಚ್ಚಿ, ಮೈನೀವಿ, ಅಲಂಕರಿಸುವುದು.

## 15. ಶ್ವಪುಚ್ಛೋನ್ನಾಮನನ್ಯಾಯ

ನಾಯಿಬಾಲವನ್ನು ಸರಿಪಡಿಸುತ್ತೇನೆಂದು ಮತ್ತೆ ಮತ್ತೆ ನೇರ ಮಾಡಿದರೆ ನೇರವಾಗುತ್ತದೆಯೆ ? ಹೇಗಿದ್ದರೂ ನಾಯಿಬಾಲ ಡೊಂಕು.

## 16. ಸಮುದ್ರವೃಷ್ಟಿನ್ಯಾಯ

ಸಮುದ್ರದಲ್ಲಿ ಮಳೆ ಬಂದರೆ ಫಲವಿಲ್ಲ. ಹಣವಂತನಿಗೆ ಹಣವನ್ನು ನೀಡುವುದು ವ್ಯರ್ಥ. Carrying Coal to New Castle. ಬಲ್ಲವರಿಗೆ ತಿಳಿಸುವುದೂ ಸಮುದ್ರವೃಷ್ಟಿ ನ್ಯಾಯಕ್ಕೆ ಉದಾಹರಣೆ.



ಸಂಸ್ಕೃತ ಮತ್ತು ಕನ್ನಡ ಭಾಷೆಗಳಲ್ಲಿ ವಿದ್ವಾನ್ ಎನ್. ರಂಗನಾಥ ಶರ್ಮರದು ಘನಿಷ್ಠವಾದ ಪಾಂಡಿತ್ಯ. ವ್ಯಾಕರಣಶಾಸ್ತ್ರ ಮತ್ತು ಅಲಂಕಾರಶಾಸ್ತ್ರಗಳಲ್ಲಿ ವಿಶೇಷವಾದ ಪರಿಶ್ರಮ. ಬೆಂಗಳೂರು ಸರ್ಕಾರಿ ಸಂಸ್ಕೃತ ಕಾಲೇಜಿನಲ್ಲಿ ವ್ಯಾಕರಣಶಾಸ್ತ್ರದ ಪ್ರಾಧ್ಯಾಪಕರಾಗಿದ್ದು ಈಗ ನಿವೃತ್ತರಾಗಿದ್ದಾರೆ. ಭಾರತ ಸರ್ಕಾರದ ರಾಷ್ಟ್ರಪ್ರಶಸ್ತಿ, ಕರ್ನಾಟಕ ಸರ್ಕಾರದ ರಾಜ್ಯಪ್ರಶಸ್ತಿಗಳು ದೊರಕಿವೆ. ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ಹಳಗನ್ನಡ ಕಾವ್ಯಗಳ ಅನುವಾದಕ ಮಂಡಲಿಯ ಅಧ್ಯಕ್ಷರಾಗಿ ಕಾರ್ಯವನ್ನು ನಿರ್ವಹಿಸಿದರು. ಸಂಸ್ಕೃತದಿಂದ ಕನ್ನಡವು ಶ್ರೀಮಂತವಾಗಬೇಕೆಂಬ ಹಂಬಲ ಇವರದು. ಉಭಯ ಭಾಷೆಗಳಲ್ಲಿಯೂ ಹಲವಾರು ಗ್ರಂಥಗಳನ್ನು ರಚಿಸಿದ್ದಾರೆ. ಅಂತೆಯೇ ವಾಲ್ಮೀಕಿ ರಾಮಾಯಣ, ಭಾಗವತ, ವಿಷ್ಣುಪುರಾಣ— ಮೊದಲಾದವನ್ನು ಸಂಸ್ಕೃತದಿಂದ ಕನ್ನಡಕ್ಕೆ ಅನುವಾದಿಸಿದ್ದಾರೆ.

"ಗಾಢವಾದ ಲೋಕಾನುಭವ, ಜನಸ್ವಭಾವದ ಆಳವಾದ ಅಧ್ಯಯನ, ವಸ್ತುಸ್ವರೂಪಗಳ ಸೂಕ್ಷ್ಮನಿರೀಕ್ಷಣೆಗಳಿಂದ ಹುಟ್ಟಿದವು ಈ ಲೌಕಿಕ ನ್ಯಾಯಗಳು. ಪ್ರತಿಯೊಂದು ನ್ಯಾಯವೂ ವ್ಯವಹಾರದಲ್ಲಿ ಅವಲಂಬಿಸಬೇಕಾದ ಒಂದಾನೊಂದು ಕಾರ್ಯನೀತಿಯನ್ನು ನಿರೂಪಿಸುತ್ತದೆ. ಲೇಖಕರಿಗೆ, ಉಪನ್ಯಾಸಕರಿಗೆ, ವಕೀಲರಿಗೆ, ಶಾಸಕರಿಗೆ, ಬೋಧಕರಿಗೆ, ವರ್ತಕರಿಗೆ— ವ್ಯವಹಾರದಲ್ಲಿ ತೊಡಗಿರುವ ಸರ್ವರಿಗೂ ಸಂದರ್ಭಾನುಸಾರ ಬಳಸಲು ಯೋಗ್ಯವಾದ ಸೂಕ್ತಿಗಳಿವು."

ಐಬಿಎಚ್ ಪ್ರಕಾಶನ
ಗಾಂಧಿನಗರ, ಬೆಂಗಳೂರು 560 009